# ಇಸ್ಲಾಮಿನ ಸಾಮಾಜಿಕ ನಿಯಮಗಳು

[ಸೂರಃ: ಅಲ್ ಅಹ್‌ಝಾಬ್]

ಕನ್ನಡ ಭಾವಾನುವಾದ ಮತ್ತು ವ್ಯಾಖ್ಯಾನ

✍ ಮೌ| ಸಯ್ಯಿದ್ ಅಬುಲ್ ಆಲಾ ಮೌದೂದಿ(ರ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

## ಪ್ರಕಾಶಕರ ಮಾತು

ಪವಿತ್ರ ಕುರ್‌ಆನಿನ 33ನೆಯ ಅಧ್ಯಾಯವಾದ 'ಅಲ್ ಅಹ್‌ಝಾಬ್'ನಲ್ಲಿ ಇಸ್ಲಾಮಿನ ಸಾಮಾಜಿಕ ನಿಯಮಗಳ ವಿವರಣೆಯಿದೆ. 24ನೆಯ ಅಧ್ಯಾಯವಾದ 'ಅನ್ನೂರ್'ನಲ್ಲಿಯೂ ಇಸ್ಲಾಮಿನ ಸಾಮಾಜಿಕ ನಿಯಮಗಳು ವಿವರಿಸಲ್ಪಟ್ಟಿವೆ. ಆದ್ದರಿಂದ ಈ ಎರಡು ಅಧ್ಯಾಯಗಳ ವ್ಯಾಖ್ಯಾನವು ಸಮಾಜಶಾಸ್ತ್ರಜ್ಞರು, ಸಾಮಾಜಿಕ ಕಾರ್ಯಕರ್ತರು ಮತ್ತು ಮಹಿಳೆಯರಿಗೆ ಹೆಚ್ಚು ಉಪಯುಕ್ತವಾಗಿದೆ.

ಅನ್ನೂರ್ ಅಧ್ಯಾಯದ ಅನುವಾದ ಮತ್ತು ವ್ಯಾಖ್ಯಾನವನ್ನು ಜಗದ್ವಿಖ್ಯಾತ ಕುರ್‌ಆನ್ ವ್ಯಾಖ್ಯಾನ ಗ್ರಂಥವಾದ "ತಫ್ಹೀಮುಲ್ ಕುರ್‌ಆನ್"ನಿಂದ ಕನ್ನಡಕ್ಕೆ ಅನುವಾದಿಸಿ ಈಗಾಗಲೇ ಪ್ರಕಟಿಸಿದ್ದೇವೆ.

ಇದೀಗ 'ಅಲ್ ಅಹ್‌ಝಾಬ್' ಅಧ್ಯಾಯದ ಅನುವಾದ ಮತ್ತು ವ್ಯಾಖ್ಯಾನವನ್ನು ಕನ್ನಡೀಕರಿಸಿ ವಾಚಕರ ಮುಂದಿರಿಸುತ್ತಿದ್ದೇವೆ. ಮೂಲದ ಅನುವಾದವನ್ನು ಮರ್ಹೂಮ್ ಅಬ್ದುಲ್ ಗಫ್ಫಾರ್ ಸುಳ್ಯ ಅವರು ಮಾಡಿರುವರು. ವ್ಯಾಖ್ಯಾನವನ್ನು ಎಂ. ಸಾದುಲ್ಲ ಅವರು ಕನ್ನಡೀಕರಿಸಿದ್ದಾರೆ. ಇಸ್ಲಾಮಿನ ಸಾಮಾಜಿಕ ನಿಯಮಗಳನ್ನು ತಿಳಿಯಲು ಇದು ಕನ್ನಡ ಜನತೆಗೆ ಸಹಕಾರಿಯಾಗುವುದೆಂದು ನಂಬಿದ್ದೇವೆ.

ಶಾಂತಿ ಪ್ರಕಾಶನ

# ಪ್ರಸ್ತಾವನೆ

**ಹೆಸರು:** 20ನೆಯ ಸೂಕ್ತದ "ಯಹ್ಸಬೂನಲ್ ಅಹ್‌ಝಾಬ ಲಮ್ ಯದ್‌ಹಬೂ" ಎಂಬ ಮಾತಿನಿಂದ ಆಯ್ದುಕೊಳ್ಳಲಾಗಿದೆ.

**ಅವತೀರ್ಣ ಕಾಲ:** ಈ ಅಧ್ಯಾಯದ ವಿಷಯಗಳಲ್ಲಿ ಮೂರು ಮುಖ್ಯ ಘಟನೆಗಳ ಬಗ್ಗೆ ಚರ್ಚಿಸಲಾಗಿದೆ. ಒಂದನೆಯದು ಹಿ.ಶ. 5ರ ಶವ್ವಾಲ್ ತಿಂಗಳಲ್ಲಿ ಸಂಭವಿಸಿದ ಅಹ್‌ಝಾಬ್ ಯುದ್ಧ. ಎರಡನೆಯದು ಹಿ.ಶ. 5ರ ದುಲ್‌ಕಅದ್ ತಿಂಗಳಲ್ಲಿ ನಡೆದ ಬನೂ ಕುರೈಝಾರ ವಿರುದ್ಧ ಸೈನಿಕ ಕಾರ್ಯಾಚರಣೆ. ಮೂರನೆಯದು ಅದೇ ವರ್ಷ ಅದೇ ದುಲ್‌ಕಅದ್ ತಿಂಗಳಲ್ಲಿ ಹ.ಝೈನಬ್(ರ) ಅವರೊಡನೆ ನಡೆದ ಪ್ರವಾದಿವರ್ಯರ(ಸ) ವಿವಾಹ. ಈ ಐತಿಹಾಸಿಕ ಘಟನೆಗಳಿಂದ ಈ ಅಧ್ಯಾಯದ ಅವತೀರ್ಣ ಕಾಲವು ನಿಖರವಾಗಿ ತಿಳಿದು ಬರುತ್ತದೆ.

**ಐತಿಹಾಸಿಕ ಹಿನ್ನೆಲೆ:** ಉಹುದ್ ಯುದ್ಧದಲ್ಲಿ (ಹಿ. ಶ. 3) ಪ್ರವಾದಿವರ್ಯರು(ಸ) ನೇಮಿಸಿದ್ದ ಬಿಲ್ಲಾಳುಗಳ ತಪ್ಪಿನಿಂದ ಇಸ್ಲಾಮೀ ಸೇನೆಗೆ ಆದ ಸೋಲಿನಿಂದಾಗಿ ಅರೇಬಿಯಾದ ಬಹುದೇವ ವಿಶ್ವಾಸಿಗಳ, ಯಹೂದಿಯರ ಮತ್ತು ಕಪಟವಿಶ್ವಾಸಿಗಳ ಧೈರ್ಯ ಬಹಳ ಹೆಚ್ಚಿತ್ತು. ಇಸ್ಲಾಮ್ ಮತ್ತು ಮುಸ್ಲಿಮರನ್ನು ಸದೆ ಬಡಿಯ ಬಲ್ಲೆವೆಂಬ ನಿರೀಕ್ಷೆ ಅವರಲ್ಲುಂಟಾಗಿತ್ತು. ಅವರ ಹೆಚ್ಚುತ್ತಿರುವ ಧೈರ್ಯವನ್ನು ಉಹುದ್ ಯುದ್ಧದ ನಂತರ ಒಂದೇ ವರ್ಷದಲ್ಲಿ ನಡೆದ ಕೆಲವು ಘಟನೆಗಳಿಂದ ಅಂದಾಜಿಸಬಹುದು. ಉಹುದ್ ಯುದ್ಧ ನಡೆದು ಎರಡು ತಿಂಗಳೂ ಕಳೆದಿರಲಿಲ್ಲ, ನಜ್ದ್‌ನ ಬನೂ ಅಸದ್ ಗೋತ್ರವು ಮದೀನಾದ ಮೇಲೆ ದಾಳಿ ಮಾಡುವ ಸಿದ್ಧತೆಗಳನ್ನು ನಡೆಸ ತೊಡಗಿತು. ಅವರನ್ನು ತಡೆಗಟ್ಟಲು ಪ್ರವಾದಿವರ್ಯರಿಗೆ(ಸ) ಅಬೂ ಸಲಮರ ನೇತೃತ್ವದಲ್ಲಿ ಒಂದು ಸೈನಿಕ ಕಾರ್ಯಾಚರಣೆ ನಡೆಸಬೇಕಾಯಿತು. ಅನಂತರ ಹಿ.ಶ. 4ರ ಸಫರ್ ತಿಂಗಳಲ್ಲಿ ಅದಲ್ ಮತ್ತು ಕಾರ ಗೋತ್ರಗಳ ಜನರು ತಮ್ಮ ಪ್ರದೇಶಗಳಲ್ಲಿ ಇಸ್ಲಾಮಿನ ಶಿಕ್ಷಣ- ಬೋಧನೆಗಳನ್ನು ನೀಡಲಿಕ್ಕಾಗಿ ಕೆಲವು ಮಂದಿಯನ್ನು ಕಳುಹಿಸಿಕೊಡಬೇಕೆಂದು ಕೇಳಿದರು. ಪ್ರವಾದಿ(ಸ) ಆರು ಮಂದಿಯನ್ನು ಅವರ ಜೊತೆ ಕಳಿಸಿದರು. ಆದರೆ (ಜಿದ್ದಾ ಮತ್ತು ರಾಬಿಗ್‌ಗಳ ನಡುವಿನ) ರಜೀಅ್ ಎಂಬ ಸ್ಥಳಕ್ಕೆ ತಲಪಿದಾಗ ಅವರು ಹುದೈಲ್ ಗೋತ್ರದ ಸತ್ಯನಿಷೇಧಿಗಳನ್ನು ಈ ನಿಶ್ಯಸ್ತ್ರರಾದ ಸಂದೇಶ ಪ್ರಚಾರಕರ ವಿರುದ್ಧ ಛೂಬಿಟ್ಟರು. ಅವರು ನಾಲ್ಕು ಮಂದಿಯನ್ನು

ಕೊಂದರು. ಇಬ್ಬರನ್ನು (ಹ. ಖುಬೈಬ್ ಬಿನ್ ಅದೀ ಮತ್ತು ಝೈದ್ ಬಿನ್ ದಸ್ನ) ಕೊಂಡು ಹೋಗಿ ಮಕ್ಕಾ ನಗರದಲ್ಲಿ ವೈರಿಗಳಿಗೆ ಮಾರಿಬಿಟ್ಟರು. ತರುವಾಯ ಅದೇ ಸಫರ್ ತಿಂಗಳಲ್ಲಿ ಬನೂ ಆಮಿರ್ ಗೋತ್ರದ ಓರ್ವ ನಾಯಕನ ವಿನಂತಿಯಂತೆ, ಪ್ರವಾದಿ(ಸ) 40 (ಅಥವಾ ಕೆಲವು ವರದಿಗಳ ಪ್ರಕಾರ 70) ಮಂದಿ ಅನ್ಸಾರಿ ಯುವಕರ ಇನ್ನೊಂದು ತಂಡವನ್ನು ನಜ್ದ್‌ಗೆ ಕಳಿಸಿದರು. ಆದರೆ ಅವರೊಂದಿಗೂ ದ್ರೋಹವೆಸಗಲಾಯಿತು. ಉಸಯ್ಯ, ರಿಗಲ್ ಮತ್ತು ದಕ್ವಾನ್ ಎಂಬ ಬನೂ ಸುಲೈಮ್ ಗೋತ್ರದ ಉಪ ಗೋತ್ರಗಳು ಬಿಅ್‌ರ್‌ಮಊನ ಎಂಬಲ್ಲಿ ಹಠಾತ್ತನೆ ಅವರ ಮೇಲೆ ದಾಳಿ ನಡೆಸಿ ಎಲ್ಲರನ್ನೂ ಕೊಂದು ಹಾಕಿದವು. ಅದೇ ವೇಳೆ ಮದೀನಾದ ಬನೂ ನದೀರ್ ಎಂಬ ಯಹೂದಿ ಗೋತ್ರವು ಧೈರ್ಯದಿಂದ ನಿರಂತರ ವಚನ ಭಂಗ ಮಾಡುತ್ತಾ ಹೋಯಿತು. ಕೊನೆಗಂತೂ ಹಿ.ಶ. 4ರ ರಬೀಉಲ್ ಅವ್ವಲ್ ತಿಂಗಳಲ್ಲಿ ಅದು ಪ್ರವಾದಿಯವರನ್ನೇ(ಸ) ವಧಿಸುವ ಸಂಚು ಹೂಡಿತು. ತರುವಾಯ ಜುಮಾದಿಲ್ ಅವ್ವಲ್‌ನಲ್ಲಿ ಬನೂ ಸಅ್‌ಲಬ ಮತ್ತು ಬನೂ ಮುಹಾರಿಬ್ ಎಂಬ ಬನೂ ಗತ್‌ಫಾನ್ ಗೋತ್ರದ ಉಪಗೋತ್ರಗಳು ಮದೀನಾದ ಮೇಲೆ ಆಕ್ರಮಣ ಮಾಡುವ ಸಿದ್ಧತೆ ನಡೆಸಿದುವು. ಅದನ್ನು ತಡೆಗಟ್ಟಲು ಸ್ವತಃ ಪ್ರವಾದಿವರ್ಯರೇ(ಸ) ಹೋಗಬೇಕಾಯಿತು. ಈ ರೀತಿ ಉಹುದ್ ಯುದ್ಧದ ಸೋಲಿನಿಂದ ಕೆಟ್ಟಿದ್ದ ವಾತಾವರಣವು ನಿರಂತರ ಏಳೆಂಟು ತಿಂಗಳ ವರೆಗೆ ಕಲುಷಿತಗೊಳ್ಳುತ್ತಲೇ ಇತ್ತು.

ಆದರೆ ಮುಹಮ್ಮದ್‌ರವರ(ಸ) ಆತ್ಮಸ್ಥೈರ್ಯ, ಯುಕ್ತಿ ಹಾಗೂ ಸಹಾಬಿಗಳ ಅರ್ಪಣಾ ಮನೋಭಾವವು ಕೆಲವೇ ಸಮಯದೊಳಗೆ ಪರಿಸ್ಥಿತಿಯ ದಿಕ್ಕನ್ನು ಬದಲಾಯಿಸಿ ಬಿಟ್ಟಿತು. ಅರಬರ ಆರ್ಥಿಕ ದಿಗ್ಬಂಧನವು ಮದೀನಾದವರ ಬದುಕನ್ನು ದುಸ್ತರಗೊಳಿಸಿ ಬಿಟ್ಟಿತ್ತು. ಪರಿಸರದ ಎಲ್ಲ ಮುಶ್ರಿಕ್ ಗೋತ್ರಗಳು ಪ್ರಬಲಗೊಳ್ಳುತ್ತಿದ್ದುವು. ಮದೀನಾದೊಳಗೆಯೇ ಯಹೂದಿಯರು ಮತ್ತು ಮುನಾಫಿಕರು ಒಳಸಂಚು ನಡೆಸುತ್ತಿದ್ದರು. ಆದರೆ ಬೆರಳೆಣಿಕೆಯ ಈ ನಿಷ್ಠಾವಂತ ಸತ್ಯವಿಶ್ವಾಸಿಗಳು ಪ್ರವಾದಿಯವರ(ಸ) ನೇತೃತ್ವದಲ್ಲಿ ನಡೆಸಿದ ನಿರಂತರ ಕಾರ್ಯಾಚರಣೆಗಳಿಂದಾಗಿ ಅರೇಬಿಯಾದಲ್ಲಿ ಇಸ್ಲಾಮಿನ ಪ್ರತಿಷ್ಠೆ ಉಳಿದದ್ದು ಮಾತ್ರವಲ್ಲ ಮೊದಲಿಗಿಂತಲೂ ಹೆಚ್ಚಿತು.

**ಅಹ್‌ಝಾಬ್ ಯುದ್ಧಕ್ಕಿಂತ ಮುಂಚಿನ ಗಝ್‌ವ*ಗಳು:** ಈ ಪೈಕಿ ಪ್ರಪ್ರಥಮ ಕಾರ್ಯಾಚರಣೆಯು ಉಹುದ್ ಯುದ್ಧದ ಬೆನ್ನಿಗೇ ನಡೆಸಿದುದಾಗಿತ್ತು. ಯುದ್ಧದಲ್ಲಿ ಹೆಚ್ಚಿನ ಮುಸ್ಲಿಮರು ಗಾಯಗೊಂಡಿದ್ದರು. ಹಲವರ ಮನೆಗಳಲ್ಲಿ ತಮ್ಮ ಆಪ್ತೇಷ್ಟರ ಅಗಲಿಕೆಯಿಂದಾಗಿ ಕೋಲಾಹಲವುಂಟಾಗಿತ್ತು. ಪ್ರವಾದಿ(ಸ) ಕೂಡಾ ಗಾಯಗೊಂಡಿದ್ದರು ಮತ್ತು ಹ. ಹಂಝಾ(ರ) ಅವರು ಹುತಾತ್ಮರಾದುದರಿಂದ ಬಹಳ ದುಃಖಿತರಾಗಿದ್ದರು. ಆದರೂ ಯುದ್ಧದ ಮೂರನೆಯ ದಿನವೇ ಪ್ರವಾದಿವರ್ಯರು, ಸತ್ಯನಿಷೇಧಿಗಳ ಸೈನ್ಯವು ಮದೀನಾಕ್ಕೆ ಮರಳಿ ಬಂದು ಪುನಃ ಆಕ್ರಮಣ ಮಾಡಿ ಬಿಡಬಾರದೆಂದು ಅವರನ್ನು ಬೆಂಬತ್ತಿ ಹೋಗೋಣವೆಂದು ತಮ್ಮ

*ಗಝ್‌ವ ಅಂದರೆ ಪ್ರವಾದಿ(ಸ) ಸ್ವಯಂ ಭಾಗವಹಿಸಿದ ಸೈನಿಕ ಕಾರ್ಯಾಚರಣೆಗಳು.

ಸಂಗಾತಿಗಳಿಗೆ ಕರೆ ನೀಡಿದರು. ಪ್ರವಾದಿಯವರ(ಸ) ಊಹೆ ಸರಿಯೇ ಆಗಿತ್ತು. ಕುರೈಶ್ ಸತ್ಯನಿಷೇಧಿಗಳು ತಮಗೆ ಒಲಿದು ಬಂದ ವಿಜಯದ ಹೊರತಾಗಿಯೂ ಅದರಿಂದ ಯಾವುದೇ ಪ್ರಯೋಜನ ಪಡೆಯದೆ ಹೋಗಿರುವರು. ಆದರೆ ಸ್ವಲ್ಪ ದೂರ ಹೋದ ನಂತರ ಅವರು ತಮ್ಮ ಮೂರ್ಖತನಕ್ಕಾಗಿ ತಮ್ಮನ್ನೇ ಹಳಿದು, ಪುನಃ ಮದೀನಾದ ಮೇಲೆ ದಾಳಿ ಮಾಡಲೂ ಬಹುದೆಂದು ಪ್ರವಾದಿ(ಸ) ಅಂದಾಜಿಸಿದ್ದರು. ಆದುದರಿಂದ ಅವರನ್ನು ಬೆನ್ನಟ್ಟಲು ತೀರ್ಮಾನಿಸಿ, ಕೂಡಲೇ 630 ನಿಷ್ಠಾವಂತ ಸಂಗಾತಿಗಳೊಂದಿಗೆ ಹೊರಡಲನುವಾದರು. ಮಕ್ಕಾದ ದಾರಿಯಲ್ಲಿ ಹಮ್ರಾ ಉಲ್ ಅಸದ್ ಎಂಬಲ್ಲಿಗೆ ತಲಪಿ ಪ್ರವಾದಿ(ಸ) ಮೂರು ದಿನಗಳ ಕಾಲ ಠಿಕಾಣಿ ಹೂಡಿದರು. ಅಲ್ಲಿ ಓರ್ವ ಅನ್ಯ ಧರ್ಮೀಯ ವ್ಯಕ್ತಿಯು, ಅಬೂ ಸುಫ್ಯಾನ್ 2978 ಯೋಧರೊಂದಿಗೆ ಮದೀನಾದಿಂದ 36 ಮೈಲು ದೂರದ ರೌಹಾ ಎಂಬ ಸ್ಥಳದಲ್ಲಿ ಠಿಕಾಣಿ ಹೂಡಿದ್ದು, ಅವರು ತಮ್ಮ ತಪ್ಪನ್ನು ಅರಿತು ಪುನಃ ಮರಳಿ ಬರುವವರಿದ್ದರು; ಆದರೆ ತಾವು ಒಂದು ಸೇನಾ ತುಕಡಿಯೊಂದಿಗೆ ಅವರನ್ನು ಬೆನ್ನಟ್ಟಲು ಹೊರಟಿರುವಿರೆಂದು ಅವರಿಗೆ ತಿಳಿದು ಅವರ ಧೈರ್ಯ ಉಡುಗಿ ಹೋಯಿತೆಂದು ತಿಳಿಸಿದನು. ಈ ಕಾರ್ಯಾಚರಣೆಯಿಂದ ಆದ ಪ್ರಯೋಜನವೇನೆಂದರೆ ಕುರೈಶರ ವರ್ಧಿಸುತ್ತಿದ್ದ ಧೈರ್ಯ ಕುಂದಿದ್ದು ಮಾತ್ರವಲ್ಲ ಪರಿಸರ ಪ್ರದೇಶಗಳ ವೈರಿಗಳಿಗೂ, ಮುಸ್ಲಿಮರ ನೇತೃತ್ವವನ್ನು ಓರ್ವ ಧೀಮಂತ ಹಾಗೂ ನಿಶ್ಚಯ ದಾರ್ಢ್ಯವುಳ್ಳ ವ್ಯಕ್ತಿ ವಹಿಸುತ್ತಿದ್ದಾರೆಂದೂ ಅವರ ಒಂದು ಸೂಚನೆಗೆ ಮುಸ್ಲಿಮರು ಪ್ರಾಣಾರ್ಪಣೆಗೂ ಸದಾ ಸಿದ್ಧವಾಗಿರುತ್ತಾರೆಂದೂ ತಿಳಿಯಿತು.

ಅನಂತರ ಬನೂ ಅಸದ್ ಗೋತ್ರದವರು ಮದೀನಾದ ಮೇಲೆ ಆಕ್ರಮಣ ಮಾಡಲಿದ್ದಾರೆಂಬ ಸುದ್ದಿಯನ್ನು ಪ್ರವಾದಿವರ್ಯರ(ಸ) ವರದಿಗಾರರು ಸಕಾಲದಲ್ಲಿ ತಲಪಿಸಿದರು. ಆದುದರಿಂದ ಅವರು ದಾಳಿ ನಡೆಸುವುದಕ್ಕಿಂತ ಮುಂಚೆಯೇ ಅವರನ್ನು ಸದೆ ಬಡಿಯಲಿಕ್ಕಾಗಿ ಪ್ರವಾದಿವರ್ಯರು(ಸ) ಅಬೂಸಲಮಾರವರ(ರ) (ಪ್ರವಾದಿ ಪತ್ನಿ ಉಮ್ಮು ಸಲಮಾರ ಪೂರ್ವ ಪತಿ) ನೇತೃತ್ವದಲ್ಲಿ 150 ಮಂದಿಯ ತುಕಡಿಯೊಂದನ್ನು ರವಾನಿಸಿದರು. ಈ ಸೈನ್ಯವು ಹಠಾತ್ತನೆ ಅವರ ಮೇಲೆ ಬಂದೆರಗಿದಾಗ ಅವರು ದಿಕ್ಕೆಟ್ಟು ತಮ್ಮ ಎಲ್ಲವನ್ನೂ ಬಿಟ್ಟು ಓಡಿದರು. ಅವರು ಬಿಟ್ಟು ಹೋದ ಸೊತ್ತೆಲ್ಲವೂ ಮುಸ್ಲಿಮರ ಕೈವಶವಾದವು.

ಅನಂತರ ಬನೂ ನಝೀರ್ ಗೋತ್ರದ ಸರದಿ. ಅವರು ಪ್ರವಾದಿಯವರನ್ನು(ಸ) ಕೊಲ್ಲುವ ಸಂಚು ಹೂಡಿದ್ದರು. ಅದರ ರಹಸ್ಯ ಬಯಲಾಯಿತು. ಅದೇ ದಿನ ಪ್ರವಾದಿ(ಸ), 'ಹತ್ತು ದಿನಗಳೊಳಗಾಗಿ ಮದೀನಾ ಬಿಟ್ಟು ತೊಲಗಬೇಕು, ಅನಂತರ ಯಾರನ್ನಾದರೂ ಇಲ್ಲಿ ಕಂಡರೆ ವಧಿಸಲಾಗುವುದು' ಎಂದು ಅವರಿಗೆ ಎಚ್ಚರಿಕೆ ನೀಡಿದರು. ಮದೀನಾದ ಮುನಾಫಿಕರ (ಕಪಟವಿಶ್ವಾಸಿಗಳ) ಸರದಾರ ಅಬ್ದುಲ್ಲಾ ಬಿನ್ ಉಬೈ ಆ ಸಂದರ್ಭದಲ್ಲಿ ಅವರಿಗೆ ಧೈರ್ಯ ಕೊಡುತ್ತಾ, ಮದೀನಾ ಬಿಟ್ಟು ಹೋಗಬೇಡಿರಿ ಇಲ್ಲೇ ಇರಿ. ನಾನು ಎರಡು ಸಾವಿರ ಜನರೊಂದಿಗೆ ನಿಮಗೆ ಸಹಾಯ ಮಾಡುತ್ತೇನೆ, ಬನೂ ಕುರೈಝಾ ನಿಮಗೆ ಸಹಾಯ ಮಾಡುವುದು, ನಜ್ದ್‌ನ ಬನೂ ಗತ್ಫಾನ್ ಕೂಡಾ ನಿಮ್ಮ ಸಹಾಯಕ್ಕೆ ಬರುವುದು ಎಂದು ಹುರಿದುಂಬಿಸಿದನು. ಅವನ ಮಾತಿನ ಮೋಡಿಗೆ ಮರುಳಾಗಿ ಅವರು ಪ್ರವಾದಿಯವರಿಗೆ(ಸ),

ನಾವು ನಮ್ಮ ಜಾಗವನ್ನು ಬಿಟ್ಟು ಹೋಗಲಾರೆವು, ನಿಮ್ಮಿಂದ ಏನು ಮಾಡಲು ಸಾಧ್ಯವೋ ಅದನ್ನು ಮಾಡಿರಿ ಎಂದು ಹೇಳಿ ಕಳಿಸಿದರು. ಪ್ರವಾದಿ(ಸ) ನಿಗದಿತ ಅವಧಿ ಮುಗಿಯುತ್ತಲೇ ಅವರ ಪ್ರದೇಶಗಳಿಗೆ ಮುತ್ತಿಗೆ ಹಾಕಿದರು. ಅವರ ಬೆಂಬಲಿಗರ ಪೈಕಿ ಯಾರಿಗೂ ಅವರ ಸಹಾಯಕ್ಕೆ ಬರುವ ಧೈರ್ಯವುಂಟಾಗಲಿಲ್ಲ. ಕಟ್ಟಕಡೆಗೆ ಅವರು ತಮ್ಮಲ್ಲಿನ ಪ್ರತಿ ಮೂವರು ಒಂದು ಒಂಟೆಯ ಮೇಲೆ ಹೇರಿಕೊಳ್ಳುವಷ್ಟು ಸಾಮಾನು ಸರಂಜಾಮುಗಳನ್ನು ಕೊಂಡು ಹೋಗಬಹುದು; ಬಾಕಿ ಎಲ್ಲವನ್ನೂ ಮದೀನಾದಲ್ಲಿ ಬಿಟ್ಟು ಹೋಗಬೇಕು ಎಂಬ ಶರತ್ತಿಗೆ ಒಪ್ಪಿ ಶರಣಾಗತರಾದರು. ಈ ರೀತಿ ಬನೂ ನಝೀರ್ ಗೋತ್ರ ವಾಸಿಸುತ್ತಿದ್ದ ಮದೀನಾದ ಸುತ್ತಮುತ್ತಲಿನ ಇಡೀ ಪ್ರದೇಶವು, ಅವರ ತೋಟಗಳು, ಕೋಟೆ ಕೊತ್ತಲಗಳು ಮತ್ತು ಸ್ಥಿರ ಸೊತ್ತುಗಳ ಸಹಿತ ಮುಸ್ಲಿಮರ ವಶವಾಯಿತು. ಈ ವಚನ ಭಂಗ ಮಾಡಿದ ಗೋತ್ರದವರು ಖೈಬರ್, ಕುರಾ ಕಣಿವೆ ಮತ್ತು ಸಿರಿಯಾಗಳಲ್ಲಿ ಅತ್ತಿತ್ತ ಚದುರಿ ಹೋದರು.

ಆ ಬಳಿಕ ಹಿ.ಶ. 4ರಲ್ಲಿ ಪ್ರವಾದಿ(ಸ) ಅವರು ಅಬೂ ಸುಫ್ಯಾನ್ ಉಹುದ್‌ನಿಂದ ಮರಳುವಾಗ ನೀಡಿದ್ದ ಪಂಥಾಹ್ವಾನಕ್ಕೆ ಪ್ರತ್ಯುತ್ತರ ನೀಡಲಿಕ್ಕಾಗಿ ಹೊರಟರು. ಉಹುದ್ ಯುದ್ಧ ಕೊನೆಗೊಂಡಾಗ ಪ್ರವಾದಿ(ಸ) ಮತ್ತು ಮುಸ್ಲಿಮರನ್ನುದ್ದೇಶಿಸಿ ಮುಂದಿನ ವರ್ಷ ಬದ್ರ್‌ನಲ್ಲಿ ಪುನಃ ಭೇಟಿಯಾಗೋಣ ಎಂದು ಅಬೂ ಸುಫ್ಯಾನ್ ಘೋಷಿಸಿದ್ದರು. ಅದಕ್ಕೆ ಪ್ರವಾದಿವರ್ಯರು(ಸ) ಈ ರೀತಿ ಉತ್ತರಿಸುವಂತೆ ಓರ್ವ ಸಹಾಬಿಗೆ ಆದೇಶಿಸಿದರು- ಸರಿ. ಈ ವಿಷಯ ನಮ್ಮ-ನಿಮ್ಮ ನಡುವೆ ತೀರ್ಮಾನವಾಯಿತು. ಈ ಒಪ್ಪಂದದ ಪ್ರಕಾರ ಪ್ರವಾದಿ(ಸ) 1500 ಸಹಾಬಿಗಳ ಜೊತೆ ಬದ್ರ್‌ಗೆ ತಲಪಿದರು. ಅತ್ತ ಅಬೂ ಸುಫ್ಯಾನ್ ಎರಡು ಸಾವಿರ ಯೋಧರೊಂದಿಗೆ ಹೊರಟರು. ಆದರೆ ಮರ್‍ರುಝ್ಝಹ್ರಾನ್ (ಈಗಿನ ಫಾತಿಮಾ ಕಣಿವೆ)ಗಿಂತ ಮುಂದೆ ಸಾಗಲು ಅವರಿಗೆ ಧೈರ್ಯ ಬರಲಿಲ್ಲ. ಪ್ರವಾದಿ(ಸ) ಎಂಟು ದಿನಗಳ ಕಾಲ ಬದ್ರ್‌ನಲ್ಲಿ ಅವರನ್ನು ಎದುರು ನೋಡಿದರು. ಈ ಮಧ್ಯೆ ಮುಸ್ಲಿಮರು ವ್ಯಾಪಾರ ಮಾಡಿ ದುಪ್ಪಟ್ಟು ಲಾಭ ಗಳಿಸಿದರು. ಈ ಘಟನೆಯಿಂದ ಉಹುದ್‌ನಲ್ಲಿ ಹೋಗಿದ್ದ ಅವರ ಪ್ರತಿಷ್ಠೆಯು ಮೊದಲಿಗಿಂತಲೂ ಹೆಚ್ಚಾಯಿತು. ಇನ್ನು ಮುಂದೆ ತಾವಾಗಿಯೇ ಕುರೈಶರು ಪ್ರವಾದಿವರ್ಯರನ್ನು(ಸ) ಎದುರಿಸಲಾರರು ಎಂಬುದನ್ನು ಕೂಡಾ ಈ ಘಟನೆಯು ಇಡೀ ಅರೇಬಿಯಾದಲ್ಲಿ ಬಹಿರಂಗ ಪಡಿಸಿತು.

ಈ ಪ್ರತಿಷ್ಠೆಯನ್ನು ಇನ್ನೊಂದು ಘಟನೆಯು ಇನ್ನಷ್ಟು ಹೆಚ್ಚಿಸಿತು. ಅರೇಬಿಯಾ ಮತ್ತು ಸಿರಿಯಾಗಳ ನಡುವೆ ದೂಮತುಲ್ ಜಂದಲ್ (ಈಗಿನ ಅಲ್‌ಜೌಫ್) ಎಂಬ ಒಂದು ಪ್ರಮುಖ ಸ್ಥಳವಿದೆ. ಇರಾಕ್ ಹಾಗೂ ಈಜಿಪ್ಟ್-ಸಿರಿಯಾಗಳ ನಡುವೆ ಅರಬರ ವ್ಯಾಪಾರಿ ತಂಡಗಳು ಸಾಗುತ್ತಿದ್ದುವು. ಈ ಪ್ರದೇಶದ ಜನರು ಹೆಚ್ಚಾಗಿ ವ್ಯಾಪಾರಿ ತಂಡಗಳಿಗೆ ಕಿರುಕುಳ ಕೊಡುತ್ತಿದ್ದರು. ಕೆಲವೊಮ್ಮೆ ಕೊಳ್ಳೆ ಹೊಡೆಯುತ್ತಿದ್ದರು. ಹಿ.ಶ. 5ರ ರಬೀಉಲ್ ಅವ್ವಲ್ ತಿಂಗಳಲ್ಲಿ ಪ್ರವಾದಿಯವರು(ಸ) ಒಂದು ಸಾವಿರ ಯೋಧರೊಂದಿಗೆ ಅವರ ಮೇಲೆ ಕ್ರಮಕೈಗೊಳ್ಳಲಿಕ್ಕಾಗಿ ಹೊರಟರು. ಅವರು ಪ್ರವಾದಿವರ್ಯರನ್ನು(ಸ) ಎದುರಿಸಲಾರದೆ ಊರು ಬಿಟ್ಟು ಪಲಾಯನ ಮಾಡಿದರು. ಇದರಿಂದ ಇಡೀ ಉತ್ತರ ಅರಬಸ್ತಾನದಲ್ಲಿ ಇಸ್ಲಾಮಿನ


ಪ್ರವಾದಿಯವರ(ಸ) ಕಾಲದ ಅರಬ್ ಗೋತ್ರಗಳ ಪ್ರದೇಶಗಳು
ಪರ್ಷಿಯನ್ ಕೊಲ್ಲಿ
ಉತ್ತರ
ಕೆಂಪು ಸಮುದ್ರ
ಈಜಿಪ್ಟ್

ಶಕ್ತಿ ನೆಲೆಯೂರಿತು. ಮದೀನಾದಲ್ಲಿ ಹುಟ್ಟಿರುವ ಪ್ರಬಲ ಶಕ್ತಿಯನ್ನು ಇನ್ನು ಒಂದೆರಡು ಗೋತ್ರಗಳಿಂದ ಸೋಲಿಸಲು ಸಾಧ್ಯವಿಲ್ಲವೆಂದು ಎಲ್ಲ ಗೋತ್ರಗಳಿಗೂ ಮನವರಿಕೆಯಾಯಿತು.

## ಅಹ್‌ಝಾಬ್ ಯುದ್ಧ

ಇಂತಹ ಪರಿಸ್ಥಿತಿಗಳಲ್ಲಿ ಅಹ್‌ಝಾಬ್ ಯುದ್ಧ ಆರಂಭಗೊಂಡಿತು. ಈ ಯುದ್ಧವು ವಾಸ್ತವದಲ್ಲಿ ಮದೀನಾದ ಈ ಶಕ್ತಿಯನ್ನು ಅಳಿಸಿ ಹಾಕಲು ಅರೇಬಿಯಾದ ಅನೇಕ ಗೋತ್ರಗಳು ಜಂಟಿಯಾಗಿ ನಡೆಸಿದ ಆಕ್ರಮಣವಾಗಿತ್ತು. ಇದಕ್ಕೆ ಪ್ರೇರಣೆ ನೀಡಿದವರು ಮದೀನಾದಿಂದ ಗಡೀಪಾರು ಮಾಡಲ್ಪಟ್ಟು ಖೈಬರ್‌ನಲ್ಲಿ ಬಂದು ನೆಲಸಿದ ಬನೂ ನಝೀರ್ ಗೋತ್ರದ ನೇತಾರರಾಗಿದ್ದರು. ಅವರು ಕುರೈಶ್, ಗತ್ಫಾನ್, ಹುದೈಲ್ ಮತ್ತಿತರ ಗೋತ್ರಗಳವರನ್ನು ಭೇಟಿ ಮಾಡಿ ಎಲ್ಲರೂ ಒಗ್ಗಟ್ಟಾಗಿ ಬಹುದೊಡ್ಡ ಗುಂಪಾಗಿ ಮದೀನಾದ ಮೇಲೆ ದಾಳಿ ಮಾಡುವಂತೆ ಅವರ ಮನವೊಲಿಸಿದರು. ಅವರ ಪ್ರಯತ್ನದಿಂದ ಹಿ.ಶ. 5ರ ಶವ್ವಾಲ್‌ನಲ್ಲಿ ಅರಬ್ ಗೋತ್ರಗಳ, ಈ ಹಿಂದೆಂದೂ ಒಟ್ಟಾಗದಷ್ಟು, ಬಹುದೊಡ್ಡ ಸೈನ್ಯವು ಈ ಪುಟ್ಟ ನಗರದ ಮೇಲೆ ದಾಳಿ ನಡೆಸಿತು. ಉತ್ತರಭಾಗದಿಂದ, ಗಡೀಪಾರು ಮಾಡಲ್ಪಟ್ಟು ಖೈಬರ್ ಮತ್ತು ಕುರಾ ಕಣಿವೆಯಲ್ಲಿ ಹೋಗಿ ನೆಲಸಿದ್ದ, ಬನೂ ನಝೀರ್ ಮತ್ತು ಬನೂ ಕೈನುಕಾಅ್ ಗೋತ್ರಗಳ ಯಹೂದಿಯರು ಬಂದರು. ಪೂರ್ವಭಾಗದಿಂದ ಬನೂಗತ್ಫಾನ್‌ನ (ಬನೂ ಸುಲೈಮ್, ಫಝಾರಃ, ಮುರ್‍ರಃ, ಅಶ್‌ಜಅ್, ಸಅದ್ ಮತ್ತು ಅಸದ್ ಮೊದಲಾದ) ಗೋತ್ರಗಳು ಮುಂದೊತ್ತಿ ಬಂದುವು. ದಕ್ಷಿಣ ಭಾಗದಿಂದ ಕುರೈಶರು ತಮ್ಮ ಬೆಂಬಲಿಗರ ಬಹುದೊಡ್ಡ ಸೈನ್ಯದೊಂದಿಗೆ ಮುಂದುವರಿಯುತ್ತಾ ಬಂದರು. ಒಟ್ಟಿನಲ್ಲಿ ಯೋಧರ ಒಟ್ಟು ಸಂಖ್ಯೆ 10-12 ಸಾವಿರವಿತ್ತು.

ಈ ದಾಳಿಯು ಹಠಾತ್ತನೆ ಆಗುತ್ತಿದ್ದರೆ ಭಾರೀ ಹಾನಿಯುಂಟಾಗುತ್ತಿತ್ತು. ಆದರೆ ಪ್ರವಾದಿ(ಸ) ಮದೀನಾದಲ್ಲಿ ಅಲಕ್ಷ್ಯರಾಗಿ ಕುಳಿತು ಕೊಂಡಿರಲಿಲ್ಲ. ಅವರ ಗುಪ್ತ ವರದಿಗಾರರು, ಇಸ್ಲಾಮೀ ಆಂದೋಲನದ ಹಿತೈಷಿಗಳು ಮತ್ತು ಪರಿಚಿತರು ಎಲ್ಲ ಗೋತ್ರಗಳಲ್ಲೂ ಇದ್ದರು. ಅವರು ವೈರಿಗಳ ಚಲನವಲನಗಳ ಕುರಿತು ಪ್ರವಾದಿವರ್ಯರಿಗೆ(ಸ) ನಿರಂತರ ಸುದ್ದಿ ಮುಟ್ಟಿಸುತ್ತಿದ್ದರು.* ಈ ಮಹಾಸೇನೆಯು ನಗರಕ್ಕೆ ತಲಪುವುದಕ್ಕೆ ಮುಂಚೆಯೇ ಪ್ರವಾದಿವರ್ಯರು(ಸ) ಆರು ದಿನಗಳೊಳಗೆ ಮದೀನಾದ ವಾಯವ್ಯ ದಿಕ್ಕಿನಲ್ಲಿ ಒಂದು ಕಂದಕವನ್ನು ತೋಡಿಸಿದರು ಮತ್ತು ಮೂರು ಸಾವಿರ ಯೋಧರೊಂದಿಗೆ ಕಂದಕದ

---

*ಇದು ಜನಾಂಗವಾದಿ ಗುಂಪುಗಳ ಮೇಲೆ ಒಂದು ಸೈದ್ಧಾಂತಿಕ ಆಂದೋಲನಕ್ಕಿರುವ ಮೇಲ್ಮೆಯ ಪ್ರತೀಕವಾಗಿದೆ. ಜನಾಂಗವಾದಿ ಗುಂಪುಗಳು ತಮ್ಮ ಜನಾಂಗದವರ ಬೆಂಬಲವನ್ನವಲಂಬಿಸಿರುತ್ತವೆ. ಆದರೆ ಒಂದು ಸೈದ್ಧಾಂತಿಕ ಆಂದೋಲನವು ತನ್ನ ಸಂದೇಶದೊಂದಿಗೆ ಎಲ್ಲೆಡೆ ಮುಂದುವರಿಯುತ್ತದೆ ಮತ್ತು ಪ್ರಸ್ತುತ ಗುಂಪುಗಳೊಳಗಿನಿಂದಲೇ ತನಗೆ ಬೆಂಬಲಿಗರನ್ನು ಗಿಟ್ಟಿಸಿಕೊಳ್ಳುತ್ತದೆ.


ಕಂದಕ ಯುದ್ಧದ
ನಕಾಶೆ
ಉತ್ತರ
ಕುರೈಶರ ಸೇನೆ
ಉಹುದ್ ಬೆಟ್ಟ
ಬನಿ ಗತ್ಫಾನ್ ಮುಂತಾದವರ ಸೇನೆ
ಕಂದಕ
ಕಂದಕ
ಸಲಅ್ ಬೆಟ್ಟ
ಮದೀನಾ
ಲಾವಾ ರಸದ ಬಂಡೆಗಳು
ಲಾವಾ ರಸದ ಬಂಡೆಗಳು
ತೋಟಗಳು
ತೋಟಗಳು
ಕುಬಾ ಮಸೀದಿ
ಬನೂ ಕುರೈಝಾ
ತೋಟಗಳು
ಅಹ್‌ಝಾಬ್ ಯುದ್ಧಕ್ಕಿಂತ
ಮೊದಲೇ ಗೆಲ್ಲಲಾದ ಬನೂ
ನಝೀರ್ ಗೋತ್ರದ ಪ್ರದೇಶ
ದುಲ್ ಹನೀಫಾ
ಬೆಟ್ಟ
ಲಾವಾ ರಸದ ಬಂಡೆಗಳು

ಆಶ್ರಯದಲ್ಲಿ ಸಲಅ್ ಬೆಟ್ಟವನ್ನು ಬೆನ್ನಿಗೆ ಹಾಕಿ ರಕ್ಷಣೆಗೆ ಸಿದ್ಧರಾಗಿ ನಿಂತರು. ಮದೀನಾದ ದಕ್ಷಿಣ ಭಾಗದಲ್ಲಿ ಭಾರೀ ಸಂಖ್ಯೆಯ ತೋಟಗಳಿದ್ದುವು. ಆದುದರಿಂದ ಆ ಕಡೆಯಿಂದ ಯಾವುದೇ ಆಕ್ರಮಣದ ಭೀತಿಯಿರಲಿಲ್ಲ. ಪೂರ್ವಭಾಗದಲ್ಲಿ ದೊಡ್ಡ ದೊಡ್ಡ ಬಂಡೆಗಳಿದ್ದುವು. ಆ ಕಡೆಯಿಂದ ಸಾಮೂಹಿಕ ಸೇನಾದಾಳಿ ಸುಲಭದ ಕಾರ್ಯವಾಗಿರಲಿಲ್ಲ. ನೈಋತ್ಯ ಭಾಗದ ಸ್ಥಿತಿಯೂ ಹಾಗೆಯೇ ಇತ್ತು. ಆದುದರಿಂದ ಕೇವಲ ಉಹುದ್‌ನ ಪೂರ್ವ ಮತ್ತು ಪಶ್ಚಿಮ ಭಾಗದಿಂದಲೇ ಆಕ್ರಮಣ ಆಗುವ ಸಾಧ್ಯತೆಯಿತ್ತು. ಪ್ರವಾದಿ(ಸ) ಅದೇ ಕಡೆ ಕಂದಕ ತೋಡಿ ನಗರವನ್ನು ಸುರಕ್ಷಿತಗೊಳಿಸಿದ್ದರು. ಸತ್ಯನಿಷೇಧಿಗಳ ಮುಂದೆ ಈ ಚಿತ್ರವಿರಲಿಲ್ಲ. ತಮಗೆ ಮದೀನಾದ ಹೊರಗೆ ಕಂದಕ ಎದುರಾದೀತೆಂದು ಅವರು ಊಹಿಸಿರಲಿಲ್ಲ. ಏಕೆಂದರೆ ಅರಬರಿಗೆ ಇಂತಹ ರಕ್ಷಣಾ ವಿಧಾನ ಅಪರಿಚಿತವಾಗಿತ್ತು. ಅವರಿಗೆ ಒಲ್ಲದ ಮನಸ್ಸಿನೊಂದಿಗೆ ಒಂದು ದೀರ್ಘ ಮುತ್ತಿಗೆ ಅನಿವಾರ್ಯವಾಯಿತು. ಅದಕ್ಕಾಗಿ ಮನೆಯಿಂದ ಅವರು ಸಿದ್ಧತೆಯೊಂದಿಗೆ ಹೊರಟು ಬಂದಿರಲಿಲ್ಲ.

ಇನ್ನು ಸತ್ಯನಿಷೇಧಿಗಳಿಗೆ ಒಂದೇ ಒಂದು ಉಪಾಯ ಉಳಿದಿತ್ತು. ಅದೇನೆಂದರೆ ಮದೀನಾದ ಆಗ್ನೇಯ ಭಾಗದಲ್ಲಿರುವ ಬನೂ ಕುರೈಝಾದ ಯಹೂದಿ ಗೋತ್ರಗಳನ್ನು ವಿದ್ರೋಹಕ್ಕೆ ಪ್ರೇರೇಪಿಸುವುದು. ಈ ಗೋತ್ರಗಳೊಂದಿಗೆ ಮುಸ್ಲಿಮರ ಮೈತ್ರಿ ಒಪ್ಪಂದವಿತ್ತು. ಅದರ ಪ್ರಕಾರ ಮದೀನಾದ ಮೇಲೆ ಆಕ್ರಮಣವಾದಾಗ ಅವರು ಮುಸ್ಲಿಮರೊಂದಿಗೆ ಸೇರಿ ರಕ್ಷಣೆ ಮಾಡಬೇಕಾಗಿತ್ತು. ಆದುದರಿಂದ ಮುಸ್ಲಿಮರು ಆ ಕಡೆಯಿಂದ ನಿಶ್ಚಿಂತರಾಗಿ ತಮ್ಮ ಮಕ್ಕಳು ಮರಿಗಳನ್ನು ಬನೂ ಕುರೈಝಾದವರ ಕಡೆಯಲ್ಲಿದ್ದ ಕೋಟೆಗಳಿಗೆ ಕಳಿಸಿದ್ದರು. ಅಲ್ಲಿ ಯಾವುದೇ ರಕ್ಷಣಾ ವ್ಯವಸ್ಥೆಯನ್ನು ಮಾಡಿರಲಿಲ್ಲ. ಸತ್ಯನಿಷೇಧಿಗಳಿಗೆ ಇಸ್ಲಾಮೀ ಸೇನೆಯ ಈ ದೌರ್ಬಲ್ಯದ ಅರಿವಾಯಿತು. ಅವರು ಬನೂ ನಝೀರ್ ಗೋತ್ರದ ಸರದಾರ ಹುಯ್ಯಿಬಿನ್ ಅಖ್ತಬ್‌ನನ್ನು ಬನೂ ಕುರೈಝಾದವರ ಕಡೆಗೆ ಅವರು ಒಪ್ಪಂದ ಮುರಿದು ಯುದ್ಧದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಲಿಕ್ಕಾಗಿ ರವಾನಿಸಿದರು. ಮೊದಲು ಅವರು ಒಪ್ಪಂದ ಮುರಿಯಲು ನಿರಾಕರಿಸಿದರು. ನಾವು ಮುಹಮ್ಮದ್‌ರೊಂದಿಗೆ(ಸ) ಒಪ್ಪಂದ ಮಾಡಿಕೊಂಡಿದ್ದೇವೆ. ಇಂದಿನ ವರೆಗೂ ಅವರಿಂದ ನಮಗೇನೂ ತೊಂದರೆಯಾಗಿಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಆದರೆ ಹುಯ್ಯಿಬಿನ್ ಅಖ್ತಬ್ ಅವರೊಂದಿಗೆ, "ನೋಡಿ, ನಾನೀಗ ಅರೇಬಿಯಾದ ಸಂಪೂರ್ಣ ಸಂಯುಕ್ತ ಸೈನ್ಯ ಬಲವನ್ನು ಈ ವ್ಯಕ್ತಿಯ ವಿರುದ್ಧ ಹೋರಾಡಲು ತಂದಿದ್ದೇನೆ. ಅವರನ್ನು ಸದೆ ಬಡಿಯಲು ಇದೇ ಸಕಾಲ. ಈ ಸಂದರ್ಭವನ್ನು ಕಳಕೊಂಡರೆ ಮುಂದೆಂದೂ ಇಂತಹ ಅವಕಾಶ ಸಿಗಲಾರದು" ಎಂದಾಗ ಯಹೂದಿಯರ ಇಸ್ಲಾಮ್ ವಿರೋಧಿ ಮನಸ್ಸು ಕೆರಳಿತು. ನೀತಿ-ನ್ಯಾಯ ಪಾಲನೆಯ ವಿಚಾರವನ್ನು ಕೈಬಿಟ್ಟು ಬನೂ ಕುರೈಝಾ ಗೋತ್ರದವರು ಒಪ್ಪಂದ ಮುರಿಯಲು ಸಿದ್ಧರಾದರು.

ಪ್ರವಾದಿ(ಸ) ಈ ವಿಷಯದ ಬಗ್ಗೆಯೂ ಅಲಕ್ಷ್ಯರಾಗಿರಲಿಲ್ಲ. ಅವರಿಗೆ ಸಕಾಲದಲ್ಲಿ ಇದರ ಸುಳಿವು ಸಿಕ್ಕಿತು. ಕೂಡಲೇ ಅನ್ಸಾರಿಗಳ ಸರದಾರರನ್ನು (ಸಅದ್ ಬಿನ್ ಉಬಾದ, ಸಅದ್ ಬಿನ್ ಮುಆದ್, ಅಬ್ದುಲ್ಲಾ ಬಿನ್ ರವಾಹ ಮತ್ತು ಖವ್ವಾತ್ ಬಿನ್ ಜುಬೈರ್)

ಪರಿಸ್ಥಿತಿಯ ಅಧ್ಯಯನ ನಡೆಸಿ ಮಾತುಕತೆ ನಡೆಸುವಂತೆ ಅವರ ಬಳಿಗೆ ಕಳಿಸಿದರು. ಅವರು ಹೋಗುವಾಗ ಅವರಿಗೆ ಈ ರೀತಿ ಆದೇಶಿಸಿದರು, "ಬನೂ ಕುರೈಝಾ ತನ್ನ ಒಪ್ಪಂದದಲ್ಲಿ ಸ್ಥಿರವಾಗಿದ್ದರೆ ನೀವು ಬಂದು ಇಡೀ ಸೇನೆಯ ಮುಂದೆ ಅದನ್ನು ಬಹಿರಂಗವಾಗಿ ಘೋಷಿಸಬೇಕು. ಆದರೆ ಅವರು ಒಪ್ಪಂದವನ್ನು ಮುರಿಯುವುದರಲ್ಲೇ ಪಟ್ಟು ಹಿಡಿದರೆ, ನನಗೆ ಮಾತ್ರ ಸೂಚ್ಯವಾಗಿ ಅದನ್ನು ತಿಳಿಸಬೇಕು. ಮುಸ್ಲಿಮ್ ಜನಸಾಮಾನ್ಯರು ಇದನ್ನು ಕೇಳಿ ಧೈರ್ಯಗುಂದಿ ಬಿಡುವಂತಾಗಬಾರದು." ಈ ಮಂದಿ ಅಲ್ಲಿ ಹೋಗಿ ನೋಡಿದಾಗ ಬನೂ ಕುರೈಝಾದವರು ತಮ್ಮ ಸಂಪೂರ್ಣ ಕುಟಿಲತೆಯನ್ನು ಪ್ರದರ್ಶಿಸಿದರು. ಅವರು ಈ ಪ್ರತಿನಿಧಿ ಸಂಘದವರೊಡನೆ ಸ್ಪಷ್ಟವಾಗಿ, ನಮ್ಮ ಮತ್ತು ಮುಹಮ್ಮದ್‌ರವರ(ಸ) ನಡುವೆ ಯಾವುದೇ ಒಪ್ಪಂದವಿಲ್ಲವೆಂದು ಸಾರಿ ಬಿಟ್ಟರು. ಈ ಉತ್ತರವನ್ನು ಕೇಳಿ ಅವರು ಇಸ್ಲಾಮೀ ಸೇನೆಯತ್ತ ಮರಳಿದರು. ಪ್ರವಾದಿವರ್ಯರೊಡನೆ(ಸ) ಸೂಚ್ಯವಾಗಿ ಹೀಗೆಂದರು- ಅಝ್ಲ್ ಮತ್ತು ಕಾರಃ ಗೋತ್ರದವರು ಇಸ್ಲಾಮಿನ ಸಂದೇಶ ಪ್ರಚಾರಕ ತಂಡದೊಂದಿಗೆ ರಜೀಅ್ ಎಂಬಲ್ಲಿ ಮಾಡಿದ ದ್ರೋಹವನ್ನೇ ಈಗ ಬನೂ ಕುರೈಝಾದವರು ಮಾಡುತ್ತಿದ್ದಾರೆ.

ಈ ಸುದ್ದಿ ಬಹಳ ಬೇಗನೆ ಮದೀನಾದ ಮುಸ್ಲಿಮರಲ್ಲಿ ಹರಡಿತು. ಇದರಿಂದ ಅವರು ಬಹಳ ಕಳವಳಕ್ಕೀಡಾದರು. ಏಕೆಂದರೆ ಈಗ ಅವರು ಎರಡೂ ಕಡೆಯಿಂದ ಸುತ್ತುವರಿಯಲ್ಪಟ್ಟಿದ್ದರು. ಅವರ ಮಟ್ಟಿಗೆ ಯಾವುದೇ ರಕ್ಷಣೆಯಿಲ್ಲದ ತಮ್ಮ ಮಕ್ಕಳು ಮಡದಿಗಳಿರುವ ನಗರದ ಆ ಭಾಗ ಅಪಾಯಕ್ಕೆ ಸಿಲುಕಿತ್ತು. ಅತ್ತ ಮುನಾಫಿಕರ ಚಟುವಟಿಕೆಗಳೂ ಇನ್ನಷ್ಟು ತೀವ್ರಗೊಂಡುವು. ಅವರು ಮುಸ್ಲಿಮರ ಧೈರ್ಯಗೆಡಿಸಲಿಕ್ಕಾಗಿ ತರತರದ ಮಾನಸಿಕ ಕಿರುಕುಳಗಳನ್ನು ನೀಡಲಾರಂಭಿಸಿದರು. ಒಬ್ಬನು ಹೇಳಿದನು, "ನಮ್ಮೊಂದಿಗೆ ಕೈಸರ್-ಕಿಸ್ರಾಗಳ ದೇಶಗಳನ್ನು ಜಯಿಸಲಾಗುವುದೆಂಬ ವಾಗ್ದಾನ ಮಾಡಲಾಗಿತ್ತು. ಆದರೆ ನಮ್ಮ ಅವಸ್ಥೆಯೇನೆಂದರೆ ನಾವು ಶೌಚಕ್ಕಾಗಿಯೂ ಹೊರಗೆ ಹೋಗುವಂತಿಲ್ಲ." ಇನ್ನೊಬ್ಬನು, "ಈಗ ನಮ್ಮ ಮನೆಯೇ ಅಪಾಯದಲ್ಲಿ ಸಿಲುಕಿದೆ. ನಾವು ಅದನ್ನು ರಕ್ಷಿಸಬೇಕಾಗಿದೆ" ಎಂದು ಹೇಳಿ ಕಂದಕ ತೋಡುವ ಕೆಲಸದಿಂದ ಅನುಮತಿ ಪಡೆದು ವಿರಮಿಸಿದ." ಮತ್ತೊಬ್ಬನು ಹೀಗೆ ಪ್ರಚಾರ ಮಾಡಲಾರಂಭಿಸಿದ, "ಆಕ್ರಮಣಕಾರರೊಂದಿಗೆ ಸೇರಿಕೊಂಡು ಮುಹಮ್ಮದ್‌ರನ್ನು(ಸ) ಅವರಿಗೆ ಒಪ್ಪಿಸೋಣ." ಇದೊಂದು ಕಠಿಣ ಅಗ್ನಿ ಪರೀಕ್ಷೆಯ ಘಟ್ಟವಾಗಿತ್ತು. ಮನಸ್ಸಿನೊಳಗೆ ಸ್ವಲ್ಪವಾದರೂ ಕಾಪಟ್ಯವಿದ್ದ ಪ್ರತಿಯೊಬ್ಬನ ನಿಜಬಣ್ಣ ಬಯಲಾಯಿತು. ಕೇವಲ ನಿಷ್ಠಾವಂತ ಸತ್ಯವಿಶ್ವಾಸಿಗಳು ಮಾತ್ರ ಈ ನಿರ್ಣಾಯಕ ಘಟ್ಟದಲ್ಲೂ ಆತ್ಮಾರ್ಪಣೆಯ ದೃಢ ಸಂಕಲ್ಪದೊಂದಿಗೆ ಸ್ಥಿರವಾಗಿ ನಿಂತರು.

ಪ್ರವಾದಿ(ಸ) ಈ ನಿರ್ಣಾಯಕ ಘಟ್ಟದಲ್ಲಿ ಗತ್ಫಾನ್ ಗೋತ್ರದವರೊಂದಿಗೆ ಶಾಂತಿ ಮಾತುಕತೆ ಆರಂಭಿಸಿದರು. ಮದೀನಾದ ಫಲೋತ್ಪನ್ನಗಳ ಮೂರನೇ ಒಂದು ಪಾಲು ಪಡೆದು ವಾಪಾಸು ಹೋಗುವಂತೆ ಅವರ ಮನವೊಲಿಸ ಬಯಸಿದರು. ಆದರೆ ಅನ್ಸಾರಿಗಳ ಸರದಾರರೊಂದಿಗೆ (ಸಅದ್ ಬಿನ್ ಉಬಾದಾ ಮತ್ತು ಸಅದ್ ಬಿನ್ ಮುಆದ್) ಶಾಂತಿ ಒಪ್ಪಂದದ ಶರತ್ತುಗಳ ಬಗ್ಗೆ ಸಲಹೆ ಕೇಳಿದಾಗ ಅವರು ಹೇಳಿದರು- "ಪ್ರವಾದಿವರ್ಯರೆ(ಸ)! ನಾವು ಹಾಗೆ

ಮಾಡಬೇಕೆಂದು ತಾವು ಬಯಸುತ್ತೀರಾ? ಅಥವಾ ಇದು ನಮಗೆ ಅಂಗೀಕರಿಸದಿರಲು ಸಾಧ್ಯವಿಲ್ಲದಂತಹ ಅಲ್ಲಾಹನ ಆಜ್ಞೆಯೇ? ಅಥವಾ ಕೇವಲ ನಮ್ಮನ್ನು ರಕ್ಷಿಸಲಿಕ್ಕಾಗಿ ತಾವು ಸಲಹೆ ನೀಡುತ್ತಿರುವಿರಾ?" ಪ್ರವಾದಿ(ಸ) ಹೇಳಿದರು- "ನಾನು ನಿಮ್ಮನ್ನು ರಕ್ಷಿಸಲಿಕ್ಕಾಗಿ ಮಾತ್ರ ಹೀಗೆ ಮಾಡುತ್ತಿದ್ದೇನೆ. ಏಕೆಂದರೆ ಸಕಲ ಅರಬ್ ಗೋತ್ರಗಳು ಒಗ್ಗಟ್ಟಾಗಿ ನಿಮ್ಮ ಮೇಲೇರಿ ಬರುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಅವರ ಐಕ್ಯವನ್ನು ಮುರಿಯುವುದೇ ನನ್ನ ಉದ್ದೇಶವಾಗಿದೆ." ಇದನ್ನು ಕೇಳಿ ಆ ಸರದಾರರಿಬ್ಬರೂ ಒಕ್ಕೊರಳಿನಿಂದ ಹೀಗೆಂದರು- "ತಾವು ನಮ್ಮನ್ನು ರಕ್ಷಿಸಲಿಕ್ಕಾಗಿ ಈ ಒಪ್ಪಂದ ಮಾಡುತ್ತೀರಾದರೆ ಅದನ್ನು ಕೊನೆಗೊಳಿಸಿರಿ. ನಾವು ಬಹುದೇವ ವಿಶ್ವಾಸಿಗಳಾಗಿದ್ದ ಕಾಲದಲ್ಲೂ ಈ ಗೋತ್ರಗಳು ನಮ್ಮಿಂದ ಕಂದಾಯದ ರೂಪದಲ್ಲಿ ಒಂದು ಧಾನ್ಯವನ್ನೂ ವಸೂಲು ಮಾಡಲಿಕ್ಕೆ ಶಕ್ತವಾಗಿರಲಿಲ್ಲ. ಈಗಂತೂ ನಾವು ಅಲ್ಲಾಹನನ್ನು ಮತ್ತು ಪ್ರವಾದಿಗಳನ್ನು ನಂಬಿದ್ದೇವೆ. ಇನ್ನು ನಮ್ಮ ಮತ್ತು ಅವರ ನಡುವೆ ಖಡ್ಗವೇ ತೀರ್ಮಾನಿಸುವುದು. ಅಲ್ಲಾಹನು ನಮ್ಮ ಮತ್ತು ಅವರ ನಡುವೆ ತೀರ್ಮಾನ ಕೈಗೊಳ್ಳುವನು." ಇಷ್ಟು ಹೇಳಿ ಅವರು ಇನ್ನೂ ಹಸ್ತಾಕ್ಷರವಾಗದ ಆ ಒಪ್ಪಂದದ ಕರಡನ್ನು ಹರಿದು ಹಾಕಿದರು.

ಅದೇ ಸಂದರ್ಭದಲ್ಲಿ ಗತ್ಫಾನ್ ಗೋತ್ರದ ಅಶ್ಜಅ್ ಎಂಬ ಉಪಗೋತ್ರದ ಓರ್ವ ವ್ಯಕ್ತಿ ನಈಮ್ ಬಿನ್ ಮಸ್‌ಊದ್ ಮುಸ್ಲಿಮ್ ಆಗಿ ಪ್ರವಾದಿಯವರ(ಸ) ಬಳಿಗೆ ಬಂದು, ಈ ವರೆಗೂ ನಾನು ಇಸ್ಲಾಮ್ ಸ್ವೀಕರಿಸಿದ ವಿಷಯ ಯಾರಿಗೂ ತಿಳಿದಿಲ್ಲ. ಈಗ ತಾವು ನನ್ನಿಂದ ಯಾವ ಸೇವೆಯನ್ನು ಬೇಕಾದರೂ ಪಡೆದು ಕೊಳ್ಳಬಹುದು ಎಂದು ಹೇಳಿದರು. ಆಗ ಪ್ರವಾದಿ(ಸ) ಹೇಳಿದರು, "ನೀವು ಹೋಗಿ ವೈರಿಗಳ ಮಧ್ಯೆ ಒಡಕುಂಟಾಗುವಂತಹ ಯಾವುದಾದರೂ ತಂತ್ರ ಹೂಡಿರಿ." ಹಾಗೆ ಅವರು ಮೊದಲು ಬನೂ ಕುರೈಝಾರ ಬಳಿಗೆ ಹೋದರು. ಆ ಗೋತ್ರದವರೊಂದಿಗೆ ಅವರಿಗೆ ನಿಕಟ ಸಂಪರ್ಕವಿತ್ತು. ಅವರು ಅವರೊಡನೆ ಹೀಗೆ ಹೇಳಿದರು- "ಕುರೈಶರು ಮತ್ತು ಗತ್ಫಾನ್‌ನವರು ದಿಗ್ಬಂಧನದಿಂದ ಬೇಸತ್ತು ಮರಳಿ ಹೋಗಲೂ ಬಹುದು. ಅವರಿಗೇನೂ ತೊಂದರೆಯಾಗದು. ಆದರೆ ನೀವು ಮುಸ್ಲಿಮರ ಜೊತೆ ಇಲ್ಲೇ ಇರಬೇಕಲ್ಲವೆ. ನನ್ನ ಅಭಿಪ್ರಾಯದಲ್ಲಿ ಹೊರಗಿನಿಂದ ಬಂದ ಈ ಗೋತ್ರಗಳ ಕೆಲವು ವಿಶಿಷ್ಟ ವ್ಯಕ್ತಿಗಳನ್ನು ನಿಮ್ಮ ಬಳಿ ಒತ್ತೆಯಾಳಾಗಿ ಕಳಿಸುವಂತೆ ನೀವು ಒತ್ತಾಯ ಮಾಡಬೇಕು. ಅವರು ನಿಮ್ಮಲ್ಲಿಗೆ ಬರುವ ವರೆಗೆ ನೀವು ಯುದ್ಧದಲ್ಲಿ ಪಾಲ್ಗೊಳ್ಳಬಾರದು. ಇದು ಬನೂ ಕುರೈಝಾರಿಗೆ ಸರಿ ಕಂಡಿತು. ಅವರು ಸಂಯುಕ್ತ ರಂಗದ ಗೋತ್ರಗಳಿಂದ ಒತ್ತೆಯಾಳುಗಳನ್ನು ಕೇಳುವ ತೀರ್ಮಾನ ಮಾಡಿದರು. ತರುವಾಯ ಈ ವ್ಯಕ್ತಿ ಕುರೈಶ್ ಮತ್ತು ಗತ್ಫಾನ್ ಗೋತ್ರದ ಸರದಾರರ ಬಳಿ ಹೋಗಿ ಹೀಗೆಂದರು, "ಬನೂ ಕುರೈಝಾದವರು ಸ್ವಲ್ಪ ಸುಸ್ತಾದಂತೆ ಕಾಣುತ್ತದೆ. ಅವರು ನಿಮ್ಮಿಂದ ಕೆಲವು ಒತ್ತೆಯಾಳುಗಳನ್ನು ಕೇಳಿ ಪಡೆದು ಅವರನ್ನು ಮುಹಮ್ಮದ್‌ರಿಗೆ(ಸ) ಒಪ್ಪಿಸಿ ತಮ್ಮ ವ್ಯವಹಾರವನ್ನು ಕುದುರಿಸಬಹುದು. ಆದುದರಿಂದ ಅವರ ಬಗ್ಗೆ ಸ್ವಲ್ಪ ಜಾಗರೂಕತೆ ವಹಿಸುವುದು ಒಳ್ಳೆಯದು. ಇದರಿಂದ ಸಂಯುಕ್ತ ರಂಗದ ನಾಯಕರಿಗೆ ಬನೂ ಕುರೈಝಾರ ಬಗ್ಗೆ ಸಂಶಯ ಮೂಡಿತು. ಅವರು ಬನೂ ಕುರೈಝಾದ

ಸರದಾರರಿಗೆ, ನಮಗೆ ಈ ದಿಗ್ಬಂಧನದಿಂದ ಉಸಿರು ಕಟ್ಟಿಹೋಗಿದೆ. ಇನ್ನು ಒಂದು ನಿರ್ಣಾಯಕ ಹೋರಾಟ ನಡೆಯಬೇಕಾಗಿದೆಯೆಂದು ಹೇಳಿ ಕಳಿಸಿದರು. ಅದಕ್ಕೆ ಆ ಸರದಾರರು, ನೀವು ಎಲ್ಲಿಯ ವರೆಗೆ ನಿಮ್ಮ ಕೆಲವು ಪ್ರತಿಷ್ಠಿತ ವ್ಯಕ್ತಿಗಳನ್ನು ಒತ್ತೆಯಾಳುಗಳಾಗಿ ನಮಗೆ ನೀಡುವುದಿಲ್ಲವೋ ಅಲ್ಲಿಯ ವರೆಗೆ ನಾವು ಯುದ್ಧದ ಅಪಾಯವನ್ನು ಎದುರಿಸಲು ಸಿದ್ಧರಿಲ್ಲ ವೆಂಬ ಉತ್ತರ ಹೇಳಿ ಕಳಿಸಿದರು. ಇದರಿಂದ ಸಂಯುಕ್ತರಂಗದ ನಾಯಕರಿಗೆ ನಈಮ್‌ರ ಮಾತಿನ ಮೇಲೆ ನಂಬಿಕೆ ಬಲವಾಯಿತು. ಅವರು ಒತ್ತೆಯಾಳುಗಳನ್ನು ನೀಡಲು ನಿರಾಕರಿಸಿದರು. ಇದರಿಂದ ಬನೂ ಕುರೈಝಾದವರು ನಈಮ್ ನಮಗೆ ಸರಿಯಾದ ಸಲಹೆಯನ್ನೇ ನೀಡಿದ್ದರೆಂದು ಭಾವಿಸಿದರು. ಈ ರೀತಿ ಈ ಯುದ್ಧ ತಂತ್ರ ಫಲಿಸಿತು. ವೈರಿಗಳ ಪಾಳೆಯಲ್ಲಿ ಬಿರುಕುಂಟಾಯಿತು.

ದಿಗ್ಬಂಧನವು 25 ದಿನಗಳನ್ನೂ ದಾಟಿತು. ಚಳಿಗಾಲವೂ ಆಗಿತ್ತು. ಇಷ್ಟು ದೊಡ್ಡ ಸೈನ್ಯಕ್ಕೆ ಆಹಾರ ಪದಾರ್ಥಗಳು, ನೀರು ಮತ್ತು ಮೇವು ಒದಗಿಸುವುದು ದುಸ್ತರವಾಗುತ್ತಿತ್ತು. ಪಾಳೆಯದಲ್ಲಿ ಬಿರುಕುಂಟಾಗಿರುವುದರಿಂದ ಮುತ್ತಿಗೆದಾರರ ಆತ್ಮಸ್ಥೈರ್ಯ ಕುಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ಒಂದು ರಾತ್ರಿ ಹಠಾತ್ತನೆ ಭೀಕರ ಬಿರುಗಾಳಿಯೆದ್ದಿತು. ಶೀತಗಾಳಿಯೊಂದಿಗೆ ಸಿಡಿಲು ಮಿಂಚುಗಳ ಅಬ್ಬರವೂ ಇತ್ತು. ಅಂಧಕಾರ ಎಷ್ಟು ಗಾಢವಾಗಿತ್ತೆಂದರೆ ಒಬ್ಬರು ಇನ್ನೊಬ್ಬರಿಗೆ ಕಾಣಿಸುತ್ತಿರಲಿಲ್ಲ. ಬಿರುಗಾಳಿಯ ರಭಸದಿಂದಾಗಿ ವೈರಿಗಳ ಡೇರೆಗಳು ಕೀಳಲ್ಪಟ್ಟು ಅಲ್ಲಿ ಕೋಲಾಹಲವೇ ಉಂಟಾಯಿತು. ಪ್ರಕೃತಿಯ ಈ ವಿಕೋಪವನ್ನು ಅವರು ಸಹಿಸದಾದರು. ರಾತೋ ರಾತ್ರಿ ಅವರೆಲ್ಲರೂ ಒಬ್ಬೊಬ್ಬರಾಗಿ ಮನೆಯ ದಾರಿ ಹಿಡಿದರು. ಮುಸ್ಲಿಮರು ಬೆಳಿಗ್ಗೆದ್ದು ನೋಡುವಾಗ ಅಲ್ಲಿ ಯಾರೊಬ್ಬ ವೈರಿಯೂ ಇರಲಿಲ್ಲ. ಪ್ರವಾದಿ(ಸ) ರಣರಂಗವು ವೈರಿ ಸೇನೆಯಿಂದ ಬರಿದಾಗಿರುವುದನ್ನು ಕಂಡು ಕೂಡಲೇ ಹೀಗೆ ಪ್ರತಿಕ್ರಯಿಸಿದರು, "ಇನ್ನು ಕುರೈಶರು ನಿಮ್ಮ ಮೇಲೆ ದಾಳಿ ಮಾಡಲಾರರು. ನೀವೇ ಅವರ ಮೇಲೇರಿ ಹೋಗುವಿರಿ." ಇದು ಪರಿಸ್ಥಿತಿಯ ಸರಿಯಾದ ಸಮೀಕ್ಷೆಯಾಗಿತ್ತು. ಕುರೈಶರು ಮಾತ್ರವಲ್ಲ, ಅರೇಬಿಯಾದ ಸಕಲ ವೈರಿ ಗೋತ್ರಗಳೂ ಒಂದಾಗಿ ಇಸ್ಲಾಮಿನ ವಿರುದ್ಧ ತಮ್ಮ ಕೊನೆಯ ಅಸ್ತ್ರವನ್ನು ಬಳಸಿದ್ದರು. ಅದರಲ್ಲಿ ಸೋತ ಬಳಿಕ ಮದೀನಾದ ಮೇಲೆ ಆಕ್ರಮಣ ಮಾಡುವಷ್ಟು ಧೈರ್ಯ ಅವರಲ್ಲಿ ಉಳಿದಿರಲಿಲ್ಲ. ಈಗ ಮುಂದೊತ್ತುವ (Offensive) ಶಕ್ತಿಯು ವೈರಿಗಳಿಂದ ಮುಸ್ಲಿಮರ ಕಡೆಗೆ ವರ್ಗಾಯಿಸಲ್ಪಟ್ಟಿತ್ತು.

## ಬನೂ ಕುರೈಝಾ ಯುದ್ಧ

ಕಂದಕದಿಂದ ಮರಳಿ ಬಂದು ಪ್ರವಾದಿ(ಸ) ಮನೆಗೆ ತಲಪಿದಾಗ ಝುಹರ್‌ನ ಸಮಯದಲ್ಲಿ ಜಿಬ್‌ರೀಲ್(ಅ) ಬಂದು, ಶಸ್ತ್ರಾಸ್ತ್ರಗಳನ್ನು ಈಗಲೇ ಕಳಚಬೇಡಿರಿ, ಬನೂ ಕುರೈಝಾರ ಲೆಕ್ಕ ತೀರಿಸಬೇಕಾಗಿದೆ. ಅವರೊಂದಿಗೆ ಯುದ್ಧ ಮಾಡಬೇಕು ಎಂಬ ಆಜ್ಞೆ ತಲಪಿಸಿದರು. ಆಜ್ಞೆ ದೊರೆತ ಕೂಡಲೇ ಪ್ರವಾದಿವರ್ಯರು(ಸ) ಈ ರೀತಿ ಘೋಷಣೆ ಹೊರಡಿಸಿದರು, "ಯಾರೆಲ್ಲ ಶಿಸ್ತನ್ನು ಪಾಲಿಸುತ್ತಿದ್ದಾರೋ ಅವರು ಅಸರ್ ನಮಾಝನ್ನು

ಬನೂ ಕುರೈಝಾರ ಪ್ರದೇಶಗಳಿಗೆ ತಲಪುವ ವರೆಗೆ ಮಾಡಬಾರದು." ಜೊತೆಗೆ ಮುಂಚಿತವಾಗಿ ಹ. ಅಲೀಯವರ(ರ) ನೇತೃತ್ವದಲ್ಲಿ ಸೇನಾ ತುಕಡಿಯೊಂದನ್ನು ಬನೂ ಕುರೈಝಾರ ಕಡೆಗೆ ಕಳಿಸಿದರು. ಈ ಸೇನೆಯು ಅಲ್ಲಿಗೆ ತಲಪಿದಾಗ ಯಹೂದಿಯರು ಕೋಟೆಗಳ ಮೇಲೇರಿ ಪ್ರವಾದಿ(ಸ) ಮತ್ತು ಸಂಗಾತಿಗಳನ್ನು ಅವಾಚ್ಯ ಶಬ್ದಗಳಿಂದ ಬಯ್ಯ ತೊಡಗಿದರು. ಆದರೆ ಅವರ ಈ ಬೈಗುಳಗಳು ಅವರನ್ನು ದುರ್ಗತಿಯಿಂದ ಹೇಗೆ ರಕ್ಷಿಸೀತು? ಅವರು ಯುದ್ಧ ನಡೆಯುತ್ತಿದ್ದಾಗಲೇ ಒಪ್ಪಂದವನ್ನು ಮುರಿದು ಆಕ್ರಮಣಕಾರರೊಂದಿಗೆ ಸೇರಿ ಮದೀನಾದ ಎಲ್ಲ ನಿವಾಸಿಗಳನ್ನು ಅಪಾಯಕ್ಕೆ ಸಿಲುಕಿಸುವಂತಹ ಮಹಾ ಅಪರಾಧ ವೆಸಗಿರಲಿಲ್ಲವೇ? ಹ. ಅಲೀಯವರ ಸೈನ್ಯವನ್ನು ನೋಡಿ ಅವರು ಇದು ನಮ್ಮನ್ನು ಹೆದರಿಸಲಿಕ್ಕೆ ಬಂದದ್ದೆಂದು ಭಾವಿಸಿದ್ದರು. ಆದರೆ ಪ್ರವಾದಿವರ್ಯರ(ಸ) ನೇತೃತ್ವದಲ್ಲಿ ಇಡೀ ಇಸ್ಲಾಮೀ ಸೇನೆ ಅಲ್ಲಿಗೆ ತಲಪಿ, ಅವರ ನಾಡಿಗೆ ಮುತ್ತಿಗೆ ಹಾಕಿದಾಗ ಅವರು ಕಕ್ಕಾಬಿಕ್ಕಿಯಾದರು. ಈ ಮುತ್ತಿಗೆಯಿಂದ ಅವರು ಕಂಗಾಲಾದರು. ಎರಡು ಮೂರು ವಾರಗಳಿಗಿಂತ ಹೆಚ್ಚು ಅದರ ತೀವ್ರತೆಯನ್ನು ಅವರಿಂದ ಸಹಿಸಲಾಗಲಿಲ್ಲ. ಕಟ್ಟಕಡೆಗೆ ಅವರು ಶರತ್ತುಬದ್ಧವಾಗಿ ಪ್ರವಾದಿವರ್ಯರ(ಸ) ಮುಂದೆ ಶರಣಾಗತರಾದರು. ಔಸ್ ಗೋತ್ರದ ಸರದಾರ ಸಅದ್ ಬಿನ್ ಮುಆದ್(ರ) ತಮ್ಮ ಕುರಿತು ಯಾವ ತೀರ್ಪು ನೀಡುವರೋ ಅದನ್ನು ಉಭಯ ಪಂಗಡದವರೂ ಒಪ್ಪಿಕೊಳ್ಳುವರು ಎಂಬುದೇ ಆ ಶರತ್ತಾಗಿತ್ತು. ಅವರು ಹ. ಸಅದ್‌ರ(ರ) ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲು ಕಾರಣವಿತ್ತು. ಅಜ್ಞಾನ ಕಾಲದಲ್ಲಿ ಔಸ್ ಮತ್ತು ಬನೂ ಕುರೈಝಾರ ನಡುವೆ ಬಹಳ ಹಿಂದಿನಿಂದಲೇ ಸೌಹಾರ್ದ ಸಂಬಂಧವಿತ್ತು. ಹ. ಸಅದ್ ಅದನ್ನು ಪರಿಗಣಿಸಿ, ಈ ಹಿಂದೆ ಬನೂ ಕೈನೂಕಾಅ್ ಮತ್ತು ಬನೂ ನಝೀರ್ ಗೋತ್ರದವರನ್ನು ಮದೀನಾ ಬಿಟ್ಟು ಹೋಗುವಂತೆ ಮಾಡಿದಂತೆ ತಮಗೂ ಮದೀನಾ ಬಿಟ್ಟು ಹೋಗಲು ಅವಕಾಶ ಕೊಡುವರೆಂದು ಅವರು ಭಾವಿಸಿದ್ದರು. ಔಸ್ ಗೋತ್ರದ ಜನರು ಕೂಡಾ ಅವರ ಮೇಲೆ ದಯೆ ತೋರುವಂತೆ ಹ. ಸಅದ್‌ರನ್ನು ವಿನಂತಿಸುತ್ತಿದ್ದರು. ಆದರೆ ಆ ಎರಡು ಯಹೂದಿ ಗೋತ್ರಗಳಿಗೆ ಮದೀನಾ ಬಿಟ್ಟು ಹೋಗಲು ಅವಕಾಶ ನೀಡಿದಾಗ ಅವರು ಸುತ್ತಮುತ್ತಲಿನ ಎಲ್ಲ ಗೋತ್ರಗಳನ್ನೂ ಉದ್ರೇಕಿಸಿ 10-12 ಸಾವಿರದ ಸೈನ್ಯವನ್ನು ಮದೀನಾದ ಮೇಲೆ ಆಕ್ರಮಣ ಮಾಡಲು ತಂದದ್ದನ್ನು ಸಅದ್ ಈಗಾಗಲೇ ನೋಡಿದ್ದರು. ಅದೇ ರೀತಿ ಈ ಕೊನೆಯ ಯಹೂದಿ ಗೋತ್ರವು (ಬನೂ ಕುರೈಝಾ) ಬಾಹ್ಯ ಆಕ್ರಮಣದ ವೇಳೆಯಲ್ಲೇ ವಚನ ಭಂಗ ಮಾಡಿ ಮದೀನಾ ವಾಸಿಗಳನ್ನು ನಾಶ ಪಡಿಸಲು ಪ್ರಯತ್ನಿಸಿದ್ದೂ ಅವರ ಮುಂದಿತ್ತು. ಆದುದರಿಂದ ಅವರು ಬನೂ ಕುರೈಝಾದ ಎಲ್ಲ ಪುರುಷರನ್ನೂ ವಧಿಸುವ, ಸ್ತ್ರೀಯರು ಮತ್ತು ಮಕ್ಕಳನ್ನು ಗುಲಾಮರನ್ನಾಗಿ ಮಾಡುವ ಮತ್ತು ಅವರ ಎಲ್ಲ ಸೊತ್ತು-ವಿತ್ತಗಳನ್ನು ಮುಸ್ಲಿಮರಲ್ಲಿ ಹಂಚಿ ಬಿಡುವ ತೀರ್ಪು ನೀಡಿದರು. ಈ ತೀರ್ಪನ್ನು ಕಾರ್ಯಗತಗೊಳಿಸಲಾಯಿತು. ಅನಂತರ ಮುಸ್ಲಿಮರು ಅವರ ಕೋಟೆಗಳೊಳಗೆ ಪ್ರವೇಶಿಸಿದಾಗ, ಅಹ್‌ಝಾಬ್ ಯುದ್ಧಕ್ಕಾಗಿ ಅವರು ಶೇಖರಿಸಿಟ್ಟಿದ್ದ 1500 ಖಡ್ಗಗಳು, 300 ಕವಚಗಳು, 2000 ಈಟಿಗಳು ಮತ್ತು 1500 ಗುರಾಣಿಗಳು ಪತ್ತೆಯಾದವು. ಒಂದು ವೇಳೆ ಮುಸ್ಲಿಮರಿಗೆ ಅಲ್ಲಾಹನ ಸಹಾಯವೊದಗದಿರುತ್ತಿದ್ದರೆ

ಈ ಎಲ್ಲ ಯುದ್ಧ ಸಾಮಗ್ರಿಗಳು ಮದೀನಾದ ಮೇಲೆ ಹಿಂದಿನಿಂದ ಆಕ್ರಮಣ ನಡೆಸಲು ಬಳಸಲಾಗುತ್ತಿತ್ತು. ಅತ್ತ ಸತ್ಯನಿಷೇಧಿಗಳೂ ಕಂದಕವನ್ನು ಹಾದು ಒಮ್ಮೆಲೇ ದಾಳಿ ನಡೆಸುವ ಸಿದ್ಧತೆ ನಡೆಸುತ್ತಿದ್ದ ಸಂದರ್ಭವಾಗಿತ್ತದು. ಈ ರಹಸ್ಯ ಬಯಲಾದ ಬಳಿಕ ಅವರ ಬಗ್ಗೆ ಹ. ಸಅದ್‌ರು(ರ) ನೀಡಿದ ತೀರ್ಪು ಸರಿಯೇ ಆಗಿತ್ತು ಎಂಬ ಬಗ್ಗೆ ಸಂದೇಹಕ್ಕೆ ಅವಕಾಶವೇ ಉಳಿಯಲಿಲ್ಲ.

## ಸಾಮಾಜಿಕ ಸುಧಾರಣೆಗಳು

ಉಹುದ್ ಮತ್ತು ಅಹ್‌ಝಾಬ್ ಯುದ್ಧಗಳ ಮಧ್ಯಕಾಲೀನ ಎರಡು ವರ್ಷಗಳು ಬಹಳ ಅಶಾಂತಿಯ ಕಾಲವಾಗಿದ್ದರೂ, ಪ್ರವಾದಿ(ಸ) ಮತ್ತು ಅವರ ಸಂಗಾತಿಗಳಿಗೆ ಒಂದು ದಿನದ ಮಟ್ಟಿಗಾದರೂ ನೆಮ್ಮದಿಯ ಉಸಿರಾಡುವ ಅವಕಾಶವಿರಲಿಲ್ಲ. ಆದರೂ ಈ ಅವಧಿಯಲ್ಲಿ ಹೊಸ ಮುಸ್ಲಿಮ್ ಸಮಾಜ ನಿರ್ಮಾಣದ ಮತ್ತು ಜೀವನದ ಎಲ್ಲ ಸ್ತರಗಳಲ್ಲೂ ಸುಧಾರಣೆಯ ಕಾರ್ಯಗಳು ನಿರಂತರ ಸಾಗುತ್ತಲಿದ್ದುವು. ಮುಸ್ಲಿಮರ ವಿವಾಹ ಮತ್ತು ವಿಚ್ಛೇದನದ (ನಿಕಾಹ್-ತಲಾಕ್) ನಿಯಮಗಳು ಇದೇ ಕಾಲದಲ್ಲಿ ಹೆಚ್ಚಿನಂಶ ಪೂರ್ಣಗೊಂಡವು. ವಾರೀಸು ನಿಯಮಗಳು ಅಸ್ತಿತ್ವಕ್ಕೆ ಬಂದುವು. ಮದ್ಯಪಾನ ಮತ್ತು ಜೂಜಾಟವನ್ನು ನಿಷೇಧಿಸಲಾಯಿತು. ಆರ್ಥಿಕ ಮತ್ತು ಸಾಮಾಜಿಕ ರಂಗಗಳಿಗೆ ಸಂಬಂಧಿಸಿದ ಇನ್ನಿತರ ಹೊಸ ಕಾನೂನುಗಳು ಜಾರಿಗೊಂಡವು.

ಈ ನಿಟ್ಟಿನಲ್ಲಿ ದತ್ತು ತೆಗೆದುಕೊಳ್ಳುವ ವಿಷಯವು ಸುಧಾರಣೆ ಬಯಸುವಂತಹ ಅತ್ಯಂತ ಮಹತ್ವದ ಸಮಸ್ಯೆಯಾಗಿತ್ತು. ಅರಬರು ದತ್ತು ಪುತ್ರರನ್ನು ತಮ್ಮ ಸ್ವಂತ ಪುತ್ರರೆಂದೇ ಭಾವಿಸುತ್ತಿದ್ದರು. ಅವರಿಗೆ ವಾರೀಸು ಸೊತ್ತಿನಲ್ಲಿ ಪಾಲು ದೊರೆಯುತ್ತಿತ್ತು. ಅವರೊಂದಿಗೆ ಅವರ ಸಾಕು ತಾಯಿ ಅಥವಾ ಸಹೋದರಿಯರು ಸ್ವಂತ ತಾಯಿ ಮತ್ತು ಸಹೋದರಿಯರಂತೆ ವರ್ತಿಸುತ್ತಿದ್ದರು. ಯಾವ ರೀತಿ ಸ್ವಂತ ತಾಯಿ ಮತ್ತು ಸಹೋದರಿಯರನ್ನು ವಿವಾಹವಾಗುವುದು ನಿಷಿದ್ಧವೋ, ಅದೇ ರೀತಿಯಲ್ಲಿ ದತ್ತು ಪಡೆದ ತಂದೆಯ ಪುತ್ರಿಯರನ್ನೋ ಅಥವಾ ಆ ತಂದೆಯ ಮರಣಾನಂತರ ಆತನ ವಿಧವೆಯನ್ನೋ ವಿವಾಹವಾಗುವುದೂ ನಿಷಿದ್ಧವೆಂದು ಭಾವಿಸಲಾಗುತ್ತಿತ್ತು. ದತ್ತು ಪುತ್ರ ಮರಣ ಹೊಂದಿದರೆ ಅಥವಾ ಆತ ತನ್ನ ಪತ್ನಿಗೆ ತಲಾಕ್ ಕೊಟ್ಟರೆ ಆ ಮಹಿಳೆ ಆ ತಂದೆಗೆ ನಿಷಿದ್ಧವೆಂದು ಭಾವಿಸಲಾಗುತ್ತಿತ್ತು. ಆಕೆಯನ್ನು ಆತನ ಸ್ವಂತ ಸೊಸೆಯೆಂದೇ ಭಾವಿಸಲಾಗುತ್ತಿತ್ತು. ಈ ಸಂಪ್ರದಾಯವು ಅಲ್ಲಾಹನು ಅಲ್ ಬಕರಃ ಮತ್ತು ಅನ್ನಿಸಾ ಅಧ್ಯಾಯಗಳಲ್ಲಿ ನಿಶ್ಚಯಿಸಿದ ನಿಕಾಹ್, ತಲಾಕ್ ಮತ್ತು ವಾರೀಸು ಹಕ್ಕಿನ ಕಾನೂನುಗಳೊಂದಿಗೆ ಅಲ್ಲಲ್ಲಿ ಸಂಘರ್ಷಿಸುತ್ತಿತ್ತು. ಈ ಸಂಪ್ರದಾಯ ವಾರೀಸು ಸೊತ್ತಿನ ನೈಜ ಹಕ್ಕುದಾರನನ್ನು ವಂಚಿಸಿ ಹಕ್ಕೇ ಇಲ್ಲದಂತಹ ಇನ್ನೊಬ್ಬ ವ್ಯಕ್ತಿಗೆ ಸಿಗುವಂತೆ ಮಾಡುತ್ತಿತ್ತು. ಯಾವ ಸ್ತ್ರೀ-ಪುರುಷರ ಮಧ್ಯೆ ವೈವಾಹಿಕ ಸಂಬಂಧವು ಪ್ರಸ್ತುತ ಕಾನೂನಿನ ಪ್ರಕಾರ ಹಲಾಲ್ ಆಗಿತ್ತೋ ಈ ಸಂಪ್ರದಾಯ ಪ್ರಕಾರ ಅದು ಹರಾಮ್ ಆಗುತ್ತಿತ್ತು. ಇವೆಲ್ಲವುಗಳಿಗಿಂತಲೂ ಹೆಚ್ಚಾಗಿ ಇಸ್ಲಾಮೀ ಕಾನೂನು ಯಾವ ಅನೈತಿಕತೆಗಳನ್ನು ತಡೆಯ

ಬಯಸುತ್ತಿತ್ತೋ ಅದರ ಪ್ರಚಾರದಲ್ಲಿ ಈ ಸಂಪ್ರದಾಯವು ಸಹಕಾರಿಯಾಗುತ್ತಿತ್ತು. ಏಕೆಂದರೆ ದತ್ತು ಸಂಬಂಧಕ್ಕೆ ಎಷ್ಟೇ ಪಾವಿತ್ರ್ಯವನ್ನು ಕಲ್ಪಿಸಿದರೂ ದತ್ತು ಸಂಬಂಧದ ತಾಯಿ, ಸಹೋದರಿ ಮತ್ತು ಪುತ್ರಿಯು ನೈಜ ತಾಯಿ, ಸಹೋದರಿ ಮತ್ತು ಪುತ್ರಿಯಂತೆ ಖಂಡಿತ ಆಗಲಾರರು. ಈ ಸಂಬಂಧಗಳ ಬಗ್ಗೆ ಸಾಂಪ್ರದಾಯಿಕ ಪಾವಿತ್ರ್ಯವನ್ನು ನಂಬಿಕೊಂಡು ಸ್ತ್ರೀ-ಪುರುಷರ ಮಧ್ಯೆ ನೈಜ ಸಂಬಂಧಿಕರಂತಹ ಒಡನಾಟವೇರ್ಪಟ್ಟರೆ ಅದು ದುಷ್ಪರಿಣಾಮ ಸೃಷ್ಟಿಸದಿರಲಾರದು. ಈ ಎಲ್ಲ ಕಾರಣಗಳಿಂದಾಗಿ ದತ್ತು ಪುತ್ರರನ್ನು ನೈಜ ಸಂತಾನವೆಂದು ಪರಿಗಣಿಸುವ ವಿಚಾರವನ್ನೇ ಅಳಿಸಿ ಹಾಕಬೇಕಾದುದು ಇಸ್ಲಾಮಿನ ನಿಕಾಹ್, ತಲಾಕ್, ವಾರೀಸು ಸೊತ್ತಿನ ಕಾನೂನುಗಳ ಹಾಗೂ ವ್ಯಭಿಚಾರ ನಿಷೇಧದ ಕಾನೂನುಗಳ ಬೇಡಿಕೆಯಾಗಿತ್ತು.

ಆದರೆ ಈ ವಿಚಾರವು 'ದತ್ತು ಸಂಬಂಧವು ನೈಜ ಕೌಟುಂಬಿಕ ಸಂಬಂಧವಲ್ಲ'ವೆಂಬ ಕೇವಲ ಒಂದು ಶಾಸನದಿಂದ ಕೊನೆಗೊಳ್ಳಲು ಸಾಧ್ಯವಿರಲಿಲ್ಲ. ಶತಮಾನಗಳಿಂದ ಬೇರು ಬಿಟ್ಟಿರುವ ಪಕ್ಷಪಾತ ಮತ್ತು ಗೊಡ್ಡುನಂಬಿಕೆಗಳು ಕೇವಲ ಬಾಯಿ ಮಾತಿನಿಂದ ಹೋಗಲಾರವು. ಈ ಸಂಬಂಧವು ನೈಜ ಸಂಬಂಧವಲ್ಲವೆಂಬ ಶಾಸನವನ್ನು ಜನರು ಒಪ್ಪಿಕೊಳ್ಳುತ್ತಿದ್ದರೂ ದತ್ತು ಸಂಬಂಧಿತ ತಾಯಿ-ಮಗ, ಸಹೋದರ-ಸಹೋದರಿ, ತಂದೆ-ಮಗಳು ಹಾಗೂ ಮಾವ-ಸೊಸೆಯರ ಮಧ್ಯೆ ವಿವಾಹವನ್ನು ಅರೋಚಕವೆಂದೇ ಬಗೆಯುತ್ತಿದ್ದರು. ಅವರ ಮಧ್ಯೆ ಒಡನಾಟವೂ ಅಲ್ಪಸ್ವಲ್ಪ ಬಾಕಿ ಉಳಿಯುತ್ತಿತ್ತು. ಆದುದರಿಂದ ಕಾರ್ಯತಃ ಈ ಸಂಪ್ರದಾಯವನ್ನು ಮುರಿಯುವುದು, ಅದರಲ್ಲೂ ಪ್ರವಾದಿವರ್ಯರೇ(ಸ) ಮುರಿಯುವುದು ಅನಿವಾರ್ಯವಾಗಿತ್ತು. ಏಕೆಂದರೆ ಒಂದು ಕಾರ್ಯವನ್ನು ಪ್ರವಾದಿವರ್ಯರು(ಸ) ಸ್ವಯಂ, ಅಲ್ಲಾಹನ ಆಜ್ಞೆಯ ಪ್ರಕಾರ ಮಾಡಿದರೆ ಯಾವನೇ ಮುಸ್ಲಿಮನಲ್ಲಿ ಅದರ ಬಗ್ಗೆ ಅರೋಚಕತೆ ಉಳಿಯಲು ಸಾಧ್ಯವಿರಲಿಲ್ಲ. ಆದುದರಿಂದಲೇ ಅಹ್‌ಝಾಬ್ ಯುದ್ಧಕ್ಕಿಂತ ಸ್ವಲ್ಪ ಮುಂಚೆ ಪ್ರವಾದಿವರ್ಯರಿಗೆ(ಸ) ಅವರ ದತ್ತುಪುತ್ರ ಝೈದ್ ಬಿನ್ ಹಾರಿಸ್‌ರವರ(ರ) ವಿಚ್ಛೇದಿತ ಪತ್ನಿಯನ್ನು ವಿವಾಹವಾಗುವಂತೆ ಅಲ್ಲಾಹನ ವತಿಯಿಂದ ಸೂಚನೆ ಸಿಕ್ಕಿತು. ಈ ಆಜ್ಞೆಯನ್ನು ಪ್ರವಾದಿವರ್ಯರು(ಸ) ಬನೂ ಕುರೈಝಾರ ದಿಗ್ಬಂಧನದ ಕಾಲದಲ್ಲಿ ಈಡೇರಿಸಿದರು. (ಇದ್ದತ್ ಅವಧಿಯ ನಿರೀಕ್ಷೆಯೇ ಬಹುಶಃ ವಿಳಂಬವಾಗಲು ಕಾರಣವಾಗಿತ್ತು. ಅದೇ ಅವಧಿಯಲ್ಲಿ ಯುದ್ಧ ಸಿದ್ಧತೆಗಳು ನಡೆಯುತ್ತಿದ್ದವು.)

## ಝೈನಬ್‌ರ(ರ) ವಿವಾಹದ ಬಗ್ಗೆ ಅಪಪ್ರಚಾರ

ಇದು ಸಂಭವಿಸುವುದರೊಂದಿಗೇ ಪ್ರವಾದಿವರ್ಯರ(ಸ) ವಿರುದ್ಧ ಅಪಪ್ರಚಾರದ ಒಂದು ಬಿರುಗಾಳಿಯೇ ಎದ್ದಿತು. ಸತ್ಯನಿಷೇಧಿಗಳು, ಮುನಾಫಿಕರು ಮತ್ತು ಯಹೂದಿಯರು-ಎಲ್ಲರೂ ಪ್ರವಾದಿಯವರಿಗೆ(ಸ) ಒಲಿಯುತ್ತಿದ್ದ ನಿರಂತರ ವಿಜಯಗಳಿಂದಾಗಿ ಕುದಿಯುತ್ತಿದ್ದರು. ಉಹುದ್ ಯುದ್ಧದ ನಂತರ ಅಹ್‌ಝಾಬ್ ಮತ್ತು ಬನೂ ಕುರೈಝಾ ಯುದ್ಧದ ವರೆಗಿನ ಎರಡು ವರ್ಷಗಳ ಅವಧಿಯಲ್ಲಿ ಪದೇ ಪದೇ ಅವರಿಗೆ ಆಗುತ್ತಿದ್ದ ಅವಮಾನಗಳಿಂದಾಗಿ

ಅವರ ಮನಸ್ಸುಗಳು ಹೊತ್ತಿ ಉರಿಯುತ್ತಿದ್ದುವು. ಇನ್ನು ತಾವು ಬಹಿರಂಗ ಹೋರಾಟದಲ್ಲಿ ಪ್ರವಾದಿವರ್ಯರನ್ನು(ಸ) ಸೋಲಿಸಲಾರೆವೆಂದೂ ಅವರಿಗೆ ಖಾತ್ರಿಯಾಗಿತ್ತು. ಆದುದರಿಂದ ಝೈನಬ್‌ರ ವಿವಾಹವನ್ನು ಅವರು ತಮ್ಮ ಪಾಲಿಗೆ ದೇವನೇ ಇತ್ತ ಅವಕಾಶವೆಂದು ಬಗೆದರು. ಇನ್ನು ಮುಹಮ್ಮದ್‌ರವರ(ಸ) ಶಕ್ತಿ ಹಾಗೂ ವಿಜಯದ ರಹಸ್ಯವಾಗಿರುವ ಅವರ ನೈತಿಕ ಮೇಲ್ಮೆಯನ್ನು ಮಣ್ಣು ಮುಕ್ಕಿಸಬಹುದೆಂದು ಅವರು ಭಾವಿಸಿದರು. ಅದಕ್ಕಾಗಿ ಅವರು, ಮುಹಮ್ಮದ್‌ರವರು(ಸ) ತಮ್ಮ ಸೊಸೆಯನ್ನು ನೋಡಿ ಹುಚ್ಚರಂತಾದರು, ಮಗನಿಗೆ ಈ ಪ್ರಣಯದ ವಿಷಯ ತಿಳಿಯಿತು. ಅದಕ್ಕಾಗಿ ಅವರು ಪತ್ನಿಗೆ ತಲಾಕ್ ನೀಡಿದರು, ಅನಂತರ ತಂದೆಯು ಸೊಸೆಯನ್ನು ಮದುವೆಯಾದರು ಎಂಬ ಕಟ್ಟುಕತೆಯನ್ನು ಹೆಣೆದರು. (ನವೂದುಬಿಲ್ಲಾಹ್) ವಸ್ತುತಃ ಇದು ಕೇವಲ ಅಸಂಬದ್ಧ ಮಾತಾಗಿತ್ತು. ಹ.ಝೈನಬ್ ಪ್ರವಾದಿವರ್ಯರ(ಸ) ಸೋದರತ್ತೆಯ ಮಗಳು. ಬಾಲ್ಯದಿಂದ ಯೌವನದ ವರೆಗೂ ಅವರು ಪ್ರವಾದಿವರ್ಯರ(ಸ) ಕಣ್ಣ ಮುಂದೆಯೇ ಬೆಳೆದರು. ಆದುದರಿಂದ ಅವರನ್ನು ಕಂಡು ಪ್ರೇಮಪಾಶದಲ್ಲಿ ಸಿಲುಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರವಾದಿವರ್ಯರೇ ಒತ್ತಾಯಪಡಿಸಿ ಆಕೆಯನ್ನು ಝೈದ್‌ರೊಂದಿಗೆ ವಿವಾಹ ಮಾಡಿಸಿದ್ದರು. ಕುರೈಶರ ಇಷ್ಟು ಉನ್ನತ ಮನೆತನದ ಓರ್ವ ಹೆಣ್ಣನ್ನು ಓರ್ವ ಸ್ವತಂತ್ರಗೊಳಿಸಲ್ಪಟ್ಟ ಗುಲಾಮನಿಗೆ ಕೊಟ್ಟು ವಿವಾಹ ಮಾಡುವುದು ಅವರ ಇಡೀ ಕುಟುಂಬದವರ ಪೈಕಿ ಯಾರಿಗೂ ಇಷ್ಟವಿರಲಿಲ್ಲ. ಸ್ವತಃ ಝೈನಬ್ ಕೂಡಾ ಈ ಸಂಬಂಧದ ಬಗ್ಗೆ ತೃಪ್ತರಾಗಿರಲಿಲ್ಲ. ಆದರೆ ಪ್ರವಾದಿಯವರ(ಸ) ಅಪ್ಪಣೆಯನ್ನು ಯಾರೂ ಮೀರುವಂತಿರಲಿಲ್ಲ. ಪ್ರವಾದಿವರ್ಯರು(ಸ) ಝೈದ್‌ರೊಂದಿಗೆ ಝೈನಬ್‌ರ ವಿವಾಹ ಮಾಡಿಸುವುದರ ಮೂಲಕ, ಇಸ್ಲಾಮ್ ಓರ್ವ ಸ್ವತಂತ್ರಗೊಳಿಸಲ್ಪಟ್ಟ ಗುಲಾಮನನ್ನು ಕುರೈಶ್‌ನ ಪ್ರತಿಷ್ಠಿತರ ಮಟ್ಟಕ್ಕೆ ಹೇಗೆ ತಂದಿತು ಎಂಬುದನ್ನು ಅರೇಬಿಯಾದಲ್ಲಿ ಪ್ರಪ್ರಥಮವಾಗಿ ತೋರಿಸಿಕೊಟ್ಟರು. ಒಂದು ವೇಳೆ ಪ್ರವಾದಿವರ್ಯರಿಗೆ(ಸ) ಝೈನಬ್‌ರ ಮೇಲೆ ಕಣ್ಣಿರುತ್ತಿದ್ದರೆ ಝೈದ್ ಬಿನ್ ಹಾರಿಸ್‌ರೊಂದಿಗೆ ಅವರ ವಿವಾಹ ಮಾಡಿಸುವ ಅಗತ್ಯವಾದರೂ ಏನಿತ್ತು? ಅವರೇ ಝೈನಬ್‌ರನ್ನು ವಿವಾಹವಾಗ ಬಹುದಾಗಿತ್ತು. ಆದರೆ ಆ ನಿರ್ಲಜ್ಜ ವಿರೋಧಿಗಳು ಈ ಎಲ್ಲ ವಾಸ್ತವಿಕತೆಗಳ ಹೊರತಾಗಿಯೂ ಈ ಪ್ರೇಮ ಕಥೆಯನ್ನು ಹೆಣೆದು ಅದಕ್ಕೆ ಉಪ್ಪುಖಾರ ಹಾಕಿ ಚೆನ್ನಾಗಿ ಪ್ರಚಾರ ಮಾಡಿದರು. ಈ ಅಪಪ್ರಚಾರದ ಕಾವು ಎಷ್ಟು ತೀವ್ರವಾಗಿತ್ತೆಂದರೆ ಮುಸ್ಲಿಮರಲ್ಲೂ ಕೂಡಾ ಅದು ಪ್ರಚಾರಗಿಟ್ಟಿಸಿತು.

## ಪರ್ದಾದ ಕುರಿತು ಆರಂಭಿಕ ವಿಧಿಗಳು

ವೈರಿಗಳು ಸೃಷ್ಟಿಸಿ ಬಿಟ್ಟ ಈ ಕಟ್ಟುಕತೆಗಳನ್ನು ಮುಸ್ಲಿಮರೂ ಎತ್ತಿ ತಿರುಗುವುದು ಸಮಾಜದಲ್ಲಿ ಅಶ್ಲೀಲತೆಯ ವಾಂಛೆಯು ಹದಮೀರಿರುವುದರ ಸ್ಪಷ್ಟ ಸೂಚನೆಯಾಗಿತ್ತು. ಈ ದುಷ್ಟ ಮನೋಭಾವವಿಲ್ಲದಿರುತ್ತಿದ್ದರೆ ಇಂತಹ ಪಾವನ ವ್ಯಕ್ತಿತ್ವದ ಬಗ್ಗೆ ಮಾತು ಹರಡುವುದಂತಿರಲಿ, ಇಂತಹ ತಲೆ ಬುಡವಿಲ್ಲದ ಮತ್ತು ಭೀಕರ ಸ್ವರೂಪದ ಕಟ್ಟುಕತೆಗಳ ಬಗ್ಗೆ ಜನರಿಗೆ ಊಹಿಸಲೂ ಸಾಧ್ಯವಿರುತ್ತಿರಲಿಲ್ಲ. ಇದುವೇ ಸೂಕ್ತ ಸಮಯವೆಂದು ಬಗೆದು

ಇಸ್ಲಾಮೀ ಸಮಾಜದಲ್ಲಿ ಹಿಜಾಬ್ (ಪರ್ದಾ) ಎಂದು ಕರೆಯಲ್ಪಡುವ ಸುಧಾರಣಾತ್ಮಕ ನಿಯಮಗಳನ್ನು ಜಾರಿಗೊಳಿಸಲು ಆರಂಭಿಸಲಾಯಿತು. ಆ ಸುಧಾರಣೆಗಳನ್ನು ಈ ಅಧ್ಯಾಯದಲ್ಲಿ ಆರಂಭಿಸಲಾಯಿತು. ಅನಂತರ ಒಂದು ವರ್ಷದ ಬಳಿಕ ಹ. ಆಯಿಶಾರವರ(ರ) ಮೇಲೆ ಸುಳ್ಳಾರೋಪದ ಬಿರುಗಾಳಿ ಎದ್ದ ಸಂದರ್ಭದಲ್ಲಿ ಅನ್ನೂರ್ ಅಧ್ಯಾಯದಲ್ಲಿ ಅದನ್ನು ಪೂರ್ತಿಗೊಳಿಸಲಾಯಿತು. (ವಿವರಣೆಗಾಗಿ ಅನ್ನೂರ್ ಅಧ್ಯಾಯದ ಮುನ್ನುಡಿ ನೋಡಿರಿ)

## ಪ್ರವಾದಿಯವರ(ಸ) ಖಾಸಗಿ ಬದುಕು

ಅದೇ ಕಾಲದಲ್ಲಿ ಗಮನಾರ್ಹವಾಗಿದ್ದ ಇನ್ನೆರಡು ವಿಷಯಗಳಿದ್ದುವು. ಬಾಹ್ಯ ನೋಟಕ್ಕೆ ಅವು ಪ್ರವಾದಿವರ್ಯರ(ಸ) ಖಾಸಗಿ ಬದುಕಿಗೆ ಸಂಬಂಧಿಸಿದ ವಿಷಯಗಳಾಗಿದ್ದರೂ, ಅಲ್ಲಾಹನ ಧರ್ಮದ ಉತ್ಥಾನಕ್ಕಾಗಿ ತನ್ನ ಜೀವವನ್ನೇ ಸವೆಸುತ್ತಿದ್ದ, ಹಗಲು-ರಾತ್ರಿ ಈ ಮಹಾ ಕಾರ್ಯಕ್ಕಾಗಿ ತನ್ನನ್ನು ಮುಡಿಪಾಗಿಟ್ಟಿದ್ದ ವ್ಯಕ್ತಿಯ ಖಾಸಗಿ ಬದುಕು ನೆಮ್ಮದಿದಾಯಕವಾಗಿರಬೇಕಾದುದು, ಮಾನಸಿಕ ಗೊಂದಲದಿಂದ ಹಾಗೂ ಜನರ ಮನಸ್ಸಿನ ಸಂದೇಹಗಳಿಂದ ಅವರನ್ನು ರಕ್ಷಿಸಬೇಕಾದುದು ಆ ಧರ್ಮದ ಹಿತಾಸಕ್ತಿಯ ದೃಷ್ಟಿಯಿಂದ ಅಗತ್ಯವಾಗಿತ್ತು. ಆದುದರಿಂದ ಅಲ್ಲಾಹನು ಈ ಎರಡು ವಿಷಯಗಳನ್ನೂ ಅಧಿಕೃತವಾಗಿ ತಾನೇ ವಹಿಸಿಕೊಂಡನು.

ಆ ಕಾಲದಲ್ಲಿ ಪ್ರವಾದಿವರ್ಯರು(ಸ) ತೀವ್ರವಾದ ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿದ್ದರು. ಪ್ರಥಮ ನಾಲ್ಕು ವರ್ಷಗಳಲ್ಲಂತೂ ಅವರಿಗೆ ಯಾವುದೇ ಆದಾಯ ಮೂಲಗಳಿರಲಿಲ್ಲ. ಹಿ.ಶ. 4ರಲ್ಲಿ ಬನೂ ನಳೀರ್ ಗೋತ್ರದವರನ್ನು ಗಡೀಪಾರು ಮಾಡಿದ ಬಳಿಕ ಅವರು ಬಿಟ್ಟು ಹೋದ ಜಮೀನಿನಿಂದ ಒಂದು ಪಾಲನ್ನು ಅಲ್ಲಾಹನ ಆಜ್ಞೆಯಂತೆ ಅವರ ಅಗತ್ಯಗಳಿಗಾಗಿ ಮೀಸಲಿಡಲಾಯಿತು. ಆದರೆ ಅದು ಅವರ ಕುಟುಂಬ ನಿರ್ವಹಣೆಗೆ ಸಾಕಾಗಿರಲಿಲ್ಲ. ಅತ್ತ ಪ್ರವಾದಿ ದೌತ್ಯದ ಹೊಣೆಗಾರಿಕೆಗಳು ಎಷ್ಟು ಹೆಚ್ಚಾಗಿತ್ತೆಂದರೆ ತಮ್ಮ ಶಾರೀರಿಕ ಮತ್ತು ಬೌದ್ಧಿಕವಾದ ಸಂಪೂರ್ಣ ಶಕ್ತಿ ಹಾಗೂ ತಮ್ಮ ಸಂಪೂರ್ಣ ಸಮಯವನ್ನು ಅದಕ್ಕಾಗಿ ವ್ಯಯಿಸುತ್ತಿದ್ದುದರಿಂದ ಅವರು ಜೀವನೋಪಾಯಕ್ಕಾಗಿ ಶ್ರಮಿಸುವ ಸ್ಥಿತಿಯಲ್ಲಿ ಇರಲಿಲ್ಲ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪ್ರವಾದಿ ಪತ್ನಿಯರು ಖರ್ಚಿನ ಹಣದ ಬೇಡಿಕೆಯಿಟ್ಟು ಅವರ ಶಾಂತಿಯನ್ನು ಕೆಡಿಸುವಾಗ, ಅದು ಪ್ರವಾದಿವರ್ಯರ(ಸ) ಮನಸ್ಸನ್ನು ಇನ್ನಷ್ಟು ದುಃಖಕ್ಕೀಡು ಮಾಡಿತು.

ಎರಡನೆಯದಾಗಿ, ಹ. ಝೈನಬ್‌ರನ್ನು ವಿವಾಹವಾಗುವುದಕ್ಕಿಂತ ಮುಂಚೆ ಪ್ರವಾದಿವರ್ಯರಿಗೆ(ಸ) ನಾಲ್ವರು ಪತ್ನಿಯರಿದ್ದರು. ಸೌದಾ, ಆಯಿಶಾ, ಹಫ್ಸಾ ಮತ್ತು ಉಮ್ಮು ಸಲಮ(ರ). ಝೈನಬ್ ಐದನೆಯ ಪತ್ನಿಯಾಗಿದ್ದರು. ಇದನ್ನು ವಿರೋಧಿಗಳು ಆಕ್ಷೇಪಿಸಿದರು. ಇದರಿಂದ ಮುಸ್ಲಿಮರಲ್ಲೂ ಇತರರು ನಾಲ್ಕು ಪತ್ನಿಯರಿಗಿಂತ ಹೆಚ್ಚು ಹೊಂದಬಾರದು; ಆದರೆ ಸ್ವಯಂ ಪ್ರವಾದಿ(ಸ) ಐದನೆಯ ಪತ್ನಿಯನ್ನು ಹೇಗೆ ಇಟ್ಟುಕೊಂಡರು ಎಂಬ ಸಂಶಯ ವ್ಯಕ್ತ ಪಡಿಸತೊಡಗಿದರು.

## ಚರ್ಚಾ ವಿಷಯಗಳು

ಪ್ರಸ್ತುತ ವಿಷಯಗಳೆಲ್ಲವೂ 'ಅಹ್‌ಝಾಬ್' ಅಧ್ಯಾಯ ಅವತೀರ್ಣಗೊಂಡ ಕಾಲದಲ್ಲಿ ಸಂಭವಿಸಿದ್ದುವು. ಅವುಗಳ ಕುರಿತೇ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಇದರ ವಿಷಯಗಳನ್ನೂ ಹಿನ್ನೆಲೆಯನ್ನೂ ಗಮನಿಸುವಾಗ ಈ ಅಧ್ಯಾಯವು ಒಮ್ಮೆಲೇ ಅವತೀರ್ಣಗೊಂಡ ಒಂದು ಉಪನ್ಯಾಸವಲ್ಲವೆಂದು ವ್ಯಕ್ತವಾಗುತ್ತದೆ. ಬದಲಾಗಿ ಆ ಕಾಲದಲ್ಲಿ ಸಂಭವಿಸಿದ ಪ್ರಮುಖ ಘಟನೆಗಳ ಕುರಿತಾಗಿ ಒಂದರ ಹಿಂದೆ ಒಂದರಂತೆ ಅವತೀರ್ಣಗೊಂಡ ಆದೇಶಗಳು ಮತ್ತು ಉಪನ್ಯಾಸಗಳನ್ನೊಳಗೊಂಡಿದ್ದುವು. ಅನಂತರ ಅದನ್ನು ಕ್ರೋಡೀಕರಿಸಿ ಒಂದು ಅಧ್ಯಾಯದ ರೂಪ ಕೊಡಲಾಯಿತೆಂದೂ ತಿಳಿದು ಬರುತ್ತದೆ. ಈ ಕೆಳಗಿನ ಅಂಶಗಳಿಂದ ಅದು ಸ್ಪಷ್ಟವಾಗಿ ಎದ್ದು ತೋರುತ್ತದೆ-

1) ಪ್ರಥಮ ರುಕೂಅ್ (ಪಾರಾವು) ಅಹ್‌ಝಾಬ್ ಯುದ್ಧಕ್ಕಿಂತ ಸ್ವಲ್ಪ ಮುಂಚೆ ಅವತೀರ್ಣಗೊಂಡದ್ದೆಂದು ಭಾಸವಾಗುತ್ತದೆ. ಅದರ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸುವಾಗ ಮತ್ತು ಈ ರುಕೂಅನ್ನು ಓದುವಾಗ ಇದರ ಅವತೀರ್ಣದ ವೇಳೆಗಾಗಲೇ ಹ. ಝೈದ್ ಝೈನಬ್‌ರಿಗೆ ತಲಾಕ್ ಕೊಟ್ಟಿದ್ದರೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ದತ್ತಕದ ಬಗ್ಗೆ ಅಜ್ಞಾನ ಕಾಲದ ಕಲ್ಪನೆಗಳನ್ನೂ ಭ್ರಾಮಕ ಸಂಪ್ರದಾಯಗಳನ್ನೂ ಅಳಿಸಿ ಹಾಕುವ ಅಗತ್ಯವಿದೆಯೆಂದು ಪ್ರವಾದಿ(ಸ) ಭಾವಿಸುತ್ತಿದ್ದರು. ದತ್ತು ಸಂಬಂಧದ ಕುರಿತು ಜನರಲ್ಲಿ ರೂಢಮೂಲವಾಗಿರುವ ಭಾವನಾತ್ಮಕ ಕಲ್ಪನೆಗಳಿಂದ ಈ ಸಂಪ್ರದಾಯವನ್ನು ಸ್ವತಃ ತನ್ನ ಕೈಯಾರೆ ಅಳಿಸಿ ಹಾಕದೆ ಅದು ಜನಮನದಿಂದ ಹೋಗಲಾರದೆಂದೂ ಪ್ರವಾದಿ(ಸ) ಭಾವಿಸುತ್ತಿದ್ದರು. ಆದರೆ ಈ ನಿರ್ಣಾಯಕ ಸಂದರ್ಭದಲ್ಲಿ ತಾನು ಝೈದ್‌ರ ವಿಚ್ಛೇದಿತ ಪತ್ನಿಯನ್ನು ವಿವಾಹವಾದರೆ ಮೊದಲೇ ಹೊಂಚು ಹಾಕುತ್ತಿದ್ದ ಮುನಾಫಿಕರು, ಯಹೂದಿಯರು ಮತ್ತು ಬಹುದೇವಾರಾಧಕರಿಗೆ ಇಸ್ಲಾಮಿನ ವಿರುದ್ಧ ಕೋಲಾಹಲವೆಬ್ಬಿಸಲು ಸುವರ್ಣಾವಕಾಶವೊಂದನ್ನು ಒದಗಿಸಿದಂತಾದೀತೆಂದು ಪ್ರವಾದಿ(ಸ) ಈ ವಿಷಯದಲ್ಲಿ ಹಿಂಜರಿಯುತ್ತಿದ್ದರು. ಈ ಸಂದರ್ಭದಲ್ಲಿ ಪ್ರಥಮ ರುಕೂಅ್‌ನ ಸೂಕ್ತಗಳು ಅವತೀರ್ಣಗೊಂಡವು.

2) ಎರಡನೆಯ ಮತ್ತು ಮೂರನೆಯ ರುಕೂಅ್‌ಗಳಲ್ಲಿ ಅಹ್‌ಝಾಬ್ ಮತ್ತು ಬನೂ ಕುರೈಝಾ ಯುದ್ಧಗಳ ಕುರಿತು ವಿಮರ್ಶೆ ನಡೆಸಲಾಗಿದೆ. ಇದು ಈ ಎರಡೂ ರುಕೂಅ್‌ಗಳು ಈ ಯುದ್ಧಗಳ ನಂತರ ಅವತೀರ್ಣಗೊಂಡವೆಂಬುದರ ಸ್ಪಷ್ಟ ಸೂಚನೆಯಾಗಿದೆ.

3) ನಾಲ್ಕನೆಯ ರುಕೂಅ್‌ನ ಆರಂಭದಿಂದ 35ನೆಯ ಸೂಕ್ತದ ವರೆಗಿನ ಉಪನ್ಯಾಸವು ಎರಡು ವಿಷಯಗಳನ್ನೊಳಗೊಂಡಿವೆ. ಮೊದಲ ಭಾಗದಲ್ಲಿ ಅಲ್ಲಾಹನು ಪ್ರವಾದಿವರ್ಯರ(ಸ) ಆರ್ಥಿಕ ದುಃಸ್ಥಿತಿಯಿಂದಾಗಿ ಸಹನೆ ಕಳಕೊಳ್ಳುತ್ತಿರುವ ಅವರ ಪತ್ನಿಯರಿಗೆ ಹೀಗೆ ಎಚ್ಚರಿಕೆ ನೀಡಿದ್ದಾನೆ- ಇಹಲೋಕ ಮತ್ತದರ ವೈಭವಗಳು ಹಾಗೂ ಅಲ್ಲಾಹ್, ಪ್ರವಾದಿ ಮತ್ತು ಪರಲೋಕ- ಇವೆರಡರ ಪೈಕಿ ಒಂದನ್ನು ಆರಿಸಿಕೊಳ್ಳಿ. ಮೊದಲನೆಯದನ್ನು ಬಯಸುವುದಾದರೆ ಸ್ಪಷ್ಟವಾಗಿ ಹೇಳಿರಿ. ಒಂದು ದಿನದ ಮಟ್ಟಿಗಾದರೂ ನಿಮ್ಮನ್ನು ಆರ್ಥಿಕ ಸಂಕಷ್ಟದಲ್ಲಿ

ಸಿಲುಕಿಸಲಾಗದು, ಸಂತೋಷದಿಂದ ಬೀಳ್ಕೊಡಲಾಗುವುದು. ಅದರ ಬದಲು ಎರಡನೆಯದನ್ನು ಬಯಸುವುದಾದರೆ ಅಲ್ಲಾಹನನ್ನೂ ಆತನ ಪ್ರವಾದಿಯನ್ನೂ ಸಹನೆಯೊಂದಿಗೆ ಅನುಸರಿಸಿರಿ.

ಎರಡನೆಯ ಭಾಗದಲ್ಲಿ ಇಸ್ಲಾಮಿನ ಅಚ್ಚಿನಲ್ಲಿ ಪುಟಗೊಳ್ಳುತ್ತಿದ್ದ ಜನರು ಬಯಸುವಂತಹ ಸಾಮಾಜಿಕ ಸುಧಾರಣೆಗಾಗಿ ಪ್ರಥಮ ಹೆಜ್ಜೆಯಿಡಲಾಯಿತು. ಈ ಸುಧಾರಣೆಯ ಆರಂಭವನ್ನು ಪ್ರವಾದಿವರ್ಯರ(ಸ) ಮನೆಯಿಂದಲೇ ಮಾಡುತ್ತಾ ಪ್ರವಾದಿ ಪತ್ನಿಯರಿಗೆ ಈ ರೀತಿಯ ಆದೇಶ ನೀಡಲಾಯಿತು. ಅಜ್ಞಾನ ಕಾಲದ ಸೌಂದರ್ಯ ಪ್ರದರ್ಶನವನ್ನು ವರ್ಜಿಸಿರಿ. ಮನೆಗಳೊಳಗೆ ಗಾಂಭೀರ್ಯದೊಂದಿಗಿರಿ. ಪರಪುರುಷರೊಡನೆ ಮಾತನಾಡುವ ವಿಷಯದಲ್ಲಿ ಕಟ್ಟುನಿಟ್ಟಿನ ಎಚ್ಚರ ವಹಿಸಿರಿ. ಇದು ಪರ್ದಾ ನಿಯಮಗಳ ಆರಂಭವಾಗಿತ್ತು.

4) 36ರಿಂದ 48ರ ವರೆಗಿನ ಸೂಕ್ತಗಳ ವಿಷಯವು ಹ. ಝೈನಬ್‌ರ ವಿವಾಹಕ್ಕೆ ಸಂಬಂಧಿಸಿದ್ದಾಗಿತ್ತು. ಅದರಲ್ಲಿ ಮುನಾಫಿಕರು ಈ ವಿವಾಹದ ಕುರಿತು ಎತ್ತುತ್ತಿದ್ದ ಎಲ್ಲ ಆಕ್ಷೇಪಗಳಿಗೆ ಉತ್ತರ ನೀಡಲಾಗಿದೆ. ಅದೇ ರೀತಿ ಮುಸ್ಲಿಮರ ಮನಗಳಲ್ಲಿ ಹಾಕಲಾಗುತ್ತಿದ್ದ ಸಂಶಯಗಳನ್ನು ದೂರೀಕರಿಸಲಾಗಿದೆ. ಮುಸ್ಲಿಮರಿಗೆ ಪ್ರವಾದಿಯವರ(ಸ) ಸ್ಥಾನಮಾನವೇನೆಂಬುದನ್ನು ತಿಳಿಸಿ ಕೊಡಲಾಗಿದೆ. ಸ್ವಯಂ ಪ್ರವಾದಿವರ್ಯರಿಗೆ, ಸತ್ಯನಿಷೇಧಿಗಳ ಮತ್ತು ಮುನಾಫಿಕರ ಅಪಪ್ರಚಾರಗಳಿಗೆ ತಾಳ್ಮೆ ವಹಿಸುವಂತೆ ಉಪದೇಶಿಸಲಾಗಿದೆ.

5) 49ನೆಯ ಸೂಕ್ತದಲ್ಲಿ ತಲಾಕ್ ನಿಯಮಗಳಿಗೆ ಸಂಬಂಧಿಸಿದಂತೆ ಒಂದು ಪರಿಚ್ಛೇದವನ್ನು ಅಳವಡಿಸಲಾಗಿದೆ. ಇದು ಬಹುಶಃ ಪ್ರಸ್ತುತ ಘಟನೆಗಳಿಗೆ ಸಂಬಂಧಿಸಿದಂತೆ ಯಾವುದೋ ಒಂದು ಸಂದರ್ಭದಲ್ಲಿ ಅವತೀರ್ಣಗೊಂಡ ಒಂಟಿ ಸೂಕ್ತವಾಗಿದೆ.

6) 50ರಿಂದ 52ರ ವರೆಗಿನ ಸೂಕ್ತಗಳಿಗೆ ಪ್ರವಾದಿವರ್ಯರಿಗಾಗಿ(ಸ) ವಿವಾಹದ ವಿಶಿಷ್ಟ ನಿಬಂಧನೆಗಳನ್ನು ವಿವರಿಸಲಾಗಿದೆ. ಇದರಲ್ಲಿ, ವಿವಾಹ ಸಂಬಂಧವಾಗಿ ಸಾಮಾನ್ಯ ಮುಸ್ಲಿಮರು ಪಾಲಿಸಬೇಕಾದ ಕೆಲವು ನಿಯಮ-ನಿಬಂಧನೆಗಳಿಂದ ಪ್ರವಾದಿವರ್ಯರನ್ನು(ಸ) ಹೊರತು ಪಡಿಸಿರುವುದಾಗಿ ಸ್ಪಷ್ಟ ಪಡಿಸಲಾಗಿದೆ.

7) 53ರಿಂದ 55ರ ವರೆಗಿನ ಸೂಕ್ತಗಳಲ್ಲಿ ಸಾಮಾಜಿಕ ಸುಧಾರಣೆಗಾಗಿ ಎರಡನೆಯ ಹೆಜ್ಜೆ ಇಡಲಾಗಿದೆ. ಅದು ಈ ಕೆಳಗಿನ ಆದೇಶಗಳನ್ನೊಳಗೊಂಡಿವೆ-

ಪ್ರವಾದಿವರ್ಯರ(ಸ) ಮನೆಗಳೊಳಗೆ ಪರ ಪುರುಷರ ಪ್ರವೇಶದ ಮೇಲೆ ನಿರ್ಬಂಧ, ಭೇಟಿ ಮತ್ತು ಆಮಂತ್ರಣದ ನಿಬಂಧನೆಗಳು. ಪ್ರವಾದಿ ಪತ್ನಿಯರಿಗೆ ಸಂಬಂಧಿಸಿದಂತೆ, ಅವರ ಮನೆಗಳಿಗೆ ಅವರ ಆಪ್ತ ಸಂಬಂಧಿಕರು ಮಾತ್ರ ಬರಬಹುದೆಂಬ ನಿಯಮ. ಪರಪುರುಷರಿಗೆ ಅವರೊಂದಿಗೆ ಮಾತಾಡಬೇಕೆಂದಿದ್ದರೆ ತೆರೆಯ ಮರೆಯಿಂದ ಮಾತಾಡಬೇಕು ಮತ್ತು ಏನಾದರೂ ಪಡಕೊಳ್ಳಬೇಕಾದರೂ ತೆರೆಯ ಮರೆಯಿಂದ ಪಡಕೊಳ್ಳಬೇಕು. ಪ್ರವಾದಿ ಪತ್ನಿಯರು ಮುಸ್ಲಿಮರಿಗೆ ಅವರ ತಾಯಂದಿರಂತೆ ನಿಷಿದ್ಧವಾಗಿದ್ದು ಪ್ರವಾದಿಯವರ(ಸ) ವಿಯೋಗಾನಂತರ ಯಾರೂ ಅವರೊಂದಿಗೆ ವಿವಾಹವಾಗುವಂತಿಲ್ಲವೆಂಬ ನಿಯಮ.

8) 56 ಮತ್ತು 57ನೆಯ ಸೂಕ್ತಗಳಲ್ಲಿ ಪ್ರವಾದಿವರ್ಯರ(ಸ) ವಿವಾಹ ಹಾಗೂ ಅವರ ಖಾಸಗಿ ಬದುಕಿನ ಕುರಿತಾಗಿ ನಡೆಯುತ್ತಿದ್ದ ಗುಸುಗುಸು ಮಾತಿನ ಬಗ್ಗೆ ಉಗ್ರ ಎಚ್ಚರಿಕೆ ನೀಡುತ್ತಾ ವೈರಿಗಳು ಆಡುವಂತಹ ನಿಂದನೆಯ ಮಾತುಗಳನ್ನು ನೀವಾಡಬಾರದು. ನೀವು ನಿಮ್ಮ ಪ್ರವಾದಿಯ ಮೇಲೆ ಸಲಾತ್(ಸ್ವಸ್ತಿವಚನ) ಹೇಳಬೇಕು ಎಂದು ಮುಸ್ಲಿಮರಿಗೆ ಆದೇಶಿಸಲಾಗಿದೆ. ಅಷ್ಟೇ ಅಲ್ಲ- ಪ್ರವಾದಿಯಂತಿರಲಿ, ಸತ್ಯವಿಶ್ವಾಸಿಗಳು ಸಾಮಾನ್ಯ ಮುಸ್ಲಿಮರ ಮೇಲೆ ಅಪವಾದ ಹೊರಿಸುವುದಾಗಲಿ ಆರೋಪಿಸುವುದಾಗಲಿ ಮಾಡಬಾರದೆಂದು ಉಪದೇಶಿಸಲಾಗಿದೆ.

9) 59ನೆಯ ಸೂಕ್ತದಲ್ಲಿ ಸಾಮಾಜಿಕ ಸುಧಾರಣೆಯ ಕುರಿತಂತೆ ಮೂರನೆಯ ಹೆಜ್ಜೆಯಿಡಲಾಗಿದೆ. ಅದರಲ್ಲಿ ಮುಸ್ಲಿಮ್ ಸ್ತ್ರೀಯರು ಮನೆಯಿಂದ ಹೊರಗೆ ಹೋಗುವಾಗ ತಮ್ಮ ಶರೀರವನ್ನು ಚದ್ದರ(ಬುರ್ಖಾ)ದಿಂದ ಸಂಪೂರ್ಣ ಮುಚ್ಚಿಕೊಳ್ಳಬೇಕೆಂದೂ ಮುಖ ಪರದೆಯನ್ನು ಹಾಕಿಕೊಳ್ಳಬೇಕೆಂದೂ ಎಲ್ಲ ಮುಸ್ಲಿಮ್ ಸ್ತ್ರೀಯರಿಗೂ ಆದೇಶಿಸಲಾಗಿದೆ.

ಅನಂತರ ಅಧ್ಯಾಯದ ಕೊನೆಯ ತನಕ, ಮುನಾಫಿಕರು ಮತ್ತು ತಿಳಿಗೇಡಿಗಳು ಹಬ್ಬಿಸುತ್ತಿದ್ದ ವದಂತಿಗಳ ಅಭಿಯಾನದ (Whispering campaign) ಕುರಿತು ಉಗ್ರ ಎಚ್ಚರಿಕೆ ನೀಡಲಾಗಿದೆ.

سُورَةُ الأَحْزَاب مَدَنِيَّة

بِسْمِ اللَّهِ الرَّحْمَٰنِ الرَّحِيمِ

يَا أَيُّهَا النَّبِيُّ اتَّقِ اللَّهَ وَلَا تُطِعِ الْكَافِرِينَ وَالْمُنَافِقِينَ إِنَّ اللَّهَ كَانَ عَلِيمًا
حَكِيمًا ﴿١﴾ وَاتَّبِعْ مَا يُوحَىٰ إِلَيْكَ مِنْ رَبِّكَ إِنَّ اللَّهَ كَانَ بِمَا تَعْمَلُونَ
خَبِيرًا ﴿٢﴾ وَتَوَكَّلْ عَلَى اللَّهِ وَكَفَىٰ بِاللَّهِ وَكِيلًا ﴿٣﴾ مَا جَعَلَ اللَّهُ لِرَجُلٍ مِنْ

# 33. ಅಲ್ ಅಹ್‌ಝಾಬ್

(ಅವತೀರ್ಣ - ಮದೀನಾದಲ್ಲಿ)

ಸೂಕ್ತಗಳು - 73 ರುಕೂಅ್‌ಗಳು - 9

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

**(1-3)** ಪೈಗಂಬರರೇ[1] ಅಲ್ಲಾಹನನ್ನು ಭಯಪಡಿರಿ ಮತ್ತು ಸತ್ಯನಿಷೇಧಿಗಳ ಹಾಗೂ ಕಪಟವಿಶ್ವಾಸಿಗಳ ಅನುಸರಣೆ ಮಾಡಬೇಡಿರಿ. ವಾಸ್ತವದಲ್ಲಿ ಸರ್ವಜ್ಞನೂ ಯುಕ್ತಿಪೂರ್ಣನೂ ಅಲ್ಲಾಹನೇ ಆಗಿರುತ್ತಾನೆ.[2] ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ನೀಡಲಾಗುತ್ತಿರುವ ಬೋಧನೆಯನ್ನು ಅನುಸರಿಸಿರಿ. ಅಲ್ಲಾಹನು, ನೀವು ಮಾಡುತ್ತಿರುವ ಪ್ರತಿಯೊಂದು ಕಾರ್ಯದ ಅರಿವುಳ್ಳವನಾಗಿದ್ದಾನೆ[3] ಮತ್ತು ಅಲ್ಲಾಹನ ಮೇಲೆಯೇ ಭರವಸೆಯನ್ನಿಡಿರಿ. ಕಾರ್ಯ ನಿರ್ವಾಹಕನಾಗಲು ಅಲ್ಲಾಹನೇ ಸಾಕು.[4]

---

1. ಈ ಅಧ್ಯಾಯದ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಈ ಸೂಕ್ತಗಳು ಅವತೀರ್ಣಗೊಳ್ಳುವ ಕಾಲದಲ್ಲಿ ಹ. ಝೈದ್‌ರು ಝೈನಬ್‌ರಿಗೆ ತಲಾಕ್ ಕೊಟ್ಟಾಗಿತ್ತು. ಆಗ ಪ್ರವಾದಿಯವರು(ಸ) ದತ್ತು ಸಂಬಂಧದ ಕುರಿತಾಗಿ ಅಜ್ಞಾನ ಕಾಲದ ಭ್ರಾಮಕ ಸಂಪ್ರದಾಯಗಳನ್ನು ಅಳಿಸಿ ಹಾಕಲು ಇದು ಸೂಕ್ತ ಸಮಯವೆಂದೂ ಅದನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕಾದರೆ ತಾನೇ ತನ್ನ ದತ್ತುಪುತ್ರ(ಝೈದ್)ನ ವಿಚ್ಛೇದಿತ ಪತ್ನಿಯನ್ನು ವಿವಾಹವಾಗಬೇಕೆಂದೂ ಬಯಸಿದ್ದರು. ಅಲ್ಲಾಹನ ಸೂಚನೆಯೂ ಅದುವೇ ಆಗಿತ್ತು. ಆದರೆ ಇದರಿಂದ, ಮೊದಲೇ ತಮಗೆ ಒಲಿಯುತ್ತಿದ್ದ ನಿರಂತರ ವಿಜಯಗಳಿಂದಾಗಿ ಮನಸ್ಸಿನಲ್ಲೇ ಕುದಿಯುತ್ತಿದ್ದ ಸತ್ಯನಿಷೇಧಿಗಳಿಗೆ ಮತ್ತು ಮುನಾಫಿಕರಿಗೆ ಅಪಪ್ರಚಾರ ನಡೆಸಲು ಬಹುದೊಡ್ಡ ಅಸ್ತ್ರ ಒದಗಿದಂತಾದೀತೆಂಬ ಭಯದಿಂದ ಪ್ರವಾದಿ(ಸ) ಈ

ವಿಷಯದಲ್ಲಿ ಮುಂದಡಿಯಿಡಲು ಹಿಂಜರಿಯುತ್ತಿದ್ದರು. ಇದು ತಮ್ಮ ಹೆಸರಿಗೆ ಕಳಂಕ ತಟ್ಟೀತೆಂಬ ಭಯದಿಂದಾಗಿರಲಿಲ್ಲ. ಬದಲಾಗಿ ಇಸ್ಲಾಮಿಗೆ ಕೇಡಾದೀತು, ವೈರಿಗಳ ಅಪಪ್ರಚಾರಕ್ಕೆ ಬಲಿಯಾಗಿ ಇಸ್ಲಾಮಿನತ್ತ ಒಲವು ತೋರುತ್ತಿದ್ದ ಅನೇಕ ಮಂದಿಗೆ ಬೇಸರವಾದೀತು, ಅನೇಕ ನಿಷ್ಪಕ್ಷಮತಿಗಳು ವೈರಿಗಳ ಜೊತೆ ಸೇರುವರು ಮತ್ತು ಸ್ವತಃ ಮುಸ್ಲಿಮರಲ್ಲೂ ದುರ್ಬಲ ಚಿತ್ತದವರು ಸಂದೇಹಗಳಲ್ಲಿ ಬೀಳಬಹುದು ಎಂಬ ಕಾರಣದಿಂದಾಗಿತ್ತು. ಆದುದರಿಂದ ಪ್ರವಾದಿಯವರು(ಸ) ಅಜ್ಞಾನ ಕಾಲದ ದುಷ್ಟ ಸಂಪ್ರದಾಯವೊಂದನ್ನು ಮುರಿಯಲು ಇಸ್ಲಾಮಿನ ಸಮಗ್ರ ಹಿತಾಸಕ್ತಿಗೆ ಭಂಗ ತರುವಂತಹ ಒಂದು ಕ್ರಮ ಕೈಗೊಳ್ಳುವುದು ಉಚಿತವಲ್ಲವೆಂದು ಭಾವಿಸಿದ್ದರು.

2. ಉಪನ್ಯಾಸವನ್ನು ಆರಂಭಿಸುತ್ತಾ ಪ್ರಥಮ ವಾಕ್ಯದಲ್ಲೇ ಅಲ್ಲಾಹನು ಪ್ರವಾದಿಯವರ(ಸ) ಈ ಆಶಂಕೆಗಳನ್ನು ನಿವಾರಿಸಿದನು. ಮಾತಿನ ಇಂಗಿತವೇನೆಂದರೆ, ನಮ್ಮ ಧರ್ಮದ ಹಿತವು ಯಾವುದರಲ್ಲಿದೆ, ಯಾವುದರಲ್ಲಿಲ್ಲವೆಂಬುದನ್ನು ನಾವೇ ಹೆಚ್ಚು ಬಲ್ಲೆವು. ಯಾವ ಕಾರ್ಯವನ್ನು ಯಾವಾಗ ಮಾಡಬೇಕು ಮತ್ತು ಯಾವುದು ಅನೌಚಿತ್ಯವಾದುದು ಎಂದು ನಮಗೆ ತಿಳಿದಿದೆ. ಆದುದರಿಂದ ಸತ್ಯನಿಷೇಧಿಗಳ ಮತ್ತು ಮುನಾಫಿಕರ ತೃಪ್ತಿಗನುಸಾರವಾದ ರೀತಿಯನ್ನನುಸರಿಸಬೇಡಿರಿ. ನಮ್ಮ ಇಚ್ಛೆಗೆ ಅನುರೂಪವಾದಂತಹ ಕೆಲಸ ಮಾಡಿರಿ. ಹೆದರಲು ನಾವು ಅರ್ಹರೇ ಹೊರತು ಸತ್ಯನಿಷೇಧಿಗಳೋ ಮುನಾಫಿಕರೋ ಅಲ್ಲ.

3. ಈ ವಾಕ್ಯದ ಸಂಬೋಧಿತರು ಪ್ರವಾದಿ(ಸ) ಮಾತ್ರವಲ್ಲ. ಮುಸ್ಲಿಮರೂ ಮುನಾಫಿಕರೂ ಇದರ ಸಂಬೋಧಿತರಾಗಿದ್ದಾರೆ. ತಾತ್ಪರ್ಯವೇನೆಂದರೆ ಪ್ರವಾದಿಯು ಅಲ್ಲಾಹನ ಅಪ್ಪಣೆಯನ್ನು ಪಾಲಿಸಿ ಕಳಂಕಿತನಾಗುವುದನ್ನು ಮತ್ತು ತನ್ನ ಮಾನ ಮರ್ಯಾದೆಯನ್ನು ವೈರಿಗಳು ಹರಾಜಿಗಿಡುವುದನ್ನು ತಾಳ್ಮೆಯೊಂದಿಗೆ ಸಹಿಸಿಕೊಂಡರೆ ಅವರ ಈ ನಿಷ್ಠೆಯು ಅಲ್ಲಾಹನಿಂದ ಮರೆಯಾಗಿರುವುದಿಲ್ಲ. ಮುಸ್ಲಿಮರ ಪೈಕಿ ಪ್ರವಾದಿಯ ನಿಷ್ಠಾವಂತ ಅನುಯಾಯಿಗಳು ಸ್ಥಿರವಾಗಿ ನಿಂತರೆ ಅವರ ಬಗ್ಗೆಯೂ ಸಂಶಯಗಳಲ್ಲಿ ಸಿಲುಕಿಕೊಂಡವರ ಬಗ್ಗೆಯೂ ಅಲ್ಲಾಹನಿಗೆ ತಿಳಿಯದೆ ಇಲ್ಲ. ಪ್ರವಾದಿಯ ಚಾರಿತ್ರ್ಯವನ್ನು ಕಳಂಕಿತಗೊಳಿಸಲು ತೀವ್ರ ಪ್ರಯತ್ನ ನಡೆಸುತ್ತಿರುವ ಸತ್ಯನಿಷೇಧಿಗಳ ಮತ್ತು ಮುನಾಫಿಕರ ಬಗ್ಗೆಯೂ ಅಲ್ಲಾಹನು ಅಶ್ರದ್ಧನಲ್ಲ. ಆದುದರಿಂದ ಕಳವಳ ಪಡಬೇಕಾಗಿಲ್ಲ. ಪ್ರತಿಯೊಬ್ಬನೂ ತನ್ನ ಕರ್ಮಗಳನುಸಾರ ಪಡೆಯಲಿರುವ ಪುರಸ್ಕಾರ ಅಥವಾ ಶಿಕ್ಷೆಯನ್ನು ಪಡೆದೇ ತೀರುವನು.

4. ಈ ವಾಕ್ಯದಲ್ಲಿ ಪುನಃ ಪ್ರವಾದಿವರ್ಯರನ್ನು(ಸ) ಸಂಬೋಧಿಸಲಾಗಿದೆ. ಪ್ರವಾದಿವರ್ಯರಿಗೆ(ಸ) ಈ ರೀತಿ ಆದೇಶಿಸಲಾಗುತ್ತಿದೆ- ನಿಮಗೆ ವಹಿಸಿಕೊಡಲಾಗಿರುವ ಕರ್ತವ್ಯವನ್ನು ಅಲ್ಲಾಹನ ಭರವಸೆಯಿಂದ ನೆರವೇರಿಸಿರಿ. ಇಡೀ ಲೋಕವೇ ನಿಮ್ಮ ವಿರುದ್ಧ ವಾದರೂ ನೀವದನ್ನು ಲೆಕ್ಕಿಸಬೇಕಾಗಿಲ್ಲ. ಒಂದು ಆಜ್ಞೆಯು ಅಲ್ಲಾಹನ ವತಿಯಿಂದಾಗಿದೆಯೆಂದು ತಿಳಿದಾಗ ಅದನ್ನು ಪಾಲಿಸುವುದರಲ್ಲೇ ಒಳಿತು ಮತ್ತು ಹಿತವಿದೆಯೆಂದು ಸಮಾಧಾನ ಪಟ್ಟುಕೊಳ್ಳಬೇಕು. ಅನಂತರ ಅದರ ಔಚಿತ್ಯವನ್ನು ಹುಡುಕುವುದು ಅವನ ಕೆಲಸವಲ್ಲ. ಅವನು ಅಲ್ಲಾಹನ ಮೇಲೆ ಭರವಸೆಯಿಟ್ಟು ಅದನ್ನು ಪಾಲಿಸಬೇಕು. ದಾಸನು ತನ್ನ ವ್ಯವಹಾರಗಳನ್ನು ಒಪ್ಪಿಸಿ ಬಿಡಲು ಅಲ್ಲಾಹನೇ ಸಾಕು. ಮಾರ್ಗದರ್ಶನ ನೀಡಲಿಕ್ಕೂ ಸಹಾಯ ಮಾಡಲಿಕ್ಕೂ ಆತನೇ ಸಾಕು. ಆತನ ಮಾರ್ಗದರ್ಶನದಂತೆ ಕೆಲಸ ಮಾಡುವವನು ಎಂದೂ ವಿಫಲನಾಗಲಾರನೆಂಬ ಭರವಸೆ ತಾಳಲಿಕ್ಕೂ ಆತನೇ ಸಾಕು.

قَلْبَيْنِ فِيْ جَوْفِهٖ ۚ وَمَا جَعَلَ اَزْوَاجَكُمُ الّٰٓـِٔيْ تُظٰهِرُوْنَ مِنْهُنَّ اُمَّهٰتِكُمْ ۚ وَمَا
جَعَلَ اَدْعِيَآءَكُمْ اَبْنَآءَكُمْ ۗ ذٰلِكُمْ قَوْلُكُمْ بِاَفْوَاهِكُمْ ۗ وَاللّٰهُ يَقُوْلُ الْحَقَّ وَهُوَ
يَهْدِى السَّبِيْلَ ﴿٤﴾ اُدْعُوْهُمْ لِاٰبَآئِهِمْ هُوَ اَقْسَطُ عِنْدَ اللّٰهِ ۚ فَاِنْ لَّمْ تَعْلَمُوْٓا

(4-5) ಅಲ್ಲಾಹ್ ಯಾವ ಮನುಷ್ಯನ ಶರೀರದೊಳಗೂ ಎರಡು ಹೃದಯಗಳನ್ನಿರಿಸಿಲ್ಲ.[5] ನೀವು 'ಝಿಹಾರ್' ಮಾಡುವ ನಿಮ್ಮ ಪತ್ನಿಯರನ್ನು ಅವನು ನಿಮ್ಮ ತಾಯಂದಿರನ್ನಾಗಿ ಮಾಡಲೂ ಇಲ್ಲ[6] ಮತ್ತು ಅವನು ನಿಮ್ಮ ದತ್ತುಪುತ್ರರನ್ನು ನಿಮ್ಮ ಸ್ವಂತ ಪುತ್ರರನ್ನಾಗಿ ಮಾಡಿರುವುದೂ ಇಲ್ಲ.[7] ಇವೆಲ್ಲ ನೀವು ನಿಮ್ಮ ಬಾಯಿಯಿಂದ ಹೊರಡಿಸಿ ಬಿಡುವ ಮಾತುಗಳು. ಆದರೆ ಅಲ್ಲಾಹನು ಕೇವಲ ಯಥಾರ್ಥವಾದುದನ್ನೇ ಹೇಳುತ್ತಾನೆ. ಅವನೇ ಸನ್ಮಾರ್ಗದ ಕಡೆಗೆ ಮಾರ್ಗದರ್ಶನ ನೀಡುತ್ತಾನೆ. ದತ್ತು ಮಕ್ಕಳನ್ನು ಅವರ ಪಿತರಿಗೆ ಸಂಬಂಧಿಸಿ ಕರೆಯಿರಿ. ಇದು ಅಲ್ಲಾಹನ ಬಳಿ ಹೆಚ್ಚು

5. ಅರ್ಥಾತ್- ಒಬ್ಬ ವ್ಯಕ್ತಿಯು ಒಂದೇ ಸಮಯದಲ್ಲಿ ಸತ್ಯವಿಶ್ವಾಸಿ ಮತ್ತು ಕಪಟವಿಶ್ವಾಸಿ, ಸತ್ಯವಂತ ಮತ್ತು ಸುಳ್ಳುಗಾರ ಹಾಗೂ ಸಜ್ಜನ ಮತ್ತು ದುಷ್ಟನಾಗಲು ಸಾಧ್ಯವಿಲ್ಲ. ಅವನ ಎದೆಯೊಳಗೆ ದೇವಭಯ ಮತ್ತು ದೇವನ ಬಗ್ಗೆ ನಿರ್ಭೀತಿ ತುಂಬಿಕೊಂಡಿರುವ ಎರಡು ಹೃದಯಗಳಿರಲಾರವು. ಒಂದು ಸಮಯದಲ್ಲಿ ಮನುಷ್ಯನ ನೆಲೆ ಒಂದೇ ಆಗಿರುವುದು. ಅವನು ಒಂದೋ ಸತ್ಯವಿಶ್ವಾಸಿ ಇಲ್ಲವೆ ಕಪಟವಿಶ್ವಾಸಿಯಾಗಿರುವನು. ಒಂದೋ ಸತ್ಯನಿಷೇಧಿ ಇಲ್ಲವೆ ವಿಧೇಯನಾಗಿರುವನು. ನೀವು ಒಂದು ವೇಳೆ ಸತ್ಯವಿಶ್ವಾಸಿಯನ್ನು ಮುನಾಫಿಕ್ ಎಂದು ಕರೆದರೆ ಅಥವಾ ಮುನಾಫಿಕನನ್ನು ಸತ್ಯವಿಶ್ವಾಸಿಯೆಂದು ಕರೆದರೆ ವಾಸ್ತವಿಕತೆ ಬದಲಾಗದು. ಆತನ ನೈಜ ನೆಲೆ ಒಂದು ಮಾತ್ರವಾಗಿರುವುದು.

6. 'ಝಿಹಾರ್' ಎಂಬುದು ಅರಬರು ಬಳಸುವ ಒಂದು ವಿಶಿಷ್ಟ ಪದ. ಹಿಂದಿನ ಕಾಲದಲ್ಲಿ ಅರಬರು ತಮ್ಮ ಪತ್ನಿಯರೊಂದಿಗೆ ಜಗಳಾಡಿದಾಗ ಕೆಲವೊಮ್ಮೆ ಕೋಪದಿಂದ "ನಿನ್ನ ಬೆನ್ನು ನನ್ನ ತಾಯಿಯ ಬೆನ್ನಿನಂತೆ" ಎಂದು ಹೇಳುತ್ತಿದ್ದರು. ಈ ಮಾತು ಯಾರದಾದರೂ ಬಾಯಿಯಿಂದ ಹೊರಟು ಬಿಟ್ಟಿತೆಂದರೆ ಆ ಬಳಿಕ ಆ ಹೆಂಗಸು ಆತನ ಪಾಲಿಗೆ ನಿಷಿದ್ಧಳೆಂದು ಭಾವಿಸಲಾಗುತ್ತಿತ್ತು. ಏಕೆಂದರೆ ಆತ ಆಕೆಯನ್ನು ತಾಯಿಗೆ ಹೋಲಿಸಿದ್ದ. ಇದರ ಕುರಿತು ಅಲ್ಲಾಹನು ಹೇಳುತ್ತಾನೆ, ಪತ್ನಿಯನ್ನು ತಾಯಿಯೆಂದು ಕರೆಯುವುದರಿಂದ ಅಥವಾ ತಾಯಿಗೆ ಹೋಲಿಸುವುದರಿಂದ ಆಕೆ ತಾಯಿಯಾಗುವುದಿಲ್ಲ. ಹೆತ್ತವಳೇ ನಿಜವಾದ ತಾಯಿ. ಕೇವಲ ಬಾಯಿಮಾತಿನಿಂದ ವಾಸ್ತವಿಕತೆ ಬದಲಾಗುವುದಿಲ್ಲ. ಪತ್ನಿಯಾಗಿದ್ದವಳು ನಿಮ್ಮ ಮಾತಿನಿಂದ ತಾಯಿಯಾಗಲಾರಳು. (ಇಲ್ಲಿ ಝಿಹಾರ್‌ಗೆ ಸಂಬಂಧಿಸಿದ ಕಾನೂನುಗಳನ್ನು ವಿವರಿಸುವುದು ಉದ್ದೇಶವಲ್ಲ. ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಅಲ್ ಮುಜಾದಿಲ ಅಧ್ಯಾಯದ 2ರಿಂದ 4ರ ವರೆಗಿನ ಸೂಕ್ತಗಳಲ್ಲಿ ವಿವರಿಸಲಾಗಿದೆ.)

7. ಇದು ನಿಜವಾದ ಉದ್ದೇಶವಾಗಿದೆ. ಮೇಲಿನ ಎರಡೂ ವಾಕ್ಯಗಳನ್ನು ಈ ವಿಷಯವನ್ನು ಮಂದಟ್ಟು ಮಾಡುವುದಕ್ಕಾಗಿಯೇ ಪುರಾವೆಯ ರೂಪದಲ್ಲಿ ಹೇಳಲಾಗಿದೆ.

آبَاءَهُمْ فَإِخْوَانُكُمْ فِي الدِّينِ وَمَوَالِيكُمْ ۚ وَلَيْسَ عَلَيْكُمْ جُنَاحٌ فِيمَا أَخْطَأْتُمْ
بِهِ وَلَٰكِن مَّا تَعَمَّدَتْ قُلُوبُكُمْ ۚ وَكَانَ اللَّهُ غَفُورًا رَّحِيمًا ۞ النَّبِيُّ أَوْلَىٰ

ನ್ಯಾಯೋಚಿತವಾದ ವಿಷಯವಾಗಿದೆ[8] ಮತ್ತು ನಿಮಗೆ ಅವರ ಪಿತರು ಯಾರೆಂದು ತಿಳಿದಿರದಿದ್ದರೆ ಅವರು ನಿಮ್ಮ ಧರ್ಮ ಸಹೋದರರು ಮತ್ತು ಮಿತ್ರರಾಗಿರುತ್ತಾರೆ.[9] ನೀವು ತಿಳಿಯದೆ ಹೇಳಿ ಬಿಟ್ಟ ಮಾತಿಗಾಗಿ ನಿಮ್ಮ ಮೇಲೇನೂ ದೋಷವಿಲ್ಲ. ಆದರೂ ನೀವು ಉದ್ದೇಶಪೂರ್ವಕವಾಗಿ ಹೇಳಿದ ಮಾತಿನ ಬಗ್ಗೆ ಖಂಡಿತ ದೋಷವಿದೆ.[10] ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[11]

---

8. ಈ ಆದೇಶದ ಪಾಲನೆಯಲ್ಲಿ ಮೊತ್ತ ಮೊದಲಾಗಿ ಮಾಡಲಾದ ಸುಧಾರಣೆಯೇನೆಂದರೆ ಪ್ರವಾದಿವರ್ಯರ(ಸ) ದತ್ತು ಪುತ್ರ ಝೈದ್‌ರನ್ನು ಝೈದ್ ಬಿನ್ ಮುಹಮ್ಮದ್ (ಮುಹಮ್ಮದ್‌ರ ಪುತ್ರ) ಎಂದು ಕರೆಯುವ ಬದಲು ಝೈದ್ ಬಿನ್ ಹಾರಿಸ್ ಎಂದು ಅವರ ತಂದೆಗೆ ಸಂಬಂಧಿಸಿ ಕರೆಯಲಾಯಿತು. ಬುಖಾರಿ, ಮುಸ್ಲಿಮ್, ತಿರ್ಮಿದಿ ಮತ್ತು ನಸಾಈಗಳಲ್ಲಿ ಉಲ್ಲೇಖಗೊಂಡಿರುವ ಹ. ಅಬ್ದುಲ್ಲಾ ಬಿನ್ ಉಮರ್‌ರವರ(ರ) ವರದಿ ಪ್ರಕಾರ, ಮೊದಲು ಝೈದ್ ಬಿನ್ ಹಾರಿಸ್‌ರನ್ನು ಜನರು ಝೈದ್ ಬಿನ್ ಮುಹಮ್ಮದ್ ಎಂದು ಕರೆಯುತ್ತಿದ್ದರು. ಈ ಸೂಕ್ತ ಅವತೀರ್ಣಗೊಂಡ ಬಳಿಕ ಅವರನ್ನು ಝೈದ್ ಬಿನ್ ಹಾರಿಸ್ ಎಂದು ಕರೆಯ ತೊಡಗಿದರು. ಅಲ್ಲದೆ ಎಲ್ಲರೂ ತಮ್ಮ ಹೆಸರನ್ನು ತಮ್ಮ ನೈಜ ತಂದೆಗೆ ಸಂಬಂಧಿಸಿ ಕರೆಯಬೇಕೇ ಹೊರತು ಇತರರ ಕಡೆಗೆ ಸಂಬಂಧಿಸಿ ಕರೆಯುವುದನ್ನು ಈ ಸೂಕ್ತದ ಅವತರಣದ ಬಳಿಕ ನಿಷೇಧಿಸಲಾಯಿತು. ಹ. ಸಅದ್ ಬಿನ್ ಅಬೀ ವಕ್ಕಾಸ್‌ರವರ(ರ) ವರದಿಯೊಂದು ಬುಖಾರಿ, ಮುಸ್ಲಿಮ್ ಮತ್ತು ಅಬೂದಾವೂದ್‌ನಲ್ಲಿ ಹೀಗಿದೆ; ಪ್ರವಾದಿ(ಸ) ಹೇಳಿದರು- ಒಬ್ಬನು ತನ್ನ ನೈಜ ತಂದೆಯನ್ನು ಬಿಟ್ಟು ಬೇರೊಬ್ಬನನ್ನು ತನ್ನ ತಂದೆಯೆಂದು ಹೇಳಿದರೆ, ಅವನ ಪಾಲಿಗೆ ಸ್ವರ್ಗವು ಹರಾಮ್ ಆಗಿರುವುದು. ಈ ಕೃತ್ಯವನ್ನು ಮಹಾ ಪಾಪವೆಂದು ಹೇಳಲಾಗಿರುವ ಇತರ ಹದೀಸ್ ವರದಿಗಳೂ ಇವೆ.

9. ಅರ್ಥಾತ್- ಅಂತಹ ಅವಸ್ಥೆಯಲ್ಲೂ ಅವನ ವಂಶಪಾರಂಪರ್ಯವನ್ನು ಯಾರಿಗಾದರೂ ಸಂಬಂಧಿಸಿ ಹೇಳುವುದು ಸರಿಯಲ್ಲ.

10. ತಾತ್ಪರ್ಯವೇನೆಂದರೆ ಯಾರನ್ನಾದರೂ ಪ್ರೀತಿಯಿಂದ ಮಗನೆಂದು ಕರೆದರೆ ಅಡ್ಡಿಯಿಲ್ಲ. ಅದೇ ರೀತಿ ತಾಯಿ, ಮಗಳು, ಸಹೋದರಿ, ಸಹೋದರ ಎಂಬಿತ್ಯಾದಿ ಪದಗಳನ್ನು ನೈತಿಕವಾಗಿ ಯಾರಿಗಾದರೂ ಉಪಯೋಗಿಸಿದರೆ, ಅದೂ ತಪ್ಪಲ್ಲ. ಆದರೆ ಹಾಗೆ ಕರೆಯಲ್ಪಡುವವರಿಗೆ ನೈಜ ಸಂಬಂಧಿಕರಂತಹ ಸ್ಥಾನಮಾನ ನೀಡುವುದು ಮತ್ತು ಅವರೊಂದಿಗೆ ನೈಜ ಸಂಬಂಧಿಕರಂತೆ ವ್ಯವಹರಿಸುವುದು ಖಂಡಿತ ಆಕ್ಷೇಪಾರ್ಹವಾಗಿದೆ. ಅದರ ಬಗ್ಗೆ ವಿಚಾರಿಸಲಾಗುವುದು.

11. ಇದರ ಒಂದು ಅರ್ಥವೇನೆಂದರೆ ಈ ಹಿಂದೆ ಆಗಿ ಹೋಗಿದ್ದ ತಪ್ಪುಗಳನ್ನು ಅಲ್ಲಾಹನು ಕ್ಷಮಿಸಿರುವನು. ಅದರ ಬಗ್ಗೆ ವಿಚಾರಣೆ ನಡೆಯದು. ಅದರ ಎರಡನೆಯ ಅರ್ಥ- ಅಲ್ಲಾಹನು ತಿಳಿಯದೆ ಮಾಡಿದ ತಪ್ಪಿಗೆ ಶಿಕ್ಷಿಸುವವನಲ್ಲ. ಆದರೆ ಬಾಹ್ಯ ನೋಟಕ್ಕೆ ತಪ್ಪೆಂದು ತೋರುವಂತಹ ಒಂದು ಮಾತನ್ನು ಆಡಿದರೂ ಅದರ ಹಿಂದೆ ಕೆಟ್ಟ ಸಂಕಲ್ಪವಿಲ್ಲದಿದ್ದರೆ, ಕೇವಲ ಬಾಹ್ಯ ರೂಪದ ಆಧಾರದಲ್ಲಿ ಅಲ್ಲಾಹನು ಶಿಕ್ಷಿಸಲಾರನು ಎಂದಾಗಿದೆ.

بِالْمُؤْمِنِيْنَ مِنْ اَنْفُسِهِمْ وَ اَزْوَاجُهٗۤ اُمَّهٰتُهُمْ ؕ وَ اُولُوا الْاَرْحَامِ بَعْضُهُمْ اَوْلٰى
بِبَعْضٍ فِىْ كِتٰبِ اللّٰهِ مِنَ الْمُؤْمِنِيْنَ وَ الْمُهٰجِرِيْنَ اِلَّاۤ اَنْ تَفْعَلُوْۤا اِلٰۤى اَوْلِيٰٓئِكُمْ

**(6) ನಿಶ್ಚಯವಾಗಿಯೂ ಪ್ರವಾದಿಯು ಸತ್ಯವಿಶ್ವಾಸಿಗಳಿಗೆ ಅವರ ಸ್ವಂತ ಅಸ್ತಿತ್ವಕ್ಕಿಂತಲೂ ಪ್ರಧಾನರಾಗಿದ್ದಾರೆ[12] ಮತ್ತು ಪ್ರವಾದಿಯ ಪತ್ನಿಯರು ಅವರ ಮಾತೆಯರಾಗಿದ್ದಾರೆ. [13] ಆದರೆ ದೇವ ಗ್ರಂಥದ ದೃಷ್ಟಿಯಿಂದ ಸಾಮಾನ್ಯ ಸತ್ಯವಿಶ್ವಾಸಿಗಳು**

---

12 ಅಂದರೆ ಪ್ರವಾದಿಯವರ(ಸ) ಸಂಬಂಧವು ಮುಸ್ಲಿಮರೊಂದಿಗೆ ಮತ್ತು ಮುಸ್ಲಿಮರ ಸಂಬಂಧವು ಪ್ರವಾದಿವರ್ಯರೊಂದಿಗೆ(ಸ) ಇತರೆಲ್ಲ ಮಾನವೀಯ ಸಂಬಂಧಗಳಿಗಿಂತಲೂ ಉನ್ನತ ಮಟ್ಟದ್ದಾಗಿದೆ. ಯಾವ ಕೌಟುಂಬಿಕ ಮತ್ತು ಇತರ ಸಂಬಂಧಗಳೂ ಪ್ರವಾದಿ(ಸ) ಮತ್ತು ಮುಸ್ಲಿಮರ ಸಂಬಂಧಕ್ಕೆ ಸಮನಾದುದಲ್ಲ. ಮುಸ್ಲಿಮರ ಮಟ್ಟಿಗೆ ಪ್ರವಾದಿವರ್ಯರು(ಸ) ಅವರ ಹೆತ್ತವರಿಗಿಂತಲೂ ಅಧಿಕ ದಯೆ-ಕರುಣೆಯುಳ್ಳವರು ಮತ್ತು ಅವರ ಸ್ವದೇಹಕ್ಕಿಂತಲೂ ಅಧಿಕ ಹಿತಚಿಂತಕರಾಗಿದ್ದಾರೆ. ಅವರ ತಂದೆ-ತಾಯಿಗಳು ಮತ್ತು ಮಡದಿ-ಮಕ್ಕಳು ಅವರಿಗೆ ಹಾನಿ ಮಾಡಬಲ್ಲರು. ಅವರೊಂದಿಗೆ ಸ್ವಾರ್ಥ ತೋರಬಲ್ಲರು. ಅವರನ್ನು ದಾರಿಗೆಡಿಸಬಲ್ಲರು. ಅವರಿಂದ ತಪ್ಪು ಕೆಲಸ ಮಾಡಿಸಬಲ್ಲರು. ಅವರನ್ನು ನರಕಕ್ಕೊಯ್ಯಬಲ್ಲರು. ಆದರೆ ಪ್ರವಾದಿವರ್ಯರು(ಸ) ಅವರನ್ನು ನೈಜ ಯಶಸ್ಸಿಗೊಯ್ಯಬಲ್ಲಂತಹ ಮಾತನ್ನೇ ಆಡುವರು. ಅವರು ತಮ್ಮ ಕಾಲಿಗೆ ತಾವೇ ಕೊಡಲಿ ಹಾಕಬಹುದು. ಮೂರ್ಖತನದಿಂದ ತಮಗೆ ತಾವೇ ನಷ್ಟ ತಂದುಕೊಳ್ಳಬಹುದು. ಆದರೆ ಪ್ರವಾದಿವರ್ಯರು(ಸ) ಅವರಿಗೆ ಲಾಭದಾಯಕವಾದ ಬೋಧನೆಯನ್ನೇ ನೀಡುವರು. ವಸ್ತುಸ್ಥಿತಿ ಈ ರೀತಿಯಿರುವಾಗ ಮುಸ್ಲಿಮರು ಪ್ರವಾದಿವರ್ಯರನ್ನು(ಸ) ತಮ್ಮ ತಂದೆ ತಾಯಿಗಳು, ಮಡದಿ, ಸಂತಾನ ಹಾಗೂ ತಮ್ಮ ಸ್ವಜೀವಕ್ಕಿಂತಲೂ ಹೆಚ್ಚು ಪ್ರೀತಿಸಬೇಕಾದುದು, ಲೋಕದ ಎಲ್ಲ ವಸ್ತುಗಳಿಗಿಂತಲೂ ಹೆಚ್ಚಿನ ಪ್ರೀತಿ ಪ್ರವಾದಿವರ್ಯರೊಂದಿಗಿರಿಸಬೇಕಾದುದು, ತಮ್ಮ ಅಭಿಪ್ರಾಯಕ್ಕಿಂತ ಪ್ರವಾದಿವರ್ಯರ(ಸ) ಅಭಿಪ್ರಾಯಕ್ಕೆ ಮತ್ತು ತಮ್ಮ ತೀರ್ಮಾನಕ್ಕಿಂತ ಪ್ರವಾದಿವರ್ಯರ(ಸ) ತೀರ್ಮಾನಕ್ಕೆ ಪ್ರಾಶಸ್ತ್ಯ ನೀಡಬೇಕಾದುದು ಹಾಗೂ ಪ್ರವಾದಿಯವರ(ಸ) ಎಲ್ಲ ಆಜ್ಞೆಗಳನ್ನೂ ಶಿರಸಾ ಪಾಲಿಸಬೇಕಾದುದು ಪ್ರವಾದಿವರ್ಯರ(ಸ) ಹಕ್ಕಾಗಿರುತ್ತದೆ.

ಇದೇ ವಿಷಯವನ್ನು ಪ್ರವಾದಿವರ್ಯರು(ಸ) ಒಂದು ಹದೀಸ್‌ನಲ್ಲಿ ಹೀಗೆ ವಿವರಿಸಿದ್ದಾರೆ, "ನಿಮ್ಮ ಪೈಕಿ ಯಾರೂ ತಮ್ಮ ತಂದೆ, ಸಂತಾನ ಹಾಗೂ ಲೋಕದ ಇತರೆಲ್ಲ ಮಾನವರಿಗಿಂತಲೂ ಹೆಚ್ಚಾಗಿ ನನ್ನನ್ನು ಪ್ರೀತಿಸುವ ವರೆಗೆ ಸತ್ಯವಿಶ್ವಾಸಿಯಾಗಲಾರರು." ಇದನ್ನು ಬುಖಾರಿ ಮತ್ತಿತರ ಹದೀಸ್ ವಿದ್ವಾಂಸರು ಅಲ್ಪಸ್ವಲ್ಪ ಪದ ವ್ಯತ್ಯಾಸಗಳೊಂದಿಗೆ ಉಲ್ಲೇಖಿಸಿದ್ದಾರೆ.

13. ಪ್ರಸ್ತುತ ವೈಶಿಷ್ಟ್ಯಗಳಿಂದಾಗಿ ಪ್ರವಾದಿಯವರ(ಸ) ಪತ್ನಿಯರು ಮುಸ್ಲಿಮರ ಪಾಲಿಗೆ ಅವರ ನೈಜ ತಾಯಂದಿರಂತೆಯೇ ಹರಾಮ್ ಆಗಿರುವರು. ಆದರೆ ಮುಸ್ಲಿಮರಲ್ಲಿ ಸಾಕು ತಾಯಂದಿರು ನೈಜ ತಾಯಂದಿರಂತಲ್ಲ. ಪ್ರವಾದಿ ಪತ್ನಿಯರು ನೈಜ ತಾಯಂದಿರಂತೆ ಎಂಬ ಈ ವಿಶೇಷತೆಯು ಪ್ರವಾದಿಯವರ(ಸ) ಹೊರತು ಲೋಕದ ಇತರ ಯಾರಿಗೂ ಪ್ರಾಪ್ತವಿಲ್ಲ.

ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಪ್ರವಾದಿ ಪತ್ನಿಯರನ್ನು ಗೌರವಿಸಬೇಕಾದುದು ಮುಸ್ಲಿಮರಿಗೆ ಕಡ್ಡಾಯ. ಅವರೊಂದಿಗೆ ಯಾವ ಮುಸ್ಲಿಮನೂ ವಿವಾಹವಾಗುವಂತಿಲ್ಲ. ಈ ನೆಲೆಯಲ್ಲಿ ಅವರು ಸತ್ಯವಿಶ್ವಾಸಿಗಳ ತಾಯಂದಿರಾಗಿದ್ದಾರೆ. ಇನ್ನಿತರ ನೆಲೆಯಲ್ಲಿ ಅವರು ತಾಯಂದಿರಂತಲ್ಲ. ಉದಾ: ಅವರ ನೈಜ ಸಂಬಂಧಿಕರ ಹೊರತು ಇತರೆಲ್ಲ ಮುಸ್ಲಿಮರ ಮುಂದೆ ಅವರು ಪರ್ದಾ ನಿಯಮವನ್ನು ಪಾಲಿಸುವುದು ಕಡ್ಡಾಯವಾಗಿತ್ತು. ಅವರ ಪುತ್ರಿಯರು, ಮುಸ್ಲಿಮರು ವಿವಾಹ ಮಾಡಬಾರದಂತಹ ಸಹೋದರಿಯರಲ್ಲ. ಅವರ ಸಹೋದರ-ಸಹೋದರಿಯರು ಮುಸ್ಲಿಮರ ಪಾಲಿಗೆ ಮಾವ-ಚಿಕ್ಕಮ್ಮರಂತಲ್ಲ. ಒಬ್ಬ ವ್ಯಕ್ತಿಗೆ ತನ್ನ ತಾಯಿಯ ವಾರೀಸು ಸೊತ್ತಿನಲ್ಲಿ ಪಾಲು ದೊರೆಯುವಂತೆ ಅವರ ಸಂಬಂಧಿಕರಲ್ಲದ ಮುಸ್ಲಿಮರಿಗೆ ಅವರ ಸೊತ್ತಿನ ಪಾಲು ದೊರೆಯಲಾರದು.

ಇನ್ನೂ ಒಂದು ವಿಷಯ ಇಲ್ಲಿ ಗಮನಾರ್ಹವಾಗಿದೆ. ಕುರ್‌ಆನಿನ ಪ್ರಕಾರ ಈ ಸ್ಥಾನಮಾನವು ಪ್ರವಾದಿಯವರ(ಸ) ಎಲ್ಲ ಪತ್ನಿಯರಿಗೂ ಇದೆ. ಇವರಲ್ಲಿ ಹ. ಆಯಿಶಾ ಕೂಡಾ ಸೇರಿದ್ದಾರೆ. ಆದರೆ ಒಂದು ವಿಭಾಗದವರು ಹ. ಅಲೀ-ಫಾತಿಮಾ ದಂಪತಿಗಳನ್ನೂ ಅವರ ಸಂತಾನವನ್ನೂ ಧರ್ಮದ ಕೇಂದ್ರವಾಗಿ ಮಾಡಿ ಧಾರ್ಮಿಕ ಆಚಾರಗಳನ್ನೆಲ್ಲ ಅವರಿಗೇ ಸಂಬಂಧಿಸಿ, ಇತರ ಸಹಾಬಿಗಳ ಜೊತೆಯಲ್ಲಿ ಹ. ಆಯಿಶಾರನ್ನೂ ನಿಂದಿಸಲು ಮತ್ತು ಅವಮಾನಿಸಲು ನಿಂತಾಗ, ಅವರಿಗೆ ಕುರ್‌ಆನಿನ ಈ ಸೂಕ್ತ ಅಡ್ಡಿಯಾಗುತ್ತದೆ. ಅದರ ಪ್ರಕಾರ ಸತ್ಯವಿಶ್ವಾಸಿಯೆಂದು ವಾದಿಸುವ ಪ್ರತಿಯೊಬ್ಬನೂ ಅವರನ್ನು ಮಾತೆಯೆಂದು ಅಂಗೀಕರಿಸಬೇಕಾಗುತ್ತದೆ. ಈ ತೊಡಕನ್ನು ನಿವಾರಿಸಲು ವಿಲಕ್ಷಣವಾದವನ್ನು ಮುಂದಿಡಲಾಯಿತು. ಅದೇನೆಂದರೆ, ತಮ್ಮ ಬಳಿಕ ತಮ್ಮ ಪತ್ನಿಯರ ಪೈಕಿ ಬೇಕಾದವರನ್ನು ತನ್ನ ಬಳಿಯಿರಿಸುವಂತೆಯೂ ಉಳಿದವರಿಗೆ ತಮ್ಮ ಪರವಾಗಿ ತಲಾಕ್ ಕೊಡುವಂತೆಯೂ ಪ್ರವಾದಿ(ಸ) ಅಲೀಯವರಿಗೆ ಅಧಿಕಾರ ಕೊಟ್ಟಿದ್ದರು. ಅಬೂ ಮನ್ಸೂರ್ ಅಹ್ಮದ್ ಬಿನ್ ಅಬೂ ತಾಲಿಬ್ ತಬ್ರಸಿಯವರು 'ಕಿತಾಬುಲ್ ಇಹ್ತಿಜಾಜ್' ಎಂಬ ಗ್ರಂಥದಲ್ಲಿ ಬರೆದಿರುವುದನ್ನು ಸುಲೈಮಾನ್ ಬಿನ್ ಅಬ್ದುಲ್ಲಾ ಅಲ್ ಬಹ್ರಾನಿ ಹೀಗೆ ಉಲ್ಲೇಖಿಸಿದ್ದಾರೆ, "ಪ್ರವಾದಿ(ಸ) ಅಲೀಯವರೊಡನೆ ಹೀಗೆಂದರು, ಅಬುಲ್ ಹಸನ್! ಈ ವಿಶೇಷತೆಯು ನಾವು ಅಲ್ಲಾಹನ ಅನುಸರಣೆಯಲ್ಲಿರುವ ಕಾಲದ ವರೆಗೆ ಮಾತ್ರವಿರುವುದು. ಆದುದರಿಂದ ನನ್ನ ನಂತರ ನನ್ನ ಪತ್ನಿಯರ ಪೈಕಿ ಯಾರೂ ನಿನ್ನ ವಿರುದ್ಧ ಬಂಡೆದ್ದು ಅಲ್ಲಾಹನ ಆಜ್ಞೋಲ್ಲಂಘನೆ ಮಾಡುವರೋ ಅವರಿಗೆ ತಲಾಕ್ ಕೊಡು. ಅವರನ್ನು ಸತ್ಯವಿಶ್ವಾಸಿಗಳ ಮಾತೆಯರೆಂಬ ಸ್ಥಾನದಿಂದ ಪದಚ್ಯುತಗೊಳಿಸು."

ಹದೀಸ್ ವರದಿಶಾಸ್ತ್ರ ನಿಯಮದ ಪ್ರಕಾರ ಈ ವರದಿಗೆ ತಲೆಬುಡವಿಲ್ಲ. ಇದೇ ಅಧ್ಯಾಯದ 28-29 ಮತ್ತು 51-52ನೆಯ ಸೂಕ್ತಗಳನ್ನು ಗಮನಿಸಿದರೆ ಈ ವರದಿ ಕುರ್‌ಆನಿಗೂ ವಿರುದ್ಧವಾಗಿದೆಯೆಂದು ವ್ಯಕ್ತವಾಗುತ್ತದೆ. ಏಕೆಂದರೆ 'ತಖ್‌ಈರ್'ನ ಸೂಕ್ತ ಅವತೀರ್ಣಗೊಂಡ ಬಳಿಕ ಪ್ರವಾದಿ ಪತ್ನಿಯರು ಯಾವ ಅವಸ್ಥೆಯಲ್ಲೂ ತಮ್ಮ ದಾಂಪತ್ಯವನ್ನು ಪ್ರವಾದಿವರ್ಯರೊಂದಿಗೇ ಮುಂದುವರಿಸುವ ಇಚ್ಛೆ ವ್ಯಕ್ತಪಡಿಸಿದ್ದಾಗ ಅವರಿಗೆ ತಲಾಕ್ ನೀಡುವ ಅಧಿಕಾರ ಪ್ರವಾದಿವರ್ಯರಿಗೆ(ಸ) ಇಲ್ಲದಾಯಿತು. ಈ ವಿಷಯದ ವಿವರಣೆಯು ಮುಂದೆ 42 ಮತ್ತು 92ನೆಯ ಟಿಪ್ಪಣಿಗಳಲ್ಲಿ ಬರಲಿದೆ.

ಅದಲ್ಲದೆ ಓರ್ವ ನಿಷ್ಪಕ್ಷಪಾತಿ ವ್ಯಕ್ತಿಯು ಕೇವಲ ಬುದ್ಧಿ ಉಪಯೋಗಿಸಿ ಈ ವರದಿಯ ವಿಷಯಗಳನ್ನು ಗಮನಿಸಿದಾಗ ಅದು ಅಪ್ಪಟ ಸುಳ್ಳು ಮತ್ತು ಪ್ರವಾದಿವರ್ಯರ(ಸ) ಮೇಲೆ

مَّعْرُوفًا ۚ كَانَ ذَٰلِكَ فِي الْكِتَابِ مَسْطُورًا ۝ وَإِذْ أَخَذْنَا مِنَ النَّبِيِّينَ مِيثَاقَهُمْ

**ಹಾಗೂ ಮುಹಾಜಿರರಿಗಿಂತಲೂ ಸಂಬಂಧಿಕರು ಪರಸ್ಪರರ ಪಾಲಿಗೆ ಅಧಿಕ ಹಕ್ಕುದಾರರಾಗಿದ್ದಾರೆ. ಆದರೆ, ತಮ್ಮ ಮಿತ್ರರೊಂದಿಗೆ ನೀವೇನಾದರೂ ಒಳಿತು (ಮಾಡಲಿಚ್ಛಿಸುತ್ತೀರಾದರೆ) ಮಾಡಬಹುದು.[14] ಈ ಆಜ್ಞೆಯು ದೇವ ಗ್ರಂಥದಲ್ಲಿ ಬರೆದಿದೆ.**

---

ಮಾಡಲಾದ ಅತ್ಯಂತ ನಿಂದನೀಯ ಅಪವಾದವೆಂಬುದನ್ನು ಸ್ಪಷ್ಟವಾಗಿ ಕಾಣಬಲ್ಲನು. ಪ್ರವಾದಿಯ ಸ್ಥಾನವು ಅತ್ಯುನ್ನತವಾದುದು. ಓರ್ವ ಸಾಮಾನ್ಯ ಸಭ್ಯ ವ್ಯಕ್ತಿಯಿಂದ ಕೂಡಾ, ಆತ ತನ್ನ ಮರಣದ ಬಳಿಕ ತನ್ನ ಪತ್ನಿಗೆ ತಲಾಕ್ ಕೊಡುವ ಚಿಂತೆಯಲ್ಲಿರುವನು ಮತ್ತು ಇಹಲೋಕದಿಂದ ನಿರ್ಗಮಿಸುವಾಗ ತನ್ನ ಅಳಿಯನೊಂದಿಗೆ, ಎಂದಾದರೂ ತನ್ನ ಪತ್ನಿಯೊಂದಿಗೆ ನಿನ್ನ ಜಗಳವಾದರೆ ನನ್ನ ಪರವಾಗಿ ಆಕೆಗೆ ತಲಾಕ್ ನೀಡಲು ಅಧಿಕಾರ ಕೊಡಬಲ್ಲನೆಂದು ಊಹಿಸುವುದೂ ಸಾಧ್ಯವಿಲ್ಲ. ಇದರಿಂದ ತಿಳಿದು ಬರುವುದೇನೆಂದರೆ, ಅಹ್ಲುಬೈತ್(ಪ್ರವಾದಿಯ ಕುಟುಂಬ)ನೊಂದಿಗೆ ಪ್ರೀತಿಯಿದೆಯೆಂದು ವಾದಿಸುವವರ ಮನಸ್ಸಿನಲ್ಲಿ ಪ್ರವಾದಿಯವರ(ಸ) ಸ್ಥಾನಮಾನ ಎಷ್ಟಿದೆ ಮತ್ತು ಅದಕ್ಕಿಂತಲೂ ಮಿಗಿಲಾಗಿ ಅಲ್ಲಾಹನ ಮಾತಿಗೇ ಅವರು ಎಷ್ಟು ಬೆಲೆ ಕೊಡುತ್ತಾರೆ ಎಂಬುದನ್ನು ಊಹಿಸಬಹುದು.

14. ಪ್ರವಾದಿ(ಸ) ಅವರೊಂದಿಗೆ ಮುಸ್ಲಿಮರ ಸಂಬಂಧದ ಸ್ವರೂಪ ಇತರೆಲ್ಲಾ ಸಂಬಂಧಗಳಿಗಿಂತಲೂ ವಿಶಿಷ್ಟವಾಗಿದೆಯೆಂದು ಈ ಸೂಕ್ತದಲ್ಲಿ ತಿಳಿಸಲಾಗಿದೆ. ಆದರೆ ಸಾಮಾನ್ಯ ಮುಸ್ಲಿಮರ ನಡುವೆ ಇರುವ ಸಂಬಂಧವು, ಸಂಬಂಧಿಕರ ಹಕ್ಕುಗಳು ಇತರರಿಗೆ ಪರಸ್ಪರರ ಮೇಲಿರುವ ಹಕ್ಕುಗಳಿಗಿಂತ ವಿಶಿಷ್ಟವಾಗಿದೆ ಎಂಬ ತತ್ವವನ್ನು ಆಧರಿಸಿದೆ. ಒಬ್ಬನು ದಾನ ಮಾಡುವಾಗ, ತನ್ನ ತಂದೆ-ತಾಯಿ, ಮಡದಿ-ಮಕ್ಕಳು ಮತ್ತು ಸಹೋದರ-ಸಹೋದರಿಯರನ್ನು ಕಡೆಗಣಿಸಿ ಹೊರಗಿನವರಿಗೆ ದಾನ ಮಾಡುತ್ತಾ ಇದ್ದರೆ ಅಂತಹ ದಾನ ಸರಿಯಾಗಲಾರದು. ಝಕಾತ್ ನೀಡುವಾಗಲೂ ಮೊದಲು ತನ್ನ ಹತ್ತಿರದ ಬಡ ಸಂಬಂಧಿಕರಿಗೆ ನೀಡಬೇಕು. ಅನಂತರ ಇತರ ಅಪೇಕ್ಷಿತರಿಗೆ ನೀಡಬೇಕು. ವಾರೀಸು ಸೊತ್ತು ಕೂಡಾ ಒಬ್ಬನ ಅತಿ ಹತ್ತಿರದ ಸಂಬಂಧಿಕನಿಗೇ ಕಡ್ಡಾಯವಾಗಿ ಹೋಗುವುದು. ಇತರರಿಗೆ ಅವನು ಬಯಸಿದರೆ ಉಡುಗೊರೆ, ದತ್ತಿ ಅಥವಾ ಉಯಿಲಿನ ಮೂಲಕ ತನ್ನ ಸೊತ್ತನ್ನು ನೀಡಬಹುದು. ಆದರೆ ವಾರೀಸುದಾರರನ್ನು ವಂಚಿಸಿ ಇತರರಿಗೆ ಎಲ್ಲವನ್ನೂ ಕೊಟ್ಟು ಬಿಡಬಾರದು. ಈ ಆದೇಶದಿಂದ ಹಿಜ್ರತ್‌ನ ನಂತರ ಮುಹಾಜಿರ್ ಮತ್ತು ಅನ್ಸಾರರ (ಮದೀನಾದಿಂದ ವಲಸೆ ಬಂದವರು ಮತ್ತು ಮದೀನಾದ ಮಣ್ಣಿನ ಮಕ್ಕಳು) ನಡುವೆ ಏರ್ಪಡಿಸಲಾಗಿದ್ದ ಭ್ರಾತೃತ್ವ ಸಂಬಂಧದಿಂದಾಗಿ ಆರಂಭಗೊಂಡಿದ್ದ ಆ ಸಂಪ್ರದಾಯವೂ ಅನೂರ್ಜಿತಗೊಂಡಿತು. ಅದರ ಪ್ರಕಾರ ಮುಹಾಜಿರ್ ಮತ್ತು ಅನ್ಸಾರರು ಕೇವಲ ಧಾರ್ಮಿಕ ಸಂಬಂಧದಿಂದಾಗಿ ಪರಸ್ಪರ ವಾರೀಸುದಾರರೆಂದು ಪರಿಗಣಿಸಲಾಗುತ್ತಿತ್ತು. ಅಲ್ಲಾಹನು ಇಲ್ಲಿ ವಾರೀಸು ಸೊತ್ತನ್ನು ಕೇವಲ ಕುಟುಂಬ ಸಂಬಂಧದ ಆಧಾರದಲ್ಲೇ ವಿತರಣೆ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಓರ್ವನು ದಾನ, ಉಡುಗೊರೆ ಅಥವಾ ಉಯಿಲಿನ ಮೂಲಕ ತನ್ನ ಧಾರ್ಮಿಕ ಸಹೋದರನಿಗೆ ಏನಾದರೂ ಸಹಾಯ ಮಾಡಬಯಸಿದರೆ ಹಾಗೆ ಮಾಡಬಹುದು.

وَمِنْكَ وَمِنْ نُّوْحٍ وَّاِبْرٰهِيْمَ وَمُوْسٰى وَعِيْسَى ابْنِ مَرْيَمَ ۖ وَاَخَذْنَا مِنْهُمْ
مِّيْثَاقًا غَلِيْظًا ۙ لِّيَسْـَٔلَ الصّٰدِقِيْنَ عَنْ صِدْقِهِمْ ۚ وَاَعَدَّ لِلْكٰفِرِيْنَ عَذَابًا

**(7-8)** ಮತ್ತು (ಪೈಗಂಬರರೇ) ನಾವು ಎಲ್ಲ ಪ್ರವಾದಿಗಳಿಂದ ಪಡೆದಿರುವ ಕರಾರನ್ನು ನೆನಪಿಡಿರಿ. ನಿಮ್ಮಿಂದಲೂ ನೂಹ್, ಇಬ್‌ರಾಹೀಮ್, ಮೂಸಾ ಮತ್ತು ಮರ್ಯಮರ ಪುತ್ರ ಈಸಾರಿಂದಲೂ -ಎಲ್ಲರಿಂದಲೂ ನಾವು ಬಲವಾದ ಕರಾರನ್ನು ಪಡೆದಿರುತ್ತೇವೆ.[15] (ಇದು, ಅವರ ಪ್ರಭು) ಸತ್ಯಸಂಧರಿಂದ ಅವರ ಸತ್ಯಸಂಧತೆಯ

---

15. ಈ ಸೂಕ್ತದಲ್ಲಿ ಅಲ್ಲಾಹನು ಎಲ್ಲ ಪ್ರವಾದಿಗಳಿಂದಲೂ ಬಲವಾದ ಕರಾರನ್ನು ಪಡೆದಂತೆ ತಮ್ಮಿಂದಲೂ ಒಂದು ಬಲವಾದ ಕರಾರನ್ನು ಪಡೆದಿದ್ದಾನೆಂದೂ ಅದನ್ನು ತಾವು ಕಟ್ಟುನಿಟ್ಟಾಗಿ ಪಾಲಿಸಬೇಕೆಂದೂ ಅಲ್ಲಾಹನು ಪ್ರವಾದಿವರ್ಯರಿಗೆ(ಸ) ನೆನಪಿಸಿ ಕೊಡುತ್ತಿದ್ದಾನೆ. ಅದು ಯಾವ ಕರಾರು? ಮೇಲಿನ ವಾಕ್ಸರಣಿಯನ್ನು ಗಮನಿಸುವಾಗ ತಿಳಿದು ಬರುವ ಅಂಶವೇನೆಂದರೆ ಪ್ರವಾದಿಯು ಅಲ್ಲಾಹನ ಎಲ್ಲ ಆಜ್ಞೆ ಆದೇಶಗಳನ್ನು ಸ್ವಯಂ ಪಾಲಿಸುವರು. ಇತರರು ಅದನ್ನು ಅನುಸರಿಸುವಂತೆ ಮಾಡುವರು, ಅಲ್ಲಾಹನ ಮಾತುಗಳನ್ನು ಯಾವುದೇ ಹೆಚ್ಚು ಕಡಿಮೆಯಿಲ್ಲದೆ ಮುಟ್ಟಿಸುವರು ಮತ್ತು ಅದನ್ನು ಕಾರ್ಯತಃ ಜಾರಿಗೊಳಿಸುವ ಪ್ರಯತ್ನದಲ್ಲಿ ಯಾವುದೇ ಲೋಪ ಮಾಡಲಾರರು ಎಂಬುದೇ ಆ ಕರಾರಾಗಿದೆ. ಈ ಕರಾರಿನ ಪ್ರಸ್ತಾಪವು ಕುರ್‌ಆನಿನಲ್ಲಿ ಅನೇಕ ಕಡೆಯಿದೆ. ಉದಾ:

"ಅಲ್ಲಾಹನು ನೂಹರಿಗೆ ಅಜ್ಞಾಪಿಸಿದ್ದ ಧರ್ಮವಿಧಾನವನ್ನೇ ನಿಮಗಾಗಿಯೂ ನಿಶ್ಚಯಿಸಿಕೊಟ್ಟಿದ್ದಾನೆ ಮತ್ತು ಈಗ ನಾವು ಅದನ್ನೇ ದಿವ್ಯವಾಣಿಯ ಮೂಲಕ ನಿಮ್ಮ ಕಡೆಗೆ ಕಳಿಸಿರುತ್ತೇವೆ. ಇದನ್ನೇ ನಾವು ಇಬ್‌ರಾಹೀಮ್, ಮೂಸಾ ಮತ್ತು ಈಸಾರಿಗೂ ಬೋಧಿಸಿದ್ದೆವು. ಈ ಧರ್ಮವನ್ನು ಸಂಸ್ಥಾಪಿಸಿರಿ ಮತ್ತು ಇದರಲ್ಲಿ ಭಿನ್ನರಾಗದಿರಿ ಎಂಬ ಆದೇಶದೊಂದಿಗೆ."

**(42:13)**

"ಅಲ್ಲಾಹನು ಗ್ರಂಥದವರಿಂದ, 'ನೀವು ಗ್ರಂಥದ ಬೋಧನೆಯನ್ನು ಜನರಿಗೆ ಪ್ರಸಾರ ಮಾಡಬೇಕು ಮತ್ತು ಅದನ್ನು ಅಡಗಿಸಬಾರದು' ಎಂಬ ಕರಾರನ್ನು ಪಡೆದ ಸಂದರ್ಭವನ್ನು ಸ್ಮರಿಸಿರಿ."

**(3:187)**

"ಅಲ್ಲಾಹನ ಹೊರತು ಬೇರೆ ಯಾರ ದಾಸ್ಯ-ಆರಾಧನೆಯನ್ನೂ ಮಾಡಬಾರದೆಂದು... ನಾವು ಬನೀ ಇಸ್ರಾಈಲರಿಂದ ಕರಾರನ್ನು ಪಡೆದ ಸಂದರ್ಭವನ್ನು ಸ್ಮರಿಸಿರಿ."

**(2:83)**

"ಅವರಿಂದ ಗ್ರಂಥದ ಕರಾರನ್ನು ಪಡೆದಿರಲಿಲ್ಲವೆ?......"

**(7:169)**

"ನಾವು ನಿಮಗೆ ಕೊಡುತ್ತಿರುವ ಗ್ರಂಥವನ್ನು ಬಿಗಿಯಾಗಿ ಹಿಡಿಯಿರಿ ಮತ್ತು ಅದರಲ್ಲಿ ಬರೆದಿರುವುದನ್ನು ನೆನಪಿಟ್ಟುಕೊಳ್ಳಿರಿ. ಅದರಿಂದ ನೀವು ಧರ್ಮನಿಷ್ಠರಾಗಲೂ ಬಹುದೆಂದು ನಾವು ಅವರೊಡನೆ ಹೇಳಿರಲಿಲ್ಲವೆ." **(7:171)**

"ಅಲ್ಲಾಹನು ನಿಮ್ಮ ಮೇಲೆ ಮಾಡಿದ ಅನುಗ್ರಹವನ್ನೂ ನಿಮ್ಮಿಂದ ಪಡೆದಿರುವ 'ನಾವು ಆಲಿಸಿದೆವು ಮತ್ತು ಅನುಸರಣೆಗೆ ಒಪ್ಪಿದೆವು' ಎಂಬ ಬಲವಾದ ಕರಾರನ್ನೂ ನೆನಪಿಸಿರಿ." (5:7)

ಆ ಕರಾರನ್ನು ಈ ಹಿನ್ನೆಲೆಯಲ್ಲಿ ಅಲ್ಲಾಹನು ಏಕೆ ನೆನಪಿಸುತ್ತಿದ್ದಾನೆಂದರೆ ಪ್ರವಾದಿವರ್ಯರು(ಸ), ವೈರಿಗಳು ಮೂದಲಿಸುವರೆಂಬ ಭೀತಿಯಿಂದ ದತ್ತು ಸಂಬಂಧಗಳ ಬಗೆಗಿನ ಅಜ್ಞಾನ ಕಾಲದ ಸಂಪ್ರದಾಯವನ್ನು ಮುರಿಯಲು ಹಿಂಜರಿಯುತ್ತಿದ್ದರು. ಪ್ರವಾದಿವರ್ಯರಿಗೆ(ಸ) ಇದು ಓರ್ವ ಮಹಿಳೆಯೊಂದಿಗೆ ವಿವಾಹವಾಗುವ ವಿಷಯವಾಗಿದ್ದು ತಾನೆಷ್ಟೇ ಪ್ರಾಮಾಣಿಕತೆಯೊಂದಿಗೆ ಸಮಾಜ ಸುಧಾರಣೆಯ ದೃಷ್ಟಿಯಿಂದ ಮಾಡಿದರೂ ವೈರಿಗಳು ಇದು ತನ್ನ ಸ್ವಾರ್ಥಕ್ಕೆಂದೂ ಕೇವಲ ಮೋಸಗೊಳಿಸಲಿಕ್ಕಾಗಿ ವಂಚಕನ ವೇಷ ತೊಟ್ಟಿದ್ದಾನೆಂದೂ ಹೇಳದಿರಲಾರರೆಂಬ ಆಶಂಕೆ ಪದೇ ಪದೇ ಮೂಡುತ್ತಿತ್ತು. ಆದುದರಿಂದಲೇ ಅಲ್ಲಾಹನು ಪ್ರವಾದಿಯವರಿಗೆ(ಸ) ಹೀಗೆ ಬೋಧಿಸುತ್ತಿದ್ದಾನೆ-ನಿಮ್ಮನ್ನು ಪ್ರವಾದಿಯಾಗಿ ನೇಮಿಸಿರುವುದು ನಾವು. ಇತರೆಲ್ಲ ಪ್ರವಾದಿಗಳೊಂದಿಗೆ ಮಾಡಿದಂತೆಯೇ ನಿಮ್ಮೊಂದಿಗೂ ನೀವು ನಮ್ಮ ಆಜ್ಞೆಯನ್ನು ಪಾಲಿಸಬೇಕು ಮತ್ತು ಇತರರನ್ನು ಪಾಲಿಸುವಂತೆ ಮಾಡಬೇಕು ಎಂಬ ಬಲವಾದ ಒಪ್ಪಂದವಿದೆ. ಆದುದರಿಂದ ನೀವು ಯಾರದೇ ಮೂದಲಿಕೆಯ ಮಾತುಗಳನ್ನು ಲೆಕ್ಕಿಸಬಾರದು. ನಾಚಿಕೆ ಪಡಬಾರದು ಮತ್ತು ಹೆದರಬಾರದು. ನಾವು ನಿಮ್ಮಿಂದ ಬಯಸುವ ಕಾರ್ಯವನ್ನು ಸಂಕೋಚವಿಲ್ಲದೆ ಈಡೇರಿಸಬೇಕು.

ಒಂದು ವರ್ಗವು ಇಲ್ಲಿ ಒಪ್ಪಂದವೆಂದರೆ ಪ್ರವಾದಿಯವರಿಗಿಂತ(ಸ) ಮುಂಚೆ ಬರುವ ಎಲ್ಲ ಪ್ರವಾದಿಗಳೊಂದಿಗೂ ಅವರ ಸಮುದಾಯಗಳೊಂದಿಗೂ ಅವರು ಅವರ ನಂತರ ಬರುವ ಪ್ರವಾದಿಯ ಮೇಲೆ ವಿಶ್ವಾಸವಿರಿಸಿ, ಅವರನ್ನು ಬೆಂಬಲಿಸುವೆವೆಂಬ ಒಪ್ಪಂದವೆಂದು ಹೇಳುತ್ತಾರೆ. ಈ ಸಮರ್ಥನೆಯ ಆಧಾರದಲ್ಲಿ ಪ್ರವಾದಿಯವರ(ಸ) ನಂತರವೂ ಪ್ರವಾದಿತ್ವದ ಬಾಗಿಲು ತೆರೆದಿದೆ, ಪ್ರವಾದಿವರ್ಯರಿಂದಲೂ(ಸ) ತಮ್ಮ ಬಳಿಕ ಬರುವ ಪ್ರವಾದಿಯ ಮೇಲೆ ತಮ್ಮ ಸಮುದಾಯ ವಿಶ್ವಾಸವಿರಿಸಬೇಕೆಂಬ ಕರಾರು ಪಡೆಯಲಾಗಿತ್ತೆಂಬುದು ಆ ವರ್ಗದ ವಾದ. ಆದರೆ ಸೂಕ್ತದ ಹಿನ್ನೆಲೆಯು ಈ ಸಮರ್ಥನೆ ಸರಿಯಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತದೆ. ಯಾವ ವಾಕ್ಸರಣಿಯಲ್ಲಿ ಈ ಸೂಕ್ತ ಅವತೀರ್ಣಗೊಂಡಿದೆಯೋ ಅದರ ಪ್ರಕಾರ ಪ್ರವಾದಿಯವರ(ಸ) ಬಳಿಕವೂ ಪ್ರವಾದಿಗಳು ಬರಲಿದ್ದು ಅವರ ಮೇಲೆ ಅವರ ಸಮುದಾಯ ವಿಶ್ವಾಸ ತಾಳಬೇಕೆಂದು ಹೇಳಲು ಯಾವ ಅವಕಾಶವೂ ಇಲ್ಲ. ಈ ಅರ್ಥ ತೆಗೆದುಕೊಂಡರೆ ಈ ಸೂಕ್ತ ಇಲ್ಲಿ ಸರಿ ಹೊಂದುವುದಿಲ್ಲ. ಅಲ್ಲದೆ ಸೂಕ್ತದ ಪದಗಳಿಂದಲೂ ಇಲ್ಲಿ ಒಪ್ಪಂದವೆಂದರೆ ಯಾವ ಒಪ್ಪಂದವೆಂದು ಸ್ಪಷ್ಟವಾಗುವುದಿಲ್ಲ. ಆದುದರಿಂದ ಇದರ ಸ್ವರೂಪವನ್ನು ಗ್ರಹಿಸಲಿಕ್ಕಾಗಿ ನಾವು, ಪ್ರವಾದಿಗಳಿಂದ ಕರಾರು ಪಡೆಯಲಾಗಿದೆಯೆಂದು ಹೇಳಲಾದ ಕುರ್‌ಆನಿನ ಇತರ ಕಡೆಗಳಲ್ಲಿ ಹುಡುಕಬೇಕಾಗುತ್ತದೆ. ಒಂದು ವೇಳೆ ಇಡೀ ಕುರ್‌ಆನಿನಲ್ಲಿ ಒಂದೇ ಕರಾರಿನ ಪ್ರಸ್ತಾಪವಿದ್ದು, ಅದು ಮುಂದೆ ಬರಲಿರುವ ಪ್ರವಾದಿಗಳ ಮೇಲೆ ವಿಶ್ವಾಸ ತಾಳುವ ಬಗೆಗಾಗಿದ್ದರೆ, ಇಲ್ಲೂ ಅದೇ ಕರಾರಿನ ಪ್ರಸ್ತಾಪವಾಗಿದೆಯೆಂದು ಭಾವಿಸ ಬಹುದಾಗಿತ್ತು. ಆದರೆ ಕುರ್‌ಆನನ್ನು ಕಣ್ಣು ಬಿಟ್ಟು ಓದುವವನಿಗೆ ಅದರಲ್ಲಿ ಪ್ರವಾದಿಗಳಿಂದಲೂ ಅವರ ಸಮುದಾಯಗಳಿಂದಲೂ ಪಡೆಯಲಾದ ಅನೇಕ ಕರಾರುಗಳ ಪ್ರಸ್ತಾಪವಿರುವುದನ್ನು ಕಾಣಬಹುದು. ಆದುದರಿಂದ ಅಂತಹ ವಿವಿಧ ಕರಾರುಗಳ ಪೈಕಿ ಹಿನ್ನೆಲೆಯೊಂದಿಗೆ ಸರಿಹೊಂದುವಂತಹ ಕರಾರನ್ನೇ ಇಲ್ಲಿ ಪ್ರಸ್ತಾಪಿಸಲಾಗಿದೆಯೆಂದು ಭಾವಿಸುವುದು ಸೂಕ್ತವಾದೀತು. ಈ ರೀತಿಯ ತಪ್ಪು ಸಮರ್ಥನೆಗಳಿಂದ, ಕೆಲವರು ಕುರ್‌ಆನಿನಿಂದ ಸನ್ಮಾರ್ಗ ಪಡೆಯುವುದರ ಬದಲು ಅದಕ್ಕೇ ಸನ್ಮಾರ್ಗ ತೋರಿಸ ಹೊರಟಿದ್ದಾರೆಂದು ವ್ಯಕ್ತವಾಗುತ್ತದೆ.

أَلِيمًا ﴿٨﴾ يَا أَيُّهَا الَّذِينَ آمَنُوا اذْكُرُوا نِعْمَةَ اللَّهِ عَلَيْكُمْ إِذْ جَاءَتْكُمْ جُنُودٌ فَأَرْسَلْنَا
عَلَيْهِمْ رِيحًا وَجُنُودًا لَمْ تَرَوْهَا ۚ وَكَانَ اللَّهُ بِمَا تَعْمَلُونَ بَصِيرًا ﴿٩﴾ إِذْ جَاءُوكُمْ
مِنْ فَوْقِكُمْ وَمِنْ أَسْفَلَ مِنْكُمْ وَإِذْ زَاغَتِ الْأَبْصَارُ وَبَلَغَتِ الْقُلُوبُ
الْحَنَاجِرَ وَتَظُنُّونَ بِاللَّهِ الظُّنُونَا ﴿١٠﴾ هُنَالِكَ ابْتُلِيَ الْمُؤْمِنُونَ وَزُلْزِلُوا زِلْزَالًا

ಕುರಿತು ಪ್ರಶ್ನಿಸಲಿಕ್ಕಾಗಿ (ಆಗಿರುತ್ತದೆ)[16] ಮತ್ತು ಸತ್ಯನಿಷೇಧಿಗಳಿಗಾಗಿ ಅವನು ವೇದನಾಯುಕ್ತ ಯಾತನೆಯನ್ನು ಸಿದ್ಧಪಡಿಸಿಯೇ ಇಟ್ಟಿದ್ದಾನೆ.[17]

**(9-11)** ಸತ್ಯವಿಶ್ವಾಸಿಗಳೇ[18] ಅಲ್ಲಾಹನು(ಇದೀಗ) ನಿಮಗೆ ಮಾಡಿರುವ ಉಪಕಾರವನ್ನು ಸ್ಮರಿಸಿರಿ. ನಿಮ್ಮ ಮೇಲೆ ಸೈನ್ಯಗಳು ಏರಿ ಬಂದಾಗ ನಾವು ಅವರ ಮೇಲೆ ಒಂದು ಬಲವಾದ ಬಿರುಗಾಳಿಯನ್ನು ಕಳುಹಿಸಿದೆವು ಮತ್ತು ನಿಮಗೆ ಕಾಣಿಸದಂತಹ ಸೈನ್ಯಗಳನ್ನು ರವಾನಿಸಿದೆವು.[19] ನೀವು ಆಗ ಮಾಡುತ್ತಿದ್ದುದನ್ನೆಲ್ಲ ಅಲ್ಲಾಹನು

16. ಅಂದರೆ ಅಲ್ಲಾಹನು ಕೇವಲ ಕರಾರು ಪಡೆದು ಸುಮ್ಮನಾಗಲಿಲ್ಲ. ಬದಲಾಗಿ ಅದನ್ನು ಎಷ್ಟರ ಮಟ್ಟಿಗೆ ಪಾಲಿಸಲಾಗಿದೆಯೆಂದು ವಿಚಾರಿಸಲಿರುವನು. ಯಾರು ಸತ್ಯಸಂಧತೆಯೊಂದಿಗೆ ಅಲ್ಲಾಹನೊಂದಿಗೆ ಮಾಡಿದ್ದ ಕರಾರನ್ನು ಪಾಲಿಸಿರುವರೋ ಅವರೇ ನಿಷ್ಠಾವಂತರೆನಿಸುವರು.

17. ಈ ರುಕೂಅ್‌ನ ವಿಷಯಗಳನ್ನು ಸರಿಯಾಗಿ ಗ್ರಹಿಸಬೇಕಾದರೆ ಇದೇ ಅಧ್ಯಾಯದ 36ರಿಂದ 41ರ ವರೆಗಿನ ಸೂಕ್ತಗಳೊಂದಿಗೆ ಇದನ್ನು ಸೇರಿಸಿ ಓದಬೇಕು.

18. ಇಲ್ಲಿಂದ ಮೂರನೆಯ ರುಕೂಅ್‌ನ ಕೊನೆಯ ತನಕದ ಸೂಕ್ತಗಳು ಪ್ರವಾದಿವರ್ಯರು(ಸ) ಬನೂ ಕುರೈಝಾರ ವಿರುದ್ಧ ಕಾರ್ಯಾಚರಣೆಯಿಂದ ವಿರಮಿಸಿದ ಬಳಿಕ ಅವತೀರ್ಣಗೊಂಡವು. ಈ ಎರಡೂ ರುಕೂಅ್‌ಗಳಲ್ಲಿ ಅಹ್‌ಝಾಬ್ ಮತ್ತು ಬನೂ ಕುರೈಝಾ ಯುದ್ಧಗಳ ಘಟನೆಗಳ ಕುರಿತು ವಿಮರ್ಶೆ ನಡೆಸಲಾಗಿದೆ. ಅವುಗಳನ್ನು ಓದುವಾಗ ನಾವು ಆ ಎರಡೂ ಯುದ್ಧಗಳ ಕುರಿತು 'ಪ್ರಸ್ತಾವನೆ'ಯಲ್ಲಿ ವಿವರಿಸಿದ ವಿಷಯಗಳನ್ನು ಮುಂದಿಟ್ಟು ಕೊಳ್ಳಬೇಕು.

19. ಈ ಚಂಡಮಾರುತವು ವೈರಿಗಳ ಸೇನೆಯು ಮದೀನಾದ ಮೇಲೆ ದಂಡೆತ್ತಿ ಬಂದಾಗ ಎರಗಿರಲಿಲ್ಲ. ಅದು ದಿಗ್ಬಂಧನದ ಸುಮಾರು ಒಂದು ತಿಂಗಳು ಕಳೆದ ನಂತರ ಬಂದಿತ್ತು. 'ಕಾಣಿಸದ ಸೇನೆಗಳು' ಎಂದರೆ ಮಾನವನ ವ್ಯವಹಾರಗಳಲ್ಲಿ ಅಲ್ಲಾಹನ ಸೂಚನೆಯಂತೆ ಕೆಲಸ ಮಾಡುತ್ತಿರುವ ಅಗೋಚರ ಶಕ್ತಿಗಳಾಗಿವೆ. ಮಾನವರಿಗೆ ಅದರ ಸುಳಿವೂ ಇರುವುದಿಲ್ಲ. ಮಾನವನು ಘಟನೆಗಳಿಗೆ ಬಾಹ್ಯ ಕಾರಣಗಳನ್ನು ಹುಡುಕುತ್ತಾನೆ. ಆದರೆ ಒಳಗಿಂದೊಳಗೇ ಕೆಲಸ ಮಾಡುತ್ತಿರುವ ಅಗೋಚರ ಶಕ್ತಿಗಳು ಅವನ ಪರಿಗಣನೆಯಲ್ಲಿರುವುದಿಲ್ಲ. ವಸ್ತುತಃ ಹೆಚ್ಚಿನ ಸಂದರ್ಭಗಳಲ್ಲಿ ಈ ಅಗೋಚರ ಶಕ್ತಿಗಳ ಕಾರಸ್ಥಾನವೇ ನಿರ್ಣಾಯಕವಾಗಿರುತ್ತದೆ. ಈ ಶಕ್ತಿಗಳು ದೇವಚರರ ಅಧೀನದಲ್ಲಿ ಕೆಲಸ ಮಾಡುವುದರಿಂದ ಇಲ್ಲಿ ದೇವಚರರ ಸೇನೆಗಳನ್ನು ಕಳಿಸಲಾಗಿದೆಯೆಂಬ ಪ್ರಸ್ತಾಪವಿಲ್ಲದಿದ್ದರೂ 'ಸೇನೆಗಳು' ಎಂದರೆ ದೇವಚರರು ಎಂದೂ ಅರ್ಥೈಸಬಹುದು.

شَدِيدًا ﴿١١﴾ وَإِذْ يَقُولُ الْمُنَافِقُونَ وَالَّذِينَ فِي قُلُوبِهِم مَّرَضٌ مَّا وَعَدَنَا اللَّهُ
وَرَسُولُهُ إِلَّا غُرُورًا ﴿١٢﴾ وَإِذْ قَالَت طَّائِفَةٌ مِّنْهُمْ يَا أَهْلَ يَثْرِبَ لَا مُقَامَ لَكُمْ
فَارْجِعُوا ۚ وَيَسْتَأْذِنُ فَرِيقٌ مِّنْهُمُ النَّبِيَّ يَقُولُونَ إِنَّ بُيُوتَنَا عَوْرَةٌ وَمَا هِيَ

ನೋಡುತ್ತಿದ್ದನು. ಶತ್ರುಗಳು ಮೇಲಿಂದಲೂ ಕೆಳಗಿಂದಲೂ ನಿಮ್ಮ ಮೇಲೆ ಏರಿ ಬಂದಾಗ,[20] ಭಯದಿಂದ ಕಣ್ಣುಗಳು ನಿಶ್ಚಲಗೊಂಡಾಗ, ಹೃದಯಗಳು ಬಾಯಿಗೆ ಬಂದಾಗ ಮತ್ತು ನೀವು ಅಲ್ಲಾಹನ ವಿಷಯದಲ್ಲಿ ತರತರದ ಗುಮಾನಿಗಳನ್ನಿರಿಸಲು ತೊಡಗಿದಾಗ, ಸತ್ಯವಿಶ್ವಾಸಿಗಳು ಚೆನ್ನಾಗಿ ಪರೀಕ್ಷಿಸಲ್ಪಟ್ಟರು ಮತ್ತು ತೀವ್ರವಾಗಿ ನಡುಗಿಸಲ್ಪಟ್ಟರು.[21]

(12-15) ಕಪಟವಿಶ್ವಾಸಿಗಳೂ ಹೃದಯಗಳಲ್ಲಿ ರೋಗವಿದ್ದವರೂ - ಅಲ್ಲಾಹ್ ಮತ್ತು ಅವನ ಪ್ರವಾದಿ ನಮ್ಮೊಡನೆ ಮಾಡಿದ್ದ ವಾಗ್ದಾನಗಳೆಲ್ಲಾ[22] ವಂಚನೆಯೇ ವಿನಾ ಇನ್ನೇನೂ ಅಲ್ಲವೆಂದು ಸ್ಪಷ್ಟವಾಗಿ ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರಲ್ಲೊಂದು ತಂಡವು, "ಯಸ್ರಿಬ್‌ನವರೇ, ನಿಮಗಿನ್ನು ನಿಲ್ಲುವ ಅವಕಾಶವೇನೂ ಇಲ್ಲ, ಮರಳಿ ಹೋಗಿರಿ" ಎಂದು ಹೇಳಿದಾಗ[23] ಮತ್ತು ಅವರ ಒಂದು ಕೂಟವು,

20. ಇದರ ಒಂದರ್ಥವು ಎಲ್ಲ ಕಡೆಗಳಿಂದಲೂ ಏರಿ ಬಂದರು ಎಂದಾಗುತ್ತದೆ. ಇನ್ನೊಂದರ್ಥ ಹೀಗೂ ಆಗಬಹುದು- ನಜ್ದ್ ಮತ್ತು ಖೈಬರ್‌ನಿಂದ ಆಕ್ರಮಣ ಮಾಡುವವರು ಮೇಲಿನಿಂದ ಬಂದರು ಮತ್ತು ಮಕ್ಕಾದಿಂದ ಬರುವವರು ಕೆಳಗಿನಿಂದ ಬಂದರು.

21. ಸತ್ಯವಿಶ್ವಾಸ ಸ್ವೀಕರಿಸಿಕೊಂಡವರು ಎಂದರೆ ಮುಹಮ್ಮದ್‌ರನ್ನು(ಸ) ಅಲ್ಲಾಹನ ಸಂದೇಶವಾಹಕರೆಂದು ಒಪ್ಪಿ ಅವರ ಅನುಯಾಯಿಗಳಾದವರು. ಇವರಲ್ಲಿ ಸತ್ಯವಿಶ್ವಾಸಿಗಳೂ ಇದ್ದರು. ಮುನಾಫಿಕರೂ ಇದ್ದರು. ಈ ಪಾರಾದಲ್ಲಿ ಅಲ್ಲಾಹನು ಮುಸ್ಲಿಮರ ತಂಡದ ಪ್ರಸ್ತಾಪವನ್ನು ಒಟ್ಟಾಗಿ ಮಾಡಿದ್ದಾನೆ. ಅದರ ನಂತರದ ಮೂರು ಪಾರಾಗಳಲ್ಲಿ ಮುನಾಫಿಕರ ವರ್ತನೆಗಳ ಬಗ್ಗೆ ವಿಮರ್ಶಿಸಲಾಗಿದೆ. ಕೊನೆಯ ಎರಡು ಪಾರಾಗಳಲ್ಲಿ ಪುನಃ ಪ್ರವಾದಿ(ಸ) ಮತ್ತು ನಿಷ್ಠಾವಂತ ಸತ್ಯವಿಶ್ವಾಸಿಗಳ ಬಗ್ಗೆ ಪ್ರಸ್ತಾಪಿಸಲಾಗಿದೆ.

22. ಅಂದರೆ ಸತ್ಯವಿಶ್ವಾಸಿಗಳಿಗೆ ಅಲ್ಲಾಹನ ಸಹಾಯ ದೊರೆಯುವುದು ಮತ್ತು ಅಂತಿಮ ವಿಜಯವೂ ಅವರಿಗೇ ಪ್ರಾಪ್ತವಾಗುವುದು ಎಂಬ ವಾಗ್ದಾನ.

23. ಈ ವಾಕ್ಯಕ್ಕೆ ಎರಡು ಅರ್ಥಗಳಿವೆ. ಕಂದಕದ ಮುಂದೆ ಸತ್ಯನಿಷೇಧಿಗಳ ವಿರುದ್ಧ ಹೋರಾಡುವ ಅವಕಾಶವಿಲ್ಲ. ಆದುದರಿಂದ ನಗರಕ್ಕೆ ಮರಳಿರಿ ಎಂಬುದು ಇದರ ಬಾಹ್ಯ ಅರ್ಥ. ಇದರ ಒಳಾರ್ಥವೇನೆಂದರೆ ಇಸ್ಲಾಮಿನಲ್ಲಿ ಸ್ಥಿರವಾಗಿರಲು ಯಾವುದೇ ಅವಕಾಶವಿಲ್ಲ. ಇನ್ನು ನಮ್ಮ ಮಾತೃ ಧರ್ಮಕ್ಕೆ ಮರಳಬೇಕು. ಇದರಿಂದ ಇಡೀ ಅರಬ್ ಜನಾಂಗದೊಂದಿಗೆ ವೈರ ಕಟ್ಟಿಕೊಂಡು ನಾವು ನಮ್ಮನ್ನು ಯಾವ ಅಪಾಯಕ್ಕೆ ಸಿಲುಕಿಸಿದ್ದೇವೋ ಅದರಿಂದ ಪಾರಾಗಬಹುದು. ಮುನಾಫಿಕರು ತಮ್ಮ ಮಾತಿಗೆ ಮರುಳಾದವರಿಗೆ ಒಳಾರ್ಥವನ್ನು ತಿಳಿಸುವುದಕ್ಕಾಗಿ ಮತ್ತು ಅವರ ಮಾತನ್ನು ಕೇಳಿ

بِعَوْرَةٍ ۖ إِن يُرِيدُونَ إِلَّا فِرَارًا ﴿١٣﴾ وَلَوْ دُخِلَتْ عَلَيْهِم مِّنْ أَقْطَارِهَا ثُمَّ سُئِلُوا
الْفِتْنَةَ لَآتَوْهَا وَمَا تَلَبَّثُوا بِهَا إِلَّا يَسِيرًا ﴿١٤﴾ وَلَقَدْ كَانُوا عَاهَدُوا اللَّهَ مِن
قَبْلُ لَا يُوَلُّونَ الْأَدْبَارَ ۚ وَكَانَ عَهْدُ اللَّهِ مَسْئُولًا ﴿١٥﴾ قُل لَّن يَنفَعَكُمُ الْفِرَارُ

"ನಮ್ಮ ಮನೆಗಳು ಅಪಾಯಕ್ಕೊಳಗಾಗಿವೆ" ಎನ್ನುತ್ತ ತಮ್ಮ ಪ್ರವಾದಿಯಿಂದ ಅನುಮತಿ ಕೇಳತೊಡಗಿದಾಗ,[24] ಅವು ನಿಜವಾಗಿ ಅಪಾಯದಲ್ಲಿರಲಿಲ್ಲ.[25] ವಾಸ್ತವದಲ್ಲಿ ಅವರು (ರಣರಂಗದಿಂದ) ಪರಾರಿಯಾಗಲು ಇಚ್ಛಿಸುತ್ತಿದ್ದರು. ಪಟ್ಟಣದ ಸುತ್ತಮುತ್ತಲಿಂದ ಶತ್ರುಗಳು ನುಗ್ಗಿ ಬರುತ್ತಿದ್ದರೆ ಮತ್ತು ಆ ವೇಳೆ ಇವರಿಗೆ ಪಿತೂರಿಯ ಕರೆ ನೀಡಲಾಗುತ್ತಿದ್ದರೆ[26] ಇವರು ಅದರಲ್ಲಿ ಬೀಳುತ್ತಿದ್ದರು ಮತ್ತು ಪಿತೂರಿಯಲ್ಲಿ ಪಾಲ್ಗೊಳ್ಳಲು ಇವರಿಗೆ ಸ್ವಲ್ಪವೂ ಅಳುಕುಂಟಾಗುತ್ತಿರಲಿಲ್ಲ. ತಾವು ಬೆನ್ನು ತೋರಿಸಲಿಕ್ಕಿಲ್ಲವೆಂದು ಇದಕ್ಕೆ ಮುಂಚೆ ಇವರು ಅಲ್ಲಾಹನೊಡನೆ ಕರಾರು ಮಾಡಿದ್ದರು ಮತ್ತು ಅಲ್ಲಾಹನೊಂದಿಗೆ ಮಾಡಿದ ಕರಾರಿನ ವಿಚಾರಣೆ ನಡೆದೇ ತೀರಲಿಕ್ಕಿತ್ತು.[27]

---

ಅವರನ್ನು ತರಾಟೆಗೆ ತೆಗೆದುಕೊಂಡವರಿಗೆ ಬಾಹ್ಯಪದಗಳನ್ನು ಹೇಳಿ ಅದರ ಮರೆಯಲ್ಲಿ ಅವರಿಂದ ಪಾರಾಗಲಿಕ್ಕಾಗಿ ಇಂತಹ ಮಾತುಗಳನ್ನು ಆಡುತ್ತಿದ್ದರು.

24. ಅರ್ಥಾತ್- ಬನೂ ಕುರೈಝಾ ಗೋತ್ರದವರೂ ಆಕ್ರಮಣಕಾರಿಗಳ ಜೊತೆ ಸೇರಿದಾಗ ಈ ಮುನಾಫಿಕರಿಗೆ ಪ್ರವಾದಿಯವರ(ಸ) ಸೇನೆಯಿಂದ ತಪ್ಪಿಸಿಕೊಂಡು ಹೋಗಲು ಅತ್ಯುತ್ತಮ ಅವಕಾಶವೊಂದು ಸಿಕ್ಕಿತು. ಅವರು, ಈಗ ನಮ್ಮ ಮನೆಗಳೇ ಅಪಾಯದಲ್ಲಿ ಸಿಲುಕಿರುವುದರಿಂದ ಮನೆಗಳಿಗೆ ಹೋಗಿ ನಮ್ಮ ಮನೆ ಮಂದಿಯನ್ನು ರಕ್ಷಿಸಲಿಕ್ಕಾಗಿ ನಮ್ಮನ್ನು ಬಿಡಬೇಕೆಂದು ವಿನಂತಿಸ ತೊಡಗಿದರು. ವಸ್ತುತಃ ಆ ಸಂದರ್ಭದಲ್ಲಿ ಇಡೀ ಮದೀನಾದವರ ರಕ್ಷಣೆಯ ಹೊಣೆ ಪ್ರವಾದಿವರ್ಯರದ್ದಾಗಿತ್ತು. ಬನೂ ಕುರೈಝಾರ ವಚನಭಂಗದಿಂದುಂಟಾದ ಅಪಾಯದಿಂದ ನಗರವನ್ನೂ ನಗರವಾಸಿಗಳನ್ನೂ ರಕ್ಷಿಸಲು ಸೂಕ್ತ ಉಪಾಯ ಕೈಗೊಳ್ಳಬೇಕಾದುದು ಪ್ರವಾದಿವರ್ಯರ(ಸ) ಕೆಲಸವಾಗಿತ್ತೇ ಹೊರತು ಸೈನ್ಯದ ಒಬ್ಬೊಬ್ಬ ಸೈನಿಕನದ್ದಲ್ಲ.

25. ಅರ್ಥಾತ್- ಈ ಅಪಾಯದಿಂದ ಪಾರಾಗುವ ವ್ಯವಸ್ಥೆಯನ್ನು ಪ್ರವಾದಿ(ಸ) ಮಾಡಿದ್ದರು. ಈ ವ್ಯವಸ್ಥೆ ಕೂಡಾ ಸೇನಾ ನಾಯಕನೆಂಬ ನೆಲೆಯಲ್ಲಿ ಪ್ರವಾದಿ(ಸ) ಕೈಗೊಂಡಿದ್ದ ರಕ್ಷಣಾ ವ್ಯವಸ್ಥೆಯ ಆ ಸಂಪೂರ್ಣ ಯೋಜನೆಯ ಒಂದು ಭಾಗವಾಗಿತ್ತು. ಆದುದರಿಂದ ಅವರ ನೆಪವನ್ನು ಅಂಗೀಕರಿಸಬೇಕಾದಂತಹ ತುರ್ತು ಅಪಾಯವೇನೂ ಆಗ ಇರಲಿಲ್ಲ.

26. ಅರ್ಥಾತ್- ನಗರದೊಳಗೆ ನುಗ್ಗಿ ಈ ಸತ್ಯನಿಷೇಧಿಗಳು ಮುನಾಫಿಕರನ್ನು, ಬನ್ನಿ ನಮ್ಮ ಜೊತೆ ಸೇರಿ ಮುಸ್ಲಿಮರನ್ನು ಸಮೂಲ ನಾಶ ಮಾಡೋಣ ಎಂದು ಆಹ್ವಾನಿಸುತ್ತಿದ್ದರೆ!

27. ಅರ್ಥಾತ್- ಉಹುದ್ ಯುದ್ಧದಲ್ಲಿ ಅವರು ತೋರಿದ ದೌರ್ಬಲ್ಯದ ನಂತರ ಅವರು ನಾಚಿಕೆ ಪಟ್ಟು ಇನ್ನೆಂದಾದರೂ ಪರೀಕ್ಷಾ ಘಟ್ಟ ಎದುರಾದರೆ ನಾವು ನಮ್ಮ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳುವೆವು ಎಂದು ಅಲ್ಲಾಹನೊಂದಿಗೆ ಪ್ರತಿಜ್ಞೆ ಮಾಡಿದ್ದರು. ಆದರೆ ಅಲ್ಲಾಹನನ್ನು ಕೇವಲ

إِن فَرَرْتُم مِّنَ ٱلْمَوْتِ أَوِ ٱلْقَتْلِ وَإِذًا لَّا تُمَتَّعُونَ إِلَّا قَلِيلًا ﴿١٦﴾ قُلْ مَن ذَا
ٱلَّذِى يَعْصِمُكُم مِّنَ ٱللَّهِ إِنْ أَرَادَ بِكُمْ سُوٓءًا أَوْ أَرَادَ بِكُمْ رَحْمَةً ۚ وَلَا
يَجِدُونَ لَهُم مِّن دُونِ ٱللَّهِ وَلِيًّا وَلَا نَصِيرًا ﴿١٧﴾ قَدْ يَعْلَمُ ٱللَّهُ ٱلْمُعَوِّقِينَ
مِنكُمْ وَٱلْقَآئِلِينَ لِإِخْوَٰنِهِمْ هَلُمَّ إِلَيْنَا ۖ وَلَا يَأْتُونَ ٱلْبَأْسَ إِلَّا قَلِيلًا ﴿١٨﴾

**(16-17)** ಪೈಗಂಬರರೇ, ಇವರೊಡನೆ ಹೇಳಿರಿ - "ನೀವು ಮರಣ ಅಥವಾ ಹತ್ಯೆಯನ್ನು ಹೆದರಿ ಓಡುವುದಿದ್ದರೆ ನಿಮ್ಮ ಈ ಪಲಾಯನವು ನಿಮಗೇನೂ ಫಲಕಾರಿಯಾಗದು. ಆ ಬಳಿಕ ನಿಮಗೆ ಜೀವನದ ಸುಖವನ್ನು ಅನುಭವಿಸಲು ಅಲ್ಪಕಾಲ ಮಾತ್ರವೇ ಅವಕಾಶ ಸಿಗುವುದು."[28] ಇವರೊಡನೆ ಹೇಳಿರಿ, "ಅಲ್ಲಾಹ್ ನಿಮಗೆ ಹಾನಿಯುಂಟು ಮಾಡಲಿಚ್ಛಿಸಿದರೆ ನಿಮ್ಮನ್ನು ಅವನಿಂದ ರಕ್ಷಿಸುವವನಾರು? ಅವನು ನಿಮ್ಮ ಮೇಲೆ ಕರುಣೆ ತೋರ ಬಯಸಿದರೆ, ಅವನ ಕೃಪೆಯನ್ನು ತಡೆಯುವವನಾರು? ಅಲ್ಲಾಹನಿಗೆದುರು ಇವರು ಯಾವ ರಕ್ಷಕ ಮಿತ್ರನನ್ನೂ ಸಹಾಯಕನನ್ನೂ ಪಡೆಯಲಾರರು."

**(18-20)** ನಿಮ್ಮಲ್ಲಿ (ಯುದ್ಧ ಕಾರ್ಯದಲ್ಲಿ) ತಡೆಗಳನ್ನು ಉಂಟು ಮಾಡುವವರನ್ನು ಅಲ್ಲಾಹನು ಚೆನ್ನಾಗಿ ಬಲ್ಲನು. ಅವರು ತಮ್ಮ ಸಹೋದರರೊಡನೆ, 'ನಮ್ಮ ಕಡೆಗೆ ಬನ್ನಿರಿ' ಎನ್ನುತ್ತಾರೆ.[29] ಅವರು ಯುದ್ಧದಲ್ಲಿ ಭಾಗವಹಿಸುವುದಿದ್ದರೂ

---

ಬಾಯಿ ಮಾತಿನಿಂದ ವಂಚಿಸಲು ಸಾಧ್ಯವಿಲ್ಲ. ಅಲ್ಲಾಹನು ತನ್ನ ಮುಂದೆ ಪ್ರತಿಜ್ಞೆಗೈಯುವ ಪ್ರತಿಯೊಬ್ಬನ ಮುಂದೆ ಅವನ ಸತ್ಯಸಂಧತೆಯನ್ನು ಪರೀಕ್ಷಿಸಲಿಕ್ಕಾಗಿ ಒಂದಲ್ಲೊಂದು ಅವಕಾಶವನ್ನು ಖಂಡಿತ ತರುತ್ತಾನೆ. ಹಾಗೆ ಉಹುದ್ ಯುದ್ಧ ನಡೆದು ಕೇವಲ ಎರಡು ವರ್ಷಗಳಾದಾಗ ಅದಕ್ಕಿಂತಲೂ ಹೆಚ್ಚು ಅಪಾಯಕಾರಿಯಾದ ಒಂದು ಸನ್ನಿವೇಶವನ್ನು ಮುಂದೆ ತಂದು ಈ ಮಂದಿಯ ಪ್ರತಿಜ್ಞೆಯು ಎಷ್ಟು ಪ್ರಾಮಾಣಿಕವಾಗಿತ್ತೆಂಬುದನ್ನು ಪರೀಕ್ಷಿಸಿದನು.

28. ಅಂದರೆ ಈ ಪಲಾಯನದಿಂದ ನಿಮ್ಮ ಆಯುಷ್ಯವೇನೂ ಹೆಚ್ಚಾಗದು. ನೀವೇನೂ ಕಿಯಾಮತ್(ಅಂತ್ಯ ದಿನ)ನ ವರೆಗೆ ಬದುಕಲಾರಿರಿ ಮತ್ತು ಭೂಮಿಯಲ್ಲಿರುವ ಸಕಲ ಸಂಪತ್ತನ್ನೂ ಹೊಂದಲಾರಿರಿ. ಓಡಿ ಹೋದರೂ ಹೆಚ್ಚೆಂದರೆ ಕೆಲವು ವರ್ಷಗಳ ಕಾಲ ಬದುಕುವಿರಿ ಮತ್ತು ನಿಮ್ಮ ವಿಧಿ ಲಿಖಿತದಲ್ಲಿರುವಷ್ಟು ಮಾತ್ರ ಜೀವನ ಸುಖವನ್ನು ಪಡೆಯುವಿರಿ.

29. ಅರ್ಥಾತ್- ಈ ಪ್ರವಾದಿಯನ್ನು ಬಿಟ್ಟು ಬಿಡಿರಿ. ಧರ್ಮ, ನಂಬಿಕೆ, ಸತ್ಯ-ಪ್ರಾಮಾಣಿಕತೆಗಳ ಉರುಳಲ್ಲಿ ಏಕೆ ಸಿಲುಕುತ್ತೀರಿ? ಅಪಾಯಗಳಲ್ಲೂ ಸಂಕಷ್ಟಗಳಲ್ಲೂ ಸಿಲುಕುವುದರ ಬದಲು ನಾವು ಅನುಸರಿಸಿದಂತಹ ಕ್ಷೇಮಕರ ನೀತಿಯನ್ನನುಸರಿಸಿರಿ.

أَشِحَّةً عَلَيْكُمْ ۚ فَإِذَا جَاءَ الْخَوْفُ رَأَيْتَهُمْ يَنظُرُونَ إِلَيْكَ تَدُورُ أَعْيُنُهُمْ
كَالَّذِي يُغْشَىٰ عَلَيْهِ مِنَ الْمَوْتِ ۖ فَإِذَا ذَهَبَ الْخَوْفُ سَلَقُوكُم بِأَلْسِنَةٍ
حِدَادٍ أَشِحَّةً عَلَى الْخَيْرِ ۚ أُولَٰئِكَ لَمْ يُؤْمِنُوا فَأَحْبَطَ اللَّهُ أَعْمَالَهُمْ ۚ وَكَانَ ذَٰلِكَ
عَلَى اللَّهِ يَسِيرًا ﴿١٩﴾ يَحْسَبُونَ الْأَحْزَابَ لَمْ يَذْهَبُوا ۖ وَإِن يَأْتِ الْأَحْزَابُ يَوَدُّوا

ಕೇವಲ ನಾಮ ಮಾತ್ರಕ್ಕೆ. ಅವರು ನಿಮಗೆ ಸಹಕಾರ ಕೊಡುವುದರಲ್ಲಿ ಮಹಾ ಜಿಪುಣರು.[30] ಅಪಾಯದ ಸಂದರ್ಭ ಬಂದಾಗ ಅವರು ಸಾಯುವವನಿಗೆ ಮೂರ್ಛೆ ಬರುವಂತೆ ಕಣ್ಣು ಗೊಂಬೆಗಳನ್ನು ತಿರುಗಿಸುತ್ತ ನಿಮ್ಮ ಕಡೆಗೆ ನೋಡುತ್ತಾರೆ. ಆದರೆ ಅಪಾಯ ನೀಗಿದ ಬಳಿಕ ಅದೇ ಜನರು ಲಾಭಗಳ ದುರಾಸೆಯಿಂದ ಹರಿತವಾದ ನಾಲಗೆಯೊಂದಿಗೆ ನಿಮ್ಮನ್ನು ಸ್ವಾಗತಿಸಲು ಬಂದು ಬಿಡುತ್ತಾರೆ.[31] ಅವರು ಎಷ್ಟು ಮಾತ್ರಕ್ಕೂ ಸತ್ಯವಿಶ್ವಾಸವನ್ನು ಸ್ವೀಕರಿಸಲಿಲ್ಲ. ಆದುದರಿಂದಲೇ ಅಲ್ಲಾಹನು ಅವರ ಎಲ್ಲ ಕರ್ಮಗಳನ್ನೂ ನಿರರ್ಥಕಗೊಳಿಸಿ ಬಿಟ್ಟನು.[32] ಹೀಗೆ ಮಾಡುವುದು ಅಲ್ಲಾಹನಿಗೆ

30. ಅಂದರೆ ನಿಷ್ಠಾವಂತ ಸತ್ಯವಿಶ್ವಾಸಿಗಳು ತಮ್ಮ ಸರ್ವಸ್ವವನ್ನೂ ಈ ಮಾರ್ಗದಲ್ಲಿ ವ್ಯಯಿಸಿದಂತೆ ಈ ಮಂದಿ ತಮ್ಮ ಸಮಯವನ್ನಾಗಲಿ, ವಿಚಾರವನ್ನಾಗಲಿ, ತಮ್ಮ ಸಂಪತ್ತನ್ನಾಗಲಿ ಸಸಂತೋಷ ವ್ಯಯಿಸಲು ಸಿದ್ಧರಿಲ್ಲ. ಜೀವ ಪಣಕ್ಕಿಡುವುದು ಮತ್ತು ಅಪಾಯಗಳನ್ನೆದುರಿಸುವುದಂತೂ ದೊಡ್ಡ ವಿಷಯ. ಅವರು ಯಾವುದೇ ಕಾರ್ಯದಲ್ಲೂ ಸತ್ಯವಿಶ್ವಾಸಿಗಳೊಂದಿಗೆ ಮನಸಾರೆ ಪಾಲ್ಗೊಳ್ಳುವುದಿಲ್ಲ.

31. ನಿಘಂಟುವಿನ ಪ್ರಕಾರ ಈ ಸೂಕ್ತಕ್ಕೆ ಎರಡು ಅರ್ಥಗಳಿವೆ. ಒಂದು ಅರ್ಥ, ನೀವು ಯುದ್ಧದಲ್ಲಿ ಗೆದ್ದು ಮರಳಿದರೆ ನಿಮ್ಮನ್ನು ಅವರು ಮುಂದೆ ಬಂದು ಬಹಳ ಗೌರವದೊಂದಿಗೆ ಸ್ವಾಗತಿಸುತ್ತಾರೆ. ನಾವೂ ಸತ್ಯವಿಶ್ವಾಸಿಗಳಾಗಿದ್ದು ಈ ಕಾರ್ಯಸಾಧನೆಯಲ್ಲಿ ನಮ್ಮ ಪಾಲೂ ಇದೆ. ಆದುದರಿಂದ ಸಮರಾರ್ಜಿತದಲ್ಲಿ ನಮಗೂ ಪಾಲು ಸಿಗಬೇಕೆಂದು ಅವರು ತಮ್ಮ ವಾಗ್ವೈಖರಿಯನ್ನು ಪ್ರಯೋಗಿಸಿ ಪ್ರಯತ್ನಿಸುತ್ತಾರೆ. ಇನ್ನೊಂದು ಅರ್ಥ- ನಿಮಗೆ ವಿಜಯ ಪ್ರಾಪ್ತವಾಗಿ ಸಮರಾರ್ಜಿತ ವಿತರಣೆಯಾಗುವ ಸಂದರ್ಭದಲ್ಲಿ ಈ ಮಂದಿ ಬಹಳ ಮಾತಿಗಿಳಿಯುತ್ತಾರೆ ಮತ್ತು ನಮ್ಮ ಪಾಲು ಬರಲಿ, ನಾವು ಸೇವೆ ಮಾಡಿದ್ದೇವೆ. ನೀವೇ ಎಲ್ಲವನ್ನೂ ಬಾಚಿಕೊಂಡು ಹೋಗಬೇಡಿ ಎಂದು ಹೇಳುತ್ತಾರೆ.

32. ಅರ್ಥಾತ್- ಇಸ್ಲಾಮ್ ಸ್ವೀಕರಿಸಿಕೊಂಡ ಬಳಿಕ ಅವರು ನಿರ್ವಹಿಸಿದ ನಮಾಝ್, ಉಪವಾಸ ಆಚರಣೆಗಳು, ಅವರು ನೀಡಿದ್ದ ಝಕಾತ್ ಹಾಗೂ ಬಾಹ್ಯ ನೋಟಕ್ಕೆ ಕಾಣುವ ಸತ್ಕರ್ಮಗಳನ್ನೆಲ್ಲ ಅಲ್ಲಾಹನು ವ್ಯರ್ಥಗೊಳಿಸುವನು. ಅವುಗಳಿಗೆ ಯಾವುದೇ ಪುಣ್ಯ ನೀಡಲಾರನು. ಏಕೆಂದರೆ ಅಲ್ಲಾಹನು ಕರ್ಮಗಳ ಬಾಹ್ಯರೂಪ ನೋಡಿ ಪ್ರತಿಫಲ ನೀಡುವುದಲ್ಲ, ಬದಲಾಗಿ ಆ ಕರ್ಮಗಳ ಹಿಂದೆ ಸತ್ಯವಿಶ್ವಾಸ ಮತ್ತು ಪ್ರಾಮಾಣಿಕತೆಯಿದೆಯೇ ಎಂಬುದನ್ನು ನೋಡಿ

لَوْ أَنَّهُم بَادُونَ فِي الْأَعْرَابِ يَسْأَلُونَ عَنْ أَنبَائِكُمْ ۖ وَلَوْ كَانُوا فِيكُم مَّا
قَاتَلُوا إِلَّا قَلِيلًا ﴿٢٠﴾ لَّقَدْ كَانَ لَكُمْ فِي رَسُولِ اللَّهِ أُسْوَةٌ حَسَنَةٌ لِّمَن كَانَ
يَرْجُو اللَّهَ وَالْيَوْمَ الْآخِرَ وَذَكَرَ اللَّهَ كَثِيرًا ﴿٢١﴾ وَلَمَّا رَأَى الْمُؤْمِنُونَ الْأَحْزَابَ

ಬಹಳ ಸುಲಭ.[33] ಆಕ್ರಮಣಕಾರರು ಇನ್ನೂ ಹೋಗಿಲ್ಲವೆಂದು ಇವರು ಭಾವಿಸುತ್ತಾರೆ ಮತ್ತು ಅವರು ಪುನಃ ಆಕ್ರಮಣ ನಡೆಸಿ ಬಿಟ್ಟರೆ, ಆ ಸಂದರ್ಭದಲ್ಲಿ ಮರುಭೂಮಿಯಲ್ಲಿ ಎಲ್ಲಾದರೂ ಹಳ್ಳಿಗರ ನಡುವೆ ಇದ್ದುಕೊಂಡು ಅಲ್ಲಿಂದಲೇ ನಿಮ್ಮ ಸ್ಥಿತಿಗತಿಗಳನ್ನು ವಿಚಾರಿಸಿಕೊಂಡು ಇರಬಹುದೆಂದು ಅವರಿಗೆ ಅನಿಸುತ್ತದೆ. ಒಂದು ವೇಳೆ ಅವರು ನಿಮ್ಮ ನಡುವಿನಲ್ಲಿದ್ದರೂ ಯುದ್ಧದಲ್ಲಿ ಅತ್ಯಲ್ಪವೇ ಭಾಗವಹಿಸುವರು.

**(21-24)** ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು.[34] (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು

---

ತೀರ್ಮಾನಿಸುತ್ತಾನೆ. ಈ ವಿಷಯಗಳು ಅವರಲ್ಲಿ ತೀರಾ ನಾಸ್ತಿಯಾಗಿರುವಾಗ ತೋರಿಕೆಯ ಕರ್ಮಗಳಿಗೆ ಅರ್ಥವಿಲ್ಲ. ಇಲ್ಲಿ ಒಂದು ವಿಷಯ ವಿಶೇಷ ಗಮನಾರ್ಹವಾಗಿದೆ. ಇಲ್ಲಿ ಅಲ್ಲಾಹನನ್ನೂ ಪ್ರವಾದಿಯನ್ನೂ ಅಂಗೀಕರಿಸಿದ, ನಮಾಝ್ ಮತ್ತು ಉಪವಾಸ ಆಚರಿಸುವ, ಝಕಾತ್ ನೀಡುವ ಮತ್ತು ಮುಸ್ಲಿಮರ ಜತೆ ಸೇರಿ ಇತರ ಸತ್ಕರ್ಮಗಳನ್ನು ಮಾಡುತ್ತಿದ್ದವರ ಕುರಿತು, ಅವರು ಸತ್ಯವಿಶ್ವಾಸ ಸ್ವೀಕರಿಸಲೇ ಇಲ್ಲವೆಂದು ಸ್ಪಷ್ಟವಾದ ತೀರ್ಪು ನೀಡಲಾಗಿದೆ. ಈ ತೀರ್ಮಾನ ಕೈಗೊಳ್ಳಲು ಕಾರಣವೇನೆಂದರೆ ಸತ್ಯಾಸತ್ಯ(ಇಸ್ಲಾಮ್ ಮತ್ತು ಕುಫ್ರ್)ಗಳ ಸಂಘರ್ಷದ ವೇಳೆ ಸತ್ವಪರೀಕ್ಷೆ ಎದುರಾದಾಗ ಅವರು ಓತಿಯಂತೆ ಬಣ್ಣ ಬದಲಾಯಿಸಿದರು. ಧರ್ಮದ ಹಿತಕ್ಕಿಂತ ತಮ್ಮ ಹಿತಾಸಕ್ತಿಗೆ ಆದ್ಯತೆ ನೀಡಿದರು. ಇಸ್ಲಾಮಿನ ರಕ್ಷಣೆಗಾಗಿ ಜೀವ, ಸೊತ್ತು ಮತ್ತು ಪರಿಶ್ರಮಗಳನ್ನು ನೀಡಲು ಹಿಂಜರಿದರು. ಇದರಿಂದ ತಿಳಿದು ಬರುವುದೇನೆಂದರೆ ಬಾಹ್ಯ ಕರ್ಮಗಳು ತೀರ್ಮಾನಕ್ಕೆ ಆಧಾರವಲ್ಲ. ಬದಲಾಗಿ ಮಾನವನ ನಿಷ್ಠೆ ಯಾವ ಕಡೆಗಿದೆ ಎಂಬುದು ಮುಖ್ಯ ಪ್ರಶ್ನೆ. ಅಲ್ಲಾಹನೊಂದಿಗೂ ಧರ್ಮದೊಂದಿಗೂ ನಿಷ್ಠೆಯಿಲ್ಲದಿದ್ದರೆ ಸತ್ಯವಿಶ್ವಾಸದ ಘೋಷಣೆಗೆ ಹಾಗೂ ಆರಾಧನೆಗಳು ಮತ್ತಿತರ ಸತ್ಕರ್ಮಗಳಿಗೆ ಬೆಲೆಯೇ ಇಲ್ಲ.

33. ಅಂದರೆ ಅವರ ಕರ್ಮಗಳನ್ನು ವ್ಯರ್ಥಗೊಳಿಸುವುದು ಅಲ್ಲಾಹನಿಗೇನೂ ಕಷ್ಟವಲ್ಲ. ಅವರ ಕರ್ಮಗಳಿಗೆ ಯಾವುದೇ ತೂಕವಾಗಲಿ ಬೆಲೆಯಾಗಲಿ ಇಲ್ಲ. ಅಲ್ಲಾಹನು ಅವರ ಕರ್ಮಗಳನ್ನು ವ್ಯರ್ಥಗೊಳಿಸದಂತೆ ಆತನನ್ನು ತಡೆಯುವ ಶಕ್ತಿಯೂ ಅವರಿಗಿಲ್ಲ.

34. ಯಾವ ಹಿನ್ನೆಲೆಯಲ್ಲಿ ಈ ಸೂಕ್ತ ಅವತೀರ್ಣಗೊಂಡಿದೆಯೋ ಅದರ ಪ್ರಕಾರ ಇಲ್ಲಿ ಪ್ರವಾದಿವರ್ಯರ(ಸ) ವರ್ತನೆಯನ್ನು ಮಾದರಿಯಾಗಿ ತೋರಿಸುವುದರ ಉದ್ದೇಶವು ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಸ್ವಾರ್ಥ ಹಿತವನ್ನು ಪ್ರದರ್ಶಿಸಿದವರಿಗೆ ಪಾಠ ಕಲಿಸುವುದಾಗಿತ್ತು. ಒಂದು ವರ್ಗದ ನಾಯಕನು ಸ್ವಯಂ ತನ್ನ ಹಿತಬಯಸುವವನೂ ವಿಲಾಸಪ್ರಿಯನೂ ತನ್ನ ಹಿತರಕ್ಷಣೆಗೆ

قَالُوا هٰذَا مَا وَعَدَنَا اللّٰهُ وَرَسُولُهُ وَصَدَقَ اللّٰهُ وَرَسُولُهُ وَمَا زَادَهُمْ إِلَّا

ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ[35] ನಿಜವಾದ

ಆದ್ಯತೆ ನೀಡುವವನೂ ಅಪಾಯದ ಸಂದರ್ಭದಲ್ಲಿ ಪಲಾಯನ ಮಾಡುವ ಸಿದ್ಧತೆ ನಡೆಸುವವನೂ ಆಗಿದ್ದರೆ ಆಗ ಅವನ ಅನುಯಾಯಿಗಳಲ್ಲಿ ಇಂತಹ ದೌರ್ಬಲ್ಯಗಳು ಪ್ರಕಟವಾಗುವುದು ಸ್ವಾಭಾವಿಕ. ಆದರೆ ಇಲ್ಲಿ ಪ್ರವಾದಿವರ್ಯರ(ಸ) ವರ್ತನೆ ಹೇಗಿತ್ತೆಂದರೆ ಯಾವೆಲ್ಲ ಸಂಕಷ್ಟಗಳನ್ನು ಪ್ರವಾದಿವರ್ಯರು(ಸ) ಇತರರಿಂದ ಬಯಸಿದ್ದರೋ ಅದನ್ನು ಸಹಿಸುವುದರಲ್ಲಿ ಸ್ವತಃ ಅವರ ಜೊತೆಗಿದ್ದರು. ಮಾತ್ರವಲ್ಲ ಅವರಿಗಿಂತಲೂ ಅಧಿಕ ಸಂಕಷ್ಟಗಳನ್ನು ಸಹಿಸಿದರು. ಪ್ರವಾದಿ(ಸ) ಸಹಿಸದ, ಆದರೆ ಇತರರು ಸಹಿಸಿದಂತಹ ಯಾವ ಸಂಕಷ್ಟವೂ ಇರಲಿಲ್ಲ. ಕಂದಕ ತೋಡುವವರಲ್ಲಿ ಪ್ರವಾದಿ(ಸ) ಕೂಡಾ ಇದ್ದರು. ಹಸಿವು, ಚಳಿಗಳಂತಹ ಸಂಕಷ್ಟಗಳನ್ನು ಸಹಿಸುವಲ್ಲಿ ಓರ್ವ ಸಾಮಾನ್ಯ ಮುಸ್ಲಿಮನಷ್ಟೇ ಪ್ರವಾದಿ(ಸ) ಕೂಡಾ ಪಾಲುದಾರರಾಗಿದ್ದರು. ಮುತ್ತಿಗೆಯ ವೇಳೆ ಪ್ರವಾದಿವರ್ಯರು(ಸ) ಸ್ವತಃ ಯುದ್ಧ ರಂಗದಲ್ಲಿದ್ದರು. ಒಂದು ಕ್ಷಣದ ಮಟ್ಟಿಗಾದರೂ ಅವರು ವೈರಿಗಳನ್ನು ಎದುರಿಸುವುದರಿಂದ ಹಿಂದೆ ಸರಿಯಲಿಲ್ಲ. ಬನೂ ಕುರೈಝಾರ ದ್ರೋಹದಿಂದಾಗಿ ಮುಸ್ಲಿಮರ ಮಡದಿ ಮಕ್ಕಳು ಯಾವ ಅಪಾಯದಲ್ಲಿ ಸಿಲುಕಿದ್ದರೋ ಅದರಲ್ಲಿ ಸ್ವಯಂ ಪ್ರವಾದಿವರ್ಯರ(ಸ) ಮಡದಿ ಮಕ್ಕಳೂ ಇದ್ದರು. ಇತರ ಮುಸ್ಲಿಮರಿಗೆ ಇಲ್ಲದಂತಹ ಯಾವುದೇ ರಕ್ಷಣಾ ವ್ಯವಸ್ಥೆಯನ್ನು ಪ್ರವಾದಿವರ್ಯರು(ಸ) ತಮಗಾಗಿ ಮತ್ತು ತಮ್ಮ ಮಡದಿ ಮಕ್ಕಳಿಗಾಗಿ ಮಾಡಲಿಲ್ಲ. ಯಾವ ಉನ್ನತ ಉದ್ದೇಶಕ್ಕಾಗಿ ಮುಸ್ಲಿಮರು ತ್ಯಾಗ ಬಲಿದಾನಗಳನ್ನು ನೀಡಬೇಕೆಂದು ಅವರು ಬಯಸಿದ್ದರೋ ಅದರ ಮುಂಚೂಣಿಯಲ್ಲಿ ಅವರೇ ಇದ್ದರು. ಆದುದರಿಂದ ಪ್ರವಾದಿವರ್ಯರ(ಸ) ಅನುಯಾಯಿಯೆಂದು ವಾದಿಸುವವರು ಅವರ ಈ ಆದರ್ಶವನ್ನು ನೋಡಿ ಅವರನ್ನು ಅನುಸರಿಸಬೇಕಾಗಿತ್ತು.

ಇದು ಹಿನ್ನೆಲೆಯ ಪ್ರಕಾರ ಸೂಕ್ತದ ತಾತ್ಪರ್ಯವಾಗಿದೆ. ಆದರೆ ಅದರ ಪದಗಳು ಸಾರ್ವತ್ರಿಕವಾಗಿದೆ. ಅದರ ಉದ್ದೇಶವನ್ನು ಕೇವಲ ಇದೇ ಅರ್ಥಕ್ಕೆ ಸೀಮಿತಗೊಳಿಸಲು ಯಾವ ಕಾರಣವೂ ಇಲ್ಲ. ಪ್ರವಾದಿವರ್ಯರ(ಸ) ಜೀವನವು ಕೇವಲ ಇದಕ್ಕೆ ಅನ್ವಯವಾಗುವಂತಹ ಮಾದರಿಯಲ್ಲ. ಬದಲಾಗಿ ಅವರು ಸರ್ವ ರೀತಿಯಿಂದಲೂ ಮಾದರಿಯಾಗಿದ್ದಾರೆ ಎಂದು ಅಲ್ಲಾಹನು ಹೇಳಿದ್ದಾನೆ. ಆದುದರಿಂದ ಮುಸ್ಲಿಮರು ಪ್ರತಿಯೊಂದು ವಿಷಯದಲ್ಲೂ ಪ್ರವಾದಿವರ್ಯರ(ಸ) ಜೀವನವನ್ನು ತಮಗೆ ಮಾದರಿಯೆಂದು ತಿಳಿದು ಅದರಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕೆಂಬುದು ಈ ಸೂಕ್ತದ ಬೇಡಿಕೆಯಾಗಿದೆ.

35. ಅಂದರೆ ಅಲ್ಲಾಹನನ್ನು ಮರೆತವನಿಗೆ ಈ ಜೀವನ ಮಾದರಿಯಲ್ಲ. ಎಂದಾದರೊಮ್ಮೆ ಅವನನ್ನು ಸ್ಮರಿಸುವವನಿಗೂ ಇದು ಮಾದರಿಯಲ್ಲ. ಬದಲಾಗಿ ಅಲ್ಲಾಹನನ್ನು ಅತಿ ಹೆಚ್ಚು ಸ್ತುತಿಸುವ ಮತ್ತು ಅತಿ ಹೆಚ್ಚು ಸ್ಮರಿಸುವವನಿಗೆ ಖಂಡಿತ ಅದು ಮಾದರಿಯಾಗಿದೆ. ಅದೇ ರೀತಿ ಅಲ್ಲಾಹನ ಮೇಲೆ ಯಾವುದೇ ಆಸೆ ಆಕಾಂಕ್ಷೆಯನ್ನಾಗಲಿ, ಪರಲೋಕವೊಂದು ಇದೆಯೆಂಬ ನಿರೀಕ್ಷೆಯನ್ನಾಗಲಿ ಇರಿಸದವರಿಗೂ ಪ್ರವಾದಿವರ್ಯರ(ಸ) ಜೀವನವು ಮಾದರಿಯಾಗಲಾರದು. ಆದರೆ ಅಲ್ಲಾಹನ ಅನುಗ್ರಹ ಮತ್ತು ಕೊಡುಗೆಗಳ ಆಶೆಯಿಟ್ಟು ಕೊಂಡಿರುವ ಹಾಗೂ ಪರಲೋಕವೆಂಬುದು ಇದೆಯೆಂದೂ ಈ ಲೋಕದ ಜೀವನದಲ್ಲಿ ತನ್ನ ವರ್ತನೆ ಅಲ್ಲಾಹನ

إِيمَانًا وَتَسْلِيمًا ﴿٢٢﴾ مِّنَ الْمُؤْمِنِينَ رِجَالٌ صَدَقُوا مَا عَاهَدُوا اللَّهَ عَلَيْهِ ۖ فَمِنْهُم
مَّن قَضَىٰ نَحْبَهُ وَمِنْهُم مَّن يَنتَظِرُ ۖ وَمَا بَدَّلُوا تَبْدِيلًا ﴿٢٣﴾ لِّيَجْزِيَ اللَّهُ

ಸತ್ಯವಿಶ್ವಾಸಿಗಳು[36] ಆಕ್ರಮಣಕಾರಿ ಸೇನೆಗಳನ್ನು ಕಂಡಾಗ, "ಅಲ್ಲಾಹ್ ಮತ್ತು ಪೈಗಂಬರರು ನಮಗೆ ವಾಗ್ದಾನ ಮಾಡಿದ್ದುದು ಇದನ್ನೇ. ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಾತು ನಿಜವಾಗಿತ್ತು" ಎಂದು ಉದ್ಗರಿಸಿದರು.[37] ಈ ಘಟನೆಯು

---

ಪ್ರವಾದಿಯೊಂದಿಗೆ ಎಷ್ಟರ ಮಟ್ಟಿಗೆ ಸಮನ್ವಯವಾಗಿತ್ತೆಂಬುದನ್ನು ಅನುಸರಿಸಿ ಅಲ್ಲಿನ ಫಲಿತಾಂಶ ಪ್ರಕಟವಾಗಲಿದೆಯೆಂದೂ ಭಾವಿಸುವವನಿಗೆ ಖಂಡಿತವಾಗಿಯೂ ಪ್ರವಾದಿಯ ಜೀವನದಲ್ಲಿ ಮಾದರಿಯಿದೆ.

36. ಪ್ರವಾದಿಯವರ(ಸ) ಜೀವನ ಮಾದರಿಯತ್ತ ಗಮನ ಸೆಳೆದ ಬಳಿಕ ಅಲ್ಲಾಹನು ಸಹಾಬಿ (ಪ್ರವಾದಿ ಸಂಗಾತಿ)ಗಳ ಜೀವನ ಕ್ರಮವನ್ನು ಮಾದರಿಯಾಗಿ ಮುಂದಿಡುತ್ತಿದ್ದಾನೆ. ವಿಶ್ವಾಸದಲ್ಲಿ ಕಾಪಟ್ಯವುಳ್ಳವರು ಮತ್ತು ಪ್ರಾಮಾಣಿಕತೆಯೊಂದಿಗೆ ಪ್ರವಾದಿಯ ಅನುಸರಣೆ ಮಾಡುವವರ ನಡವಳಿಕೆಗಳನ್ನು ಸ್ಪಷ್ಟವಾಗಿ ಬಹಿರಂಗ ಪಡಿಸುವುದೇ ಇದರ ಉದ್ದೇಶವಾಗಿದೆ. ಬಾಹ್ಯವಾಗಿ ಸತ್ಯವಿಶ್ವಾಸದ ಘೋಷಣೆಯನ್ನು ಉಭಯತರರೂ ಸಮಾನವಾಗಿ ಮಾಡಿದ್ದಾರೆ. ಎರಡೂ ವರ್ಗದವರನ್ನು ಮುಸ್ಲಿಮರೆಂದೇ ಪರಿಗಣಿಸಲಾಗುತ್ತಿತ್ತು. ನಮಾಝ್‌ನಲ್ಲೂ ಅವರು ಒಟ್ಟಿಗೇ ಭಾಗವಹಿಸುತ್ತಿದ್ದರು. ಆದರೆ ಸತ್ವಪರೀಕ್ಷೆಯ ವೇಳೆ ಉಭಯತರರೂ ಪರಸ್ಪರ ಬೇರೆಯಾದರು. ಇದರಿಂದ ಅಲ್ಲಾಹನ ಮತ್ತು ಆತನ ಪ್ರವಾದಿಯ ನಿಷ್ಠಾವಂತ ಅನುಯಾಯಿಗಳು ಯಾರು ಮತ್ತು ನಾಮ ಮಾತ್ರ ಮುಸ್ಲಿಮರು ಯಾರು ಎಂಬುದು ಸ್ಪಷ್ಟವಾಗಿ ತಿಳಿಯುವಂತಾಯಿತು.

37. ಈ ಸಂದರ್ಭದಲ್ಲಿ 12ನೆಯ ಸೂಕ್ತವನ್ನು ದೃಷ್ಟಿಯಲ್ಲಿರಿಸಬೇಕು. ಮುನಾಫಿಕರು ಮತ್ತು ಮನಸ್ಸಿನಲ್ಲಿ ರೋಗವಿದ್ದವರು 10-12 ಸಾವಿರ ಯೋಧರ ಬೃಹತ್ ಸೇನೆಯು ಮುಂದಿನಿಂದಲೂ ಬನೂ ಕುರೈಝಾ ಹಿಂದಿನಿಂದಲೂ ದಾಳಿ ನಡೆಸುತ್ತಿರುವುದನ್ನು ಕಂಡು, "ಅಲ್ಲಾಹನು ಮತ್ತು ಅವನ ಪ್ರವಾದಿ ನಮ್ಮೊಂದಿಗೆ ಮಾಡಿದ ಎಲ್ಲ ವಾಗ್ದಾನಗಳೂ ಸುಳ್ಳು ಮತ್ತು ಮೋಸಗಾರಿಕೆಯದ್ದಾಗಿತ್ತು" ಎಂದು ಅಲ್ಲಿ ಹೇಳಲಾಗಿತ್ತು. ಅಲ್ಲಾಹನ ಧರ್ಮದ ಮೇಲೆ ವಿಶ್ವಾಸವಿಟ್ಟರೆ ಆತನ ಬೆಂಬಲ ನಿಮ್ಮೊಂದಿಗಿರುವುದೆಂದೂ, ಅರಬ್ ಮತ್ತು ಅರಬೇತರ ಪ್ರದೇಶಗಳಲ್ಲಿ ನಿಮ್ಮದೇ ಆಡಳಿತವಿರುವುದೆಂದೂ ಕಿಸ್ರಾ-ಕೈಸರ್‌ಗಳ ಬೊಕ್ಕಸಗಳು ನಿಮ್ಮ ವಶವಾಗುವುದೆಂದೂ ನಮ್ಮೊಂದಿಗೆ ಹೇಳಲಾಗಿತ್ತು. ಆದರೆ ಇಲ್ಲಿ ನಡೆಯುತ್ತಿರುವುದೇ ಬೇರೆ. ಅರಬರೆಲ್ಲರೂ ಒಟ್ಟು ಸೇರಿ ನಮ್ಮನ್ನು ಅಳಿಸಿ ಹಾಕಲು ಹೊರಟಿದ್ದಾರೆ. ಈ ಆಪತ್ತಿನಿಂದ ನಮ್ಮನ್ನು ರಕ್ಷಿಸಲು ದೇವಚರರ ದಂಡು ಎಲ್ಲಿಂದಲೂ ಇಳಿಯುವುದು ಕಾಣುವುದಿಲ್ಲ.

ಇಲ್ಲಿ ತಿಳಿಸುವುದೇನೆಂದರೆ, ಅಲ್ಲಾಹನ ಮತ್ತು ಪ್ರವಾದಿಯ ವಾಗ್ದಾನಗಳ ಒಂದರ್ಥವು ಈ ಕಪಟವಿಶ್ವಾಸಿಗಳು ಗ್ರಹಿಸಿದ್ದೇ ಆಗಿದೆ. ಆದರೆ ಇನ್ನೊಂದು ಅರ್ಥವು ನಿಷ್ಠಾವಂತ ಮುಸ್ಲಿಮರು ತಿಳಿದಂತೆಯೇ ಆಗಿದೆ. ಅಪಾಯಗಳ ಪ್ರವಾಹ ತಮ್ಮತ್ತ ಹರಿದು ಬರುತ್ತಿರುವುದನ್ನು ಕಂಡಾಗ ಅಲ್ಲಾಹನ ಮತ್ತು ಪ್ರವಾದಿಯ ವಾಗ್ದಾನಗಳು ಅವರಿಗೂ ನೆನಪಾದವು. ಆದರೆ ಸತ್ಯವಿಶ್ವಾಸ

الصّٰدِقِيْنَ بِصِدْقِهِمْ وَيُعَذِّبَ الْمُنٰفِقِيْنَ اِنْ شَآءَ اَوْ يَتُوْبَ عَلَيْهِمْ اِنَّ اللّٰهَ

ಅವರ ವಿಶ್ವಾಸವನ್ನೂ ಅವರ ಸಮರ್ಪಣಾಭಾವವನ್ನೂ ಇನ್ನಷ್ಟು ವರ್ಧಿಸಿಬಿಟ್ಟಿತು.[38] ಅಲ್ಲಾಹನೊಡನೆ ಮಾಡಿದ ಕರಾರನ್ನು ನಿಜವೆಂದು ಸಾಧಿಸಿ ತೋರಿಸಿದವರು ಸತ್ಯವಿಶ್ವಾಸ ಸ್ವೀಕಾರ ಮಾಡಿದವರಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದರು. ಇನ್ನು ಕೆಲವರು ಸಮಯ ಕಾಯುತ್ತಿದ್ದಾರೆ.[39] ಅವರು ತಮ್ಮ ನಿಲುಮೆಯಲ್ಲಿ ಏನೂ ಬದಲಾವಣೆ ಮಾಡಲಿಲ್ಲ. ಅಲ್ಲಾಹನು ಸತ್ಯಸಂಧರಿಗೆ ಅವರ ಸತ್ಯಸಂಧತೆಯ ಸತ್ಫಲ ನೀಡುವಂತಾಗಲಿಕ್ಕೂ ತಾನಿಚ್ಛಿಸಿದರೆ ಕಪಟವಿಶ್ವಾಸಿಗಳನ್ನು

---

ಸ್ವೀಕರಿಸುತ್ತಲೇ ಕಿರು ಬೆರಳನ್ನೂ ಅಲುಗಾಡಿಸದೆ ನೀವು ಲೋಕದ ಚಕ್ರವರ್ತಿಗಳಾಗುವಿರಿ. ದೇವಚರರು ಬಂದು ನಿಮಗೆ ಕಿರೀಟ ಧಾರಣೆ ಮಾಡುವರು ಎಂಬಂತಹ ವಾಗ್ದಾನಗಳಲ್ಲ. ಅದರ ಬದಲಾಗಿ, ನಿಮಗೆ ಕಠಿಣತರ ಅಗ್ನಿ ಪರೀಕ್ಷೆಗಳು ಎದುರಾಗುವುದು. ಸಂಕಷ್ಟಗಳ ಸರಮಾಲೆಯೇ ನಿಮ್ಮ ಮೇಲೆರಗುವುದು. ಅಪಾರ ತ್ಯಾಗ ಬಲಿದಾನಗಳನ್ನು ನೀವು ನೀಡಬೇಕಾದೀತು ಎಂಬ ವಾಗ್ದಾನಗಳು. ಆಗ ಮಾತ್ರ ಅಲ್ಲಾಹನ ಕೊಡುಗೆಗಳು ನಿಮಗೆ ಲಭಿಸುವುದು. ಅಲ್ಲಾಹನು ಸತ್ಯವಿಶ್ವಾಸಿ ದಾಸರಿಗೆ, ಈ ಕೆಳಗೆ ವಾಗ್ದಾನ ಮಾಡಿದ ಲೌಕಿಕ ಮತ್ತು ಪಾರಲೌಕಿಕ ವಿಜಯಗಳು ನಿಮಗೆ ದೊರೆಯುವುದು.

**"ನಿಮಗಿಂತ ಹಿಂದೆ ವಿಶ್ವಾಸವಿಟ್ಟಿದ್ದವರ ಮೇಲೆ ಸಂಭವಿಸಿದ್ದ ಘಟನೆಗಳೆಲ್ಲ ನಿಮ್ಮ ಮೇಲೆ ಇನ್ನೂ ಸಂಭವಿಸಿಲ್ಲದಿದ್ದರೂ ನಿಮಗೆ ನಿರಾಯಾಸವಾಗಿ ಸ್ವರ್ಗ ಪ್ರವೇಶ ಒದಗುವುದೆಂದು ನೀವೆನಿಸಿದ್ದೀರಾ? ಆಗಿನ ಸಂದೇಶವಾಹಕರೂ ಅವರ ಜೊತೆಯ ಸತ್ಯವಿಶ್ವಾಸಿಗಳೂ 'ಅಲ್ಲಾಹನ ಸಹಾಯ ಎಂದು ಬಂದೀತು' ಎಂದು ಕಿರುಚಿ ಬಿಡುವಷ್ಟು ಕಷ್ಟಗಳೂ ವಿಪತ್ತುಗಳೂ ಅವರ ಮೇಲೆರಗಿದುವು ಮತ್ತು ಅವರನ್ನು ನಡುಗಿಸಿ ಬಿಡಲಾಯಿತು. ಇದೋ ಅಲ್ಲಾಹನ ಸಹಾಯ ಸಮೀಪವಿದೆ(ಎಂದು ಆಗ ಅವರನ್ನು ಸಂತೈಸಲಾಯಿತು)."**

**(ಅಲ್ ಬಕರಃ: 214)**

**"ಜನರು, 'ನಾವು ವಿಶ್ವಾಸವಿರಿಸಿದೆವು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಬಿಟ್ಟು ಬಿಡಲಾಗುವುದೆಂದೂ ಅವರನ್ನು ಪರೀಕ್ಷಿಸಲಾಗದೆಂದೂ ಭಾವಿಸಿಕೊಂಡಿರುವರೆ? ವಸ್ತುತಃ ನಾವು ಇವರಿಗಿಂತ ಮುಂಚೆ ಗತಿಸಿ ಹೋದವರನ್ನು ಪರೀಕ್ಷೆಗೊಳಪಡಿಸಿದ್ದೆವು. ಯಾರು, ಸತ್ಯವಾದಿಗಳು ಮತ್ತು ಯಾರು ಸುಳ್ಳುಗಾರರು ಎಂಬುದನ್ನು ಅಲ್ಲಾಹನು ಪರೀಕ್ಷಿಸಬೇಕಾಗಿದೆ."**

**(ಅಲ್ ಅಂಕಬೂತ್: 2-3)**

38. ಅರ್ಥಾತ್- ಈ ಸೇನಾ ಪ್ರವಾಹವನ್ನು ಕಂಡು ಅವರ ನಂಬಿಕೆ ಚಂಚಲವಾಗುವ ಬದಲು ಇನ್ನಷ್ಟು ಸುದೃಢವಾಯಿತು. ಅವರು ಅಲ್ಲಾಹನ ವಿಧೇಯತೆಯನ್ನು ಬಿಟ್ಟೋಡುವ ಬದಲು ಇನ್ನಷ್ಟು ಆತ್ಮವಿಶ್ವಾಸದೊಂದಿಗೆ ತಮ್ಮ ಸರ್ವಸ್ವವನ್ನೂ ಅದಕ್ಕೆ ಅರ್ಪಿಸಲು ಸಿದ್ಧರಾದರು.

كَانَ غَفُورًا رَّحِيمًا ۞ وَرَدَّ اللّٰهُ الَّذِينَ كَفَرُوا بِغَيْظِهِمْ لَمْ يَنَالُوا خَيْرًا ۚ وَكَفَى

ಶಿಕ್ಷಿಸಲಿಕ್ಕೂ ಅಥವಾ ಅವರ ಪಶ್ಚಾತ್ತಾಪವನ್ನು ಸ್ವೀಕರಿಸಲಿಕ್ಕೂ (ಹೀಗೆಲ್ಲಾ ಆಯಿತು). ನಿಶ್ಚಯವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

ಇಲ್ಲಿ ಒಂದು ವಿಷಯವನ್ನು ಚೆನ್ನಾಗಿ ತಿಳಿದಿರಬೇಕು. ವಿಶ್ವಾಸ ಮತ್ತು ವಿಧೇಯತೆಯು ಧರ್ಮದ ಪ್ರತಿಯೊಂದು ಆಜ್ಞೆ ಮತ್ತು ಪ್ರತಿಯೊಂದು ಬೇಡಿಕೆಯ ವೇಳೆ ಪರೀಕ್ಷೆಗೊಳಗಾಗುವ ಒಂದು ಮಾನಸಿಕ ಸ್ಥಿತಿಯಾಗಿದೆ. ಲೌಕಿಕ ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ಮಾನವನು ಅಂತಹ ಸನ್ನಿವೇಶಗಳನ್ನೆದುರಿಸುತ್ತಾನೆ. ಅವನ ಧರ್ಮವು ಯಾವುದಾದರೂ ಆಜ್ಞೆ ನೀಡುತ್ತದೆ, ಒಂದು ವಸ್ತುವಿನಿಂದ ತಡೆಯುತ್ತದೆ ಅಥವಾ ಜೀವ, ಸೊತ್ತು, ಸಮಯ, ಪರಿಶ್ರಮ ಮತ್ತು ಆಶೆ-ಆಕಾಂಕ್ಷೆಗಳನ್ನು ಬಲಿ ನೀಡಬೇಕೆಂದು ಬಯಸುತ್ತದೆ. ಅಂತಹ ಸಂದರ್ಭಗಳಲ್ಲಿ ಯಾರು ವಿಧೇಯತೆಯಿಂದ ವಿಮುಖರಾಗುವರೋ ಅವರ ನಂಬಿಕೆಯು ದುರ್ಬಲವಾಗುವುದು. ಯಾರು ವಿಧೇಯತೆಯೊಂದಿಗೆ ಆಜ್ಞಾಪಾಲನೆ ಮಾಡುವನೋ ಅವನ ನಂಬಿಕೆಯಲ್ಲಿ ಹೆಚ್ಚಳವುಂಟಾಗುವುದು. ಆರಂಭದಲ್ಲಿ ಸತ್ಯವಚನ ಉಚ್ಚರಿಸುವುದರಿಂದ ಒಬ್ಬನು ಸತ್ಯವಿಶ್ವಾಸಿಯೆಂದು ಪರಿಗಣಿಸಲ್ಪಡುತ್ತಾನಾದರೂ ಅದು ಹೆಚ್ಚು ಕಡಿಮೆಯಾಗದಂತಹ ತಟಸ್ಥ ಸ್ಥಿತಿಯಲ್ಲಿರುವುದಿಲ್ಲ. ಅದು ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ. ಇದರ ಪತನದ ಪರಿಣಾಮವು ನಿಷ್ಠೆ ಮತ್ತು ಅನುಸರಣೆಯಲ್ಲಿ ಕುಸಿತದ ರೂಪದಲ್ಲಿ ಪ್ರಕಟವಾಗುತ್ತದೆ. ಈ ರೀತಿ ಮನುಷ್ಯ ಹಿಂದೆ ಸರಿಯುತ್ತಾ ಹೋಗಿ ಕಟ್ಟಕಡೆಗೆ ಅದರ ಕೊನೆಯ ಅಂಚಿಗೆ ತಲಪುತ್ತಾನೆ. ಅಲ್ಲಿಂದ ಕಿಂಚಿತ್ತಾದರೂ ಅತ್ತ ಸರಿದರೆ ಆತ ಮುನಾಫಿಕ್ ಆಗಿ ಮಾರ್ಪಡುತ್ತಾನೆ. ಅದಕ್ಕೆ ವ್ಯತಿರಿಕ್ತವಾಗಿ ಒಬ್ಬನಲ್ಲಿ ನಿಷ್ಠೆ ಹೆಚ್ಚಾದಂತೆ, ಅರ್ಪಣಾಭಾವ ಪರಿಪೂರ್ಣಗೊಂಡಂತೆ ಮತ್ತು ಸತ್ಯಧರ್ಮದ ಉನ್ನತಿಗಾಗಿ ತಲ್ಲೀನತೆ ಹೆಚ್ಚಿದಂತೆ ಸತ್ಯವಿಶ್ವಾಸವೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚುವುದು. ಈ ರೀತಿ ಮುಂದುವರಿದು ಕಟ್ಟಕಡೆಗೆ ಆತ ಸಿದ್ದೀಕ್ (ಸತ್ಯಸಂಧ)ನ ಸ್ಥಾನಕ್ಕೆ ತಲಪುತ್ತಾನೆ. ಆದರೆ ಈ ಹೆಚ್ಚು ಕಡಿಮೆಯೆಲ್ಲವೂ ಮಾನವನ ನೈತಿಕ ನೆಲೆಯಲ್ಲಿರುವುದು. ಅದಕ್ಕೆ ಬೆಲೆ ಕಟ್ಟಲು ಅಲ್ಲಾಹನ ಹೊರತು ಇನ್ನಾರಿಗೂ ಸಾಧ್ಯವಿಲ್ಲ. ಒಂದೇ ಸಾಕ್ಷ್ಯ ವಚನದ ಮೂಲಕ ಒಬ್ಬನು ಇಸ್ಲಾಮಿನೊಳಗೆ ಪ್ರವೇಶಿಸುತ್ತಾನೆ. ಅದರಲ್ಲಿ ಸ್ಥಿರವಾಗಿರುವ ತನಕ ಆತ ಮುಸ್ಲಿಮನೆಂದು ಪರಿಗಣಿಸಲ್ಪಡುತ್ತಾನೆ. ಅವನ ಕುರಿತು ನಾವು, ಆತ ಅರ್ಧಾಂಶ ವಿಶ್ವಾಸಿ, ಕಾಲಂಶ ವಿಶ್ವಾಸಿಯೆಂದೋ ಎರಡು ಪಟ್ಟು ಅಥವಾ ಮೂರು ಪಟ್ಟು ವಿಶ್ವಾಸಿಯೆಂದೋ ಹೇಳುವಂತಿಲ್ಲ. ಅದೇ ರೀತಿ ಕಾನೂನಿನ ಪ್ರಕಾರವೂ ಎಲ್ಲ ಮುಸ್ಲಿಮರೂ ಸಮಾನವಾಗಿದ್ದಾರೆ. ಒಬ್ಬನನ್ನು ನಾವು ಹೆಚ್ಚು ವಿಶ್ವಾಸಿಯೆಂದು ಹೇಳಿ ಅವನಿಗೆ ಹೆಚ್ಚು ಹಕ್ಕುಗಳನ್ನೂ ಇನ್ನೊಬ್ಬನನ್ನು ಕಡಿಮೆ ವಿಶ್ವಾಸಿಯೆಂದು ಸಾರಿ ಕಡಿಮೆ ಹಕ್ಕುಗಳನ್ನೂ ನೀಡುವಂತಿಲ್ಲ. ಈ ನೆಲೆಯಲ್ಲಿ ವಿಶ್ವಾಸ-ನಂಬಿಕೆಯಲ್ಲಿ ಯಾವುದೇ ಹೆಚ್ಚು ಕಡಿಮೆಯಾಗುವ ಪ್ರಶ್ನೆಯೇ ಇಲ್ಲ. ಇದನ್ನೇ ಬಹುಶಃ ಇಮಾಮ್ ಅಬೂ ಹನೀಫಾರವರು(ರ) ಹೀಗೆ ಹೇಳಿದ್ದಾರೆ- "ಈಮಾನ್‌ನಲ್ಲಿ ಹೆಚ್ಚು ಕಡಿಮೆಯುಂಟಾಗುವುದಿಲ್ಲ."

39. ಅಂದರೆ ಕೆಲವರು ಅಲ್ಲಾಹನ ಮಾರ್ಗದಲ್ಲಿ ಜೀವ ತೆತ್ತಾಗಿದೆ. ಇನ್ನು ಕೆಲವರು ಸಮಯ ಬಂದಾಗ ಆತನ ಧರ್ಮಕ್ಕೋಸ್ಕರ ತಮ್ಮ ರಕ್ತದ ಕಾಣಿಕೆ ನೀಡಲು ಸಿದ್ಧರಾಗಿ ನಿಂತಿದ್ದಾರೆ.

اللَّهُ الْمُؤْمِنِينَ الْقِتَالَ ۚ وَكَانَ اللَّهُ قَوِيًّا عَزِيزًا ﴿٢٥﴾ وَأَنزَلَ الَّذِينَ ظَاهَرُوهُم
مِّنْ أَهْلِ الْكِتَابِ مِن صَيَاصِيهِمْ وَقَذَفَ فِي قُلُوبِهِمُ الرُّعْبَ فَرِيقًا تَقْتُلُونَ
وَتَأْسِرُونَ فَرِيقًا ﴿٢٦﴾ وَأَوْرَثَكُمْ أَرْضَهُمْ وَدِيَارَهُمْ وَأَمْوَالَهُمْ وَأَرْضًا لَّمْ
تَطَئُوهَا ۚ وَكَانَ اللَّهُ عَلَىٰ كُلِّ شَيْءٍ قَدِيرًا ﴿٢٧﴾ يَا أَيُّهَا النَّبِيُّ قُل لِّأَزْوَاجِكَ إِن

(25-27) ಅಲ್ಲಾಹನು ಸತ್ಯನಿಷೇಧಕರ ಮುಖ ತಿರುಗಿಸಿ ಬಿಟ್ಟನು. ಅವರು ಏನೂ ಪ್ರಯೋಜನ ಪಡೆಯದೆ ತಮ್ಮ ಹೃದಯ ಬೇಗುದಿಯೊಂದಿಗೆ ಹಾಗೆಯೇ ಮರಳಿ ಹೋದರು. ಸತ್ಯವಿಶ್ವಾಸಿಗಳ ಕಡೆಯಿಂದ ಯುದ್ಧ ಮಾಡಲು ಅಲ್ಲಾಹನೇ ಸಾಕಾದನು. ಅಲ್ಲಾಹ್ ಪ್ರಬಲನೂ ಅಜೇಯನೂ ಆಗಿರುತ್ತಾನೆ. ಗ್ರಂಥದವರಲ್ಲಿ ಈ ಆಕ್ರಮಣಕಾರರಿಗೆ ನೆರವಾದವರನ್ನು[40] ಅಲ್ಲಾಹ್ ಅವರ ಕೋಟೆಗಳಿಂದ ಇಳಿಸಿ ತಂದನು ಮತ್ತು ಅವರ ಹೃದಯಗಳಲ್ಲಿ ಎಂತಹ ಭೀತಿಯನ್ನಿರಿಸಿ ಬಿಟ್ಟನೆಂದರೆ, ಅವರ ಒಂದು ಗುಂಪನ್ನು ನೀವು ವಧಿಸುತ್ತಿರುವಿರಿ ಮತ್ತು ಇನ್ನೊಂದು ಗುಂಪನ್ನು ಸೆರೆ ಹಿಡಿಯುತ್ತಿರುವಿರಿ. ಅವನು ನಿಮ್ಮನ್ನು ಅವರ ಭೂಮಿಯ, ಅವರ ಮನೆಗಳ ಮತ್ತು ಅವರ ಸಂಪತ್ತಿನ ಉತ್ತರಾಧಿಕಾರಿಗಳಾಗಿ ಮಾಡಿ ಬಿಟ್ಟನು. ನೀವೆಂದೂ ಕಾಲಿಟ್ಟಿರದ ಪ್ರದೇಶವನ್ನು ಅವನು ನಿಮಗೆ ಕೊಟ್ಟನು. ಅಲ್ಲಾಹನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು.

(28-29) ಪೈಗಂಬರರೇ[41] ನಿಮ್ಮ ಪತ್ನಿಯರೊಡನೆ ಹೇಳಿರಿ- "ನೀವು ಈ ಲೋಕ ಮತ್ತು ಇದರ ವೈಭವಗಳನ್ನು ಇಚ್ಛಿಸುತ್ತೀರಾದರೆ, ಬನ್ನಿರಿ. ನಾನು ನಿಮಗೇನಾದರೂ

---

40. ಬನೂ ಕುರೈಝಾದ ಯಹೂದಿಯರು.

41. ಇಲ್ಲಿಂದ 35ರ ತನಕದ ಸೂಕ್ತಗಳು ಅಹ್‌ಝಾಬ್ ಯುದ್ಧ ಮತ್ತು ಬನೂ ಕುರೈಝಾರ ಸೈನಿಕ ಕಾರ್ಯಾಚರಣೆಯ ಕಾಲದಲ್ಲೇ ಅವತೀರ್ಣಗೊಂಡಿದ್ದುವು. ಅವುಗಳ ಹಿನ್ನೆಲೆಯನ್ನು ನಾವು 'ಪ್ರಸ್ತಾವನೆ'ಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದೇವೆ. ಹ. ಜಾಬಿರ್ ಬಿನ್ ಅಬ್ದುಲ್ಲಾ(ರ) ಆ ಕಾಲದ ಘಟನೆಯನ್ನು ಹೀಗೆ ವಿವರಿಸುತ್ತಾರೆ- ಒಂದು ದಿನ ಹ. ಅಬೂಬಕರ್ ಮತ್ತು ಉಮರ್(ರ) ಪ್ರವಾದಿಯವರ(ಸ) ಮನೆಗೆ ಬಂದರು. ಅಲ್ಲಿ ಪ್ರವಾದಿ ಪತ್ನಿಯರು ಪ್ರವಾದಿವರ್ಯರ(ಸ) ಸುತ್ತ ಕುಳಿತಿರುವುದನ್ನೂ ಪ್ರವಾದಿವರ್ಯರು(ಸ) ಮೌನವಾಗಿ ಕುಳಿತಿರುವುದನ್ನೂ ಕಂಡರು. ಅವರು(ಸ) ಉಮರ್‌ರೊಂದಿಗೆ ಹೀಗೆಂದರು- 'ಇವರು ನನ್ನ ಸುತ್ತ ನೆರೆದಿರುವುದನ್ನು ನೀವು ನೋಡುತ್ತೀರಿ. ಇವರು ನನ್ನಿಂದ ಖರ್ಚಿಗೆ ಹಣ ಕೇಳುತ್ತಿದ್ದಾರೆ.' ಆಗ ಅಬೂಬಕರ್ ಮತ್ತು ಉಮರ್(ರ) ಇಬ್ಬರೂ ತಂತಮ್ಮ ಪುತ್ರಿಯರನ್ನು ಜರೆಯುತ್ತಾ, ನೀವು ಪ್ರವಾದಿವರ್ಯರಿಗೆ(ಸ) ಕಿರುಕುಳ ಕೊಡುತ್ತಿದ್ದೀರಾ, ಅವರ ಬಳಿಯಲ್ಲಿಲ್ಲದ್ದನ್ನು ಕೇಳುತ್ತಿದ್ದೀರಾ? ಎಂದು ಕೇಳಿದರು. (ಮುಸ್ಲಿಮ್) ಇದರಿಂದ, ಆ ಕಾಲದಲ್ಲಿ ಪ್ರವಾದಿವರ್ಯರು(ಸ) ಎಷ್ಟೊಂದು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದ್ದರು ಮತ್ತು

كُنْتُنَّ تُرِدْنَ الْحَيٰوةَ الدُّنْيَا وَزِيْنَتَهَا فَتَعَالَيْنَ اُمَتِّعْكُنَّ وَاُسَرِّحْكُنَّ سَرَاحًا جَمِيْلًا ﴿٢٨﴾ وَاِنْ كُنْتُنَّ تُرِدْنَ اللّٰهَ وَرَسُوْلَهٗ وَالدَّارَ الْاٰخِرَةَ فَاِنَّ اللّٰهَ اَعَدَّ لِلْمُحْسِنٰتِ مِنْكُنَّ اَجْرًا عَظِيْمًا ﴿٢٩﴾ يٰنِسَآءَ النَّبِيِّ مَنْ يَّاْتِ مِنْكُنَّ بِفَاحِشَةٍ

**ಕೊಡಿಸಿ ನಿಮ್ಮನ್ನು ಉತ್ತಮ ರೀತಿಯಲ್ಲಿ ಬೀಳ್ಕೊಡುತ್ತೇನೆ ಮತ್ತು ನೀವು ಅಲ್ಲಾಹ್, ಅವನ ಸಂದೇಶವಾಹಕರು ಮತ್ತು ಪರಲೋಕದ ಬೀಡನ್ನು ಇಚ್ಛಿಸುತ್ತೀರಾದರೆ, ನಿಮ್ಮಲ್ಲಿ ಸಜ್ಜನರಾಗಿರುವವರಿಗೆ ಅಲ್ಲಾಹ್ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿರುತ್ತಾನೆಂಬುದನ್ನು ತಿಳಿದುಕೊಳ್ಳಿರಿ.''**[42]

---

ಇಸ್ಲಾಮ್-ಕುಫ್ರ್‌ನ ತೀವ್ರ ಸಂಘರ್ಷಾವಸ್ಥೆಯಲ್ಲಿ ತಮ್ಮ ಪತ್ನಿಯರ ಖರ್ಚಿನ ಬೇಡಿಕೆಯು ಅವರ(ಸ) ಮೇಲೆ ಎಂತಹ ಪರಿಣಾಮ ಬೀರುತ್ತಿರಬಹುದೆಂದು ಅಂದಾಜಿಸಬಹುದು.

42. ಈ ಸೂಕ್ತ ಅವತೀರ್ಣಗೊಂಡ ಕಾಲದಲ್ಲಿ ಪ್ರವಾದಿವರ್ಯರಿಗೆ(ಸ) ನಾಲ್ವರು ಪತ್ನಿಯರಿದ್ದರು- ಸೌದಾ, ಆಯಿಶಾ, ಹಫ್ಸಾ ಮತ್ತು ಉಮ್ಮು ಸಲಮ(ರ). ಝೈನಬ್‌ರೊಂದಿಗೆ ಇನ್ನೂ ವಿವಾಹವಾಗಿರಲಿಲ್ಲ. (ಅಹ್ಕಾಮುಲ್ ಕುರ್‌ಆನ್- ಇಬ್ನು ಅರಬಿ-ಈಜಿಪ್ಟ್, ಮುದ್ರಿತ 1958, ಭಾಗ-3, ಪುಟ : 1512-13) ಈ ಸೂಕ್ತ ಅವತೀರ್ಣಗೊಂಡಾಗ ಪ್ರವಾದಿ(ಸ) ಮೊತ್ತ ಮೊದಲು ಆಯಿಶಾರೊಂದಿಗೆ ಹೀಗೆಂದರು, "ನಾನು ಒಂದು ವಿಷಯ ಕೇಳುತ್ತೇನೆ- ಉತ್ತರಿಸಲು ಅವಸರ ಪಡಬಾರದು. ಈ ಕುರಿತು ನಿನ್ನ ಹೆತ್ತವರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ ತೀರ್ಮಾನಿಸಿ ಹೇಳು." ಅನಂತರ ಪ್ರವಾದಿ(ಸ) ಅಲ್ಲಾಹನ ವಹಿಯಿಂದ ಆದೇಶ ಬಂದಿರುವುದಾಗಿ ಹೇಳಿ ಈ ಸೂಕ್ತವನ್ನು ಪಠಿಸಿ ಕೇಳಿಸಿದರು. ಆಗ ಆಯಿಶಾ(ರ) ಹೀಗೆ ಉತ್ತರಿಸಿದರು, "ಈ ವಿಷಯದಲ್ಲಿ ನಾನು ನನ್ನ ಹೆತ್ತವರೊಂದಿಗೆ ಸಮಾಲೋಚನೆ ನಡೆಸಬೇಕೇ? ನಾನಂತೂ ಅಲ್ಲಾಹನನ್ನೂ ಆತನ ಸಂದೇಶವಾಹಕರನ್ನೂ ಪರಲೋಕದ ಗೃಹವನ್ನೂ ಬಯಸುತ್ತೇನೆ." ತರುವಾಯ ಪ್ರವಾದಿವರ್ಯರು(ಸ) ಇತರ ಮೂವರು ಪತ್ನಿಯರ ಬಳಿಗೂ ಹೋಗಿ ಇದೇ ವಿಷಯವನ್ನು ಮುಂದಿರಿಸಿದರು. ಅವರಲ್ಲಿ ಪ್ರತಿಯೊಬ್ಬರೂ ಆಯಿಶಾ ನೀಡಿದಂತಹ ಉತ್ತರವನ್ನೇ ನೀಡಿದರು. (ಅಹ್ಮದ್, ಮುಸ್ಲಿಮ್, ನಸಾಈ)

ಪಾರಿಭಾಷಿಕದಲ್ಲಿ ಇದನ್ನು ತಖ್‌ಯೀರ್ ಎಂದು ಕರೆಯಲಾಗುತ್ತದೆ. ಅರ್ಥಾತ್ ಪತ್ನಿಯಾದವಳಿಗೆ ತನ್ನ ಪತಿಯೊಂದಿಗೆ ಬಾಳುವ ಅಥವಾ ಅವನಿಂದ ಬೇರ್ಪಡುವ ಸ್ವಾತಂತ್ರ್ಯ ನೀಡುವುದು. ಈ ತಖ್‌ಯೀರ್ ಪ್ರವಾದಿವರ್ಯರಿಗೆ(ಸ) ಕಡ್ಡಾಯವಾಗಿತ್ತು. ಏಕೆಂದರೆ ಅಲ್ಲಾಹನು ಪ್ರವಾದಿಗೆ ಈ ಆಜ್ಞೆ ನೀಡಿದ್ದನು. ಒಂದು ವೇಳೆ ಪ್ರವಾದಿ ಪತ್ನಿಯರ ಪೈಕಿ ಯಾರಾದರೂ ಬೇರ್ಪಡುವುದನ್ನು ಬಯಸಿದ್ದರೆ ತನ್ನಷ್ಟಕ್ಕೆ ಬೇರ್ಪಡುತ್ತಿರಲಿಲ್ಲ. ಬದಲಾಗಿ ಸೂಕ್ತದಲ್ಲಿರುವ, "ಬನ್ನಿ, ನಾನು ನಿಮಗೇನಾದರೂ ಕೊಟ್ಟು ಉತ್ತಮ ರೀತಿಯಲ್ಲಿ ನಿಮ್ಮನ್ನು ಬೇರ್ಪಡಿಸುತ್ತೇನೆ" ಎಂಬ ಪದಗಳು ವ್ಯಕ್ತ ಪಡಿಸುವಂತೆ ಪ್ರವಾದಿವರ್ಯರು(ಸ) ಅವರನ್ನು ಬೇರ್ಪಡಿಸಿದರೆ ಮಾತ್ರ ಬೇರ್ಪಡುತ್ತಿದ್ದರು. ಆದರೆ ಪ್ರವಾದಿವರ್ಯರಿಗೆ(ಸ) ಅವರನ್ನು ಬೇರ್ಪಡಿಸುವುದು ಕಡ್ಡಾಯವಾಗಿತ್ತು.

ಏಕೆಂದರೆ ಪ್ರವಾದಿಯೆಂಬ ನೆಲೆಯಲ್ಲಿ ತಮ್ಮ ವಾಗ್ದಾನವನ್ನು ಈಡೇರಿಸದಿರುವುದು ಅವರಿಗೆ ಭೂಷಣವಾಗಿರಲಿಲ್ಲ. ಒಂದು ವೇಳೆ ಬೇರ್ಪಡೆಯಾಗುತ್ತಿದ್ದರೆ ಅವರು 'ಉಮ್ಮಹಾತುಲ್ ಮೂಮಿನೀನ್' (ಸತ್ಯವಿಶ್ವಾಸಿಗಳ ಮಾತೆಯರು) ಎಂಬ ಸ್ಥಾನದಿಂದ ಹೊರ ಹೋಗುತ್ತಿದ್ದರು ಮತ್ತು ಅವರೊಂದಿಗೆ ಇತರರು ವಿವಾಹವಾಗುವುದು ನಿಷಿದ್ಧವಾಗುತ್ತಿರಲಿಲ್ಲ. ಏಕೆಂದರೆ ಅವರಿಗೆ ನೀಡಲಾದ ಆಯ್ಕೆಯ ಸ್ವಾತಂತ್ರ್ಯದಿಂದ ಅವರು ಇಹಲೋಕ ಮತ್ತದರ ವೈಭವಗಳಿಗಾಗಿಯೇ ಪ್ರವಾದಿವರ್ಯರನ್ನು(ಸ) ತ್ಯಜಿಸುತ್ತಿದ್ದರಲ್ಲವೆ. ವಿವಾಹದಿಂದ ಅವರನ್ನು ವಂಚಿತಗೊಳಿಸುತ್ತಿದ್ದರೆ ಅವರ ಈ ಉದ್ದೇಶವು ಈಡೇರುತ್ತಿರಲಿಲ್ಲವೆಂಬುದು ವ್ಯಕ್ತ. ಇನ್ನೊಂದು ಕಡೆ, ಅಲ್ಲಾಹನನ್ನೂ ಪ್ರವಾದಿಯನ್ನೂ ಪರಲೋಕವನ್ನೂ ಮೆಚ್ಚಿದ ಪತ್ನಿಯರಿಗೆ ತಲಾಕ್ ನೀಡುವ ಅಧಿಕಾರ ಉಳಿಯಲಿಲ್ಲವೆಂಬುದೂ ಈ ಸೂಕ್ತದ ಇಂಗಿತವೆಂದು ತಿಳಿದು ಬರುತ್ತದೆ. ಏಕೆಂದರೆ ತಖ್‌ಯೀರ್‌ಗೆ ಎರಡೇ ಮುಖಗಳಿದ್ದುವು. ಅಂದರೆ, ಇಹಲೋಕವನ್ನು ಬಯಸುವುದಾದರೆ ನಿಮ್ಮನ್ನು ಬಿಡಲಾಗುವುದು. ಅಲ್ಲಾಹನನ್ನೂ ಪ್ರವಾದಿಯನ್ನೂ ಪರಲೋಕವನ್ನೂ ಬಯಸುವುದಾದರೆ ನಿಮ್ಮನ್ನು ಬಿಡಲಾಗದು. ಈ ಪೈಕಿ ಪ್ರವಾದಿ ಪತ್ನಿಯೊಬ್ಬರು ಒಂದನ್ನು ಅವಲಂಬಿಸಿದರೆ ಇನ್ನೊಂದು ತನ್ನಷ್ಟಕ್ಕೆ ನಿಷಿದ್ಧವಾಗುತ್ತದೆ.

ಇಸ್ಲಾಮೀ ಕರ್ಮಶಾಸ್ತ್ರದಲ್ಲಿ ತಖ್‌ಯೀರ್‌ಗೆ ತಲಾಕ್‌ನ ಅಧಿಕಾರ ವಹಿಸಿಕೊಡುವ ಸ್ಥಾನವಿದೆ. ಅಂದರೆ ಪತಿಯು ಪತ್ನಿಗೆ, ಆಕೆ ತನ್ನ ವಿವಾಹ ಬಂಧನದಲ್ಲಿರಲು ಬಯಸಿದರೆ ಇರಬಹುದೆಂದೂ ಅನ್ಯಥಾ ಬಿಟ್ಟು ಬಿಡಬಹುದೆಂದೂ ಆಯ್ಕೆಯ ಸ್ವಾತಂತ್ರ್ಯ ನೀಡುತ್ತಾನೆ. ಈ ವಿಷಯಕ್ಕೆ ಸಂಬಂಧಿಸಿ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಿಂದ ಕರ್ಮಶಾಸ್ತ್ರಜ್ಞರು ಕಂಡುಕೊಂಡ ನಿಯಮಗಳ ಸಾರಾಂಶವನ್ನು ಈ ಕೆಳಗೆ ಕೊಡಲಾಗುತ್ತದೆ-

1) ಈ ಆಯ್ಕೆಯ ಸ್ವಾತಂತ್ರ್ಯವನ್ನು ಒಮ್ಮೆ ಸ್ತ್ರೀಗೆ ಕೊಟ್ಟ ನಂತರ ಪತಿ ಅದನ್ನು ಹಿಂತೆಗೆದುಕೊಳ್ಳುವಂತಿಲ್ಲ. ಅದನ್ನು ಬಳಸುವುದರಿಂದ ಆಕೆಯನ್ನು ತಡೆಯುವಂತೆಯೂ ಇಲ್ಲ. ಆದರೆ ಸ್ತ್ರೀ ಈ ಸ್ವಾತಂತ್ರ್ಯವನ್ನು ಚಲಾಯಿಸಲೇಬೇಕೆಂದಿಲ್ಲ. ಆಕೆ ಬಯಸಿದರೆ ಪತಿಯೊಂದಿಗೆ ಇರಬಹುದು. ಅನ್ಯಥಾ ಬೇರ್ಪಡುವುದಾಗಿ ಘೋಷಿಸಬಹುದು ಅಥವಾ ಏನೂ ಹೇಳದೆ ಈ ಸ್ವಾತಂತ್ರ್ಯವನ್ನು ಹಾಗೆಯೇ ವ್ಯರ್ಥಗೊಳಿಸಬಹುದು.

2) ಈ ಸ್ವಾತಂತ್ರ್ಯವು ಸ್ತ್ರೀಗೆ ನೀಡಲ್ಪಡಲು ಎರಡು ಶರತ್ತುಗಳಿವೆ. ಒಂದನೆಯದಾಗಿ, ಪತಿಯು ಆಕೆಗೆ ಸ್ಪಷ್ಟ ಮಾತುಗಳಲ್ಲಿ ತಲಾಕ್‌ನ ಸ್ವಾತಂತ್ರ್ಯ ನೀಡಿರಬೇಕು ಇಲ್ಲವೆ ಒಂದು ವೇಳೆ ತಲಾಕೆಂದು ಸಾರದಿದ್ದರೂ ಆತನ ಇಚ್ಛೆ ತಲಾಕ್‌ನ ಸ್ವಾತಂತ್ರ್ಯ ನೀಡುವುದಾಗಿರಬೇಕು. ಉದಾ; ಆತ 'ನಿನಗೆ ಸ್ವಾತಂತ್ರ್ಯವಿದೆ' ಅಥವಾ 'ನಿನ್ನ ಪ್ರಕರಣ ನಿನ್ನ ಕೈಯಲ್ಲಿದೆ' ಎಂದು ಸೂಚ್ಯವಾಗಿ ಹೇಳಿದರೆ ಪತಿಯ ಇಚ್ಛೆಯಿಲ್ಲದೆ ತಲಾಕ್‌ನ ಸ್ವಾತಂತ್ರ್ಯ ಸ್ತ್ರೀಯ ಕಡೆಗೆ ವರ್ಗವಾಗುವಂತಿಲ್ಲ. ಒಂದು ವೇಳೆ ಸ್ತ್ರೀ ಹಾಗೆ ಹೇಳಿದರೆ ಮತ್ತು ಪತಿಯು ತನ್ನ ಇಚ್ಛೆ ತಲಾಕ್‌ನ ಸ್ವಾತಂತ್ರ್ಯ ನೀಡುವುದಾಗಿರಲಿಲ್ಲವೆಂದು ಆಣೆ ಹಾಕಿ ಹೇಳಿದರೆ ಆತನ ಮಾತನ್ನು ಒಪ್ಪಿಕೊಳ್ಳಲಾಗುವುದು. ಈ ಪದಗಳನ್ನು ಕಲಹವೇರ್ಪಟ್ಟಾಗ ಅಥವಾ ತಲಾಕ್‌ನ ವಿಷಯ ಮಾತಾಡುವಾಗ ಹೇಳಿದ್ದನೆಂಬುದಕ್ಕೆ ಸ್ತ್ರೀ ಪುರಾವೆ ಒದಗಿಸಿದರೆ ಆ ಮಾತು ಬೇರೆ. ಏಕೆಂದರೆ ಈ ಹಿನ್ನೆಲೆಯಲ್ಲಿ ಈ ಸ್ವಾತಂತ್ರ್ಯ ನೀಡುವುದರ ಅರ್ಥ ಪತಿಯ ಉದ್ದೇಶವು ತಲಾಕ್‌ನ ಸ್ವಾತಂತ್ರ್ಯ ನೀಡುವುದೇ ಆಗಿತ್ತೆಂದು ಭಾವಿಸಬೇಕಾಗುತ್ತದೆ. ಎರಡನೆಯದಾಗಿ ಈ ಆಯ್ಕೆಯ ಸ್ವಾತಂತ್ರ್ಯವನ್ನು ತನಗೆ ನೀಡಲಾಗಿದೆಯೆಂದು ಸ್ತ್ರೀ ತಿಳಿದಿರಬೇಕು. ಆಕೆ ಅಲ್ಲಿಲ್ಲದಿದ್ದರೆ ಅವಳಿಗೆ ಅದರ ಸುದ್ದಿ ತಲಪಬೇಕು. ಆಕೆ ಉಪಸ್ಥಿತಳಿದ್ದರೆ

ಅವಳಿಗೆ ಆ ಪದಗಳು ಕೇಳಿರಬೇಕು. ಆಕೆಗೆ ಅವನ ಮಾತು ಕೇಳದೆ ಇದ್ದರೆ ಅಥವಾ ಸುದ್ದಿ ತಲಪದೆ ಇದ್ದರೆ ಈ ಸ್ವಾತಂತ್ರ್ಯವು ಆಕೆಗೆ ಹೋಗುವಂತಿಲ್ಲ.

3) ಪತಿಯು ಯಾವುದೇ ಸಮಯ ನಿರ್ಣಯವಿಲ್ಲದೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದರೆ ಸ್ತ್ರೀ ಅದನ್ನು ಎಷ್ಟು ಸಮಯದ ವರೆಗೆ ಬಳಸಬಹುದು ಎಂಬ ಬಗ್ಗೆ ಕರ್ಮಶಾಸ್ತ್ರ ವಿದ್ವಾಂಸರ ಮಧ್ಯೆ ಭಿನ್ನಾಭಿಪ್ರಾಯಗಳಿವೆ. ಒಂದು ವರ್ಗದ ಅಭಿಪ್ರಾಯ ಪ್ರಕಾರ, ಈ ಮಾತು ಪತಿ ಎಲ್ಲಿ ಹೇಳಿರುವನೋ ಅಲ್ಲೇ ಆಕೆ ತನ್ನ ಸ್ವಾತಂತ್ರ್ಯವನ್ನು ಬಳಸಬೇಕು. ಒಂದು ವೇಳೆ ಆಕೆ ಏನೂ ಹೇಳದೆ ಅಲ್ಲಿಂದ ಎದ್ದು ಹೋದರೆ ಅಥವಾ ಬೇರಾವುದೋ ಕೆಲಸದಲ್ಲಿ ನಿರತಳಾದರೆ ಅದರ ಅರ್ಥ ಆಕೆ ಏನೂ ಹೇಳ ಬಯಸುವುದಿಲ್ಲವೆಂದಾಗುತ್ತದೆ. ಆಗ ಆಕೆಯ ಈ ಸ್ವಾತಂತ್ರ್ಯ ಅನೂರ್ಜಿತಗೊಳ್ಳುತ್ತದೆ. ಇದು ಹ. ಉಮರ್, ಉಸ್ಮಾನ್, ಇಬ್ನುಮಸ್‌ಊದ್, ಜಾಬಿರ್, ಬಿನ್ ಝೈದ್(ರ), ಅತಾ, ಶಲ್‌ಬೀ, ನಖಈ, ಇಮಾಮ್ ಮಾಲಿಕ್, ಅಬೂ ಹನೀಫಾ, ಶಾಫಿಈ, ಔಝಾಈ, ಸುಫ್ಯಾನ್ ಸೌರಿ ಮತ್ತು ಅಬೂ ಸೌರ್‌ರವರ(ರ) ಅಭಿಪ್ರಾಯವಾಗಿದೆ. ಇನ್ನೊಂದು ಅಭಿಪ್ರಾಯ- ಈ ಸ್ವಾತಂತ್ರ್ಯವು ಆಕೆ ಅಲ್ಲಿರುವ ಹೊತ್ತಿಗಷ್ಟೇ ಸೀಮಿತವಲ್ಲ, ಅದನ್ನು ಅನಂತರವೂ ಬಳಸಿಕೊಳ್ಳಬಹುದು. ಇದು ಹಸನ್ ಬಸರೀ, ಕತಾದ ಮತ್ತು ಝುಹ್ರೀ ಅವರ ಅಭಿಪ್ರಾಯವಾಗಿದೆ.

4) ಪತಿಯು ಸಮಯ ನಿಶ್ಚಯಿಸಿದರೆ, ಉದಾ: ನಿನಗೆ ಒಂದು ತಿಂಗಳ ವರೆಗೆ ಅಥವಾ ಒಂದು ವರ್ಷದ ವರೆಗೆ ಸ್ವಾತಂತ್ರ್ಯವಿದೆಯೆಂದೋ ಇಂತಿಷ್ಟು ಸಮಯದ ವರೆಗೆ ನಿನ್ನ ಪ್ರಕರಣ ನಿನ್ನ ಕೈಯಲ್ಲಿದೆಯೆಂದೋ ಹೇಳಿದರೆ ಆ ಅವಧಿಯ ವರೆಗೆ ಮಾತ್ರ ಆಕೆ ಅದನ್ನು ಬಳಸಬಹುದು. ಇನ್ನು ಆತ, ಯಾವಾಗ ಬೇಕಾದರೂ ನೀನು ಈ ಸ್ವಾತಂತ್ರ್ಯವನ್ನು ಬಳಸಿಕೊಳ್ಳಬಹುದು ಎಂದು ಹೇಳಿದರೆ ಆಗ ಅವಳಿಗಿರುವ ಸ್ವಾತಂತ್ರ್ಯಕ್ಕೆ ಸಮಯ ಮಿತಿಯಿರಲಾರದು.

(5) ಸ್ತ್ರೀ ಬೇರ್ಪಡ ಬಯಸಿದರೆ ಸ್ಪಷ್ಟ ಮಾತುಗಳಲ್ಲಿ ಅದನ್ನು ಪ್ರಕಟಿಸಬೇಕು. ಅಸ್ಪಷ್ಟ ಮಾತುಗಳಿಂದೇನೂ ಪ್ರಯೋಜನವಿಲ್ಲ. ಅದರಿಂದ ಇಂಗಿತವೂ ತಿಳಿಯಲಾರದು.

6) ಕಾನೂನಿನ ಪ್ರಕಾರ ಪತಿಯು ಸ್ತ್ರೀಗೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡುವುದರ ಮೂರು ವರ್ಗಗಳಿವೆ. ಒಂದನೆಯದು, 'ನಿನ್ನ ಪ್ರಕರಣವು ನಿನ್ನ ಕೈಯಲ್ಲಿದೆ'ಯೆಂದು ಹೇಳುವುದು. ಎರಡನೆಯದು, 'ನಿನಗೆ ಸ್ವಾತಂತ್ರ್ಯವಿದೆ'ಯೆಂದು ಹೇಳುವುದು. ಮೂರನೆಯದು, 'ನೀನು ಬಯಸುವುದಾದರೆ ನಿನಗೆ ತಲಾಕ್ ಇದೆ' ಎಂದು ಹೇಳುವುದು. ಕಾನೂನು ಪ್ರಕಾರ ಪ್ರತಿಯೊಂದರ ಪರಿಣಾಮವೂ ಬೇರೆ ಬೇರೆಯಾಗಿದೆ.

(ಅ) 'ನಿನ್ನ ಪ್ರಕರಣವು ನಿನ್ನ ಕೈಯಲ್ಲಿದೆ' ಎಂದು ಹೇಳಿದ್ದು, ಸ್ತ್ರೀಯು ಅದಕ್ಕೆ ತಾನು ಬೇರ್ಪಡುತ್ತೇನೆಂದು ಸ್ಪಷ್ಟ ಪಡಿಸುವಂತಹ ಉತ್ತರವನ್ನು ಕೊಟ್ಟರೆ ಹನಫಿಗಳ ಪ್ರಕಾರ (ಮರಳಿ ಸ್ವೀಕರಿಸಲಾಗದಂತಹ) ಒಂದು ಬಾಇನ್ ತಲಾಕ್ ಆಗುತ್ತದೆ. (ಆದರೆ ಇದ್ದತ್ ಅವಧಿ ಮುಗಿದ ನಂತರ ಅವರು ಬಯಸಿದರೆ ಪರಸ್ಪರ ವಿವಾಹವಾಗಬಹುದು). ಒಂದು ವೇಳೆ ಪತಿಯು ಒಂದು ತಲಾಕ್‌ನ ವರೆಗೆ ನಿನ್ನ ಪ್ರಕರಣ ನಿನ್ನ ಕೈಯಲ್ಲಿದೆಯೆಂದು ಹೇಳಿದರೆ ಒಂದು ರಜ್‌ಈ ತಲಾಕ್ ಆಗುತ್ತದೆ (ಅರ್ಥಾತ್ ಇದ್ದತ್ ಅವಧಿಯೊಳಗೆ ಪತಿ ಆಕೆಯನ್ನು ಮರಳಿ ಸ್ವೀಕರಿಸಬಹುದು) ಆದರೆ ಪತಿಯು ಪ್ರಕರಣವನ್ನು ಸ್ತ್ರೀಯ ಕೈಗೊಪ್ಪಿಸುವಾಗ ಮೂರು ತಲಾಕ್‌ನ ಸಂಕಲ್ಪ ಮಾಡಿದ್ದರೆ ಅಥವಾ ಅದನ್ನು ಸ್ಪಷ್ಟವಾಗಿ ಸಾರಿದ್ದರೆ ಸ್ತ್ರೀಯ ತಲಾಕ್‌ನ ಸ್ವಾತಂತ್ರ್ಯವು ಮೂರು ತಲಾಕ್ ಎಂದೇ ಪರಿಗಣಿಸಲ್ಪಡುವುದು- ಆಕೆ ಸ್ಪಷ್ಟವಾಗಿ ತನ್ನ ಮೇಲೆ ಮೂರು ತಲಾಕ್ ಜಾರಿಗೊಳಿಸಲಿ ಅಥವಾ ನಾನು ಬೇರ್ಪಟ್ಟಿದ್ದೇನೆಂದೋ ನನಗೆ ನಾನೇ ತಲಾಕ್ ನೀಡಿದ್ದೇನೆಂದೋ ಹೇಳಲಿ.

مُّبَيِّنَةٍ يُّضٰعَفْ لَهَا الْعَذَابُ ضِعْفَيْنِ ۭ وَكَانَ ذٰلِكَ عَلَى اللّٰهِ يَسِيْرًا ۝
وَمَنْ يَّقْنُتْ مِنْكُنَّ لِلّٰهِ وَرَسُوْلِهٖ وَتَعْمَلْ صَالِحًا نُّؤْتِهَآ اَجْرَهَا مَرَّتَيْنِ

**(30-31)** ಪೈಗಂಬರರ ಪತ್ನಿಯರೇ, ನಿಮ್ಮಲ್ಲಿ ವ್ಯಕ್ತವಾದ ಅಶ್ಲೀಲ ಕಾರ್ಯವೆಸಗುವವಳಿಗೆ ಇಮ್ಮಡಿ ಯಾತನೆ ಕೊಡಲಾಗುವುದು.[43] ಇದು ಅಲ್ಲಾಹನಿಗೆ ಅತಿ

---

(ಅ) 'ನಿನಗೆ ಸ್ವಾತಂತ್ರ್ಯವಿದೆ' ಎಂಬ ಪದಗಳೊಂದಿಗೆ ಪತಿಯು ಸ್ತ್ರೀಗೆ ಬೇರ್ಪಡುವ ಸ್ವಾತಂತ್ರ್ಯ ನೀಡಿದ್ದರೆ ಮತ್ತು ಸ್ತ್ರೀಯು ಬೇರ್ಪಡುವುದಾಗಿ ಸ್ಪಷ್ಟವಾಗಿ ಹೇಳಿದ್ದರೆ ಹನಫೀಗಳ ಪ್ರಕಾರ ಒಂದು ಬಾಇನ್ ತಲಾಕ್ ಆಗುವುದು. ಒಂದು ವೇಳೆ ಪತಿಯು ಮೂರು ತಲಾಕ್ ನೀಡುವ ಉದ್ದೇಶ ಹೊಂದಿದ್ದರೂ ಸರಿ. (ಆದರೆ ಪತಿ ಮೂರು ತಲಾಕ್‌ನ ಸ್ವಾತಂತ್ರ್ಯ ನೀಡಿದ್ದೇನೆಂದು ಸ್ಪಷ್ಟವಾಗಿ ಸಾರಿದ್ದರೆ, ಸ್ತ್ರೀಯ ತಲಾಕ್‌ನ ಸ್ವಾತಂತ್ರ್ಯದ ಬಳಕೆಯಿಂದ ಮೂರು ತಲಾಕ್ ಸಂಭವಿಸುವುದು.) ಇಮಾಮ್ ಶಾಫಿಈಯವರ ಪ್ರಕಾರ ಪತಿಯು ಆಯ್ಕೆಯ ಸ್ವಾತಂತ್ರ್ಯ ನೀಡುವಾಗ ತಲಾಕ್‌ನ ಉದ್ದೇಶ ಹೊಂದಿದ್ದರೆ ಮತ್ತು ಪತ್ನಿಯು ಬೇರ್ಪಟ್ಟರೆ ಒಂದು ರಜಈ ತಲಾಕ್ ಆಗುವುದು. ಇಮಾಮ್ ಮಾಲಿಕ್‌ರ ಪ್ರಕಾರ ಸಂಸರ್ಗವೇರ್ಪಟ್ಟ ಪತ್ನಿಗೆ ಮೂರು ತಲಾಕ್ ಆಗುವುದು ಮತ್ತು ಸಂಸರ್ಗವೇರ್ಪಟ್ಟಿರದವಳ ಬಗ್ಗೆ ಪತಿಯ ಉದ್ದೇಶ ಒಂದೇ ತಲಾಕ್ ಎಂದಾಗಿದ್ದರೆ ಅದನ್ನು ಒಪ್ಪಿಕೊಳ್ಳಲಾಗುವುದು.

(ಇ) 'ನೀನು ಬಯಸುವುದಾದರೆ ನಿನಗೆ ತಲಾಕ್ ಇದೆ' ಎಂದು ಹೇಳಿದಾಗ ಸ್ತ್ರೀಯು ಆ ಸ್ವಾತಂತ್ರ್ಯವನ್ನು ಬಳಸಿದಾಗ ಅದು ರಜಈ ತಲಾಕ್ ಆಗುವುದು. ಬಾಇನ್ ತಲಾಕ್ ಆಗಲಾರದು.

7) ಪುರುಷನು ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದ ಬಳಿಕ ಸ್ತ್ರೀಯು ಆತನ ಪತ್ನಿಯೇ ಆಗಿ ಉಳಿಯ ಬಯಸಿದರೆ ಆಗ ತಲಾಕ್ ಸಂಭವಿಸಲಾರದು. ಹ. ಉಮರ್, ಅಬ್ದುಲ್ಲಾ ಬಿನ್ ಮಸ್‌ಊದ್, ಆಯಿಶಾ, ಅಬೂದರ್ದಾ, ಇಬ್ನು ಅಬ್ಬಾಸ್ ಮತ್ತು ಇಬ್ನು ಉಮರ್‌ರವರ(ರ) ಅಭಿಪ್ರಾಯವು ಇದುವೇ ಆಗಿದ್ದು ಹೆಚ್ಚಿನ ಕರ್ಮಶಾಸ್ತ್ರ ಪಂಡಿತರು ಇದನ್ನೇ ಅಂಗೀಕರಿಸಿದ್ದಾರೆ. ಮಸ್ರೂಕ್ ಅವರು ಈ ಸಮಸ್ಯೆಯ ಕುರಿತು ಆಯಿಶಾರಲ್ಲಿ ವಿಚಾರಿಸಿದಾಗ ಅವರು ಹೀಗೆ ಉತ್ತರಿಸಿದರು, "ಪ್ರವಾದಿ(ಸ) ತಮ್ಮ ಪತ್ನಿಯರಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದ್ದರು. ಅವರೆಲ್ಲರೂ ಪ್ರವಾದಿವರ್ಯರ(ಸ) ಜತೆಯಲ್ಲೇ ಇರುವುದನ್ನು ಇಷ್ಟಪಟ್ಟರು. ಅದನ್ನು ತಲಾಕ್ ಎಂದು ಪರಿಗಣಿಸಲಾಗುವುದೆ? "ಈ ವಿಷಯದಲ್ಲಿ ಹ. ಅಲೀ ಮತ್ತು ಝೈದ್ ಬಿನ್ ಸಾಬಿತ್‌ರವರ(ರ) ಒಂದು ಅಭಿಪ್ರಾಯವು, ಒಂದು ರಜಈ ತಲಾಕ್ ಆಗುತ್ತದೆ ಎಂದಿದೆ. ಆದರೆ ಇನ್ನೊಂದು ವರದಿ ಪ್ರಕಾರ, ಯಾವುದೇ ತಲಾಕ್ ಸಂಭವಿಸುವುದಿಲ್ಲವೆಂದು ಈ ಇಬ್ಬರೂ ಹೇಳಿದ್ದಾರೆ.

43. ಪ್ರವಾದಿಯವರ(ಸ) ಪಾವನ ಪತ್ನಿಯರು ಏನಾದರೂ ಅಶ್ಲೀಲ ಕಾರ್ಯ ಮಾಡಿ ಬಿಡುವರೆಂಬ ಆಶಂಕೆ ಅವರಿಗೆ(ಸ) ಇತ್ತೆಂದು ಇದರ ಅರ್ಥವಲ್ಲ. ಬದಲಾಗಿ, ಇಸ್ಲಾಮೀ ಸಮಾಜದಲ್ಲಿ ಅವರಿಗೆ ಎಷ್ಟು ಉನ್ನತ ಸ್ಥಾನವಿದೆ ಮತ್ತು ಅದಕ್ಕನುಗುಣವಾಗಿ ಅವರ ಹೊಣೆಗಾರಿಕೆಗಳೂ ಎಷ್ಟು ಮಹತ್ತರವೆಂದು ಮನವರಿಕೆ ಮಾಡಿಕೊಡುವುದೇ ಇದರ ಉದ್ದೇಶವಾಗಿದೆ. ಆದುದರಿಂದ ಅವರ ನೈತಿಕ ನಡವಳಿಕೆಗಳೂ ಅತ್ಯಂತ ಪಾವನವಾಗಿರಬೇಕು. ಇದು ಅಲ್ಲಾಹನು ಪ್ರವಾದಿವರ್ಯರೊಂದಿಗೆ(ಸ) 'ನೀವು ಶಿರ್ಕ್ ಮಾಡಿದರೆ ನಿಮ್ಮ ಕರ್ಮಗಳು ನಿರರ್ಥಕಗೊಳ್ಳುವುದು'

وَ اَعۡتَدۡنَا لَهَا رِزۡقًا كَرِيۡمًا ۞ يٰنِسَآءَ النَّبِىِّ لَسۡتُنَّ كَاَحَدٍ مِّنَ النِّسَآءِ اِنِ

ಲಭವಾದ ಕೆಲಸ.[44] ಅದಲ್ಲದೆ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ನುಸರಣೆ ಮಾಡುವವಳಿಗೆ ಮತ್ತು ಸತ್ಕರ್ಮವೆಸಗುವವಳಿಗೆ ನಾವು ಇಮ್ಮಡಿ ತ್ಫಲವನ್ನೀಯುವೆವು.[45] ನಾವು ಅವಳಿಗಾಗಿ ಗೌರವಪೂರ್ಣ ಜೀವನಾಧಾರವನ್ನು ದ್ಧಗೊಳಿಸಿಟ್ಟಿದ್ದೇವೆ.

**(32-34)** ಪೈಗಂಬರರ ಪತ್ನಿಯರೇ, ನೀವು ಸಾಮಾನ್ಯ ಸ್ತ್ರೀಯರಂತಲ್ಲ.[46] ನೀವು ಲ್ಲಾಹನನ್ನು ಭಯಪಡುವವರಾಗಿದ್ದರೆ ಮಾನಸಿಕ ಕೇಡಿಗೊಳಗಾದ ವ್ಯಕ್ತಿಯು

ಂದು ಹೇಳಿದಂತಿದೆ.(ಅಝ್ಝುಮರ್ : 65) ಇದರರ್ಥ ಪ್ರವಾದಿವರ್ಯರು(ಸ) ಶಿರ್ಕ್ ಮಾಡುವರೆಂಬ ಭೀತಿಯಿತ್ತೆಂದಲ್ಲ. ಶಿರ್ಕ್ ಎಷ್ಟು ದೊಡ್ಡ ಪಾಪ, ಅದರಿಂದ ದೂರವಿರಬೇಕಾದುದು ಎಷ್ಟು ಅಗತ್ಯವೆಂಬುದನ್ನು ಪ್ರವಾದಿವರ್ಯರಿಗೂ(ಸ) ಅವರ ಮೂಲಕ ಜನಸಮುದಾಯಕ್ಕೂ ನವರಿಕೆ ಮಾಡಿಕೊಡುವುದೇ ಅದರ ಉದ್ದೇಶವಾಗಿತ್ತು.

44. ಪ್ರವಾದಿಯ(ಸ) ಪತ್ನಿಯರಾಗಿರುವುದರಿಂದ ಅಲ್ಲಾಹನ ಹಿಡಿತದಿಂದ ಪಾರಾಗಬಹುದು ಥವಾ ನಿಮ್ಮ ಸ್ಥಾನವು ಅತ್ಯುನ್ನತವಾಗಿರುವುದರಿಂದ ಅಲ್ಲಾಹನಿಗೆ ನಿಮ್ಮನ್ನು ಹಿಡಿಯಲು ಷ್ಟವಾಗಬಹುದು ಎಂಬ ಭ್ರಮೆಯಲ್ಲಿರಬೇಡಿರಿ.

45. ಪಾಪಗಳಿಗೆ ಇಮ್ಮಡಿ ಶಿಕ್ಷೆ ಮತ್ತು ಪುಣ್ಯಗಳಿಗೆ ಇಮ್ಮಡಿ ಪ್ರತಿಫಲ ನೀಡಲು ಾರಣವೇನೆಂದರೆ ಮಾನವ ಸಮಾಜದಲ್ಲಿ ಉನ್ನತ ಸ್ಥಾನಮಾನದ ಜನರು ಸಾಮಾನ್ಯವಾಗಿ ಜನರ ಾಯಕರಾಗಿರುತ್ತಾರೆ. ಅಧಿಕ ಸಂಖ್ಯೆಯ ಜನರು ಒಳಿತು-ಕೆಡುಕುಗಳಲ್ಲಿ ಅವರನ್ನೇ ಹಿಂಬಾಲಿಸುತ್ತಾರೆ. ವರ ಕೆಡುಕು ಕೇವಲ ವೈಯಕ್ತಿಕ ಕೇಡಾಗಿರುವುದಿಲ್ಲ. ಬದಲಾಗಿ ಒಂದು ಜನಸಮೂಹದ ಕೇಡಿಗೆ ಾರಣವಾಗುವುದು. ಅವರ ಒಳಿತುಗಳೂ ಕೇವಲ ವೈಯಕ್ತಿಕ ಒಳಿತಾಗಿರುವುದಿಲ್ಲ. ಬದಲಾಗಿ ಅದು ನೇಕ ಮಾನವರ ಸುಧಾರಣೆಯ ಹೇತುವಾಗಿರುವುದು. ಆದುದರಿಂದ ಅವರು ದುಷ್ಕೃತ್ಯಗಳನ್ನೆಸಗಿದಾಗ ಮ್ಮ ಕೆಡುಕಿನ ಜೊತೆಗೆ ಇತರರನ್ನೂ ಕೆಡಿಸಿದ ಶಿಕ್ಷೆಯನ್ನು ಪಡೆಯುತ್ತಾರೆ. ಅದೇ ರೀತಿ ಅವರು ತ್ಕಾರ್ಯಗಳನ್ನು ಮಾಡಿದರೆ ತಮ್ಮ ಪುಣ್ಯದ ಜೊತೆಗೆ ಇತರರಿಗೆ ಸನ್ಮಾರ್ಗ ತೋರಿಸಿದ ್ರತಿಫಲವನ್ನೂ ಪಡೆಯುತ್ತಾರೆ.

ಈ ಸೂಕ್ತದಿಂದ ಒಂದು ತತ್ವ ಹೊರಡುತ್ತದೆ. ಅದೇನೆಂದರೆ ಗೌರವ ಮತ್ತು ಪ್ರಾಮಾಣಿಕತನದ ರೀಕ್ಷೆ ಹೆಚ್ಚಿರುವಲ್ಲಿ ಅಗೌರವ ಮತ್ತು ಅಪ್ರಾಮಾಣಿಕತೆಯ ಅಪರಾಧವೂ ಅಷ್ಟೇ ಹೆಚ್ಚಾಗಿರುವುದು ಮತ್ತು ಅಷ್ಟೇ ಕಠಿಣ ಶಿಕ್ಷೆಯೂ ಅದಕ್ಕೆ ಸಿಗುವುದು. ಉದಾ; ಮಸೀದಿಯಲ್ಲಿ ಶರಾಬು ಡಿಯುವುದು ಮನೆಯಲ್ಲಿ ಕುಡಿಯುವುದಕ್ಕಿಂತ ದೊಡ್ಡ ಅಪರಾಧವಾಗಿದ್ದು ಅದರ ಶಿಕ್ಷೆಯೂ ಠಿಣವಾಗಿರುವುದು. ಅದೇ ರೀತಿ ವಿವಾಹ ನಿಷಿದ್ಧ ಸ್ತ್ರೀಯರೊಂದಿಗೆ ವ್ಯಭಿಚಾರವೆಸಗುವುದು ರಸ್ತ್ರೀಯ ಮೇಲೆ ವ್ಯಭಿಚಾರವೆಸಗುವುದಕ್ಕಿಂತ ತೀವ್ರತಮ ಅಪರಾಧವಾಗಿದ್ದು ಅದರ ಶಿಕ್ಷೆಯೂ ಠೋರವಾಗಿರುವುದು.

46. ಇಲ್ಲಿಂದ ಕೊನೆಯ ಪಾರಾದ ವರೆಗಿನ ಸೂಕ್ತಗಳು ಮೊದಲು ಬಂದ ಇಸ್ಲಾಮಿನ ಪರ್ದಾ ಯಮಗಳ ಕುರಿತಾಗಿವೆ. ಅವುಗಳಲ್ಲಿ ಪ್ರವಾದಿ ಪತ್ನಿಯರನ್ನು ಅಭಿಸಂಬೋಧಿಸಲಾಗಿದೆ. ಆದರೆ

تَّقَيْتُنَّ فَلَا تَخْضَعْنَ بِالْقَوْلِ فَيَطْمَعَ الَّذِي فِي قَلْبِهِ مَرَضٌ وَقُلْنَ قَوْلًا
مَّعْرُوفًا ﴿٣٢﴾ وَقَرْنَ فِي بُيُوتِكُنَّ وَلَا تَبَرَّجْنَ تَبَرُّجَ الْجَاهِلِيَّةِ الْأُولَىٰ وَأَقِمْنَ

ಪ್ರಲೋಭನಕ್ಕೊಳಗಾಗಿ ಬಿಡುವ ರೀತಿಯಲ್ಲಿ ಮೋಹಕ ದನಿಯಲ್ಲಿ ಮಾತಾಡಬೇಡಿರಿ. ನಿಖರವಾಗಿ ಮಾತಾಡಿರಿ.[47] ನಿಮ್ಮ ಮನೆಗಳಲ್ಲೇ ಇದ್ದುಕೊಳ್ಳಿರಿ.[48] ಗತ ಅಜ್ಞಾನ

---

ಅದರ ಉದ್ದೇಶವು ಎಲ್ಲ ಮುಸ್ಲಿಮರ ಮನೆಗಳಲ್ಲೂ ಈ ಸುಧಾರಣೆಗಳನ್ನು ಜಾರಿಗೊಳಿಸುವುದಾಗಿದೆ. ಪ್ರವಾದಿ ಪತ್ನಿಯರನ್ನು ಅಭಿಸಂಬೋಧಿಸಿರುವುದರ ಉದ್ದೇಶವೇನೆಂದರೆ ಪ್ರವಾದಿಯವರ(ಸ) ಮನೆಗಳಿಂದ ಈ ಪಾವನ ಜೀವನ ವಿಧಾನ ಆರಂಭಗೊಂಡರೆ ಎಲ್ಲ ಮುಸ್ಲಿಮರ ಮನೆಗಳ ಹೆಂಗಸರೂ ಅದರ ಅನುಕರಣೆ ಮಾಡುವರು. ಏಕೆಂದರೆ ಈ ಮನೆಗಳೇ ಅವರಿಗೆ ಆದರ್ಶವಾಗಿದ್ದುವು. ಕೆಲವರು ಈ ಸೂಕ್ತಗಳು ಪ್ರವಾದಿ ಪತ್ನಿಯರನ್ನುದ್ದೇಶಿಸಿ ಹೇಳಲಾಗಿರುವುದರಿಂದ ಅದರ ಆಜ್ಞೆಗಳೂ ಅವರಿಗೆ ಮಾತ್ರ ಸೀಮಿತವೆಂದು ವಾದಿಸುತ್ತಾರೆ. ಆದರೆ ಮುಂದೆ ಈ ಸೂಕ್ತಗಳಲ್ಲಿ ಏನೆಲ್ಲ ಹೇಳಲಾಗಿದೆಯೆಂಬುದನ್ನು ಓದಿ ನೋಡಿ. ಪ್ರವಾದಿ ಪತ್ನಿಯರಿಗೆ ಮಾತ್ರ ಸೀಮಿತವಾದ, ಉಳಿದ ಮುಸ್ಲಿಮ್ ಮಹಿಳೆಯರಿಗೆ ಸೀಮಿತವಲ್ಲದ ಯಾವ ವಿಷಯ ಅದರಲ್ಲಿದೆ? ಕೇವಲ ಪ್ರವಾದಿ ಪತ್ನಿಯರು ಶುದ್ಧ ಚಾರಿತ್ರ್ಯವಂತರಾದರೆ ಸಾಕು, ಅವರು ಮಾತ್ರ ಅಲ್ಲಾಹನನ್ನೂ ಸಂದೇಶವಾಹಕರನ್ನೂ ಅನುಸರಿಸಿದರೆ, ನಮಾಝ್ ಮಾಡಿದರೆ ಮತ್ತು ಝಕಾತ್ ಕೊಟ್ಟರೆ ಸಾಕು ಎಂದಷ್ಟೇ ಅಲ್ಲಾಹನ ಉದ್ದೇಶವಾಗಿತ್ತೆ? ಅದು ಉದ್ದೇಶವಾಗಿರಲಿಲ್ಲವೆಂದಾದರೆ, ಮನೆಗಳಲ್ಲಿ ನೆಮ್ಮದಿಯಿಂದ ಕುಳಿತುಕೊಳ್ಳುವಂತೆ, ಅಜ್ಞಾನ ಕಾಲದ ಶೃಂಗಾರಗಳನ್ನು ತೋರೆಯುವಂತೆ ಮತ್ತು ಪರಪುರುಷರೊಡನೆ ಮೆಲುದನಿಯಲ್ಲಿ ಮಾತಾಡದಿರುವಂತೆ ನೀಡಲಾದ ಆಜ್ಞೆಗಳು ಅವರಿಗೆ ಮಾತ್ರ ಸೀಮಿತವಾಗುವುದು ಹಾಗೂ ಇತರ ಮುಸ್ಲಿಮ್ ಸ್ತ್ರೀಯರು ಅದರಿಂದ ಹೊರತಾಗುವುದು ಹೇಗೆ?,ಒಂದೇ ಪರಂಪರೆಯ ಒಟ್ಟು ಆಜ್ಞೆಗಳ ಪೈಕಿ ಕೆಲವು ಸಾಮಾನ್ಯ ಇನ್ನು ಕೆಲವು ವಿಶಿಷ್ಟವೆಂದು ಸಾರಲು ಸೂಕ್ತ ಪುರಾವೆಗಳಿವೆಯೆ? ಇನ್ನು 'ನೀವು ಸಾಮಾನ್ಯ ಸ್ತ್ರೀಯರಂತಲ್ಲ' ಎಂಬ ವಾಕ್ಯ. ಅದರಿಂದಲೂ ಸಾಮಾನ್ಯ ಹೆಂಗಸರು ಬೆಡಗು ಬಿನ್ನಾಣಗಳೊಂದಿಗೆ ಹೊರ ಹೋಗಬಹುದು. ಪರ ಪುರುಷರ ಜೊತೆ ಚೆನ್ನಾಗಿ ಬೆರೆತು ಮಾತಾಡಬಹುದು. ಆದರೆ ನೀವು ಮಾತ್ರ ಹಾಗೆ ಮಾಡಬಾರದು ಎಂಬ ಅರ್ಥ ಬರುವುದಿಲ್ಲ. ಬದಲಾಗಿ ವಾಕ್ ಶೈಲಿ ಹೇಗಿದೆಯೆಂದರೆ 'ಒಬ್ಬ ಸಭ್ಯ ವ್ಯಕ್ತಿ ತನ್ನ ಮಗನೊಡನೆ, ನೀನು ಪುಂಡ ಪೋಕರಿಗಳಂತಲ್ಲ, ನೀನು ಬಯ್ಯಬಾರದು ಎಂದು ಹೇಳುತ್ತಾನೆ' ಎಂದಾದರೆ ಅವನು ತನ್ನ ಮಗನು ಬಯ್ಯುವುದನ್ನು ಕೆಟ್ಟದೆಂದು ಭಾವಿಸುತ್ತಾನೆ. ಆದರೆ ಇತರ ಮಕ್ಕಳಲ್ಲಿ ಈ ದೋಷವಿದ್ದರೆ ಅವನಿಗೇನೂ ಆಕ್ಷೇಪವಿಲ್ಲವೆಂದು ಯಾವನೇ ಬುದ್ಧಿಮತ್ತೆಯುಳ್ಳ ವ್ಯಕ್ತಿ ಅರ್ಥೈಸಲಾರ.

47. ಅರ್ಥಾತ್- ಅಗತ್ಯ ಬಂದಾಗ ಪರ ಪುರುಷರೊಡನೆ ಮಾತಾಡುವುದರಲ್ಲಿ ಅಡ್ಡಿಯಿಲ್ಲ. ಆದರೆ ಹಾಗೆ ಮಾತಾಡುವಾಗ ಸ್ತ್ರೀಯ ಮಾತಿನ ಶೈಲಿ ಹೇಗಿರಬೇಕೆಂದರೆ ಈ ಮಹಿಳೆಯಿಂದ ಬೇರೇನಾದರೂ ಬಯಸಬಹುದು ಎಂಬಂತಹ ದುರ್ಭಾವನೆ ಆ ಪುರುಷನ ಮನಸ್ಸಿನಲ್ಲಿ ಮೂಡಬಾರದು. ಅವಳ ಮಾತಿನಲ್ಲಿ ಕೋಮಲತೆಯಿರಬಾರದು, ಯಾವುದೇ ವಯ್ಯಾರವಿರಬಾರದು, ಪುರುಷನ ವಿಕಾರಗಳನ್ನು ಕೆರಳಿಸಿ ಆತ ಮುಂದಿನ ಹೆಜ್ಜೆಗೆ ಧೈರ್ಯಪಡುವಂತಹ ಸ್ವರ ಮಾಧುರ್ಯ

ವಿರಬಾರದು. ಈ ಶೈಲಿಯ ಕುರಿತು ಅಲ್ಲಾಹನು ಹೇಳುತ್ತಾನೆ, 'ದೇವಭಯವಿರುವ ಮತ್ತು ಕೆಡುಕಿನಿಂದ ದೂರವಿರಬೇಕೆಂದು ಬಯಸುವ ಯಾವ ಮಹಿಳೆಗೂ ಈ ಶೈಲಿ ಭೂಷಣವಲ್ಲ.' ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅದು ಕರ್ಮಭ್ರಷ್ಟ ದುಷ್ಟ ಹೆಂಗಸರ ಶೈಲಿಯೇ ಹೊರತು ಧರ್ಮನಿಷ್ಠ ಸತ್ಯವಿಶ್ವಾಸಿನಿಯರದ್ದಲ್ಲ. ಇದರೊಂದಿಗೆ ಅನ್ನೂರ್ ಅಧ್ಯಾಯದ, 'ಅವರು ತಾವು ಮರೆಸಿಟ್ಟಿರುವಂತಹ ಅಲಂಕಾರದ ಅರಿವು ಜನರಿಗಾಗುವಂತೆ ತಮ್ಮ ಪಾದಗಳನ್ನು ನೆಲಕ್ಕೆ ಬಡಿಯುತ್ತಾ ನಡೆಯದಿರಲಿ' ಎಂಬ ಸೂಕ್ತವನ್ನೂ**(24:31)** ನೋಡಿದರೆ, ಸ್ತ್ರೀಯರು ಬೇಕು ಬೇಕೆಂದೇ ತಮ್ಮ ಸ್ವರವನ್ನು ಅಥವಾ ಆಭರಣಗಳ ಝೇಂಕಾರವನ್ನು ಪರ ಪುರುಷರಿಗೆ ಕೇಳಿಸಬಾರದು ಮತ್ತು ಅಗತ್ಯಬಿದ್ದಾಗ ಪರಪುರುಷರೊಂದಿಗೆ ಮಾತಾಡಬೇಕಾಗಿ ಬಂದಾಗ ಬಹಳ ಜಾಗರೂಕತೆಯಿಂದ ಮಾತಾಡಬೇಕು ಎಂಬ ಅಲ್ಲಾಹನ ಇಂಗಿತವನ್ನು ಗ್ರಹಿಸಬಹುದು. ಆದುದರಿಂದ ಸ್ತ್ರೀಯರಿಗೆ, ಅದಾನ್ ಕೊಡುವುದನ್ನು ನಿಷೇಧಿಸಲಾಗಿದೆ. ಅದೇ ರೀತಿ ಸಾಮೂಹಿಕ ನಮಾಝ್‌ನಲ್ಲಿ ಇಮಾಮ್‌ನಿಂದ ತಪ್ಪು ಸಂಭವಿಸಿದರೆ ಅವರಿಗೆ ಪುರುಷರಂತೆ 'ಸುಬ್‌ಹಾನಲ್ಲಾಹ್' ಎಂದು ಹೇಳುವ ಅನುಮತಿಯಿಲ್ಲ. ಬದಲಾಗಿ ಇಮಾಮನ ಗಮನ ಸೆಳೆಯಲು ಅವರು ಕೈತಟ್ಟಿ ಶಬ್ದ ಮಾಡಬೇಕೆಂದು ವಿಧಿಸಲಾಗಿದೆ.

ಈಗ ಸ್ವಲ್ಪ ಆಲೋಚಿಸಿ, ಯಾವ ಧರ್ಮವು ಸ್ತ್ರೀಗೆ ಪರ ಪುರುಷರೊಂದಿಗೆ ಮಾತಾಡುವಾಗಲೂ ಮೆತ್ತಗೆ ಮಾತಾಡುವುದನ್ನೂ ಪರ ಪುರುಷರ ಮುಂದೆ ಅನಗತ್ಯವಾಗಿ ಶಬ್ದ ಹೊರಡಿಸುವುದನ್ನೂ ತಡೆಯುತ್ತದೋ ಅದು ಸ್ತ್ರೀಯು ವೇದಿಕೆಗೆ ಹತ್ತಿ ಹಾಡು, ಕುಣಿತ ಮತ್ತಿತರ ವೈಯಾರಗಳನ್ನು ಪ್ರದರ್ಶಿಸುವುದನ್ನು ಇಷ್ಟ ಪಡುವುದಾದರೂ ಹೇಗೆ? ಅದು ಸ್ತ್ರೀಗೆ ರೇಡಿಯೋದಲ್ಲಿ ಪ್ರೇಮಗೀತೆಗಳನ್ನು ಹಾಡುವುದಕ್ಕೂ ರಾಗತರಂಗಗಳೊಂದಿಗೆ ಅಶ್ಲೀಲ ವಿಷಯಗಳನ್ನು ಜನರಿಗೆ ಕೇಳಿಸಿ ಅವರ ವಿಕಾರಗಳನ್ನು ಕೆರಳಿಸಲಿಕ್ಕೂ ಅನುಮತಿ ನೀಡೀತೆ? ಅದು ಸ್ತ್ರೀಯರನ್ನು ನಾಟಕಗಳಲ್ಲಿ ಕೆಲವೊಮ್ಮೆ ಒಬ್ಬನ ಪತ್ನಿ, ಇನ್ನು ಕೆಲವೊಮ್ಮೆ ಇನ್ನೊಬ್ಬನ ಪ್ರೇಯಸಿಯಾಗಿ ನಟಿಸುವುದನ್ನು ಸಮ್ಮತಿಸೀತೆ? ಆಕೆಯನ್ನು ಗಗನ ಸಖಿಯಾಗಿ ಮಾಡಿ ಪ್ರಯಾಣಿಕರ ಮನಮೋಹಿಸುವ ತರಬೇತಿ ನೀಡುವುದಕ್ಕೆ ಅಥವಾ ಕ್ಲಬ್ಬುಗಳಲ್ಲಿ, ಸಭೆ ಸಮಾರಂಭಗಳಲ್ಲಿ ಹಾಗೂ ಸ್ತ್ರೀ-ಪುರುಷರು ತುಂಬಿದ ಸಭೆಗಳಲ್ಲಿ ಶೃಂಗರಿಸಿಕೊಂಡು ಬಂದು ಪುರುಷರ ಜೊತೆ ಮುಕ್ತ ಮಾತುಕತೆ ಮತ್ತು ಹಾಸ್ಯ ವಿನೋದಗಳಲ್ಲಿ ತಲ್ಲೀನರಾಗಲು ಅನುಮತಿಸೀತೆ? ಇದಾವ ಕುರ್‌ಆನಿನಿಂದ ಪಡೆದ ಸಂಸ್ಕೃತಿಯಾಗಿದೆ? ಅಲ್ಲಾಹನು ಅವತೀರ್ಣಗೊಳಿಸಿದ ಕುರ್‌ಆನಂತೂ ಎಲ್ಲರ ಮುಂದಿದೆ. ಅದರಲ್ಲಿ ಎಲ್ಲಾದರೂ ಈ ಸಂಸ್ಕೃತಿ ತೋರಿ ಬರುವುದಾದರೆ ಅದನ್ನು ಯಾರಾದರೂ ತೋರಿಸಿಕೊಡಲಿ.

48. ಮೂಲದಲ್ಲಿ 'ಕರ್ನ' ಎಂಬ ಪದ ಬಳಕೆಯಾಗಿದೆ. ಅರ್ಥಕೋಶ ತಜ್ಞರ ಪೈಕಿ ಕೆಲವರು ಅದರ ಮೂಲ ಪದ 'ಕರಾರ್' ಎಂದೂ ಇನ್ನು ಕೆಲವರು 'ವಕಾರ್' ಎಂದೂ ಹೇಳಿದ್ದಾರೆ. ಕರಾರ್ ಎಂದು ತೆಗೆದುಕೊಂಡರೆ ಇದರ ಅರ್ಥ 'ನೆಲಸು', 'ಇರು' ಎಂದಾಗುತ್ತದೆ. ಇನ್ನು ವಕಾರ್ ಎಂದು ತೆಗೆದುಕೊಂಡರೆ 'ನೆಮ್ಮದಿಯಿಂದಿರು, ಶಾಂತಿಯಿಂದಿರು' ಎಂದಾಗುತ್ತದೆ. ಎರಡೂ ಸ್ಥಿತಿಗಳಲ್ಲಿ ಸೂಕ್ತದ ಉದ್ದೇಶವೇನೆಂದರೆ ಸ್ತ್ರೀಯ ನೈಜ ಕಾರ್ಯರಂಗ ಮನೆಯಾಗಿದೆ. ಅವಳು ಆ ಕ್ಷೇತ್ರದಲ್ಲೇ ಇದ್ದುಕೊಂಡು ನೆಮ್ಮದಿಯಿಂದ ತನ್ನ ಕರ್ತವ್ಯಗಳನ್ನು ನೆರವೇರಿಸಬೇಕು. ಅಗತ್ಯ ಬಿದ್ದಾಗ ಮಾತ್ರ ಮನೆಯಿಂದ ಹೊರಗೆ ಹೋಗಬಹುದು. ಸೂಕ್ತದ ಪದಗಳಿಂದಲೂ ಈ ಉದ್ದೇಶ ವ್ಯಕ್ತವಾಗುತ್ತದೆ. ಪ್ರವಾದಿಯವರ(ಸ) ವಚನಗಳು ಇದನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಹಾಫಿಝ್ ಅಬೂಬಕರ್ ಬಝ್ಝಾರ್ ಅವರು ಹ. ಅನಸ್‌ರಿಂದ(ರ) ಹೀಗೆ ಉಲ್ಲೇಖಿಸುತ್ತಾರೆ- ಪ್ರವಾದಿವರ್ಯರೊಡನೆ(ಸ) ಮಹಿಳೆಯರು ಹೀಗೆ ದೂರಿಕೊಂಡರು- ಶ್ರೇಷ್ಠತೆಗಳನ್ನೆಲ್ಲ ಪುರುಷರೇ ಬಾಚಿಕೊಳ್ಳುತ್ತಾರೆ, ಅವರು

الصَّلٰوةَ وَاٰتِيْنَ الزَّكٰوةَ وَاَطِعْنَ اللّٰهَ وَرَسُوْلَهٗ ۭ اِنَّمَا يُرِيْدُ اللّٰهُ لِيُذْهِبَ

ಕಾಲದಂತಹ ಸೌಂದರ್ಯ ಪ್ರದರ್ಶನ ಮಾಡುತ್ತ ತಿರುಗಾಡಬೇಡಿರಿ.[49] ನಮಾಝನ್ನು

ಯುದ್ಧ ಮಾಡುತ್ತಾರೆ ಮತ್ತು ಅಲ್ಲಾಹನ ಮಾರ್ಗದಲ್ಲಿ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡುತ್ತಾರೆ. ನಮಗೂ ಅವರಷ್ಟೇ ಪುಣ್ಯ ಲಭಿಸಬೇಕಾದರೆ ನಾವೇನು ಮಾಡಬೇಕು? ಪ್ರವಾದಿ(ಸ) ಹೇಳಿದರು- ನಿಮ್ಮಲ್ಲಿ ಯಾರು ಮನೆಯಲ್ಲಿ ಕುಳಿತಿರುತ್ತಾರೋ ಅವರಿಗೆ ಮುಜಾಹಿದ್ (ಯೋಧ)ಗಳಷ್ಟೇ ಪುಣ್ಯ ಸಿಗುವುದು.

ತಾತ್ಪರ್ಯವೇನೆಂದರೆ ಯೋಧನಿಗೆ ತನ್ನ ಮನೆಯ ಬಗ್ಗೆ ನಿಶ್ಚಿಂತೆಯಿದ್ದಾಗ, ತನ್ನ ಪತ್ನಿಯು ತನ್ನ ಮನೆ ಮತ್ತು ಮಕ್ಕಳನ್ನು ನೋಡಿಕೊಂಡಿರುವಾಗ ಮತ್ತು ತನ್ನ ಅನುಪಸ್ಥಿತಿಯಲ್ಲಿ ತನ್ನನ್ನು ವಂಚಿಸುವಳೆಂಬ ಭೀತಿ ಇಲ್ಲದಾಗ ಮಾತ್ರ ಆತ ದೇವಮಾರ್ಗದಲ್ಲಿ ಚೆನ್ನಾಗಿ ಹೋರಾಡಬಲ್ಲ. ಈ ನಿಶ್ಚಿಂತೆಯನ್ನು ನೀಡಬಲ್ಲ ಮಹಿಳೆಯು ಮನೆಯಲ್ಲಿದ್ದುಕೊಂಡೇ ಆತನ ಜಿಹಾದ್‌ನಲ್ಲಿ ಪಾಲುದಾರಳಾಗುತ್ತಾಳೆ. ಬಝ್ಝಾರ್ ಮತ್ತು ತಿರ್ಮಿದಿಯವರು ಹ. ಅಬ್ದುಲ್ಲಾ ಬಿನ್ ಮಸ್‌ಊದ್‌ರಿಂದ(ರ) ಉಲ್ಲೇಖಿಸಿದ ಇನ್ನೊಂದು ಪ್ರವಾದಿ ವಚನ ಹೀಗಿದೆ- ಸ್ತ್ರೀಯು ಅಡಗಿಸಿಡಬೇಕಾದ ವಸ್ತು, ಆಕೆ ಹೊರಗೆ ಹೋಗುವಾಗ ಶೈತಾನನು ಹೊಂಚು ಹಾಕುತ್ತಾನೆ. ಆಕೆ ತನ್ನ ಮನೆಯಲ್ಲಿರುವಾಗಲೇ ಅಲ್ಲಾಹನ ಕೃಪೆಗೆ ಅತ್ಯಂತ ನಿಕಟವಾಗಿರುತ್ತಾಳೆ. (ಹೆಚ್ಚಿನ ವಿವರಣೆಗೆ ಅನ್ನೂರ್ ಅಧ್ಯಾಯದ ವ್ಯಾಖ್ಯಾನ ನೋಡಿರಿ- ಟಿಪ್ಪಣಿ: 49)

ಪವಿತ್ರ ಕುರ್‌ಆನಿನಲ್ಲಿ ಈ ಸ್ಪಷ್ಟ ಆದೇಶವಿರುವಾಗ, ಮುಸ್ಲಿಮ್ ಸ್ತ್ರೀಯರು ಕೌನ್ಸಿಲ್ ಮತ್ತು ಪಾರ್ಲಿಮೆಂಟ್ ಸದಸ್ಯೆಯರಾಗುವುದಕ್ಕೆ, ಮನೆಯ ಹೊರಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದಕ್ಕೆ, ಸರಕಾರಿ ಕಚೇರಿಗಳಲ್ಲಿ ಪುರುಷರೊಂದಿಗೆ ಕೆಲಸ ಮಾಡುವುದಕ್ಕೆ, ವಿದ್ಯಾಲಯಗಳಲ್ಲಿ ಹುಡುಗರ ಜತೆ ವಿದ್ಯೆ ಕಲಿಯಲಿಕ್ಕೆ, ಪುರುಷರ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿ ದುಡಿಯುವುದಕ್ಕೆ, ವಿಮಾನ ಮತ್ತು ರೈಲು ಗಾಡಿಗಳಲ್ಲಿ ಪರಿಚಾರಿಕೆಯರಾಗಲಿಕ್ಕೆ ಮತ್ತು ವ್ಯಾಸಂಗಕ್ಕಾಗಿ ಅಮೇರಿಕಾ ಮತ್ತು ಇಂಗ್ಲೆಂಡ್‌ಗಳಿಗೆ ಕಳಿಸಲ್ಪಡಲಿಕ್ಕೆ ಎಲ್ಲಿಯ ಅವಕಾಶವಿದೆ? ಮನೆಯ ಹೊರಗೆ ಮಹಿಳೆಯರು ಕೆಲಸ ಮಾಡಬಹುದೆಂಬುದಕ್ಕೆ ನೀಡಲಾಗುವ ಅತಿ ದೊಡ್ಡ ಸಮರ್ಥನೆಯೆಂದರೆ ಹ. ಆಯಿಶಾ(ರ) ಜಮಲ್ ಯುದ್ಧದಲ್ಲಿ ಭಾಗವಹಿಸಿದ್ದರೆಂಬುದು ಮಾತ್ರ. ಆದರೆ ಈ ಆಧಾರವನ್ನು ಮಂಡಿಸುವವರಿಗೆ ಬಹುಶಃ ಈ ಬಗ್ಗೆ ಸ್ವಯಂ ಹ. ಆಯಿಶಾರ ಅಭಿಪ್ರಾಯವೇನಾಗಿತ್ತೆಂದು ತಿಳಿದಿಲ್ಲ. ಹ. ಆಯಿಶಾ(ರ) ಪವಿತ್ರ ಕುರ್‌ಆನ್ ಪಠಿಸುತ್ತಾ, 'ನಿಮ್ಮ ಮನೆಗಳಲ್ಲೇ ಇದ್ದು ಕೊಳ್ಳಿರಿ' ಎಂಬ ಪ್ರಸ್ತುತ ಸೂಕ್ತಕ್ಕೆ ತಲಪಿದಾಗ ಗೋಳೋ ಎಂದು ಅಳುತ್ತಿದ್ದರು. ಅದರಿಂದ ಅವರ ದುಪ್ಪಟ ಒದ್ದೆಯಾಗುತ್ತಿತ್ತೆಂದು ಅಬ್ದುಲ್ಲಾ ಬಿನ್ ಅಹ್ಮದ್ ಬಿನ್ ಹಂಬಲ್ ಅವರು ಝುವಾಯಿದುಝ್ಝುಹದ್‌ನಲ್ಲೂ, ಇಬ್ನು ಮುಂದಿರ್, ಇಬ್ನು ಅಬೀಶೈಬ ಮತ್ತು ಇಬ್ನು ಸಅದ್ ಅವರು ತಂತಮ್ಮ ಗ್ರಂಥಗಳಲ್ಲೂ ಮಸ್ರೂಕ್‌ರ ವರದಿಯನ್ನು ಉಲ್ಲೇಖಿಸಿದ್ದಾರೆ. ಏಕೆಂದರೆ ಜಮಲ್ ಯುದ್ಧದಲ್ಲಿ ತನ್ನಿಂದ ಸಂಭವಿಸಿದ್ದ ತಪ್ಪು ಆಗ ಅವರಿಗೆ ನೆನಪಾಗುತ್ತಿತ್ತು.

49. ಈ ಸೂಕ್ತದಲ್ಲಿ ತಬರ್ರುಜ್ ಮತ್ತು ಜಾಹಿಲಿಯ್ಯತುಲ್ ಊಲಾ ಎಂಬೆರಡು ವಿಶೇಷ ಪದಗಳನ್ನು ಬಳಸಲಾಗಿದ್ದು, ಸೂಕ್ತದ ಉದ್ದೇಶವನ್ನು ಗ್ರಹಿಸಲು ಅವುಗಳ ಅರ್ಥವನ್ನು ತಿಳಿದಿರಬೇಕಾದುದು ಅಗತ್ಯ.

'ತಬರ್‍ರುಜ್' ಎಂಬ ಅರಬಿ ಪದಕ್ಕೆ ಪ್ರಕಟವಾಗು, ಎದ್ದುತೋರು ಮತ್ತು ಅನಾವರಣಗೊಳ್ಳು ಎಂಬ ಅರ್ಥಗಳಿವೆ- ಬಹಿರಂಗವಾದ ಮತ್ತು ಎದ್ದು ತೋರುವ ಪ್ರತಿಯೊಂದು ವಸ್ತುವನ್ನೂ ಅರಬರು 'ಬರಜ್' ಎಂದು ಕರೆಯುತ್ತಾರೆ. ಬುರುಜ್ (ಗೋಪುರ) ಎನ್ನಲೂ ಅದು ಬಹಿರಂಗವಾಗಿ ಎದ್ದು ತೋರುವುದೇ ಕಾರಣ. ಹಾಯಿ ಹಡಗಿಗೆ 'ಬಾರಿಜ' ಎನ್ನುವುದೂ ಅದರ ಹಾಯಿ ದೂರದಿಂದ ಎದ್ದು ಕಾಣುವುದರಿಂದಾಗಿದೆ. ತಬರ್‍ರುಜ್ ಪದವನ್ನು ಸ್ತ್ರೀಗೆ ಬಳಸುವಾಗ ಅದಕ್ಕೆ ಮೂರು ಅರ್ಥಗಳು ಬರುತ್ತವೆ. ಒಂದು, ಆಕೆ ತನ್ನ ಮುಖ ಮತ್ತು ದೇಹ ಸೌಂದರ್ಯವನ್ನು ಜನರಿಗೆ ತೋರಿಸುವುದು. ಎರಡು, ಆಕೆ ತನ್ನ ಉಡುಪು ಮತ್ತು ಆಭರಣಗಳ ವೈಭವವನ್ನು ಇತರರ ಮುಂದೆ ಪ್ರದರ್ಶಿಸುವುದು. ಮೂರು, ಆಕೆ ತನ್ನ ನಡಿಗೆ ಮತ್ತು ಒನಪು ವಯ್ಯಾರಗಳಿಂದ ತನ್ನನ್ನು ತಾನೇ ಪ್ರದರ್ಶಿಸುವುದು. ಈ ಪದಕ್ಕೆ ಹಿರಿಯ ನಿಘಂಟುಕಾರರು ಮತ್ತು ಹಿರಿಯ ವ್ಯಾಖ್ಯಾನಗಾರರು ಇದೇ ವ್ಯಾಖ್ಯಾನವನ್ನು ನೀಡಿದ್ದಾರೆ. ಮುಜಾಹಿದ್, ಕತಾದ ಮತ್ತು ಇಬ್ನು ಅಬೀನುಜೈಹ್ ಅವರು, ತಬರ್‍ರುಜ್ ಅಂದರೆ ಬೆಡಗಿನೊಂದಿಗೆ ಒನಪು ವಯ್ಯಾರವನ್ನು ಪ್ರದರ್ಶಿಸುತ್ತಾ ನಡೆಯುವುದು ಎಂದು ಹೇಳುತ್ತಾರೆ... ಮುಕಾತಿಲ್ ಹೇಳುತ್ತಾರೆ- ಸ್ತ್ರೀ ತನ್ನ ಸರ, ಅಂಗಾಂಗಗಳು ಮತ್ತು ತನ್ನ ಕೊರಳನ್ನು ತೋರ್ಪಡಿಸುವುದು. ಅಲ್‌ಮುಬರ್‍ರದ್ ಹೇಳುವುದೇನೆಂದರೆ, ಸ್ತ್ರೀಯು ತಾನು ಮರೆಸಲೇಬೇಕಾದ ಸೌಂದರ್ಯವನ್ನು ಪ್ರದರ್ಶಿಸುವುದು. ಅಬೂ ಉಬೈದಾರ ವ್ಯಾಖ್ಯಾನ ಹೀಗಿದೆ- ಸ್ತ್ರೀಯು ಪುರುಷರನ್ನು ತನ್ನೆಡೆಗೆ ಆಕರ್ಷಿಸುವಂತೆ ತನ್ನ ಶರೀರ ಮತ್ತು ಉಡುಗೆಯ ಸೌಂದರ್ಯವನ್ನು ಪ್ರಕಟಪಡಿಸುವುದು.

ಜಾಹಿಲಿಯ್ಯತ್ ಪದವು ಕುರ್‌ಆನಿನಲ್ಲಿ ಇನ್ನೂ ಮೂರು ಕಡೆಗಳಲ್ಲಿ ಬಂದಿದೆ. 1) ಆಲಿ ಇಮ್ರಾನ್‌ನ 154ನೆಯ ಸೂಕ್ತದಲ್ಲಿ- ಅಲ್ಲಾಹನ ಮಾರ್ಗದಲ್ಲಿ ಹೋರಾಡುವುದರಿಂದ ನುಣುಚಿಕೊಳ್ಳುವವರ ಬಗ್ಗೆ, ಅವರು ಅಲ್ಲಾಹನ ಬಗ್ಗೆ ಸತ್ಯಕ್ಕೆದುರಾಗಿ ಜಾಹಿಲಿಯ್ಯತ್‌ನಂತಹ ಭಾವನೆಯನ್ನಿರಿಸಿಕೊಂಡಿದ್ದಾರೆ ಎಂದು ಹೇಳಲಾಗಿದೆ. 2) ಅಲ್ ಮಾಇದಃದ 50ನೆಯ ಸೂಕ್ತದಲ್ಲಿ- ಅಲ್ಲಾಹನ ಕಾನೂನಿನ ಹೊರತು ಇತರರ ಕಾನೂನುಗಳಂತೆ ತಮ್ಮ ವ್ಯಾಜ್ಯಗಳ ತೀರ್ಮಾನ ಮಾಡಿಸುವವರ ಬಗ್ಗೆ, ಅವರು ಜಾಹಿಲಿಯ್ಯತ್‌ನ ತೀರ್ಮಾನ ಬಯಸುತ್ತಿದ್ದಾರೆಯೆ? ಎಂದು ಕೇಳಲಾಗಿದೆ. 3) ಅಲ್ ಫತಹ್ ಅಧ್ಯಾಯದ 26ನೆಯ ಸೂಕ್ತದಲ್ಲಿ- ಮಕ್ಕಾದ ಸತ್ಯನಿಷೇಧಿಗಳು ಕೇವಲ ಪಕ್ಷಪಾತದಿಂದಾಗಿ ಮುಸ್ಲಿಮರಿಗೆ ಉಮ್ರಾ ಮಾಡಲು ಅನುಮತಿ ನೀಡದೆ ಇದ್ದುದನ್ನು 'ಹಮಿಯ್ಯತ್ ಜಾಹಿಲಿಯ್ಯ' ಎಂದು ವರ್ಣಿಸಲಾಗಿದೆ. ಒಮ್ಮೆ ಅಬೂದರ್ದಾ ಓರ್ವ ವ್ಯಕ್ತಿಯೊಡನೆ ಜಗಳಾಡುತ್ತ ಅವನ ತಾಯಿಯನ್ನು ಬಯ್ದರು. ಇದನ್ನು ಕೇಳಿದ ಪ್ರವಾದಿ(ಸ) 'ನಿಮ್ಮಲ್ಲಿ ಇನ್ನೂ ಜಾಹಿಲಿಯ್ಯತ್ ಉಳಿದಿದೆ' ಎಂದು ಹೇಳಿದರೆಂದು ಹದೀಸ್‌ನಲ್ಲಿದೆ. ಇನ್ನೊಂದು ಹದೀಸ್‌ನಲ್ಲಿ ಹೀಗಿದೆ- ಪ್ರವಾದಿ(ಸ) ಹೇಳಿದರು- ಮೂರು ವಿಷಯಗಳು ಜಾಹಿಲಿಯ್ಯತ್‌ನದ್ದಾಗಿವೆ. i) ಇತರರ ಕುಲದ ಹೆಸರೆತ್ತಿ ತಮಾಷೆ ಮಾಡುವುದು. ii) ನಕ್ಷತ್ರಗಳ ಚಲನೆಯಿಂದ ಶಕುನ ಹೇಳುವುದು. iii) ಮರಣಹೊಂದಿದವರಿಗಾಗಿ ಚೀರಾಡುವುದು. ಈ ಎಲ್ಲ ಪದ ಪ್ರಯೋಗಗಳಿಂದ, ಇಸ್ಲಾಮಿನ ಪಾರಿಭಾಷಿಕದಲ್ಲಿ ಇಸ್ಲಾಮೀ ಸಂಸ್ಕೃತಿ, ಇಸ್ಲಾಮೀ ಶಿಷ್ಟಾಚಾರ ಮತ್ತು ಇಸ್ಲಾಮೀ ವಿಚಾರಧಾರೆಗೆ ವಿರುದ್ಧವಾದ ಎಲ್ಲ ಕೃತ್ಯಗಳೂ ಜಾಹಿಲಿಯ್ಯತ್ ಆಗಿದೆಯೆಂದು ತಿಳಿದು ಬರುತ್ತದೆ. ಜಾಹಿಲಿಯ್ಯತ್ ಊಲಾ ಎಂದರೆ ಇಸ್ಲಾಮಿನ ಆಗಮನಕ್ಕೆ ಮುಂಚೆ ಅರಬರಲ್ಲಿ ಹಾಗೂ ಲೋಕದಾದ್ಯಂತವಿರುವ ಇತರ ಜನಸಮುದಾಯಗಳಲ್ಲಿ ಇದ್ದಂತಹ ಕೆಡುಕುಗಳಾಗಿವೆ.

عَنكُمُ الرِّجْسَ أَهْلَ الْبَيْتِ وَيُطَهِّرَكُمْ تَطْهِيرًا ﴿٣٣﴾ وَاذْكُرْنَ مَا يُتْلَىٰ فِي

ಸಂಸ್ಥಾಪಿಸಿರಿ, ಝಕಾತ್ ಕೊಡಿರಿ, ಅಲ್ಲಾಹ್ ಮತ್ತು ಅವನ ರಸೂಲನ್ನು ಅನುಸರಿಸಿರಿ. ರಸೂಲರ ಮನೆಯವರಾದ ನಿಮ್ಮಿಂದ ಮಾಲಿನ್ಯವನ್ನು ದೂರೀಕರಿಸಿ ನಿಮ್ಮನ್ನು ಸಂಪೂರ್ಣವಾಗಿ ಶುದ್ಧಿಗೊಳಿಸಲು ಅಲ್ಲಾಹ್ ಇಚ್ಛಿಸುತ್ತಾನೆ.[50] ನಿಮ್ಮ ಮನೆಗಳಲ್ಲಿ ಓದಿ ಹೇಳಲಾಗುತ್ತಿರುವ ಅಲ್ಲಾಹನ ಸೂಕ್ತಗಳನ್ನೂ ಯುಕ್ತಿಪೂರ್ಣ ಮಾತುಗಳನ್ನೂ ಚೆನ್ನಾಗಿ

---

ಈ ವಿವರಣೆಯಿಂದ ತಿಳಿದು ಬರುವುದೇನೆಂದರೆ ಸ್ತ್ರೀಯರು ತಮ್ಮ ಸೌಂದರ್ಯ ಪ್ರದರ್ಶನ ಮಾಡಿಕೊಂಡು ಮನೆಯಿಂದ ಹೊರಗೆ ಹೋಗುವುದನ್ನು ಅಲ್ಲಾಹನು ತಡೆಯ ಬಯಸುತ್ತಾನೆ. ನೀವು ನಿಮ್ಮ ಮನೆಗಳಲ್ಲೇ ಇದ್ದು ಬಿಡಿರಿ. ಏಕೆಂದರೆ ನಿಮ್ಮ ನೈಜ ಕೆಲಸ ಮನೆಯಲ್ಲಿದೆಯೇ ಹೊರತು ಅದರ ಹೊರಗಲ್ಲವೆಂದು ಆದೇಶಿಸುತ್ತಿದ್ದಾನೆ. ಆದರೆ ಹೊರಗೆ ಹೋಗಬೇಕಾದ ಅಗತ್ಯ ಬಂದರೆ ಜಾಹಿಲಿಯ್ಯತ್‌ನ ಕಾಲದ ಸ್ತ್ರೀಯರಂತೆ ಹೋಗಬಾರದು. ಮೇಕಪ್ ಮಾಡಿಕೊಂಡು ಮುಖ ಮತ್ತು ದೇಹ ಸೌಂದರ್ಯವನ್ನು ಅಲಂಕಾರ ಮತ್ತು ಇಕ್ಕಟ್ಟಾದ ಅಥವಾ ಅರೆ ನಗ್ನ ಉಡುಪುಗಳಿಂದ ಪ್ರದರ್ಶಿಸುವುದು ಒಂದು ಮುಸ್ಲಿಮ್ ಸಮಾಜದ ಮಹಿಳೆಯರಿಗೆ ಭೂಷಣವಲ್ಲ. ಅದು ಅಜ್ಞಾನ ಕಾಲದ ರೀತಿ ನೀತಿಗಳಾಗಿದ್ದು ಇಸ್ಲಾಮಿನಲ್ಲಿ ಅದಕ್ಕೆ ಆಸ್ಪದವಿಲ್ಲ. ನಮ್ಮಲ್ಲಿ ರೂಢಿಗೊಳಿಸಲಾಗುತ್ತಿರುವ ಸಂಸ್ಕೃತಿಯು ಇಸ್ಲಾಮೀ ಸಂಸ್ಕೃತಿಯೋ ಜಾಹಿಲಿಯ್ಯತ್‌ನ ಸಂಸ್ಕೃತಿಯೋ ಎಂಬುದನ್ನು ಪ್ರತಿಯೊಬ್ಬನೂ ಕಂಡುಕೊಳ್ಳಬಲ್ಲನು. ಒಂದು ವೇಳೆ ನಮ್ಮ ನಾಯಕರ ಬಳಿಗೆ ಬೇರಾವುದೋ ಕುರ್‌ಆನ್ ಬಂದಿದ್ದು ಅದರಿಂದ ಇಸ್ಲಾಮಿನ ಈ ಹೊಸ ಚೈತನ್ಯವನ್ನು ಮುಸ್ಲಿಮರಲ್ಲಿ ಹರಡಲಾಗುತ್ತಿದ್ದರೆ ಅದು ಬೇರೆ ವಿಷಯ.

50. ಇಲ್ಲಿ 'ಅಹ್ಲೆಬೈತ್' ಎಂದರೆ ಪ್ರವಾದಿ ಪತ್ನಿಯರೆಂದು ಸೂಕ್ತದ ಹಿನ್ನೆಲೆಯಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಏಕೆಂದರೆ 'ಯಾ ನಿಸಾ ಅನ್ನಬಿಯ್ಯಿ' (ಓ ಪ್ರವಾದಿ ಪತ್ನಿಯರೆ) ಎಂಬ ಪದಗಳಿಂದಲೇ ಮಾತು ಆರಂಭಿಸಲಾಗಿದೆ. ಅದಕ್ಕಿಂತ ಮುಂಚಿನ ಮತ್ತು ನಂತರದ ಸೂಕ್ತಗಳಲ್ಲೂ ಅವರೇ ಅಭಿಸಂಬೋಧಿತರು. ಅಲ್ಲದೆ ಅರಬಿ ಭಾಷೆಯಲ್ಲಿ 'ಅಹ್ಲುಲ್ ಬೈತ್' ಎಂಬ ಪದವನ್ನು ನಮ್ಮ ಭಾಷೆಯ 'ಮನೆ ಮಂದಿ' ಎಂಬರ್ಥದಲ್ಲೆ ಪ್ರಯೋಗಿಸಲಾಗುತ್ತದೆ. ಅದರಲ್ಲಿ ಪತ್ನಿಯೂ ಮಕ್ಕಳೂ ಒಳಗೊಂಡಿದ್ದಾರೆ. ಪತ್ನಿಯನ್ನು ಹೊರತು ಪಡಿಸಿ 'ಮನೆ ಮಂದಿ' ಎಂದು ಯಾರೂ ಹೇಳುವುದಿಲ್ಲ. ಕುರ್‌ಆನಿನ ಇನ್ನೆರಡು ಕಡೆಗಳಲ್ಲೂ ಈ ಪದ ಬಂದಿದ್ದು ಅಲ್ಲೂ ಅದರ ಅರ್ಥದಲ್ಲಿ ಪತ್ನಿ ಸೇರಿದ್ದಾಳೆ ಮಾತ್ರವಲ್ಲ ಆಕೆಗೆ ಆದ್ಯತೆಯಿದೆ 'ಹೂದ್' ಅಧ್ಯಾಯದಲ್ಲಿ ದೇವಚರರು ಹ. ಇಬ್‌ರಾಹೀಮ್‌ರಿಗೆ(ಅ) ಪುತ್ರ ಸಂತಾನದ ಸುವಾರ್ತೆ ನೀಡಿದಾಗ ಅವರ ಪತ್ನಿಯು ಆಶ್ಚರ್ಯದಿಂದ, ಈ ಮುದಿ ಪ್ರಾಯದಲ್ಲಿ ನಮ್ಮಲ್ಲಿ ಮಗು ಹುಟ್ಟುವುದು ಹೇಗೆ ಸಾಧ್ಯ? ಎಂದು ಕೇಳಿದಾಗ- ದೇವಚರರು ಹೀಗೆ ಉತ್ತರಿಸುತ್ತಾರೆ, "ಅಲ್ಲಾಹನ ಅಪ್ಪಣೆಯ ಬಗ್ಗೆ ಆಶ್ಚರ್ಯ ಪಡುತ್ತೀರಾ? ಇಬ್‌ರಾಹೀಮ್‌ರ 'ಮನೆಯವರೇ!' ನಿಮ್ಮ ಮೇಲೆ ಅಲ್ಲಾಹನ ದಯೆ ಮತ್ತು ಅನುಗ್ರಹಗಳಿವೆ.**(11:73)** ಅದೇ ರೀತಿ 'ಅಲ್ ಕಸಸ್' ಅಧ್ಯಾಯದಲ್ಲಿ ಹ. ಮೂಸಾ(ಅ) ಹಸುಗೂಸಾಗಿ ಫಿರ್‌ಔನನ ಮನೆಗೆ ತಲಪಿದಾಗ ಆತನ ಪತ್ನಿಯು ಮಗುವಿಗೆ ಹಾಲುಣಿಸಬಲ್ಲ ದಾದಿಯೊಬ್ಬಳನ್ನು ಹುಡುಕುತ್ತಾಳೆ. ಆಗ ಮೂಸಾರ ಸಹೋದರಿ ಅಲ್ಲಿಗೆ ತಲಪಿ ಹೀಗೆ ಕೇಳುತ್ತಾಳೆ-

ಂತಾಕಾಂಕ್ಷೆಯೊಂದಿಗೆ ಇದರ ಪೋಷಣೆಯ ಹೊಣೆ ವಹಿಸತಕ್ಕಂತಹ 'ಮನೆಯವರನ್ನು' ನಾನು ಮಗೆ ತೋರಿಸಿ ಕೊಡಲೇ?(28:12) ಆದುದರಿಂದ ನುಡಿಗಟ್ಟು, ಕುರ್‌ಆನಿನ ಪ್ರಯೋಗಗಳು ಮತ್ತು ಈ ಸೂಕ್ತದ ಹಿನ್ನೆಲೆ ಇತ್ಯಾದಿಗಳಿಂದ ಪ್ರವಾದಿಯವರ(ಸ) 'ಮನೆಮಂದಿ'ಯಲ್ಲಿ ಅವರ ಪತ್ನಿಯರೂ ಮಕ್ಕಳೂ ಸೇರುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ. ಸೂಕ್ತದ ನೈಜ ಅಭಿಸಂಬೋಧಿತರು ಪ್ರವಾದಿ ಪತ್ನಿಯರಾಗಿರುವರೆಂಬುದೇ ಹೆಚ್ಚು ಸರಿ. ಅರ್ಥದ ದೃಷ್ಟಿಯಿಂದ ಮಕ್ಕಳೂ ಅದರಲ್ಲಿ ಸೇರಿದ್ದಾರೆ. ಆದುದರಿಂದಲೇ, ಈ ಸೂಕ್ತದಲ್ಲಿ 'ಅಹ್ಲೆಬೈತ್' ಎಂದಿರುವುದು ಪ್ರವಾದಿ ಪತ್ನಿಯರನ್ನು ಎಂದು ಇಬ್ನು ಅಬ್ಬಾಸ್, ಉರ್ವಾ ಬಿನ್ ಝುಬೈರ್ ಮತ್ತು ಇಕ್ರಿಮಾ(ರ) ಹೇಳುತ್ತಾರೆ. ಆದರೆ ಮನೆಮಂದಿ'ಯೆಂದರೆ ಕೇವಲ ಪತ್ನಿಯರು, ಬೇರಾರಿಗೂ ಅದು ಅನ್ವಯವಾಗುವುದಿಲ್ಲವೆನ್ನುವುದೂ ತಪ್ಪಾಗಿದೆ. 'ಮನೆಮಂದಿ'ಯೆಂಬ ಪದದಲ್ಲಿ ಮಾನವನ ಎಲ್ಲ ಪತ್ನಿ-ಮಕ್ಕಳೂ ಕುಟುಂಬಿಕರೂ ಸೇರುತ್ತಾರೆ ಮಾತ್ರವಲ್ಲ, ಸ್ವತಃ ಪ್ರವಾದಿವರ್ಯರೇ(ಸ) ಸ್ಪಷ್ಟಪಡಿಸಿರುವಂತೆ ಅವರೆಲ್ಲರೂ ಅದರಲ್ಲಿ ಸೇರಿದ್ದಾರೆ. ಇಬ್ನು ಅಬೀಹಾತಿಮ್ ವರದಿ ಮಾಡುತ್ತಾರೆ- ಒಮ್ಮೆ ಆಯಿಶಾರಲ್ಲಿ(ರ) ಅಲೀಯವರ(ರ) ಕುರಿತು ಕೇಳಿದಾಗ ಅವರು ಹೀಗೆ ಉತ್ತರಿಸಿದರು, "ನೀವು ಪ್ರವಾದಿವರ್ಯರ(ಸ) ಅತ್ಯಂತ ಪ್ರೀತಿಪಾತ್ರರಲ್ಲಿ ಸೇರಿದ ಹಾಗೂ ಪ್ರವಾದಿವರ್ಯರ(ಸ) ಅತ್ಯಂತ ಪ್ರಿಯ ಪುತ್ರಿಯ ಪತಿಯ ಬಗ್ಗೆ ಕೇಳುತ್ತೀರಾ?" ತರುವಾಯ ಈ ವಿಷಯವನ್ನು ಹ. ಆಯಿಶಾ(ರ) ತಿಳಿಸಿದಾಗ ಪ್ರವಾದಿವರ್ಯರು(ಸ) ಅಲೀ, ಫಾತಿಮಾ, ಹಸನ್ ಮತ್ತು ಹುಸೈನ್‌ರವರನ್ನು(ರ) ತಮ್ಮ ಬಳಿಗೆ ಕರೆದು ಅವರ ಮೇಲೆ ಒಂದು ಬಟ್ಟೆಯನ್ನು ಹಾಸಿ ಈ ರೀತಿ ಪ್ರಾರ್ಥಿಸಿದರು- ಓ ಅಲ್ಲಾಹ್! ಇವರು ನನ್ನ ಮನೆಮಂದಿಯಾಗಿದ್ದಾರೆ. ಇವರಿಂದ ಮಾಲಿನ್ಯವನ್ನು ತೊಲಗಿಸಿ ಇವರನ್ನು ಶುದ್ಧಗೊಳಿಸು. ಹ. ಆಯಿಶಾ ಹೇಳುತ್ತಾರೆ- ನಾನೂ ತಮ್ಮ ಮನೆಮಂದಿಯೇ ಆಗಿದ್ದೇನಲ್ಲವೆ? ಎಂದು ಕೇಳಿದೆ (ಅಂದರೆ ನನ್ನನ್ನೂ ಬಟ್ಟೆಯೊಳಗೆ ಸೇರಿಸಿ ನನಗಾಗಿಯೂ ಪ್ರಾರ್ಥಿಸಿರಿ) ಪ್ರವಾದಿ(ಸ) ಹೇಳಿದರು- ನೀನು ಬೇರೆಯಾಗಿರು. ನೀನಂತೂ ಪೂರ್ಣ ಒಳಿತೇ ಆಗಿರುವೆ. ಇದೇ ವಿಷಯವನ್ನು ಹೋಲುವಂತಹ ಅನೇಕ ಹದೀಸ್‌ಗಳು ಮುಸ್ಲಿಮ್, ತಿರ್ಮಿದಿ, ಅಹ್ಮದ್, ಇಬ್ನು ಜರೀರ್, ಹಾಕಿಮ್, ಬೈಹಕಿ ಮುಂತಾದವರು ಅಬೂ ಸಈದ್ ಖುದ್ರೀ, ಆಯಿಶಾ, ಅನಸ್, ಉಮ್ಮು ಸಲಮ, ವಾಸಿಲ ಬಿನ್ ಅಸ್‌ಕಲ್ ಮತ್ತು ಇತರ ಕೆಲವು ಸಹಾಬಿಗಳಿಂದ ಉಲ್ಲೇಖಿಸಿದ್ದಾರೆ. ಪ್ರವಾದಿವರ್ಯರು(ಸ) ಅಲೀ, ಫಾತಿಮಾ ಮತ್ತು ಅವರ ಇಬ್ಬರು ಸುಪುತ್ರರನ್ನೂ ಮನೆಮಂದಿಯೆಂದು ಪರಿಗಣಿಸಿದ್ದಾರೆಂದು ಇದರಿಂದ ತಿಳಿಯುತ್ತದೆ. ಆದುದರಿಂದ ಇವರನ್ನು ಮನೆಮಂದಿಯಲ್ಲವೆಂದು ಹೇಳುವವರ ಅಭಿಪ್ರಾಯ ಸರಿಯಲ್ಲ.

ಅದೇ ರೀತಿ ಪ್ರಸ್ತುತ ಹದೀಸ್‌ಗಳ ಆಧಾರದಲ್ಲಿ ಪ್ರವಾದಿ ಪತ್ನಿಯರನ್ನು 'ಅಹ್ಲೆಬೈತ್' (ಮನೆಮಂದಿ) ಅಲ್ಲವೆಂದು ಹೇಳುವವರ ಅಭಿಪ್ರಾಯವೂ ತಪ್ಪಾಗಿದೆ. ಒಂದನೆಯದಾಗಿ, ಕುರ್‌ಆನ್‌ನಿಂದ ಸ್ಪಷ್ಟವಾಗಿ ಸಾಬೀತುಗೊಂಡ ವಿಷಯವನ್ನು ಹದೀಸ್‌ನ ಆಧಾರದಲ್ಲಿ ತಿರಸ್ಕರಿಸುವಂತಿಲ್ಲ. ಎರಡನೆಯದಾಗಿ, ಆ ಹದೀಸ್‌ಗಳ ಅರ್ಥ ಅವರು ಭಾವಿಸಿರುವಂತೆಯೂ ಅಲ್ಲ. ಕೆಲವು ವರದಿಗಳಲ್ಲಿ ಬಂದಿರುವಂತೆ, ಪ್ರವಾದಿವರ್ಯರು(ಸ) ಆಯಿಶಾ ಮತ್ತು ಉಮ್ಮು ಸಲಮರನ್ನು(ರ) ಆ ನಾಲ್ಕು ಮಂದಿಯ ಜೊತೆ ಬಟ್ಟೆಯೊಳಗೆ ಸೇರಿಸಲಿಲ್ಲವೆಂದಾದರೆ, ಅದರರ್ಥ ಪ್ರವಾದಿವರ್ಯರು(ಸ) ಅವರನ್ನು ತಮ್ಮ 'ಮನೆಮಂದಿ'ಯಿಂದ ಹೊರಗಿಟ್ಟರು ಎಂದಲ್ಲ. ಬದಲಾಗಿ, ಅದರ ತಾತ್ಪರ್ಯವೇನೆಂದರೆ ಪತ್ನಿಯರು ಮನೆಮಂದಿಯೇ ಆಗಿದ್ದಾರೆ. ಏಕೆಂದರೆ ಕುರ್‌ಆನ್

يُتْلَىٰ فِي بُيُوتِكُنَّ مِنْ آيَاتِ اللَّهِ وَالْحِكْمَةِ ۚ إِنَّ اللَّهَ كَانَ لَطِيفًا خَبِيرًا ﴿٣٤﴾ إِنَّ الْمُسْلِمِينَ

ನೆನಪಿಡಿರಿ.[51] ನಿಶ್ಚಯವಾಗಿಯೂ ಅಲ್ಲಾಹ್ ಸೂಕ್ಷ್ಮಜ್ಞನೂ[52] ವಿವರಪೂರ್ಣನೂ ಆಗಿರುತ್ತಾನೆ.

---

ಅವರೊಂದಿಗೆ ಮಾತಾಡಿತ್ತು. ಆದರೆ ಕುರ್‌ಆನಿನ ಬಾಹ್ಯಾರ್ಥ ಪ್ರಕಾರ, ಪ್ರಸ್ತುತ ನಾಲ್ಕು ಮಂ 'ಮನೆಮಂದಿ'ಯಲ್ಲಿ ಸೇರುವುದಿಲ್ಲವೆಂಬ ತಪ್ಪುಕಲ್ಪನೆ ಯಾರಿಗೂ ಆಗದಿರಲಿ ಎಂಬ ಭಾವನೆಯಿಂ ಪ್ರವಾದಿವರ್ಯರು(ಸ) ಅವರನ್ನು ಬಟ್ಟೆಯೊಳಗೆ ಸೇರಿಸಿ ಪ್ರಾರ್ಥಿಸುವ ಅಗತ್ಯ ಮನಗಂಡರು ಪ್ರವಾದಿ ಪತ್ನಿಯರನ್ನು ಅದರಲ್ಲಿ ಸೇರಿಸುವ ಅಗತ್ಯ ಕಂಡು ಬರಲಿಲ್ಲ.

ಇನ್ನೊಂದು ವರ್ಗವು ಸೂಕ್ತದ ವ್ಯಾಖ್ಯಾನದಲ್ಲಿ, ಪ್ರವಾದಿ ಪತ್ನಿಯರನ್ನು ಮನೆಮಂದಿಯಿಂ ಹೊರಗಿಟ್ಟು ಕೇವಲ ಅಲೀ, ಫಾತಿಮಾ ಮತ್ತವರ ಸಂತಾನಗಳನ್ನು ಮಾತ್ರ ಮನೆಮಂದಿಯೆಂದ ಸಾರಿತು. ಅಷ್ಟೇ ಅಲ್ಲ, ಅದಕ್ಕಿಂತಲೂ ಮುಂದುವರಿದು ಅವರು ಮಾಡಿದ ಅನ್ಯಾಯವೆಂದರೆ 'ಅಲ್ಲಾಹನು ನಿಮ್ಮಿಂದ ಮಾಲಿನ್ಯವನ್ನು ದೂರಗೊಳಿಸಿ ನಿಮ್ಮನ್ನು ಶುದ್ಧಗೊಳಿಸಬಯಸುತ್ತಾ ಎಂಬುದಕ್ಕೆ ಅಲೀ, ಫಾತಿಮಾ ಮತ್ತವರ ಸಂತಾನಗಳು ಪ್ರವಾದಿಗಳಂತೆಯೇ ಪಾಪಮುಕ್ತರು ಎಂ ಅರ್ಥ ನೀಡಿಬಿಟ್ಟರು. ಮಾಲಿನ್ಯ ಎಂದರೆ ಅವರ ಅಭಿಪ್ರಾಯದಲ್ಲಿ ಪಾಪವಾಗಿದೆ ಮತ್ತು ಸೂಕ್ತ ಪ್ರಕಾರ ಈ 'ಅಹ್ಲೆಬೈತ್' ಪಾಪದಿಂದ ಮುಕ್ತಗೊಳಿಸಲ್ಪಟ್ಟವರಾಗಿದ್ದಾರೆ. ವಸ್ತುತಃ ಸೂಕ್ತ ಪದಗಳು ಅಲ್ಲಾಹನು ನಿಮ್ಮಿಂದ ಮಾಲಿನ್ಯವನ್ನು ದೂರಗೊಳಿಸಿದನು ಮತ್ತು ನಿಮ್ಮನ ಪಾವನಗೊಳಿಸಿದನು ಎಂದಲ್ಲ- ಬದಲಾಗಿ, ಅಲ್ಲಾಹನು ನಿಮ್ಮಿಂದ ಮಾಲಿನ್ಯ ದೂರಗೊಳಿ ನಿಮ್ಮನ್ನು ಶುದ್ಧಗೊಳಿಸ ಬಯಸುತ್ತಾನೆ ಎಂದಾಗಿದೆ. ಸೂಕ್ತದ ಹಿನ್ನೆಲೆಯಿಂದಲೂ ಇಲ್ಲಿ ಮ ಮಂದಿಯ ಶ್ರೇಷ್ಠತೆಯನ್ನು ವಿವರಿಸುವುದು ಉದ್ದೇಶವಲ್ಲ, ಬದಲಾಗಿ ಇಲ್ಲಿ ಅವರಿಗೆ ನೀ ಇಂತಹ ಕಾರ್ಯಗಳನ್ನು ಮಾಡಿರಿ ಇಂತಹ ಕಾರ್ಯಗಳನ್ನು ಮಾಡಬೇಡಿರಿ, ಏಕೆಂದರೆ ಅಲ್ಲಾಹನ ನಿಮ್ಮನ್ನು ಶುದ್ಧಗೊಳಿಸ ಬಯಸಿದ್ದಾನೆ ಎಂದು ಉಪದೇಶಿಸಲಾಗುತ್ತಿದೆ. ಇನ್ನೊಂದು ಮಾತಿನಲ್ಲ ಹೇಳುವುದಾದರೆ ನೀವು ಇಂತಹ ಧೋರಣೆ ಕೈಗೊಂಡರೆ ನಿಮಗೆ ಪಾವಿತ್ರ್ಯತೆಯೆಂಬ ಅನುಗ್ರ ಲಭಿಸುವುದು. ಅನ್ಯಥಾ ಅದು ದೊರೆಯಲಾರದು. ಸೂಕ್ತವನ್ನು ಅಲ್ಲಾಹನು ಅವರನ ಶುದ್ಧಗೊಳಿಸಿದನು ಎಂದು ಅರ್ಥೈಸಿದರೆ ಅನಂತರ ವುಝೂ, ಸ್ನಾನ ಮತ್ತು ತಯಮ್ಮುಮ ಮಾಡುವ ಸಕಲ ಮುಸ್ಲಿಮರನ್ನೂ ಪರಿಶುದ್ಧರೆಂದು ಕರೆಯದಿರಲು ಯಾವುದೇ ಕಾರಣವಿಲ್ಲ ಏಕೆಂದರೆ ಅವರ ಬಗ್ಗೆಯೂ ಅಲ್ಲಾಹನು ಹೀಗೆ ಹೇಳಿದ್ದಾನೆ- ಆದರೆ ನಿಮ್ಮನ್ನು ಶುದ್ಧಗೊಳಿ ನಿಮ್ಮ ಮೇಲೆ ತನ್ನ ಅನುಗ್ರಹವನ್ನು ಪೂರ್ಣಗೊಳಿಸಲು ಅಲ್ಲಾಹನು ಬಯಸುತ್ತಾನೆ.

(ಅಲ್ ಮಾಇದಃ:6

51. ಮೂಲದಲ್ಲಿ 'ವದ್‌ಕುರ್‌ನ' ಎಂಬ ಪದ ಬಳಕೆಯಾಗಿದೆ. ಅದಕ್ಕೆ 'ನೆನಪಿರಲಿ' ಮತ್ತ 'ವಿವರಿಸಿರಿ' ಎಂಬೆರಡು ಅರ್ಥಗಳಿವೆ. ಒಂದನೆಯ ಅರ್ಥದ ತಾತ್ಪರ್ಯವೇನೆಂದರೆ, ಪ್ರವಾ ಪತ್ನಿಯರೇ! ನಿಮ್ಮ ಮನೆಯು ಲೋಕಕ್ಕೆ ದೇವ ಸಂದೇಶ ಮತ್ತು ಯುಕ್ತಿಯ ಬೋಧ ನೀಡುವಂತಹ ಸ್ಥಳವಾಗಿದೆ. ಆದುದರಿಂದ ನಿಮ್ಮ ಹೊಣೆಗಾರಿಕೆಯೂ ಮಹತ್ತರವಾಗಿದೆಯೆಂಬುದನ ಮರೆಯದಿರಿ. ಅದೇ ಮನೆಯಲ್ಲಿ ಜನರು ಅಜ್ಞಾನದ ಮಾದರಿಯನ್ನು ದರ್ಶಿಸುವಂತಾಗದಿರಲಿ ಎರಡನೆಯ ಅರ್ಥದ ಪ್ರಕಾರ ತಾತ್ಪರ್ಯವೇನೆಂದರೆ ಪ್ರವಾದಿ ಪತ್ನಿಯರೇ! ನೀವು ಕೇಳುವುದನ

وَالْمُسْلِمٰتِ وَالْمُؤْمِنِيْنَ وَالْمُؤْمِنٰتِ وَالْقٰنِتِيْنَ وَالْقٰنِتٰتِ وَالصّٰدِقِيْنَ

(35) ನಿಶ್ಚಯವಾಗಿಯೂ[53] ಮುಸ್ಲಿಮರೂ[54] ಸತ್ಯವಿಶ್ವಾಸಿಗಳೂ[55]

ಮತ್ತು ನೋಡುವುದನ್ನು ಜನರ ಮುಂದೆ ವಿವರಿಸಿರಿ. ಏಕೆಂದರೆ ಪ್ರವಾದಿಯ ಜೊತೆಯ ನಿಮ್ಮ ನಿಕಟ ಒಡನಾಟದಿಂದ ನಿಮಗೆ ದೊರಕುತ್ತಿರುವ ಅನೇಕ ವಿಷಯಗಳು ನಿಮ್ಮ ಮೂಲಕವಲ್ಲದೆ ಬೇರಾವ ದಾರಿಯಿಂದಲೂ ಜನರಿಗೆ ತಿಳಿಯಲು ಸಾಧ್ಯವಿಲ್ಲ.

ಈ ಸೂಕ್ತದಲ್ಲಿ ಎರಡು ವಿಷಯಗಳ ಪ್ರಸ್ತಾಪವಿದೆ- 'ಆಯಾತುಲ್ಲಾಹ್' ಮತ್ತು 'ಹಿಕ್ಮತ್'. 'ಆಯಾತುಲ್ಲಾಹ್' ಎಂದರೆ ಅಲ್ಲಾಹನ ಗ್ರಂಥದ ಸೂಕ್ತಗಳೇ ಆಗಿವೆ. ಆದರೆ 'ಹಿಕ್ಮತ್' ಎಂಬುದು ವಿಶಾಲಾರ್ಥದ ಪದವಾಗಿದೆ. ಅದರಲ್ಲಿ ಪ್ರವಾದಿ(ಸ) ಜನರಿಗೆ ಕಲಿಸುತ್ತಿದ್ದ ಎಲ್ಲ ಯುಕ್ತಿಯ ಮಾತುಗಳೂ ಸೇರಿವೆ. ಈ ಪದವು ಅಲ್ಲಾಹನ ಗ್ರಂಥದ ಬೋಧನೆಗಳಿಗೂ ಅನ್ವಯವಾಗುತ್ತದೆ. ಆದರೆ ಕೇವಲ ಅದಕ್ಕೆ ಸೀಮಿತಗೊಳಿಸಲು ಯಾವುದೇ ಕಾರಣವಿಲ್ಲ. ಕುರ್‌ಆನಿನ ಸೂಕ್ತಗಳನ್ನು ಓದಿ ತಿಳಿಸುವುದರ ಜೊತೆಗೆ ಪ್ರವಾದಿ(ಸ) ತಮ್ಮ ಜೀವನ ಚರ್ಯೆ ಮತ್ತು ತಮ್ಮ ನುಡಿಗಳಿಂದ ಜನರಿಗೆ ನೀಡುತ್ತಿದ್ದ ಯುಕ್ತಿಯ ಬೋಧನೆಗಳೂ ಇದರಲ್ಲಿ ಸೇರಿವೆ. ಸೂಕ್ತದಲ್ಲಿ 'ಮಾಯುತ್ಲಾ' (ಪಠಿಸಲಾಗುತ್ತಿರುವ ಸೂಕ್ತಗಳು) ಎಂಬ ಪದವನ್ನು ನೋಡಿ ಕೆಲವರು ಆಯಾತುಲ್ಲಾಹ್ ಮತ್ತು ಹಿಕ್ಮತ್ ಎಂದರೆ ಕೇವಲ ಕುರ್‌ಆನ್ ಆಗಿದೆಯೆಂದು ವಾದಿಸುತ್ತಾರೆ. ಏಕೆಂದರೆ ತಿಲಾವತ್ (ಪಾರಾಯಣ) ಎಂಬ ಪದವನ್ನು ಸಾಂಕೇತಿಕವಾಗಿ ಕುರ್‌ಆನ್ ಪಾರಾಯಣಕ್ಕೆ ಮಾತ್ರ ಹೇಳಲಾಗುತ್ತದೆ. ಆದರೆ ಈ ವಾದ ಸರಿಯಲ್ಲ. ತಿಲಾವತ್ ಎಂಬ ಪದವನ್ನು ಸಾಂಕೇತಿಕವಾಗಿ ಕುರ್‌ಆನ್ ಅಥವಾ ಅಲ್ಲಾಹನ ಗ್ರಂಥಕ್ಕೆ ಮಾತ್ರ ಸೀಮಿತಗೊಳಿಸಿರುವುದು ಅನಂತರದ ಜನರಾಗಿದ್ದಾರೆ. ಕುರ್‌ಆನಿನಲ್ಲಿ ಆ ಪದವನ್ನು ಪಾರಿಭಾಷಿಕವಾಗಿ ಪ್ರಯೋಗಿಸಲಾಗಿಲ್ಲ. ಅಲ್ ಬಕರಃ ಅಧ್ಯಾಯದಲ್ಲಿ ಇದೇ ಪದವನ್ನು ಪಿಶಾಚಿಗಳು ಹ. ಸುಲೈಮಾನ್‌ರವರ(ಅ) ಕಡೆಯಿಂದಾಗಿದೆಯೆಂದು ಜನರಿಗೆ ಕಲಿಸುತ್ತಿದ್ದ ಜಾದೂ ಮಂತ್ರಕ್ಕೂ ಬಳಸಲಾಗಿದೆ. "ಶೈತಾನರು ಸುಲೈಮಾನ್‌ರ ಸಾಮ್ರಾಜ್ಯದ ಹೆಸರು ಹೇಳಿ ಓದುತ್ತಿದ್ದುದನ್ನು ಅವರು ಅನುಸರಿಸ ತೊಡಗಿದರು."(2: 102) ಕುರ್‌ಆನಿನಲ್ಲಿ ಈ ಪದವು ಅರ್ಥಕೋಶಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೇ ಹೊರತು ಅಲ್ಲಾಹನ ಗ್ರಂಥವನ್ನು ಓದಿ ಕೇಳಿಸುವ ಪಾರಿಭಾಷಿಕ ಅರ್ಥದಲ್ಲಿ ಅಲ್ಲವೆಂದು ಇದರಿಂದ ತಿಳಿದು ಬರುತ್ತದೆ.

52. ಅಲ್ಲಾಹನು ಸೂಕ್ಷ್ಮಜ್ಞನಾಗಿದ್ದಾನೆ. ಅಂದರೆ ಅಂತರಾಳದ ರಹಸ್ಯವನ್ನು ಬಲ್ಲವನು. ಅವನಿಂದ ಯಾವುದೇ ವಸ್ತು ಮರೆಯಾಗಿರುವುದು ಸಾಧ್ಯವಿಲ್ಲ.

53. ಹಿಂದಿನ ಪಾರಾದ ಬೆನ್ನಲ್ಲೇ ಈ ವಿಷಯವನ್ನು ಹೇಳುವ ಮೂಲಕ, ಮೇಲೆ ಪ್ರವಾದಿ ಪತ್ನಿಯರಿಗೆ ನೀಡಲಾದ ಆದೇಶಗಳು ಕೇವಲ ಅವರಿಗೆ ಸೀಮಿತವಾಗಿರದೆ ಒಟ್ಟು ಮುಸ್ಲಿಮ್ ಸಮಾಜವು ತನ್ನ ನಡವಳಿಕೆಯನ್ನು ಈ ಆದೇಶಗಳಿಗನುಸಾರವಾಗಿಯೇ ಸರಿಪಡಿಸಬೇಕೆಂದು ಸೂಚ್ಯವಾಗಿ ತಿಳಿಸಲಾಗಿದೆ.

54. ಅರ್ಥಾತ್- ಇಸ್ಲಾಮನ್ನು ತಮ್ಮ ಜೀವನ ಕ್ರಮವಾಗಿ ಅಂಗೀಕರಿಸಿ, ಇನ್ನು ಅದರ ಅನುಸರಣೆಯಲ್ಲೇ ಜೀವನ ಸಾಗಿಸುವೆವೆಂದು ನಿರ್ಧರಿಸಿರುವವರು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಇಸ್ಲಾಮ್ ನೀಡಿದ ವಿಚಾರ ಶೈಲಿ ಮತ್ತು ಜೀವನ ವಿಧಾನದ ಬಗ್ಗೆ ಯಾವುದೇ ಪ್ರತಿರೋಧ ಭಾವನೆ ಇಲ್ಲದವರು ಮಾತ್ರವಲ್ಲ ಅದರ ಅನುಸರಣೆಯ ಮಾರ್ಗವನ್ನು ಅವಲಂಬಿಸಿದವರು.

وَالصّٰدِقٰتِ وَالصّٰبِرِيْنَ وَالصّٰبِرٰتِ وَالْخٰشِعِيْنَ وَالْخٰشِعٰتِ وَالْمُتَصَدِّقِيْنَ
وَالْمُتَصَدِّقٰتِ وَالصَّآئِمِيْنَ وَالصّٰٓئِمٰتِ وَالْحٰفِظِيْنَ فُرُوْجَهُمْ وَالْحٰفِظٰتِ

ಆಜ್ಞಾಪಾಲಕರೂ[56] ಸತ್ಯಸಂಧರೂ[57] ಸಹನಶೀಲರೂ[58] ವಿನಮ್ರರೂ[59] ದಾನಶೀಲರೂ[60] ಉಪವಾಸವ್ರತವನ್ನಾಚರಿಸುವವರೂ[61] ತಮ್ಮ ಗುಪ್ತಾಂಗಗಳ ರಕ್ಷಣೆ ಮಾಡಿಕೊಳ್ಳುವವರೂ[62] ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರೂ[63] ಆದ ಎಲ್ಲಾ

---

55. ಅಂದರೆ ಇದು ಅವರ ತೋರಿಕೆಯ ಅಥವಾ ಒಲ್ಲದ ಮನಸ್ಸಿನ ಅನುಸರಣೆಯಲ್ಲ. ಬದಲಾಗಿ ಅವರು ಇಸ್ಲಾಮಿನ ಮಾರ್ಗದರ್ಶನವನ್ನೇ ಸತ್ಯವೆಂದು ಹಾರ್ದಿಕವಾಗಿ ನಂಬುತ್ತಾರೆ. ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್(ಸ) ತೋರಿಸಿದ ವಿಚಾರ ಮತ್ತು ಕರ್ಮಗಳ ಮಾರ್ಗವೇ ಸರಿಯಾಗಿದ್ದು ಅದರ ಅನುಸರಣೆಯಲ್ಲೇ ನಮ್ಮ ಹಿತವಿದೆಯೆಂಬುದು ಅವರ ನಂಬಿಕೆಯಾಗಿದೆ. ಅಲ್ಲಾಹನೂ ಆತನ ಪ್ರವಾದಿಯೂ ಯಾವುದನ್ನು ತಪ್ಪೆಂದು ಸಾರಿದ್ದಾರೋ ಅವರ ಅಭಿಪ್ರಾಯದಲ್ಲೂ ಅದು ತಪ್ಪೇ ಆಗಿದೆ. ಅಲ್ಲಾಹನೂ ಆತನ ಪ್ರವಾದಿಯೂ ಯಾವುದನ್ನು ಸತ್ಯವೆಂದು ಹೇಳಿದ್ದಾರೋ ಅದು ಸತ್ಯವೇ ಆಗಿದೆಯೆಂದು ಅವರ ಮನ-ಮಸ್ತಿಷ್ಕಗಳೂ ನಂಬುತ್ತವೆ. ಕುರ್‌ಆನ್ ಮತ್ತು ಪ್ರವಾದಿಚರ್ಯೆಯಿಂದ ಸಾಬೀತಾದ ಯಾವುದೇ ಆಜ್ಞೆಯು ಸೂಕ್ತವಲ್ಲವೆಂಬ ಮನೋಭಾವ ಅವರದ್ದಲ್ಲ. ಅದನ್ನು ಹೇಗಾದರೂ ಬದಲಿಸಿ ತಮ್ಮ ಅಭಿಪ್ರಾಯದಂತೆ ರೂಪಿಸಬೇಕು ಅಥವಾ ಲೋಕದ ರೂಢಿಗಳಿಗಧೀನ ಮಾಡಿ ಬಿಡಬೇಕು. ಆದರೂ ನಾವು ಅಲ್ಲಾಹನ ಮತ್ತು ಪ್ರವಾದಿಯ ಆದೇಶವನ್ನು ಬದಲಿಸಿಬಿಟ್ಟೆವೆಂಬ ಆರೋಪಕ್ಕೂ ಒಳಗಾಗಬಾರದೆಂಬ ಚಿಂತೆಯಲ್ಲಿ ಅವರ ಮನಸ್ಸು ಹೊರಳಾಡುವುದಿಲ್ಲ.

ಪ್ರವಾದಿ(ಸ) ಸತ್ಯವಿಶ್ವಾಸದ ಸರಿಯಾದ ಸ್ಥಿತಿಯನ್ನು ಈ ರೀತಿ ಚಿತ್ರಿಸಿದ್ದಾರೆ- "ಅಲ್ಲಾಹನೇ ತನ್ನ ಪ್ರಭು, ಇಸ್ಲಾಮೇ(ಅನುಸರಣೆಯೇ) ತನ್ನ ಧರ್ಮ (ಜೀವನ ವಿಧಾನ) ಮತ್ತು ಮುಹಮ್ಮದ್(ಸ) ಅವರೇ ತನ್ನ ಪ್ರವಾದಿ ಎಂಬುದರಲ್ಲಿ ಪೂರ್ಣ ತೃಪ್ತನಾದವನು ಸತ್ಯವಿಶ್ವಾಸದ ರುಚಿಯನ್ನು ಕಂಡನು."

(ಮುಸ್ಲಿಮ್)

ಇನ್ನೊಂದು ಪ್ರವಾದಿ ವಚನದಲ್ಲಿ ಅದನ್ನು ಹೀಗೆ ವಿವರಿಸಿದ್ದಾರೆ- "ನಾನು ತಂದಿರುವುದನ್ನು (ಇಸ್ಲಾಮ್) ತನ್ನ ಚಿತ್ತಕ್ಕೆ ಅಧೀನಗೊಳಿಸುವ ವರೆಗೆ ನಿಮ್ಮ ಪೈಕಿ ಯಾರೂ ಸತ್ಯವಿಶ್ವಾಸಿಯಾಗಲಾರ.

(ಶರಹುಸ್ಸುನ್ನಃ)

56. ಅಂದರೆ ಅವರು ಕೇವಲ ನಂಬಿ ಕುಳಿತು ಬಿಡುವವರಲ್ಲ. ಕಾರ್ಯತಃ ಪಾಲಿಸುವವರೂ ಆಗಿದ್ದಾರೆ. ಅಲ್ಲಾಹನು ಮತ್ತು ಆತನ ಪ್ರವಾದಿಯವರು(ಸ) ನೀಡಿದ ಆಜ್ಞೆಯೇ ಸತ್ಯವೆಂದು ಪ್ರಾಮಾಣಿಕವಾಗಿ ನಂಬುವುದು, ಆದರೆ ಕಾರ್ಯತಃ ಅದನ್ನು ಉಲ್ಲಂಘಿಸುವುದು ಹಾಗೂ ಅಲ್ಲಾಹನೂ ಆತನ ಪ್ರವಾದಿಯೂ ಯಾವುದರಿಂದ ಅವರನ್ನು ತಡೆದಿದ್ದಾರೋ ಅವೆಲ್ಲವನ್ನೂ

ಕೆಟ್ಟದೆಂದೇ ಭಾವಿಸುವುದು. ಆದರೆ ಕರ್ಮ ಜೀವನದಲ್ಲಿ ಅವುಗಳನ್ನು ಎಸಗುತ್ತಲೇ ಹೋಗುವುದು ಅವರ ನೀತಿಯಲ್ಲ.

57. ಅಂದರೆ ತಮ್ಮ ಮಾತು ಮತ್ತು ವ್ಯವಹಾರಗಳಲ್ಲಿ ಅವರು ಸತ್ಯಸಂಧರಾಗಿದ್ದಾರೆ. ಸುಳ್ಳು, ವಂಚನೆ, ಅಪ್ರಾಮಾಣಿಕತೆ, ಮೋಸ ಇತ್ಯಾದಿ ದುರ್ಗುಣಗಳು ಅವರ ಬದುಕಿನಲ್ಲಿ ಕಾಣ ಸಿಗಲಾರದು. ಅವರ ಆತ್ಮಸಾಕ್ಷಿ ಸರಿಯೆಂದು ಭಾವಿಸಿದ್ದನ್ನೇ ಅವರ ನಾಲಗೆಯೂ ಹೇಳುತ್ತದೆ. ಪ್ರಾಮಾಣಿಕವಾಗಿ ತಾವು ನಂಬಿದ ಸತ್ಯಕ್ಕನುಸಾರವಾಗಿಯೇ ಅವರು ಕೆಲಸ ಮಾಡುತ್ತಾರೆ. ಇತರರೊಂದಿಗೆ ಮಾಡುವ ವ್ಯವಹಾರದಲ್ಲೂ ಅವರು ಪ್ರಾಮಾಣಿಕರಾಗಿರುತ್ತಾರೆ.

58. ಅಲ್ಲಾಹನೂ ಪ್ರವಾದಿಯೂ ತೋರಿಸಿದ ಮಾರ್ಗದಲ್ಲಿ ನಡೆಯುವಾಗ ಮತ್ತು ಅಲ್ಲಾಹನ ಧರ್ಮವನ್ನು ಸಂಸ್ಥಾಪಿಸುವ ಕಾರ್ಯದಲ್ಲಿ ನಿರತವಾಗಿರುವಾಗ ಬರುವ ಸಂಕಷ್ಟಗಳು, ಅಪಾಯಗಳು ಮತ್ತು ನಾಶನಷ್ಟಗಳನ್ನು ದಿಟ್ಟತನದಿಂದ ಎದುರಿಸುತ್ತಾರೆ. ಯಾವುದೇ ಹೆದರಿಕೆ, ಆಮಿಷ ಮತ್ತು ಚಿತ್ತಾಕರ್ಷಕ ಬೇಡಿಕೆಗಳು ಅವರನ್ನು ನೇರಮಾರ್ಗದಿಂದ ಸರಿಸುವಲ್ಲಿ ಯಶಸ್ವಿಯಾಗಲಾರವು.

59. ಅಂದರೆ ಅವರು ಅಹಂಕಾರ, ದರ್ಪ ಮತ್ತು ಗರ್ವವುಳ್ಳವರಾಗಿರುವುದಿಲ್ಲ. ಅವರ ಮನದಲ್ಲಿ ತಾವು ದಾಸರು ಮತ್ತು ದಾಸ್ಯಕ್ಕಿಂತ ಹೆಚ್ಚಿನ ಯಾವ ನೆಲೆಯೂ ತಮಗಿಲ್ಲ ಎಂಬ ಪ್ರಜ್ಞೆ ಯಾವಾಗಲೂ ಇರುತ್ತದೆ. ಆದುದರಿಂದ ಅವರ ಮನಸ್ಸೂ ದೇಹವೂ ಸದಾ ಅಲ್ಲಾಹನ ಮುಂದೆ ಬಾಗಿಕೊಂಡಿರುತ್ತವೆ. ದೇವಭಯವು ಅವರನ್ನು ಆವರಿಸಿರುತ್ತದೆ. ಅವರೆಂದೂ ತಮ್ಮ ದೊಡ್ಡಸ್ತಿಕೆಯ ದರ್ಪದಲ್ಲಿ ಸಿಲುಕಿರುವ ದೇವಭಯವಿಲ್ಲದವರಂತೆ ವರ್ತಿಸುವುದಿಲ್ಲ. ವಾಕ್ಸರಣಿಯನ್ನು ಗಮನಿಸಿದರೆ ಇಲ್ಲಿ ಸಾಮಾನ್ಯ ದೇವಭಯದ ನಿಲುಮೆಯ ಜೊತೆಗೆ 'ಖುಷೂಅ್' ಎಂದಿರುವುದು ನಮಾಝ್‌ನ ಕುರಿತಾಗಿದೆ. ಏಕೆಂದರೆ ಅದರ ನಂತರವೇ ದಾನಧರ್ಮ ಮತ್ತು ಉಪವಾಸವನ್ನು ಪ್ರಸ್ತಾಪಿಸಲಾಗಿದೆ.

60. ಇಲ್ಲಿ ಕಡ್ಡಾಯ ಝಕಾತ್ ನೀಡಬೇಕೆಂಬುದು ಮಾತ್ರ ಉದ್ದೇಶವಲ್ಲ. ಇತರ ದಾನ ಧರ್ಮಗಳೂ ಇದರಲ್ಲಿ ಸೇರಿವೆ. ತಾತ್ಪರ್ಯವೇನೆಂದರೆ ಅವರು ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಮನಬಿಚ್ಚಿ ಖರ್ಚು ಮಾಡುತ್ತಾರೆ. ಅಲ್ಲಾಹನ ದಾಸರಿಗೆ ಸಹಾಯ ಮಾಡುವ ವಿಷಯದಲ್ಲಿ ಗರಿಷ್ಠ ಪ್ರಯತ್ನ ಮಾಡುತ್ತಾರೆ. ಯಾವ ಅನಾಥನಾಗಲಿ, ರೋಗಿಯಾಗಲಿ, ಸಂಕಷ್ಟ ಪೀಡಿತನಾಗಲಿ, ದುರ್ಬಲನಾಗಲಿ, ಬಡವನಾಗಲಿ, ದರಿದ್ರನಾಗಲಿ ಅವರ ಊರಿನಲ್ಲಿ ಸಹಾಯದಿಂದ ವಂಚಿತನಾಗಲಾರ. ಅಲ್ಲಾಹನ ಧರ್ಮದ ಸಂಸ್ಥಾಪನೆಯ ಕಾರ್ಯದಲ್ಲಿ ಅಗತ್ಯಬಿದ್ದಾಗ ತಮ್ಮ ಸಂಪತ್ತನ್ನು ಖರ್ಚು ಮಾಡುವುದರಲ್ಲಿ ಯಾವ ಲೋಭವನ್ನೂ ಅವರು ತೋರುವುದಿಲ್ಲ.

61. ಇದರಲ್ಲಿ ಕಡ್ಡಾಯ ಉಪವಾಸದ ಜೊತೆ ಐಚ್ಛಿಕ ಉಪವಾಸವೂ ಸೇರಿದೆ.

62. ಇದಕ್ಕೆ ಎರಡು ಅರ್ಥಗಳಿವೆ. ಒಂದು, ಅವರು ವ್ಯಭಿಚಾರವೆಸಗುವುದಿಲ್ಲವೆಂದಾದರೆ ಇನ್ನೊಂದು ಅವರು ನಗ್ನತೆಯನ್ನು ಪ್ರದರ್ಶಿಸುವುದಿಲ್ಲವೆಂದಾಗಿದೆ. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಮನುಷ್ಯನು ಬಟ್ಟೆ ಕಳಚಿ ಬೆತ್ತಲೆಯಾಗಿರುವುದು ಮಾತ್ರ ನಗ್ನತೆಯಲ್ಲ. ಶರೀರ ಭಾಗಗಳು ಕಾಣುವಂತಹ ತೆಳು ಬಟ್ಟೆ ಧರಿಸುವುದು ಅಥವಾ ದೇಹದ ಉಬ್ಬು-ತಗ್ಗುಗಳು ಗೋಚರವಾಗುವಂತಹ ಬಿಗಿ ಉಡುಪು ಧರಿಸುವುದೂ ನಗ್ನತೆಯಾಗಿದೆ.

63. ಅಲ್ಲಾಹನನ್ನು ಅತ್ಯಧಿಕ ಸ್ಮರಿಸುವುದೆಂದರೆ ಮಾನವನ ಬಾಯಲ್ಲಿ ಜೀವನದ ಪ್ರತಿಯೊಂದು ವಿಷಯದಲ್ಲೂ ಸದಾ ಒಂದಲ್ಲೊಂದು ರೀತಿಯಲ್ಲಿ ಅಲ್ಲಾಹನ ನಾಮ ಪ್ರಸ್ತಾಪಿಸಲ್ಪಡುವುದು. ಈ ಸ್ಥಿತಿಯು ಮಾನವನ ಹೃದಯದಲ್ಲಿ ಅಲ್ಲಾಹನ ನೆನಪು ಆಳವಾಗಿ ಬೇರೂರುವ ವರೆಗೆ

ಉಂಟಾಗಲಾರದು. ಮಾನವನ ಬಾಹ್ಯ ಪ್ರಜ್ಞೆಯಿಂದ ಸುಪ್ತ ಪ್ರಜ್ಞೆ ಮತ್ತು ಅಲ್ಲಿಂದ ಅಪ್ರಜ್ಞಾವಸ್ಥೆಯ ವರೆಗೆ ಈ ನೆನಪು ಆಳವಾಗಿ ಇಳಿದಾಗಲೇ ಅವನು ಮಾಡುವ ಪ್ರತಿಯೊಂದು ಕಾರ್ಯ ಮತ್ತು ಆಡುವ ಪ್ರತಿಯೊಂದು ಮಾತಿನಲ್ಲಿ ಅಲ್ಲಾಹನ ಹೆಸರು ಖಂಡಿತ ಬರುವುದು. ತಿನ್ನುವಾಗ 'ಬಿಸ್ಮಿಲ್ಲಾ ಎಂದು ಹೇಳಿ ತಿನ್ನುವನು. ಊಟ ಮುಗಿದ ನಂತರ 'ಅಲ್ ಹಮ್ದುಲಿಲ್ಲಾಹ್' ಎನ್ನುವನು ಮಲಗುವಾಗಲೂ ಏಳುವಾಗಲೂ ಅವನ ಬಾಯಲ್ಲಿ ಅಲ್ಲಾಹನ ಹೆಸರಿರುವುದು. ಮಾತಾಡುವಾ ಅವನ ಬಾಯಿಯಿಂದ ಆಗಾಗ ಬಿಸ್ಮಿಲ್ಲಾಹ್, ಅಲ್ ಹಮ್ದುಲಿಲ್ಲಾಹ್, ಇನ್ಶಾ ಅಲ್ಲಾಹ್, ಮಾಶ ಅಲ್ಲಾಹ್ ಮುಂತಾದ ಪದಗಳು ಹೊರಡುತ್ತಲಿರುವುದು. ಅವನು ತನ್ನ ಎಲ್ಲ ಕಾರ್ಯಗಳಿಗು ಅಲ್ಲಾಹನ ಸಹಾಯ ಅಪೇಕ್ಷಿಸುವನು. ಪ್ರತಿಯೊಂದು ಅನುಗ್ರಹಕ್ಕೂ ಆತನಿಗೆ ಕೃತಜ್ಞತೆ ಸಲ್ಲಿಸುವನು ಪ್ರತಿಯೊಂದು ವಿಪತ್ತಿನಲ್ಲೂ ಆತನ ಕರುಣೆಯನ್ನು ಬಯಸುವನು. ಪ್ರತಿಯೊಂದು ಸಂಕಷ್ಟ ವೇಳೆಯೂ ಆತನೆಡೆಗೇ ಮರಳುವನು. ಕೆಡುಕು ಮಾಡುವ ಸಂದರ್ಭ ಒದಗಿದಾಗ ಆತ ಭಯವಿರಿಸುವನು. ತಪ್ಪು ಸಂಭವಿಸಿದ ಕೂಡಲೇ ಆತನಿಂದ ಕ್ಷಮೆ ಯಾಚಿಸುವನು. ಯಾವುದೆ ಅಗತ್ಯದ ವೇಳೆ ಆತನಲ್ಲಿ ಪ್ರಾರ್ಥಿಸುವನು. ಒಟ್ಟಿನಲ್ಲಿ ಅವನು ಏಳುವಾಗಲೂ ಕೂರುವಾಗಲು ಬೇರಾವುದೇ ಕಾರ್ಯ ಮಾಡುವಾಗಲೂ ದೇವನಾಮವೇ ಆತನ ಬಾಯಲ್ಲಿರುವುದು. ಇದ ವಾಸ್ತವದಲ್ಲಿ ಇಸ್ಲಾಮಿ ಜೀವನದ ಜೀವಾಳವಾಗಿದೆ. ಇತರ ಯಾವುದೇ ಆರಾಧನೆಗೂ ಅದಕ ನಿಶ್ಚಯಿಸಲಾದ ಸಮಯವಿರುತ್ತದೆ. ಅದನ್ನು ಮಾಡಿದ ಬಳಿಕ ಆತ ಮುಕ್ತನಾಗುತ್ತಾನೆ. ಆದರೆ ಈ ಆರಾಧನೆಯು ಎಲ್ಲ ಸಮಯಗಳಲ್ಲೂ ಇರುತ್ತದೆ. ಇದುವೇ ಮಾನವ ಬದುಕನ್ನು ಅಲ್ಲಾಹನೊಂದಿ ಮತ್ತು ಆತನ ದಾಸ್ಯದೊಂದಿಗೆ ಜೋಡಿಸಿಡುತ್ತದೆ. ಆರಾಧನೆಗಳು ಮತ್ತಿತರ ಧಾರ್ಮಿಕ ಕಾರ್ಯಗಳಲ್ಲಿ ಜೀವ ತುಂಬುವುದು ಮಾನವನ ಮನಸ್ಸು ಕೇವಲ ಆ ವಿಶಿಷ್ಟ ಆರಾಧನಾ ಕರ್ಮಗಳನ ನಿರ್ವಹಿಸುತ್ತಿರುವಾಗ ಮಾತ್ರವಲ್ಲ. ಬದಲಾಗಿ ಸದಾ ಅವನ ಮನಸ್ಸು ಅಲ್ಲಾಹನತ್ತ ವಾಲಿರಬೇಕ ಮತ್ತು ಅವನ ನಾಲಗೆ ಸದಾ ಅವನನ್ನು ಸ್ಮರಿಸುತ್ತಿರಬೇಕು. ಈ ಸ್ಥಿತಿ ಮಾನವನಲ್ಲುಂಟಾದ ಜೀವನದಲ್ಲಿ ಆರಾಧನೆಗಳು ಮತ್ತು ಧಾರ್ಮಿಕ ಕಾರ್ಯಗಳು ಸೂಕ್ತ ಹವಾಮಾನದಲ್ಲಿ ನೆಟ್ಟ ಗಿಡ ಬೆಳೆಯುವಂತೆ ಬೆಳೆದು ಸಮೃದ್ಧವಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಯಾರ ಜೀವನವು ಈ ದೇವಸ್ಮರಣೆಯಿಂದ ಬರಿದಾಗಿರುವುದೋ ಅದರಲ್ಲಿ ಕೇವಲ ವಿಶಿಷ್ಟ ಸಮಯಗಳಲ್ಲಿ ಅಥವ ವಿಶೇಷ ಸಂದರ್ಭಗಳಲ್ಲಿ ಮಾಡಲಾಗುವ ಆರಾಧನೆ ಮತ್ತು ಧಾರ್ಮಿಕ ಕಾರ್ಯಗಳ ಉದಾಹರಣೆಯ ಪ್ರತಿಕೂಲ ಹವಾಮಾನದಲ್ಲಿ ನೆಟ್ಟು ಕೇವಲ ತೋಟಗಾರನ ಮೇಲ್ವಿಚಾರಣೆಯಲ್ಲಿ ಬೆಳೆಯೂ ಗಿಡದಂತಿರುವುದು. ಇದೇ ವಿಷಯವನ್ನು ಪ್ರವಾದಿ(ಸ) ಹೀಗೆ ಸ್ಪಷ್ಟ ಪಡಿಸಿದ್ದಾರೆ-

ಮುಆದ್ ಬಿನ್ ಅನಸ್ ಜುಹನೀ(ರ) ಉಲ್ಲೇಖಿಸುತ್ತಾರೆ- ಒಬ್ಬ ವ್ಯಕ್ತಿ ಪ್ರವಾದಿ(ಸ ಅವರೊಡನೆ, ಜಿಹಾದ್ ಮಾಡುವವರಲ್ಲಿ ಅತ್ಯಧಿಕ ಪ್ರತಿಫಲ ಪಡೆಯುವವನು ಯಾರು ಎಂದ ಕೇಳಿದಾಗ ಪ್ರವಾದಿವರ್ಯರು(ಸ) ಅಲ್ಲಾಹನನ್ನು ಅತ್ಯಧಿಕ ಸ್ಮರಿಸುವವನು ಎಂದರು. ಆತ ಪುನ ಪ್ರಶ್ನಿಸಿದ, ಉಪವಾಸ ಆಚರಿಸುವವರ ಪೈಕಿ ಅತ್ಯಧಿಕ ಪುಣ್ಯ ಗಳಿಸುವವನು ಯಾರು? ಪ್ರವಾದಿ(ಸ ಹೇಳಿದರು- ಅತ್ಯಧಿಕ ಅಲ್ಲಾಹನನ್ನು ಸ್ಮರಿಸುವವನು. ತರುವಾಯ ಆತ ನಮಾಝ್, ಝಕಾತ್ ಹಜ್ಜ್ ಮತ್ತು ದಾನ ಧರ್ಮಗಳನ್ನು ಮಾಡುವವರ ಬಗೆಗೂ ಪ್ರಶ್ನಿಸಿದ. ಪ್ರವಾದಿ(ಸ) ಪ್ರತಿಯೊಂದಕೂ 'ಅಲ್ಲಾಹನನ್ನು ಅತ್ಯಧಿಕ ಸ್ಮರಿಸುವವನು' ಎಂಬ ಒಂದೇ ಉತ್ತರ ನೀಡಿದರು.

(ಅಹ್ಮದ್

وَالذّٰكِرِيْنَ اللّٰهَ كَثِيْرًا وَّالذّٰكِرٰتِ اَعَدَّ اللّٰهُ لَهُمْ مَّغْفِرَةً وَّاَجْرًا عَظِيْمًا ۝
وَمَا كَانَ لِمُؤْمِنٍ وَّلَا مُؤْمِنَةٍ اِذَا قَضَى اللّٰهُ وَرَسُوْلُهٗٓ اَمْرًا اَنْ يَّكُوْنَ لَهُمُ
الْخِيَرَةُ مِنْ اَمْرِهِمْ ۗ وَمَنْ يَّعْصِ اللّٰهَ وَرَسُوْلَهٗ فَقَدْ ضَلَّ ضَلٰلًا مُّبِيْنًا ۝

ಪುರುಷರು ಮತ್ತು ಸ್ತ್ರೀಯರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿ ದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.[64]

(36) ಅಲ್ಲಾಹ್[65] ಮತ್ತು ಅವನ ಸಂದೇಶವಾಹಕರು ಯಾವುದಾದರೊಂದು ವಿಷಯದ ತೀರ್ಮಾನ ಮಾಡಿಬಿಟ್ಟರೆ ಆ ವಿಷಯದಲ್ಲಿ ಸ್ವತಃ ತೀರ್ಮಾನ ಕೈಗೊಳ್ಳುವ ಹಕ್ಕು (ಸತ್ಯವಿಶ್ವಾಸಿಗಳಾದ) ಯಾವ ಸ್ತ್ರೀ ಪುರುಷರಿಗೂ ಇಲ್ಲ. ಯಾರಾದರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದರೆ, ಅವನು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟನು.[66]

---

64. ಈ ಸೂಕ್ತದಲ್ಲಿ, ಅಲ್ಲಾಹನ ದೃಷ್ಟಿಯಲ್ಲಿ ಯಾವ ಗುಣಗಳಿಗೆ ನೈಜ ಬೆಲೆಯಿರುವುದೆಂದು ತಿಳಿಸಲಾಗಿದೆ. ಇವು ಇಸ್ಲಾಮಿನ ಪ್ರಾಥಮಿಕ ಮೌಲ್ಯಗಳಾಗಿದ್ದು (Basic Values) ಅದನ್ನು ಒಂದೇ ವಾಕ್ಯದಲ್ಲಿ ಸಂಕ್ಷೇಪಿಸಲಾಗಿದೆ. ಈ ಮೌಲ್ಯಗಳ ಪ್ರಕಾರ ಸ್ತ್ರೀ-ಪುರುಷರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಕರ್ಮದ ಆಧಾರದಲ್ಲಿ ಎರಡೂ ವರ್ಗಗಳ ಕಾರ್ಯರಂಗವು ಪ್ರತ್ಯೇಕವಾಗಿವೆ. ಪುರುಷರಿಗೆ ಜೀವನದ ಕೆಲವು ರಂಗಗಳಲ್ಲಿ ಕೆಲಸ ಮಾಡಬೇಕಾಗಿದೆ. ಸ್ತ್ರೀಯರಿಗೆ ಇನ್ನಿತರ ಕೆಲವು ರಂಗಗಳಿವೆ. ಆದರೆ ಈ ಮೌಲ್ಯಗಳು ಉಭಯತರರಲ್ಲೂ ಸಮಾನವಾಗಿದ್ದರೆ ಅವರ ಸ್ಥಾನಮಾನ ಮತ್ತು ಪುಣ್ಯ ಫಲ ಸಮಾನವಾಗಿರುವುದು. ಒಬ್ಬಳು ಒಲೆ ಉರಿಸುತ್ತಾಳೆ, ಇನ್ನೊಬ್ಬನು ಖಿಲಾಫತ್ (ಆಡಳಿತ) ಪೀಠದಲ್ಲಿ ಕುಳಿತು ಶಾಸನಗಳನ್ನು ಜಾರಿಗೊಳಿಸುತ್ತಾನೆ ಮತ್ತು ಒಬ್ಬಳು ಮನೆಯಲ್ಲಿದ್ದು ಮಕ್ಕಳ ಪಾಲನೆ ಪೋಷಣೆ ಮಾಡುತ್ತಾಳೆ. ಇನ್ನೊಬ್ಬನು ರಣರಂಗದಲ್ಲಿ ಅಲ್ಲಾಹನ ಮಾರ್ಗದಲ್ಲಿ ಆತನ ಧರ್ಮಕ್ಕಾಗಿ ಹೋರಾಡುತ್ತಾನೆ, ಎಂಬ ಕಾರಣಕ್ಕಾಗಿ ಉಭಯತರರ ಸ್ಥಾನಮಾನ ಮತ್ತು ಪುಣ್ಯ ಗಳಿಕೆಯಲ್ಲಿ ಯಾವುದೇ ಅಂತರವಿರಲಾರದು.

65. ಇಲ್ಲಿಂದ ಹ. ಝೈನಬ್‌ರೊಂದಿಗೆ ಪ್ರವಾದಿಯವರ(ಸ) ವಿವಾಹದ ಘಟನೆಗೆ ಸಂಬಂಧಿಸಿದ ಸೂಕ್ತಗಳು ಅವತೀರ್ಣ ಗೊಂಡಿದ್ದುವು.

66. ಈ ಸೂಕ್ತವು ಪ್ರವಾದಿ(ಸ) ಝೈದ್‌ರಿಗಾಗಿ(ರ) ಝೈನಬ್‌ರೊಂದಿಗೆ ವಿವಾಹ ಪ್ರಸ್ತಾಪವನ್ನಿಟ್ಟ ಹಾಗೂ ಅವರ ಸಂಬಂಧಿಕರು ಅದನ್ನು ನಿರಾಕರಿಸಿದ್ದ ಸಮಯದಲ್ಲಿ ಅವತೀರ್ಣಗೊಂಡಿದ್ದುವೆಂದು ಇಬ್ನು ಅಬ್ಬಾಸ್, ಮುಜಾಹಿದ್, ಇಕ್ರಿಮಾ ಮತ್ತು ಮುಕಾತಿಲ್ ಬಿನ್ ಹಯ್ಯಾನ್ ಹೇಳುತ್ತಾರೆ- ಇಬ್ನು ಅಬ್ಬಾಸ್‌ರ ವರದಿಯಲ್ಲಿ ಪ್ರವಾದಿ(ಸ) ಈ ಪ್ರಸ್ತಾಪವನ್ನು ಮುಂದಿಟ್ಟಾಗ ಝೈನಬ್‌ರು, ನಾನು ಅವರಿಗಿಂತ ಶ್ರೇಷ್ಠ ಕುಲದವಳಾಗಿದ್ದೇನೆ ಎಂದು ಹೇಳಿದರು ಎಂದಿದೆ. 'ನಾನು ಅವರನ್ನು ಇಷ್ಟ ಪಡುವುದಿಲ್ಲ. ನಾನು ಕುರೈಶ್‌ನ ಪ್ರತಿಷ್ಠಿತ ಮಹಿಳೆಯಾಗಿದ್ದೇನೆ' ಎಂದು ಉತ್ತರಿಸಿದರೆಂದು ಇಬ್ನು ಸಅದ್ ಹೇಳುತ್ತಾರೆ. ಅವರು ತನ್ನ ಸಹೋದರ ಅಬ್ದುಲ್ಲಾ

وَإِذْ تَقُولُ لِلَّذِي أَنْعَمَ اللَّهُ عَلَيْهِ وَأَنْعَمْتَ عَلَيْهِ أَمْسِكْ عَلَيْكَ زَوْجَكَ وَ

(37-39) ಪೈಗಂಬರರೇ,[67] ಅಲ್ಲಾಹನೂ ನೀವೂ ಯಾರಿಗೆ ಉಪಕಾರ ಮಾಡಿದ್ದಿರೋ

ಬಿನ್ ಜಹಶ್‌ರಲ್ಲೂ ತನಗೆ ಅವರು ಒಪ್ಪಿಗೆಯಿಲ್ಲವೆಂದು ಹೇಳಿದ್ದರು. ಏಕೆಂದರೆ ಝೈದ್ ಪ್ರವಾದಿವರ್ಯರು(ಸ) ಸ್ವತಂತ್ರಗೊಳಿಸಿದ ಗುಲಾಮರಾಗಿದ್ದರು. ಝೈನಬ್ ಪ್ರವಾದಿವರ್ಯರ(ಸ) ಅತ್ತೆಯ (ಉಮೈಮಾ ಬಿಂತಿ ಅಬ್ದುಲ್ ಮುತ್ತಲಿಬ್) ಮಗಳಾಗಿದ್ದರು. ಇಷ್ಟು ಉನ್ನತ ಕುಲದ ಅದೂ ಹೊರಗಿನವಳಲ್ಲ, ಪ್ರವಾದಿವರ್ಯರ(ಸ) ಅತ್ತೆಯ ಮಗಳು- ಹೆಣ್ಣಿನ ವಿವಾಹ ಪ್ರಸ್ತಾಪವನ್ನು ಪ್ರವಾದಿವರ್ಯರು(ಸ) ತಮ್ಮ ವಿಮೋಚಿತ ಗುಲಾಮನೊಂದಿಗೆ ಮಾಡುತ್ತಿರುವುದು ಝೈನಬ್‌ರ ಕುಟುಂಬದವರಿಗೆ ಎಳ್ಳಷ್ಟೂ ಇಷ್ಟವಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಸೂಕ್ತ ಅವತೀರ್ಣಗೊಂಡಿತು. ಅದನ್ನು ಕೇಳುತ್ತಲೇ ಝೈನಬ್ ಮತ್ತು ಅವರ ಕುಟುಂಬದವರೆಲ್ಲರೂ ಯಾವುದೇ ಅಳುಕಿಲ್ಲದೆ ಒಪ್ಪಿಗೆ ಸೂಚಿಸಿದರು. ತರುವಾಯ ಪ್ರವಾದಿವರ್ಯರು(ಸ) ಅವರ ನಿಕಾಹ್ ಮಾಡಿಕೊಟ್ಟರು. 10 ದೀನಾರ್ ಮತ್ತು 60 ದಿರ್ಹಮ್ ಮಹರ್ ಕೊಟ್ಟರು. ಬಟ್ಟೆ ಬರೆ ಮತ್ತಿತರ ಮನೆ ಖರ್ಚಿಗಾಗಿ ಕೆಲವು ಆಹಾರ ಪದಾರ್ಥಗಳನ್ನೂ ಕಳಿಸಿಕೊಟ್ಟರು.

ಈ ಸೂಕ್ತವು ವಿಶಿಷ್ಟ ಸನ್ನಿವೇಶವೊಂದರಲ್ಲಿ ಅವತೀರ್ಣಗೊಂಡಿದೆಯಾದರೂ ಅದರಲ್ಲಿ ನೀಡಲಾದ ಆಜ್ಞೆಯು ಇಸ್ಲಾಮೀ ಸಂವಿಧಾನದ ಮೂಲಭೂತ ತತ್ವಗಳಲ್ಲೊಂದಾಗಿದೆ. ಅದು ಇಡೀ ಇಸ್ಲಾಮೀ ಜೀವನ ವ್ಯವಸ್ಥೆಗೆ ಅನ್ವಯಿಸುತ್ತದೆ. ಇದರ ಪ್ರಕಾರ ಯಾವುದೇ ಒಬ್ಬ ಮುಸ್ಲಿಮ್ ವ್ಯಕ್ತಿಗಾಗಲಿ, ಜನಾಂಗ, ಸಂಸ್ಥೆ, ನ್ಯಾಯಾಲಯ, ಸಂಸತ್ತು ಅಥವಾ ರಾಷ್ಟ್ರಕ್ಕಾಗಲೀ, ಯಾವುದೇ ಆಜ್ಞೆಯು ಅಲ್ಲಾಹನ ಮತ್ತು ಆತನ ಪ್ರವಾದಿಯ(ಸ) ಕಡೆಯಿಂದಾಗಿದೆಯೆಂದು ದೃಢಪಟ್ಟರೆ, ತಮ್ಮ ಸ್ವಂತ ಅಭಿಪ್ರಾಯವನ್ನು ಉಪಯೋಗಿಸುವ ಅಧಿಕಾರವಿರಲಾರದು. ಮುಸ್ಲಿಮ್ ಆಗುವುದು ಎಂಬುದರ ಅರ್ಥವೇ ತಮ್ಮ ಸ್ವತಂತ್ರ ಅಧಿಕಾರವನ್ನು ಬಿಟ್ಟು ಅಲ್ಲಾಹನ ಮತ್ತು ಪ್ರವಾದಿಯ ಆಜ್ಞೆಗೆ ತಲೆಬಾಗುವುದಾಗಿದೆ. ಒಬ್ಬ ವ್ಯಕ್ತಿ ಅಥವಾ ಒಂದು ಜನಾಂಗ ಮುಸ್ಲಿಮ್ ಆಗಿದ್ದುಕೊಂಡೂ ಈ ಅಧಿಕಾರವನ್ನು ಹೊಂದಿರುವುದೆಂದರೆ ಅದು ವೈರುಧ್ಯವಾಗಿದೆ. ಎರಡೂ ಧೋರಣೆಗಳು ಒಟ್ಟಾಗಿರುವ ಕುರಿತು ಯಾವ ವಿವೇಕವಂತನಿಗೂ ಊಹಿಸಲಿಕ್ಕೂ ಸಾಧ್ಯವಿಲ್ಲ. ಮುಸ್ಲಿಮನಾಗಿ ಇರ ಬಯಸುವವನು ಅಲ್ಲಾಹನ ಮತ್ತು ಪ್ರವಾದಿಯ ಆಜ್ಞೆಗೆ ಕಡ್ಡಾಯವಾಗಿ ತಲೆ ಬಾಗಬೇಕು. ಹಾಗೆ ಬಾಗಲು ಇಚ್ಛಿಸದವನು ತಾನು ಮುಸ್ಲಿಮನಲ್ಲವೆಂದು ನೇರವಾಗಿ ಒಪ್ಪಿಕೊಳ್ಳಬೇಕು. ಅವನು ಒಪ್ಪದೆ ತಾನು ಮುಸ್ಲಿಮನೆಂದು ಡಂಗುರ ಸಾರಿದರೂ ಅಲ್ಲಾಹನ ದೃಷ್ಟಿಯಲ್ಲೂ ಜನರ ದೃಷ್ಟಿಯಲ್ಲೂ ಆತ ಮುನಾಫಿಕ್(ಕಪಟವಿಶ್ವಾಸಿ) ಎಂದೇ ಪರಿಗಣಿಸಲ್ಪಡುವನು.

67. ಇಲ್ಲಿಂದ 48ನೆಯ ಸೂಕ್ತದ ವರೆಗಿನ ವಿಷಯ- ಪ್ರವಾದಿವರ್ಯರು(ಸ) ಝೈನಬ್‌ರನ್ನು ಮದುವೆಯಾದಾಗ ಮುನಾಫಿಕರು, ಯಹೂದಿಯರು ಮತ್ತು ಬಹುದೇವ ವಿಶ್ವಾಸಿಗಳು ಅವರ ವಿರುದ್ಧ ಅಪಪ್ರಚಾರಗಳ ಬಿರುಗಾಳಿಯನ್ನೇ ಎಬ್ಬಿಸಿದ್ದ ಕಾಲದಲ್ಲಿ ಅವತೀರ್ಣಗೊಂಡಿದ್ದುವು. ಈ ಸೂಕ್ತಗಳ ಅಧ್ಯಯನ ನಡೆಸುವಾಗ ಒಂದು ವಿಷಯವನ್ನು ಗಮನಿಸಬೇಕು. ಅಲ್ಲಾಹನ ಈ ಮಾತುಗಳು, ಬೇಕು ಬೇಕೆಂದೇ ಪ್ರವಾದಿವರ್ಯರನ್ನು(ಸ) ಅವಮಾನಿಸುವ ಮತ್ತು ತಮ್ಮ ಮನಸ್ಸಿನ ದುಗುಡವನ್ನು ತೀರಿಸಲು ಸುಳ್ಳು, ಅಪವಾದ ಮತ್ತು ಮೂದಲಿಕೆಯ ಅಭಿಯಾನವನ್ನು ನಡೆಸುತ್ತಿದ್ದ

أَتَّقِ اللَّهَ وَتُخْفِي فِي نَفْسِكَ مَا اللَّهُ مُبْدِيهِ وَتَخْشَى النَّاسَ وَاللَّهُ أَحَقُّ

ಆ ವ್ಯಕ್ತಿಯೊಡನೆ[68] ನೀವು, "ನಿನ್ನ ಪತ್ನಿಯನ್ನು ಬಿಡಬೇಡ ಮತ್ತು ಅಲ್ಲಾಹನನ್ನು

---

ವೈರಿಗಳಿಗೆ ಮನವರಿಕೆ ಮಾಡಿಕೊಡಲಿಕ್ಕಾಗಿ ಆಗಿರಲಿಲ್ಲ. ಬದಲಾಗಿ, ಅವರ ಈ ಅಪಪ್ರಚಾರಗಳ ಪ್ರಭಾವಗಳಿಂದಲೂ ಅವರು ಹಬ್ಬಿಸುತ್ತಿರುವ ಸಂಶಯಗಳಿಂದಲೂ ಮುಸ್ಲಿಮರನ್ನು ರಕ್ಷಿಸಲಿಕ್ಕಾಗಿ ಅವತೀರ್ಣಗೊಂಡಿದ್ದುವು. ಅಲ್ಲಾಹನ ವಾಣಿಯು ಸತ್ಯನಿಷೇಧಿಗಳನ್ನು ಸಮಾಧಾನ ಪಡಿಸಲಾರದೆಂಬುದು ವ್ಯಕ್ತ. ಅದರಿಂದ ಸಮಾಧಾನವಾಗುವುದು ಅದು ಅಲ್ಲಾಹನ ವಾಣಿಯೆಂದು ತಿಳಿದು ಅದನ್ನು ಒಪ್ಪಿಕೊಳ್ಳುವವರಿಗೆ ಮಾತ್ರ. ಆಗ ವೈರಿಗಳ ಆಕ್ಷೇಪಗಳಿಂದ ಎಲ್ಲಾದರೂ ಈ ಜನರ ಮನ ಮಸ್ತಿಷ್ಕಗಳಲ್ಲಿ ಸಂದೇಹ ಮತ್ತು ಗೊಂದಲಗಳು ಉಂಟಾಗುವುದೋ ಎಂಬ ಭೀತಿ ತಲೆದೋರಿತ್ತು. ಆದುದರಿಂದ ಅಲ್ಲಾಹನು ಒಂದೆಡೆ ಹುಟ್ಟಿಕೊಳ್ಳಬಹುದಾದ ಸಂದೇಹಗಳನ್ನು ನಿವಾರಿಸಿದರೆ, ಇನ್ನೊಂದೆಡೆ ಇಂತಹ ಪರಿಸ್ಥಿತಿಗಳಲ್ಲಿ ನಿಮ್ಮ ವರ್ತನೆ ಹೇಗಿರಬೇಕೆಂದು ಮುಸ್ಲಿಮರಿಗೂ ಸ್ವಯಂ ಪ್ರವಾದಿವರ್ಯರಿಗೂ(ಸ) ತಿಳಿಯ ಪಡಿಸಿದ್ದಾನೆ.

68. ಅಂದರೆ ಹ. ಝೈದ್(ರ). ವಿವರಣೆ ಮುಂದೆ ಬರಲಿದೆ. ಅವರ ಮೇಲೆ ಅಲ್ಲಾಹನ ಉಪಕಾರವೇನಾಗಿತ್ತು ಮತ್ತು ಪ್ರವಾದಿವರ್ಯರ(ಸ) ಉಪಕಾರವೇನಾಗಿತ್ತೆಂಬುದನ್ನು ತಿಳಿಯಲಿಕ್ಕಾಗಿ ಅವರ ಜೀವನ ವೃತ್ತಾಂತವನ್ನು ಸಂಕ್ಷಿಪ್ತವಾಗಿ ವಿವರಿಸುವುದು ಅಗತ್ಯವೆನಿಸುತ್ತದೆ. ಅವರು ಕಲ್ಬ್ ಗೋತ್ರದ ಹಾರಿಸ್ ಬಿನ್ ಶರಾಜೀಲ್ ಎಂಬವರ ಪುತ್ರ. ಅವರ ತಾಯಿ ಸುಅ್‌ದಾ ಬಿಂತಿ ಸಅ್‌ಲಬ. ಸಅ್‌ಲಬ ತೈಗೋತ್ರದ ಬನೀ ಮಅ್‌ನ್ ಎಂಬ ಶಾಖೆಗೆ ಸೇರಿದವಳು. ಅವರು ಎಂಟು ವರ್ಷದವರಾದಾಗ ಅವರ ತಾಯಿ ಅವರನ್ನು ತನ್ನ ತವರಿಗೆ ಕರೆದುಕೊಂಡು ಹೋದಳು. ಅಲ್ಲಿ ಕೈನ್ ಬಿನ್ ಜಸರ್ ಗೋತ್ರದ ಜನರು ಅವರ ಡೇರೆಗಳ ಮೇಲೆ ಆಕ್ರಮಣ ನಡೆಸಿ ಅವರ ಸಾಮಾನು ಸರಂಜಾಮುಗಳನ್ನೆಲ್ಲ ಕೊಳ್ಳೆ ಹೊಡೆದರು. ಜೊತೆಗೆ ಆ ಜನರನ್ನೂ ಸೆರೆ ಹಿಡಿದುಕೊಂಡು ಹೋದರು. ಅವರಲ್ಲಿ ಝೈದ್ ಕೂಡಾ ಇದ್ದರು. ಅಲ್ಲಿಂದ ಅವರು ತಾಯಿಫ್‌ನ ಉಕಾಝ್ ಸಂತೆಯಲ್ಲಿ ಅವರನ್ನು ಮಾರಿ ಬಿಟ್ಟರು. ಹ. ಖದೀಜಾರವರ(ರ) ಸೋದರ ಪುತ್ರ ಹಕೀಮ್ ಬಿನ್ ಹಿಝಾಮ್ ಝೈದ್‌ರನ್ನು ಖರೀದಿಸಿ ಮಕ್ಕಾಕ್ಕೆ ಕರೆತಂದು ಅತ್ತೆಗೆ ಕಾಣಿಕೆಯಾಗಿ ನೀಡಿದರು. ಪ್ರವಾದಿ(ಸ) ಖದೀಜಾರನ್ನು ವಿವಾಹವಾದಾಗ ಅವರ ಮನೆಯಲ್ಲಿ ಝೈದ್‌ರನ್ನು ನೋಡಿದರು. ಅವರ ಗುಣನಡತೆಯನ್ನು ಮೆಚ್ಚಿ ಅವರನ್ನು ಖದೀಜಾರಿಂದ ಕೇಳಿ ಪಡೆದುಕೊಂಡರು. ಈ ರೀತಿ ಅವರು ಕೆಲವೇ ವರ್ಷಗಳಲ್ಲಿ ಪ್ರವಾದಿಯಾಗಲಿದ್ದ ಸೃಷ್ಟಿಗಳಲ್ಲೇ ಶ್ರೇಷ್ಠರಾದವರ(ಸ) ಬಳಿಗೆ ತಲಪಿದರು. ಆಗ ಝೈದ್‌ರಿಗೆ 15 ವರ್ಷ ಪ್ರಾಯವಾಗಿತ್ತು. ಆದಾದ ಕೆಲವೇ ಸಮಯದ ಬಳಿಕ ಅವರ ತಂದೆ ಮತ್ತು ಚಿಕ್ಕಪ್ಪನಿಗೆ ತಮ್ಮ ಹುಡುಗ ಮಕ್ಕಾದಲ್ಲಿದ್ದಾನೆಂಬ ವಿಷಯ ತಿಳಿದು ಅವರನ್ನು ಹುಡುಕುತ್ತಾ ಪ್ರವಾದಿವರ್ಯರ(ಸ) ಬಳಿಗೆ ತಲಪಿದರು. ನಮ್ಮಿಂದ ಬೇಕಾದಷ್ಟು ಪರಿಹಾರ ಧನ ಪಡಕೊಳ್ಳಿ, ನಮ್ಮ ಮಗುವನ್ನು ನಮಗೆ ನೀಡಿರಿ ಎಂದವರು ಅಂಗಲಾಚಿದರು. ಪ್ರವಾದಿ(ಸ) ಹೀಗೆ ಉತ್ತರಿಸಿದರು, "ನಾನು ಹುಡುಗನನ್ನು ಕರೆಯುತ್ತೇನೆ, ಅವನು ನಿಮ್ಮೊಂದಿಗೆ ಬರುವುದಾದರೆ ಬಿಡುತ್ತೇನೆ. ನಾನೇನೂ ನಿಮ್ಮಿಂದ ಪರಿಹಾರ ಧನ ಪಡೆಯಲಾರೆ. ಆದರೆ ಆತ ನನ್ನೊಂದಿಗೆ ಇರಬಯಸುವುದಾದರೆ ಅವನನ್ನು ನನ್ನ ಬಳಿಯಿಂದ ಅಟ್ಟುವವನಲ್ಲ. ಅವನ ಆಯ್ಕೆಗೇ ಬಿಟ್ಟು ಬಿಡೋಣ."

أَنْ تَخْشٰهُ ۖ فَلَمَّا قَضٰى زَيْدٌ مِّنْهَا وَطَرًا زَوَّجْنٰكَهَا لِكَيْ لَا يَكُوْنَ عَلَى

ಭಯಪಡು" ಎಂದು ಹೇಳುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ.[69] ಆ ವೇಳೆ ಅಲ್ಲಾಹನು

---

"ತಾವು ಸರಿಯಾದ ನ್ಯಾಯಕ್ಕಿಂತಲೂ ಮೀರಿದ ಮಾತನ್ನೇ ಆಡಿದಿರಿ. ಸರಿ, ಹುಡುಗನನ್ನು ಕರೆದು ಕೇಳಿರಿ" ಅವರಿಬ್ಬರೂ ಹೇಳಿದರು.

ಪ್ರವಾದಿ(ಸ) ಝೈದ್‌ರನ್ನು ಕರೆದು ಈ ಇಬ್ಬರ ಪರಿಚಯವಿದೆಯೇ ಎಂದು ಕೇಳಿದರು. "ಹೌದು, ಇವರು ನನ್ನ ತಂದೆ. ಅವರು ನನ್ನ ಚಿಕ್ಕಪ್ಪ" ಎಂದವರು ಉತ್ತರಿಸಿದರು.

ಆಗ ಪ್ರವಾದಿ(ಸ) ಹೇಳಿದರು, "ಸರಿ, ನೀನು ಅವರನ್ನೂ ಬಲ್ಲೆ, ನನ್ನನ್ನೂ ಬಲ್ಲೆ. ನೀನು ಇಚ್ಛಿಸುವುದಾದರೆ ನಿನಗೆ ಅವರೊಂದಿಗೆ ಹೋಗಬಹುದು. ಅನ್ಯಥಾ ನನ್ನ ಬಳಿಯಲ್ಲೇ ಇರುವುದಾದರೆ ಅದಕ್ಕೂ ಸ್ವಾತಂತ್ರ್ಯವಿದೆ."

'ನಾನು ತಮ್ಮನ್ನು ಬಿಟ್ಟು ಯಾರೊಂದಿಗೂ ಹೋಗಲಾರೆ' ಝೈದ್ ಹೇಳಿದರು. ಆಗ ಅವನ ತಂದೆ ಮತ್ತು ಚಿಕ್ಕಪ್ಪ ಅವರನ್ನು ಉದ್ದೇಶಿಸಿ ಹೀಗೆಂದರು- ಝೈದ್! ನೀನು ಸ್ವತಂತ್ರನಾಗಿರುವುದಕ್ಕಿಂತ ಗುಲಾಮಗಿರಿಯನ್ನು ಇಷ್ಟ ಪಡುತ್ತಿಯಾ. ನಿನ್ನ ತಂದೆ, ತಾಯಿ ಮತ್ತು ಕುಟುಂಬದವರೆಲ್ಲರನ್ನೂ ಬಿಟ್ಟು ಪರಕೀಯರೊಂದಿಗೆ ಇರಲು ಇಚ್ಛಿಸುತ್ತಿಯಾ?

ಝೈದ್ ಹೀಗೆ ಉತ್ತರಿಸಿದರು- ನಾನು ಈ ವ್ಯಕ್ತಿಯ ಸದ್ಗುಣಗಳನ್ನು ಕಣ್ಣಾರೆ ಕಂಡಿದ್ದೇನೆ. ಅದರ ಅನುಭವದಲ್ಲಿ ನಾನಿನ್ನು ಲೋಕದಲ್ಲಿ ಇನ್ನಾರಿಗೂ ಅವರಿಗಿಂತ ಪ್ರಾಶಸ್ತ್ಯ ನೀಡಲಾರೆ.

ಝೈದ್‌ರ ಉತ್ತರ ಕೇಳಿ ಅವರಿಬ್ಬರೂ ಸಂತುಷ್ಟರಾಗಿ ಅವರನ್ನು ಅಲ್ಲೇ ಬಿಟ್ಟು ತೆರಳಲು ಒಪ್ಪಿದರು. ಪ್ರವಾದಿ(ಸ) ಆಗಲೇ ಝೈದ್‌ರನ್ನು ಸ್ವತಂತ್ರಗೊಳಿಸಿದರು. ಪವಿತ್ರ ಕಅಬಾ ಭವನದ ಬಳಿಗೆ ಕರೆದುಕೊಂಡು ಹೋಗಿ ತುಂಬಿದ ಸಭೆಯಲ್ಲಿ ಈ ರೀತಿ ಘೋಷಿಸಿದರು- ಜನರೇ! ನೀವೆಲ್ಲ ಸಾಕ್ಷಿಯಾಗಿರಿ. ಇಂದಿನಿಂದ ಝೈದ್ ನನ್ನ ಪುತ್ರ. ಅವನು ನನ್ನ ವಾರೀಸುದಾರ ಮತ್ತು ನಾನು ಅವನ ವಾರೀಸುದಾರ.

ಆದುದರಿಂದಲೇ ಜನರು ಅವರನ್ನು ಝೈದ್ ಬಿನ್ ಮುಹಮ್ಮದ್ ಎಂದು ಕರೆಯ ತೊಡಗಿದರು. ಇದೆಲ್ಲವೂ ಪ್ರವಾದಿತ್ವ ಪೂರ್ವದ ಘಟನೆಗಳಾಗಿವೆ. ಅನಂತರ ಮುಹಮ್ಮದ್(ಸ) ಅವರು ಪ್ರವಾದಿಯಾಗಿ ನೇಮಕಗೊಂಡಾಗ ಅವರ ಕರೆಯನ್ನು ಕೇಳಿದ ಕೂಡಲೇ ಯಾವುದೇ ಸಂಕೋಚ ಅಥವಾ ಸಂದೇಹ ಪಡದೆ ಅದನ್ನು ಸ್ವೀಕರಿಸಿದವರು ನಾಲ್ಕು ಮಂದಿ- ಹ. ಖದೀಜಾ(ರ), ಝೈದ್, ಅಲೀ ಮತ್ತು ಅಬೂಬಕರ್(ರ). ಆಗ ಝೈದ್‌ರ ಪ್ರಾಯ 30 ವರ್ಷ. ಪ್ರವಾದಿವರ್ಯರ(ಸ) ಒಡನಾಟದಲ್ಲಿ 15 ವರ್ಷಗಳು ಕಳೆದಿದ್ದುವು. ಮದೀನಾಕ್ಕೆ ವಲಸೆ ಹೋದ ನಂತರ ಹಿ.ಶ. 4ರಲ್ಲಿ ಪ್ರವಾದಿಯವರು(ಸ) ತಮ್ಮ ಅತ್ತೆಯ ಮಗಳು ಝೈನಬ್‌ರನ್ನು ಅವರಿಗೆ ವಿವಾಹ ಮಾಡಿಕೊಟ್ಟರು. ತಮ್ಮ ಕೈಯಿಂದ ಮಹ್ರ್ ಪಾವತಿಸಿದರು. ಗೃಹ ಕೃತ್ಯಕ್ಕೆ ಅಗತ್ಯದ ಸಾಮಾನುಗಳನ್ನು ಕೊಟ್ಟರು.

'ಅಲ್ಲಾಹನೂ ನೀವೂ ಉಪಕಾರ ಮಾಡಿದವನು' ಎಂದು ಅಲ್ಲಾಹನು ಹೇಳಿರುವುದು ಈ ಎಲ್ಲ ಘಟನೆಗಳ ಕುರಿತೇ ಆಗಿದೆ.

69. ಇದು ಝೈದ್ ಮತ್ತು ಝೈನಬ್‌ರ ದಾಂಪತ್ಯ ಸಂಬಂಧವು ವಿರಸದ ಪರಾಕಾಷ್ಠೆಗೆ ತಲಪಿದಾಗಿನ ವೃತ್ತಾಂತವಾಗಿದೆ. ಅವರು ಆಗಾಗ ಪ್ರವಾದಿವರ್ಯರ(ಸ) ಬಳಿ ಬಂದು ನಾನು ಆಕೆಗೆ

الْمُؤْمِنِينَ حَرَجٌ فِي أَزْوَاجِ أَدْعِيَائِهِمْ إِذَا قَضَوْا مِنْهُنَّ وَطَرًا وَكَانَ أَمْرُ

ಬಹಿರಂಗಗೊಳಿಸಲು ಇಚ್ಛಿಸಿದ್ದ ವಿಷಯವನ್ನು ನೀವು ನಿಮ್ಮ ಹೃದಯದೊಳಗೆ ಬಚ್ಚಿಟ್ಟಿದ್ದಿರಿ. ನೀವು ಜನರನ್ನು ಹೆದರುತ್ತಿದ್ದಿರಿ. ನಿಜವಾಗಿ ಭಯಪಡಲು ಅಲ್ಲಾಹನು ಅಧಿಕ ಹಕ್ಕುದಾರನಾಗಿದ್ದಾನೆ.[70] ತರುವಾಯ ಝೈದ್ ಅವಳಿಂದ ತನ್ನ ಅಪೇಕ್ಷೆಯನ್ನು

---

ತಲಾಕ್ ನೀಡ ಬಯಸುತ್ತೇನೆ ಎಂದು ಹೇಳುತ್ತಿದ್ದರು. ಝೈನಬ್‌ರು ಅಲ್ಲಾಹನ ಮತ್ತು ಪ್ರವಾದಿಯ ಆಜ್ಞೆಯನ್ನು ಶಿರಸಾ ಪಾಲಿಸಿ ಅವರೊಂದಿಗೆ ಮದುವೆಯಾಗಲು ಒಪ್ಪಿದ್ದರು. ಆದರೆ ಝೈದ್ ಓರ್ವ ವಿಮೋಚಿತ ಗುಲಾಮನಾಗಿದ್ದು ನಮ್ಮದೇ ಕುಟುಂಬದಲ್ಲಿ ಪೋಷಿಸಲ್ಪಟ್ಟವರು ಮತ್ತು ತಾನು ಅರೇಬಿಯಾದ ಉನ್ನತ ಕುಲಜಾತೆಯಾಗಿದ್ದು ತನಗಿಂತ ಕೀಳಾದ ವ್ಯಕ್ತಿಯನ್ನು ಮದುವೆಯಾಗಿದ್ದೇನೆ, ಎಂಬ ಭಾವನೆಯು ಅವರ ಮನಸ್ಸಿನಿಂದ ಅಳಿಯಲೇ ಇಲ್ಲ. ಈ ಭಾವನೆಯಿಂದಾಗಿ ದಾಂಪತ್ಯ ಜೀವನದಲ್ಲಿ ಅವರು ಎಂದೂ ಝೈದ್‌ರನ್ನು ತನ್ನ ಸಮಾನ ಸ್ಥಾನಮಾನದವರೆಂದು ಪರಿಗಣಿಸಲೇ ಇಲ್ಲ. ಆದುದರಿಂದಲೇ ಅವರ ಮಧ್ಯೆ ವಿರಸ ಹೆಚ್ಚುತ್ತಾ ಹೋಯಿತು. ಒಂದು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಸಮಯ ಕಳೆದಿರಬಹುದು. ಪರಿಸ್ಥಿತಿ ವಿಚ್ಛೇದನದ ಮಟ್ಟಕ್ಕೂ ತಲಪಿತು.

70. ಕೆಲವರು ಈ ವಾಕ್ಯವನ್ನು ತಪ್ಪಾಗಿ ಅರ್ಥೈಸಿದ್ದಾರೆ. ಅವರ ಪ್ರಕಾರ ಝೈನಬ್‌ರನ್ನು ವಿವಾಹವಾಗಲು ಪ್ರವಾದಿವರ್ಯರೇ(ಸ) ಬಯಸಿದ್ದರು. ಝೈದ್ ಆಕೆಗೆ ತಲಾಕ್ ನೀಡಿದರೆ ಆಗಬಹುದಿತ್ತೆಂದು ಅವರು ಮನಸ್ಸಿನಲ್ಲಿ ಭಾವಿಸುತ್ತಿದ್ದರು. ಆದರೆ ಅವರು ಬಂದು, ನಾನು ಝೈನಬ್‌ಳಿಗೆ ತಲಾಕ್ ಕೊಡ ಬಯಸಿದ್ದೇನೆಂದು ಹೇಳಿದಾಗ ತೋರಿಕೆಗೆ ಅದನ್ನು ತಡೆದರು (ಮಆದಲ್ಲಾಹ್) ಆದಕ್ಕಾಗಿ ಅಲ್ಲಾಹನು, ನೀವು ಮನಸ್ಸಿನಲ್ಲಿ ಬಚ್ಚಿಟ್ಟಿರುವುದನ್ನು ಅಲ್ಲಾಹನು ಬಹಿರಂಗಗೊಳಿಸ ಬಯಸಿದ್ದನು ಎಂದು ಹೇಳಿದನು. ಆದರೆ ವಸ್ತುಸ್ಥಿತಿಯು ಇದಕ್ಕೆ ತದ್ವಿರುದ್ಧವಾಗಿದೆ. ಈ ಅಧ್ಯಾಯದ 1,2,3 ಮತ್ತು 7ನೆಯ ಸೂಕ್ತಗಳೊಂದಿಗೆ ಈ ವಾಕ್ಯವನ್ನು ಸೇರಿಸಿ ಓದಿದರೆ, ಝೈದ್ ಮತ್ತವರ ಪತ್ನಿಯ ನಡುವೆ ವಿರಸ ತೀವ್ರವಾಗುತ್ತಿದ್ದ ಕಾಲದಲ್ಲೇ ಅಲ್ಲಾಹನು ಪ್ರವಾದಿವರ್ಯರಿಗೆ(ಸ), ಝೈದ್ ತನ್ನ ಪತ್ನಿಗೆ ತಲಾಕ್ ಕೊಟ್ಟರೆ ಆ ಮಹಿಳೆಯನ್ನು ನೀವು ವಿವಾಹವಾಗಬೇಕೆಂಬ ಸೂಚನೆ ನೀಡಿದ್ದನು. ಆದರೆ ಅರೇಬಿಯನ್ ಸಮಾಜದಲ್ಲಿ ದತ್ತುಪುತ್ರನ ವಿಚ್ಛೇದಿತೆಯನ್ನು ಮದುವೆಯಾದರೆ ಏನಾದೀತು- ಅದು ಕೂಡಾ ಕೇವಲ ಬೆರಳೆಣಿಕೆಯ ಮುಸ್ಲಿಮರ ಹೊರತು ಇಡೀ ಅರೇಬಿಯಾದ ಜನರು ತನ್ನ ವಿರುದ್ಧ ನಿಂತಿರುವಾಗ- ಎಂಬುದು ಪ್ರವಾದಿ(ಸ) ಚೆನ್ನಾಗಿ ಅರಿತಿದ್ದರು. ಆದುದರಿಂದ ಪ್ರವಾದಿವರ್ಯರು(ಸ) ಈ ಕಠೋರ ಸತ್ವಪರೀಕ್ಷೆಯಲ್ಲಿ ಸಿಲುಕಲು ಅಳುಕುತ್ತಿದ್ದರು. ಆದುದರಿಂದಲೇ ಝೈದ್‌ರು ತನ್ನ ಪತ್ನಿಗೆ ತಲಾಕ್ ನೀಡುವ ಇಚ್ಛೆ ವ್ಯಕ್ತಪಡಿಸಿದಾಗ, ಅಲ್ಲಾಹನನ್ನು ಭಯಪಡು ಮತ್ತು ತಲಾಕ್ ನೀಡದಿರು ಎಂದು ಪ್ರವಾದಿ(ಸ) ಹೇಳಿದರು. ಅವರು ತಲಾಕ್ ನೀಡದಿದ್ದರೆ ತಾನು ಈ ಆಪತ್ತಿನಿಂದ ಪಾರಾದಂತೆ, ಅನ್ಯಥಾ ತಲಾಕ್ ನೀಡಿಬಿಟ್ಟರೆ ಮತ್ತೆ ತಾನು ಅಲ್ಲಾಹನ ಆಜ್ಞೆಯನ್ನು ಪಾಲಿಸಲೇ ಬೇಕಾದೀತು. ಆಗ ನನ್ನ ಮೇಲೆ ಸಾಕಷ್ಟು ಕೆಸರೆರಚುವ ಅವಕಾಶ ಈ ಮಂದಿಗೆ ಸಿಕ್ಕೀತೆಂದು ಪ್ರವಾದಿ(ಸ) ಭಾವಿಸಿದ್ದರು. ಆದರೆ ಅಲ್ಲಾಹನು ತನ್ನ ಪ್ರವಾದಿಯಲ್ಲಿ ಯಾವ ಉನ್ನತ ಸ್ಥಿರಚಿತ್ತತೆ ಮತ್ತು ದೇವವಿಧಿಯಲ್ಲಿ

ٱللَّهِ مَفْعُولًا ﴿٣٧﴾ مَّا كَانَ عَلَى ٱلنَّبِيِّ مِنْ حَرَجٍ فِيمَا فَرَضَ ٱللَّهُ لَهُۥ ۖ سُنَّةَ ٱللَّهِ

**ಪೂರ್ತಿಗೊಳಿಸಿಕೊಂಡ ಬಳಿಕ[71] ನಾವು ಅವಳ ವಿವಾಹವನ್ನು ನಿಮ್ಮೊಂದಿಗೆ ಮಾಡಿದೆವು.[72] (ಇದು) ದತ್ತು ಪುತ್ರರು ತಮ್ಮ ಪತ್ನಿಯರೊಂದಿಗೆ ತಮ್ಮ ಅಪೇಕ್ಷೆ ಪೂರ್ತಿಗೊಳಿಸಿಕೊಂಡ ಬಳಿಕ ಅವರ (ವಿಚ್ಛೇದಿತೆಯರ) ವಿಷಯದಲ್ಲಿ ಸತ್ಯವಿಶ್ವಾಸಿಗಳಿಗೆ ಯಾವುದೇ ಅಡಚಣೆ**

ಸಂತೃಪ್ತಿಯನ್ನು ನೋಡ ಬಯಸಿದ್ದನೋ ಅದರ ಪ್ರಕಾರ ಝೈದ್‌ರನ್ನು ತಲಾಕ್ ನೀಡದಂತೆ ತಡೆದು ಪ್ರವಾದಿ ತನಗೆ ಕೆಟ್ಟ ಹೆಸರು ಬರುವುದರಿಂದ ಪಾರಾಗಲು ಬಯಸಿದ್ದು ಆತನಿಗೆ ಇಷ್ಟವಾಗಲಿಲ್ಲ. ವಸ್ತುತಃ ಅಲ್ಲಾಹನು ಅವರಿಂದ ಒಂದು ದೊಡ್ಡ ಉದ್ದೇಶಕ್ಕಾಗಿಯೇ ಈ ಕೆಲಸವನ್ನು ಮಾಡಿಸ ಬಯಸಿದ್ದನು. ನೀವು ಜನರಿಗೆ ಹೆದರುತ್ತಿದ್ದೀರಿ. ವಾಸ್ತವದಲ್ಲಿ ಹೆದರಲು ಅಲ್ಲಾಹನೇ ಹೆಚ್ಚು ಅರ್ಹನು ಎಂಬ ಮಾತು ಸ್ಪಷ್ಟವಾಗಿ ಅದರ ಕಡೆಗೇ ಬೆಟ್ಟು ಮಾಡುತ್ತದೆ.

ಈ ಸೂಕ್ತವನ್ನು ವ್ಯಾಖ್ಯಾನಿಸುತ್ತಾ ಇಮಾಮ್ ಝೈನುಲ್ ಆಬಿದೀನ್ ಅವರು ಅಲೀ ಬಿನ್ ಹುಸೈನ್‌ರೊಂದಿಗೆ ಇದನ್ನೇ ಹೇಳಿದರು. ಅವರು ಹೇಳುತ್ತಾರೆ, ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಝೈನಬ್ ನಿಮ್ಮ ಪತ್ನಿಯಾಗಲಿದ್ದಾಳೆ ಎಂದು ತಿಳಿಸಿದ್ದನು. ಝೈದ್ ಬಂದು ಅವರಲ್ಲಿ ತನ್ನ ಅಳಲನ್ನು ತೋಡಿಕೊಂಡಾಗ, ಅಲ್ಲಾಹನನ್ನು ಭಯಪಡು- ತಲಾಕ್ ನೀಡಬೇಡ ಎಂದು ಪ್ರವಾದಿ(ಸ) ಹೇಳಿದರು. ಅದಕ್ಕಾಗಿ ಅಲ್ಲಾಹನು ಹೀಗೆ ಹೇಳಿದನು- "ನಾನು ನಿಮಗೆ ಮೊದಲೇ, ನಿಮ್ಮೊಂದಿಗೆ ಝೈನಬ್‌ರ ವಿವಾಹ ಮಾಡಲಿದ್ದೇನೆಂದು ಸೂಚನೆ ನೀಡಿದ್ದೆ. ಆದರೆ ನೀವು ಝೈದ್‌ರೊಂದಿಗೆ ಹೇಳುವಾಗ ಅದನ್ನು ಅಡಗಿಸುತ್ತಿದ್ದಿರಿ. ಅಲ್ಲಾಹನು ಅದನ್ನು ಬಹಿರಂಗ ಪಡಿಸಬಯಸಿದ್ದನು."

(ಇಬ್ನು ಜರೀರ್, ಇಬ್ನು ಕಸೀರ್- ಇಬ್ನು ಅಬೀ ಹಾತಿಮ್‌ರಿಂದ ಉದ್ಧರಿತ)

ಅಲ್ಲಾಮಾ ಆಲೂಸಿ ಕೂಡಾ 'ರೂಹುಲ್ ಮಆನಿ' ಎಂಬ ತನ್ನ ವ್ಯಾಖ್ಯಾನದಲ್ಲಿ ಇದೇ ಅರ್ಥವನ್ನು ನೀಡಿದ್ದಾರೆ. ಅವರು ಹೇಳುತ್ತಾರೆ- ಪ್ರವಾದಿ(ಸ) ಮೌನವಾಗಿರಬೇಕಿತ್ತು ಅಥವಾ ನೀನೇನು ಬಯಸುತ್ತಿಯೋ ಅದನ್ನು ಮಾಡು ಎಂದು ಝೈದ್‌ರೊಂದಿಗೆ ಹೇಳಬೇಕಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅದಕ್ಕಾಗಿ ಈ ಗದರಿಕೆ. ಇದರ ಸಾರಾಂಶವೇನೆಂದರೆ, ನೀವೇಕೆ ಝೈದ್‌ರೊಡನೆ ನಿನ್ನ ಪತ್ನಿಗೆ ತಲಾಕ್ ಕೊಡಬೇಡವೆಂದು ಹೇಳಿದಿರಿ. ವಸ್ತುತಃ ಆಕೆ ನಿಮ್ಮ ಪತ್ನಿಯಾಗಲಿದ್ದಾಳೆಂದು ಅಲ್ಲಾಹನು ಮೊದಲೇ ತಿಳಿಸಿರಲಿಲ್ಲವೆ?

71. ಅರ್ಥಾತ್- ಝೈದ್ ತನ್ನ ಪತ್ನಿಗೆ ತಲಾಕ್ ನೀಡಿದರು ಮತ್ತು ಅವರ ಇದ್ದತ್ ಪೂರ್ಣಗೊಂಡಿತು. 'ಅಗತ್ಯ ಪೂರ್ಣಗೊಂಡಿತು' ಎಂಬ ಪದಗಳಿಂದ ಝೈದ್‌ರಿಗೆ ಝೈನಬ್‌ರಲ್ಲಿ ಯಾವುದೇ ಆಶೆ ಉಳಿದಿಲ್ಲ ಎಂಬ ಅರ್ಥ ಬರುತ್ತದೆ. ಈ ಸ್ಥಿತಿಯು ಕೇವಲ ತಲಾಕ್ ಕೊಡುವುದರಿಂದ ಪೂರ್ಣಗೊಳ್ಳುವುದಿಲ್ಲ. ಏಕೆಂದರೆ ಇದ್ದತ್‌ನ ಅವಧಿಯಲ್ಲಿ ಪತಿಗೆ ಸ್ವಲ್ಪವಾದರೂ ಆಸಕ್ತಿ ಉಳಿದಿದ್ದಲ್ಲಿ ಆತ ಪುನಃ ಆಕೆಯನ್ನು ಮರಳಿ ಸ್ವೀಕರಿಸಿಕೊಳ್ಳಬಹುದು. ಆಕೆ ಗರ್ಭಿಣಿಯೋ ಅಲ್ಲವೋ ಎಂಬ ನಿರೀಕ್ಷೆ ಕೂಡಾ ಆತನಲ್ಲಿ ಉಳಿದಿರುತ್ತದೆ. ಆದುದರಿಂದ ವಿಚ್ಛೇದಿತ ಪತ್ನಿಯ ಇದ್ದತ್ ಪೂರ್ತಿಗೊಂಡರೆ ಮಾತ್ರ ಮಾಜಿ ಪತಿಯ ಆಶೆ ಕೊನೆಗೊಳ್ಳುತ್ತದೆ.

72. ಈ ಪದಗಳು ಪ್ರವಾದಿಯವರು(ಸ) ಈ ವಿವಾಹವನ್ನು ತನ್ನ ಇಚ್ಛೆಯಂತೆ ಮಾಡಿರಲಿಲ್ಲ. ಬದಲಾಗಿ ಅಲ್ಲಾಹನ ಅಪ್ಪಣೆ ಪ್ರಕಾರ ಮಾಡಿದರೆಂಬುದನ್ನು ಸ್ಪಷ್ಟವಾಗಿ ಸಾರುತ್ತವೆ.

فِي الَّذِينَ خَلَوْا مِن قَبْلُ ۚ وَكَانَ أَمْرُ اللَّهِ قَدَرًا مَّقْدُورًا ﴿٣٨﴾ الَّذِينَ يُبَلِّغُونَ
رِسَالَاتِ اللَّهِ وَيَخْشَوْنَهُ وَلَا يَخْشَوْنَ أَحَدًا إِلَّا اللَّهَ ۗ وَكَفَىٰ بِاللَّهِ حَسِيبًا ﴿٣٩﴾
مَّا كَانَ مُحَمَّدٌ أَبَا أَحَدٍ مِّن رِّجَالِكُمْ وَلَٰكِن رَّسُولَ اللَّهِ وَخَاتَمَ النَّبِيِّينَ ۗ وَ

ಇಲ್ಲದಂತಾಗಲಿಕ್ಕಾಗಿ (ಆಗಿದೆ)[73]. ಅಲ್ಲಾಹನ ಆಜ್ಞೆಯಂತು ಜಾರಿಗೆ ಬಂದೇ ತೀರಬೇಕಿತ್ತು. ಅಲ್ಲಾಹನು ಪ್ರವಾದಿಗಾಗಿ ನಿಶ್ಚಯಿಸಿ ಬಿಟ್ಟಿರುವಂತಹ ಕಾರ್ಯದಲ್ಲಿ ಪ್ರವಾದಿಗೆ ಯಾವ ಅಡಚಣೆಯೂ ಇಲ್ಲ.[74] ಅಲ್ಲಾಹನ ಇದೇ ನಿಯಮವು ಹಿಂದೆ ಗತಿಸಿ ಹೋಗಿದ್ದ ಪ್ರವಾದಿಗಳ ವಿಷಯದಲ್ಲೂ ಜಾರಿಯಲ್ಲಿತ್ತು. ಅಲ್ಲಾಹನ ಆಜ್ಞೆಯು ಒಂದು ಖಚಿತವಾಗಿ ನಿರ್ಧರಿಸಿದ ತೀರ್ಪಾಗಿರುತ್ತದೆ.[75] ಅಲ್ಲಾಹನ ಸಂದೇಶಗಳನ್ನು ತಲುಪಿಸುವ, ಅವನನ್ನೇ ಭಯಪಡುವ ಮತ್ತು ಒಬ್ಬ ದೇವನ ಹೊರತು ಯಾರನ್ನೂ ಭಯಪಡದವರಿಗೆ (ಇರುವ, ಅಲ್ಲಾಹನ ನಿಯಮವಿದು) ಮತ್ತು ವಿಚಾರಣೆ ನಡೆಸಲು ಅಲ್ಲಾಹನೇ ಸಾಕು.[76]

(40) (ಜನರೇ) ಮುಹಮ್ಮದ್ ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ.

---

73. ಅಲ್ಲಾಹನು ಈ ಕೆಲಸವನ್ನು ಪ್ರವಾದಿವರ್ಯರಿಂದ(ಸ) ಒಂದು ಅಗತ್ಯ ಹಾಗೂ ಉದ್ದೇಶಕ್ಕಾಗಿ ಮಾಡಿಸಿದ್ದು, ಬೇರಾವುದೇ ಉಪಾಯದಿಂದ ಅದು ಪೂರ್ಣಗೊಳ್ಳುತ್ತಿರಲಿಲ್ಲವೆಂದು ಈ ಪದಗಳು ಸ್ಪಷ್ಟ ಪಡಿಸುತ್ತವೆ. ಅರೇಬಿಯಾದಲ್ಲಿ ದತ್ತು ಸಂಬಂಧದ ಬಗ್ಗೆ ರೂಢಿಯಲ್ಲಿದ್ದ ಕೆಟ್ಟ ಸಂಪ್ರದಾಯಗಳನ್ನು ಅಳಿಸಲು ಅಲ್ಲಾಹನ ಪ್ರವಾದಿಯೇ ಮುಂದಡಿಯಿಟ್ಟು ಒಡೆದು ಹಾಕದೆ ಬೇರಾವ ಮಾರ್ಗವೂ ಇರಲಿಲ್ಲ. ಆದುದರಿಂದ ಪ್ರವಾದಿವರ್ಯರ(ಸ) ಅಂತಃಪುರಕ್ಕೆ ಓರ್ವ ಪತ್ನಿಯನ್ನು ಹೆಚ್ಚಿಸುವುದಕ್ಕಾಗಿ ಈ ವಿವಾಹವನ್ನು ಮಾಡಿಸಿರುವುದಲ್ಲ. ಬದಲಾಗಿ ಒಂದು ಪ್ರಧಾನ ಅಗತ್ಯವನ್ನು ಈಡೇರಿಸಲಿಕ್ಕಾಗಿ ಮಾಡಿಸಿದನು.

74. ಇತರ ಮುಸ್ಲಿಮರ ಪಾಲಿಗೆ ಇಂತಹ ವಿವಾಹವು ಕೇವಲ ಧರ್ಮಸಮ್ಮತವಾಗಿದೆ. ಆದರೆ ಪ್ರವಾದಿಯವರಿಗೆ(ಸ) ಇದು ಅಲ್ಲಾಹನಿಂದ ವಿಧಿಸಲ್ಪಟ್ಟ ಕಡ್ಡಾಯ ಕರ್ತವ್ಯವಾಗಿತ್ತು ಎಂಬುದನ್ನು ಈ ಪದಗಳು ಸ್ಪಷ್ಟಪಡಿಸುತ್ತವೆ.

75. ಅರ್ಥಾತ್- ಅಲ್ಲಾಹನ ವತಿಯಿಂದ ಯಾವುದೇ ಆಜ್ಞೆ ಬಂದರೂ ಅದನ್ನು ಪಾಲಿಸಬೇಕಾದುದು ಪ್ರವಾದಿಗಳಿಗೆ ಹಿಂದಿನಿಂದಲೂ ಕಡ್ಡಾಯವಾಗಿತ್ತು. ಆದರಿಂದ ಅವರು ನುಣುಚಿಕೊಳ್ಳುವಂತಿಲ್ಲ. ಅಲ್ಲಾಹನು ತನ್ನ ಪ್ರವಾದಿಗೆ ಯಾವುದೇ ಕಾರ್ಯವನ್ನು ಕಡ್ಡಾಯಗೊಳಿಸಿದರೆ ಅವರು ಅದನ್ನು ನಿರ್ವಹಿಸಲೇ ಬೇಕು. ಇಡೀ ಲೋಕವು ಅದನ್ನು ವಿರೋಧಿಸಿದರೂ ಸರಿ.

76. ಮೂಲದಲ್ಲಿ 'ಕಫಾ ಬಿಲ್ಲಾಹಿ ಹಸೀಬನ್' (ಲೆಕ್ಕ ತೀರಿಸಲು ಅಲ್ಲಾಹನೇ ಸಾಕು) ಎಂಬ ಪದಗಳಿವೆ. ಅದಕ್ಕೆ ಎರಡು ಅರ್ಥಗಳಿವೆ. ಒಂದನೆಯದು, ಎಲ್ಲ ರೀತಿಯ ಭಯ ಮತ್ತು ಅಪಾಯದ ವೇಳೆ ಅಲ್ಲಾಹನೇ ಸಾಕು. ಎರಡನೆಯದು, ಲೆಕ್ಕ ಪಡೆಯಲು ಅಲ್ಲಾಹನೇ ಸಾಕು. ಅವನ ಹೊರತು ಇತರ ಯಾರ ವಿಚಾರಣೆಯ ಬಗೆಗೂ ಹೆದರುವ ಅಗತ್ಯವಿಲ್ಲ.

اِنَّ اللّٰهَ بِكُلِّ شَیۡءٍ عَلِیۡمًا ﴿۴۰﴾ یٰۤاَیُّهَا الَّذِیۡنَ اٰمَنُوا اذۡکُرُوا اللّٰهَ ذِکۡرًا کَثِیۡرًا ﴿۴۱﴾

ವಾಸ್ತವದಲ್ಲಿ ಅವರು ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ. ಅಲ್ಲಾಹನು ಸಕಲ ವಸ್ತುಗಳ ಪರಿಜ್ಞಾನವುಳ್ಳವನು.[77]

**(41-44)** ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಬಹಳವಾಗಿ ಸ್ಮರಿಸಿರಿ ಮತ್ತು ಬೆಳಗ

77. ಈ ಒಂದು ವಾಕ್ಯದಲ್ಲಿ ವಿರೋಧಿಗಳು ಪ್ರವಾದಿಯವರ(ಸ) ಈ ವಿವಾಹದ ಬಗ್ಗೆ ಎತ್ತುತ್ತಿದ್ದ ಎಲ್ಲ ಆಕ್ಷೇಪಗಳಿಗೂ ಉತ್ತರಿಸಲಾಗಿದೆ.

ಅವರ ಪ್ರಪ್ರಥಮ ಆಕ್ಷೇಪವೇನಾಗಿತ್ತೆಂದರೆ ಪ್ರವಾದಿ(ಸ) ತಮ್ಮ ಸೊಸೆಯನ್ನೇ ವಿವಾಹವಾದರು. ವಸ್ತುತಃ ಅವರ(ಸ) ಶರೀಅತ್‌ನಲ್ಲೂ ಮಗನ ಹೆಂಡತಿ ತಂದೆಯ ಪಾಲಿಗೆ ಹರಾಮ್ ಎಂದಿದೆ. ಅದಕ್ಕೆ ಉತ್ತರವಾಗಿ- 'ಮುಹಮ್ಮದ್(ಸ) ನಿಮ್ಮ ಪುರುಷರ ಪೈಕಿ ಯಾರದೇ ತಂದೆಯಲ್ಲ' ಎಂದು ಹೇಳಲಾಯಿತು. ಅಂದರೆ ಯಾವ ವ್ಯಕ್ತಿಯ ವಿಚ್ಛೇದಿತ ಪತ್ನಿಯೊಂದಿಗೆ ವಿವಾಹ ಮಾಡಲಾಗಿತ್ತೋ ಆಕೆ ಹರಾಮ್ ಆಗಬೇಕಾದರೆ ಆಕೆಯ ಗಂಡ ಪುತ್ರನೇ ಆಗಿರಬೇಕಲ್ಲವೆ? ಮುಹಮ್ಮದ್‌ರವರಿಗೆ(ಸ) ಪುತ್ರ ಸಂತಾನವೇ ಇಲ್ಲವೆಂಬುದು ನಿಮಗೆ ತಿಳಿದೇ ಇದೆ.

ಎರಡನೆಯ ಆಕ್ಷೇಪ ಹೀಗಿತ್ತು- ದತ್ತುಪುತ್ರ ನೈಜ ಪುತ್ರನಲ್ಲವೆಂಬುದು ಸರಿ. ಆದರೂ ಆತನು ತೊರೆದ ಸ್ತ್ರೀಯನ್ನು ವಿವಾಹವಾಗುವುದು ಧರ್ಮಸಮ್ಮತವೆಂದು ಭಾವಿಸಬಹುದಿತ್ತು. ಈ ವಿವಾಹವನ್ನು ಮಾಡಲೇ ಬೇಕೆಂಬ ಹಠ ಯಾಕೆ? ಅದರ ಉತ್ತರವಾಗಿ, 'ಆದರೆ ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ' ಎಂದು ಹೇಳಲಾಗಿದೆ. ಅಂದರೆ ಪ್ರವಾದಿಯೆಂಬ ನೆಲೆಯಲ್ಲಿ, ಯಾವ ಹಲಾಲ್ ವಸ್ತು ನಿಮ್ಮ ದುಷ್ಟ ಸಂಪ್ರದಾಯಗಳಿಂದಾಗಿ ಹರಾಮ್ ಆಗಿ ಮಾರ್ಪಟ್ಟಿದೆಯೋ ಅದರ ಬಗೆಗಿನ ಎಲ್ಲ ಪಕ್ಷಪಾತಗಳನ್ನು ಅಳಿಸಿ ಹಾಕಬೇಕಾದುದು ಮತ್ತು ಅದು ಹಲಾಲ್ ಆಗಿದೆಯೆಂಬುದನ್ನು ಯಾವುದೇ ಸಂಶಯಕ್ಕೆಡೆ ಬಾರದಂತೆ ಕೃತಿಯಲ್ಲಿ ತೋರ್ಪಡಿಸಬೇಕಾದುದು ಅವರ ಕರ್ತವ್ಯವಾಗಿತ್ತು.

ಅನಂತರ ಇನ್ನಷ್ಟು ಒತ್ತು ಕೊಟ್ಟು, 'ಅವರು ಖಾತಮುನ್ನಬಿಯ್ಯೀನ್ (ಅಂತಿಮ ಪ್ರವಾದಿ) ಆಗಿದ್ದಾರೆ' ಎಂದು ಹೇಳಲಾಯಿತು. ಅಂದರೆ ಅವರ ಬಳಿಕ ಸಂದೇಶವಾಹಕರಂತಿರಲಿ ಯಾವನೇ ಪ್ರವಾದಿಯೂ ಬರಲಿಕ್ಕಿಲ್ಲ. ಅವರ ಕಾಲದಲ್ಲಿ ಆಗದೆ ಇರುವ ಕಾನೂನುವಿಧಿ ಹಾಗೂ ಸಮಾಜದ ಯಾವುದಾದರೂ ಸುಧಾರಣಾ ಕಾರ್ಯವು ಅವರ ನಂತರ ಬರುವ ಪ್ರವಾದಿ ಮಾಡಬಹುದೆಂದು ನಿರೀಕ್ಷಿಸಲೂ ಯಾವುದೇ ಕಾರಣವಿಲ್ಲ. ಆದುದರಿಂದ ಈ ಅಜ್ಞಾನಜನ್ಯ ಸಂಪ್ರದಾಯವನ್ನು ಅವರೇ ಕೊನೆಗೊಳಿಸಿ ಹೋಗಬೇಕಾದುದು ಇನ್ನಷ್ಟು ಅಗತ್ಯವೆನಿಸಿತು.

ತರುವಾಯ ಇನ್ನೂ ಒತ್ತು ಕೊಟ್ಟು 'ಅಲ್ಲಾಹನು ಎಲ್ಲ ವಿಷಯಗಳ ಜ್ಞಾನವುಳ್ಳವನು' ಎನ್ನಲಾಗಿದೆ. ಅರ್ಥಾತ್ ಪ್ರವಾದಿ ಮುಹಮ್ಮದ್‌ರವರ(ಸ) ಮೂಲಕ ಈ ದುಷ್ಟ ಸಂಪ್ರದಾಯವನ್ನು ಯಾಕಾಗಿ ಕೊನೆಗೊಳಿಸಬೇಕಾಗಿತ್ತು ಮತ್ತು ಹಾಗೆ ಮಾಡದಿದ್ದರೆ ಯಾವ ಹಾನಿಯಿತ್ತು ಎಂಬುದು ಅಲ್ಲಾಹನಿಗೆ ತಿಳಿದಿದೆ. ಇನ್ನು ಯಾವುದೇ ಪ್ರವಾದಿ ಬರಲಿಕ್ಕಿಲ್ಲ. ಆದುದರಿಂದ ಈ ಅಂತಿಮ ಪ್ರವಾದಿಯ ಮೂಲಕ ಈ ಸಂಪ್ರದಾಯವನ್ನು ಕೊನೆಗೊಳಿಸದೆ ಇದ್ದರೆ, ಸಕಲ ಮುಸ್ಲಿಮರಲ್ಲೂ ಶಾಶ್ವತವಾಗಿ ಅಳಿಸಿ ಹಾಕಬಲ್ಲಂತಹ ಬೇರಾವುದೇ ವ್ಯಕ್ತಿ ಈ ಲೋಕದಲ್ಲಿ ಇರಲಾರರು ಎಂಬುದೂ ಅವನಿಗೆ ತಿಳಿದಿದೆ. ಮುಂದಿನ ಕಾಲದ ಸುಧಾರಕರು ಯಾರಾದರೂ ಅದನ್ನು ಮುರಿದರೂ ಅದು ಎಲ್ಲ ಕಾಲದ ಮತ್ತು ಎಲ್ಲ ದೇಶಗಳ ಜನರಿಗೆ ಅನುಕರಣೀಯವಾದ ಶಾಶ್ವತ ಮತ್ತು ಸಾರ್ವತ್ರಿಕ

وَسَبِّحُوهُ بُكْرَةً وَأَصِيلًا ﴿٤٢﴾ هُوَ الَّذِي يُصَلِّي عَلَيْكُمْ وَمَلَٰٓئِكَتُهُۥ لِيُخْرِجَكُم مِّ

الظُّلُمَٰتِ إِلَى النُّورِ ۚ وَكَانَ بِالْمُؤْمِنِينَ رَحِيمًا ﴿٤٣﴾ تَحِيَّتُهُمْ يَوْمَ يَلْقَوْنَهُۥ سَلَٰ

ೖಗುಗಳಲ್ಲಿ ಅವನ ಗುಣಗಾನ ಮಾಡುತ್ತಲಿರಿ.[78] ಅವನೇ ನಿಮ್ಮ ಮೇಲೆ ಕೃಪೆ ೋರುವವನು ಮತ್ತು ಅವನು ನಿಮ್ಮನ್ನು ಅಂಧಕಾರಗಳಿಂದ ಪ್ರಕಾಶದ ಕಡೆಗೆ ರುವಂತೆ ಅವನ ದೇವಚರರು ನಿಮಗಾಗಿ ಕೃಪಾ ಪ್ರಾರ್ಥನೆ ಮಾಡುತ್ತಾರೆ. ಅವನು ತ್ಯವಿಶ್ವಾಸಿಗಳ ಮೇಲೆ ತುಂಬಾ ಕರುಣೆಯುಳ್ಳವನು.[79] ಅವನನ್ನು ಅವರು ಭೇಟಿಯಾಗುವ

---

ಯಮವಾಗದು. ಅವರ ಪೈಕಿ ಯಾರ ವ್ಯಕ್ತಿತ್ವವೂ ಜನರ ಮನಸ್ಸಿನಿಂದ ಅರೋಚಕತೆಯನ್ನು ಹೋಗಲಾಡಿಸುವಷ್ಟು ಪಾವನವಾಗಿರಲಾರದು.

ಈಗಿನ ಕಾಲದಲ್ಲಿ ಒಂದು ವರ್ಗವು ಈ ಸೂಕ್ತವನ್ನು ತಪ್ಪಾಗಿ ವ್ಯಾಖ್ಯಾನಿಸಿ ದೊಡ್ಡ ನಾಹುತಕ್ಕೆ ಬಾಗಿಲು ತೆರೆದು ಕೊಟ್ಟಿದೆಯೆಂಬುದು ವಿಷಾದನೀಯ. ಆದುದರಿಂದ ಪ್ರವಾದಿತ್ವ ರಿಸಮಾಪ್ತಿಯ ವಿಷಯದ ಸಂಪೂರ್ಣ ತಾತ್ಪರ್ಯ ಹಾಗೂ ಈ ವರ್ಗವು ಹರಡಿರುವ ತಪ್ಪು ಲ್ಪನೆಗಳ ಖಂಡನೆಯನ್ನು ಪ್ರತ್ಯೇಕವಾಗಿ ಬರೆಯಲಾಗಿದೆ.

(ನೋಡಿರಿ: 'ಪ್ರವಾದಿತ್ವದ ಪರಿಸಮಾಪ್ತಿ' ಎಂಬ ಪುಸ್ತಕ)

78. ಇದರ ಉದ್ದೇಶ ಮುಸ್ಲಿಮರಿಗೆ ಉಪದೇಶಿಸುವುದಾಗಿದೆ. ವೈರಿಗಳು ಅಲ್ಲಾಹನ ಪ್ರವಾದಿಯನ್ನು ಅವಹೇಳನ ಮಾಡುವಾಗ ಮತ್ತು ಸತ್ಯಧರ್ಮವನ್ನು ಕೀಳಾಗಿಸಲಿಕ್ಕಾಗಿ ಪ್ರವಾದಿವರ್ಯರನ್ನು(ಸ) ಗುರಿಯಾಗಿಟ್ಟು ಅಪಪ್ರಚಾರದ ಬಿರುಗಾಳಿಯೆಬ್ಬಿಸಿದಾಗ, ಅಂತಹ ಅಸಂಬದ್ಧ ಮಾತುಗಳನ್ನು ಮೌನವಾಗಿ ಕೇಳುವುದಾಗಲಿ, ವೈರಿಗಳು ಹರಡುವ ಸಂದೇಹಗಳಿಗೆ ಸ್ವಯಂ ಬಲಿಯಾಗುವುದಾಗಲಿ, ಅವರೊಂದಿಗೆ ಜಗಳಾಡುವುದಾಗಲಿ ಸತ್ಯವಿಶ್ವಾಸಿಗಳ ಕೆಲಸವಲ್ಲ. ಆ ಸಂದರ್ಭದಲ್ಲಿ ಅವರು ಇತರ ದಿನಗಳಿಗಿಂತಲೂ ಹೆಚ್ಚಾಗಿ ಅಲ್ಲಾಹನನ್ನು ಸ್ಮರಿಸುತ್ತಿರಬೇಕು ಎಂದು ಉಪದೇಶಿಸಲಾಗಿದೆ. ಅಲ್ಲಾಹನನ್ನು ಅತ್ಯಧಿಕ ಸ್ಮರಿಸುವುದರ ತಾತ್ಪರ್ಯವನ್ನು 63ನೆಯ ಟಿಪ್ಪಣಿಯಲ್ಲಿ ವಿವರಿಸಲಾಗಿದೆ. 'ಬೆಳಗು ಬೈಗುಗಳಲ್ಲಿ ಅವನ ಗುಣಗಾನ ಮಾಡುತ್ತಲಿರಿ' ಎಂದರೆ ಸದಾ ಸ್ತುತಿಸುತ್ತಿರಬೇಕೆಂದಾಗಿದೆ. ತಸ್ಬೀಹ್ (ಸ್ತುತಿ) ಎಂದರೆ ಅಲ್ಲಾಹನ ಪಾವಿತ್ರ್ಯವನ್ನು ಕೊಂಡಾಡುವುದೇ ಹೊರತು ಜಪಮಾಲೆಯನ್ನು ತಿರುಗಿಸುವುದಲ್ಲ.

79. ಇಲ್ಲಿ, ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳ ಈ ಎಲ್ಲ ಬೇಗುದಿ ಮತ್ತು ಅಸೂಯೆಗೆ ಅಲ್ಲಾಹನು ಈ ಪ್ರವಾದಿಯ ಮೂಲಕ ನಿಮ್ಮ ಮೇಲೆ ಮಾಡಿರುವ ಅನುಗ್ರಹವೇ ಕಾರಣವಾಗಿದೆಯೆಂದು ಮುಸ್ಲಿಮರಿಗೆ ತಿಳಿಸುವುದೇ ಆಗಿದೆ. ಅವರ(ಸ) ಮೂಲಕವೇ ಸತ್ಯವಿಶ್ವಾಸವೆಂಬ ಮಹಾ ಸಂಪತ್ತು ನಿಮಗೆ ದಕ್ಕಿತು. ಸತ್ಯನಿಷೇಧ ಮತ್ತು ಅಜ್ಞಾನದ ಅಂಧಕಾರಗಳಿಂದ ಹೊರ ಬಂದು ಇಸ್ಲಾಮಿನ ಪ್ರಕಾಶದೊಳಗೆ ನೀವು ಪ್ರವೇಶಿಸಿದಿರಿ ಮತ್ತು ನೀವು ಇತರರಿಗಿಂತ ಶ್ರೇಷ್ಠರಾಗಿ ಕಾಣುವಂತಹ ಉನ್ನತ ನೈತಿಕ ಮತ್ತು ಸಾಮೂಹಿಕ ಗುಣಗಳು ನಿಮ್ಮಲ್ಲುಂಟಾದುವು. ಅಸೂಯಾಳುಗಳು ಇದೇ ಕೋಪವನ್ನು ಅಲ್ಲಾಹನ ಪ್ರವಾದಿಯ ಮೇಲೆ ಪ್ರದರ್ಶಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನ ಈ ಅನುಗ್ರಹದಿಂದ ವಂಚಿತವಾಗಿ ಬಿಡುವಂತಹ ಯಾವುದೇ ವರ್ತನೆಯನ್ನು ನೀವು ತೋರಬಾರದು ಎಂದು ಹೇಳಲು ಉದ್ದೇಶಿಸಲಾಗಿದೆ.

وَاَعَدَّ لَهُمْ اَجْرًا كَرِيْمًا ﴿﴾ يٰاَيُّهَا النَّبِيُّ اِنَّآ اَرْسَلْنٰكَ شَاهِدًا وَّ مُبَشِّرًا وَّ

ದಿನ ಅವರನ್ನು 'ಸಲಾಮ್'ನೊಂದಿಗೆ ಸ್ವಾಗತಿಸಲಾಗುವುದು[80] ಮತ್ತು ಅಲ್ಲಾಹನು ಅವರಿಗಾಗಿ ಅತ್ಯಂತ ಗೌರವಪೂರ್ಣ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.

**(45-48)** ಪೈಗಂಬರರೇ,[81] ನಾವು ನಿಮ್ಮನ್ನು ಸಾಕ್ಷಿದಾರರಾಗಿಯೂ[82] ಸುವಾರ್ತೆ

---

'ಸಲಾತ್' ಎಂಬ ಪದವು ಅಲ್ಲಾಹನಿಂದ ದಾಸರ ಬಗ್ಗೆ ಪ್ರಯೋಗಿಸುವಾಗ ಅದರ ಅರ್ಥ ಕರುಣೆ, ದಯೆ ಮತ್ತು ವಾತ್ಸಲ್ಯವೆಂದಾಗುತ್ತದೆ. ದೇವಚರರ ಕಡೆಯಿಂದ ಮಾನವರ ಬಗ್ಗೆ ಪ್ರಯೋಗಿಸಲ್ಪಡುವಾಗ ಅದರ ಅರ್ಥ ಕರುಣೆಯ ಪ್ರಾರ್ಥನೆಯೆಂದಾಗುತ್ತದೆ. ಅಂದರೆ ದೇವಚರರು ಮಾನವರ ಬಗ್ಗೆ ಅಲ್ಲಾಹನಲ್ಲಿ, ನೀನು ಅವರ ಮೇಲೆ ಅನುಗ್ರಹ ತೋರು ಮತ್ತು ನಿನ್ನ ಕೊಡುಗೆಗಳನ್ನು ಅವರಿಗೆ ಪ್ರದಾನ ಮಾಡು ಎಂದು ಪ್ರಾರ್ಥಿಸುತ್ತಾರೆ. ಅದರ ಇನ್ನೊಂದು ಅರ್ಥ ಹೀಗೂ ಇದೆ- ಅಲ್ಲಾಹನು ನಿಮಗೆ ತನ್ನ ದಾಸರ ಮಧ್ಯೆ ಜನಪ್ರಿಯತೆಯನ್ನು ನೀಡುತ್ತಾನೆ. ಜನರು ನಿಮ್ಮನ್ನು ಪ್ರಶಂಸಿಸುವಂತಹ ಉನ್ನತ ಸ್ಥಾನಕ್ಕೆ ನಿಮ್ಮನ್ನು ತಲಪಿಸುತ್ತಾನೆ ಮತ್ತು ದೇವಚರರು ನಿಮ್ಮ ಪ್ರಶಂಸೆಯ ಕುರಿತು ಚರ್ಚಿಸುತ್ತಾರೆ.

80. 'ಅವರನ್ನು ಸಲಾಮ್‌ನೊಂದಿಗೆ ಸ್ವಾಗತಿಸಲಾಗುವುದು' ಎಂಬುದಕ್ಕೆ ಮೂರು ತಾತ್ಪರ್ಯಗಳಿರಬಹುದು. ಒಂದನೆಯದು ಅಲ್ಲಾಹನು ಸ್ವತಃ 'ಅಸ್ಸಲಾಮು ಅಲೈಕುಮ್' ಎನ್ನುತ್ತಾ ಅವರನ್ನು ಸ್ವಾಗತಿಸುವನು. **(ಯಾಸೀನ್ : 58)** ಎರಡನೆಯದು, ದೇವಚರರು ಅವರಿಗೆ ಸಲಾಮ್ ಹೇಳುವರು **(ಅನ್ನಹ್ಲ್ : 32)** ಮೂರನೆಯದು, ಅವರೇ ಪರಸ್ಪರರಿಗೆ ಸಲಾಮ್ ಹೇಳುವರು. **(ಯೂನುಸ್ : 10)**

81. ಮುಸ್ಲಿಮರಿಗೆ ಉಪದೇಶ ನೀಡಿದ ಬಳಿಕ ಅಲ್ಲಾಹನು ತನ್ನ ಪ್ರವಾದಿಗೆ ಕೆಲವು ಸಾಂತ್ವನದ ಮಾತುಗಳನ್ನು ಹೇಳುತ್ತಿದ್ದಾನೆ. ಇದರ ಉದ್ದೇಶವೇನೆಂದರೆ ನಾವು ನಿಮಗೆ ಈ ಎಲ್ಲ ಉನ್ನತ ಪದವಿಗಳನ್ನು ನೀಡಿದ್ದೇವೆ. ನಿಮ್ಮ ವ್ಯಕ್ತಿತ್ವವು ಈ ವಿರೋಧಿಗಳು ಸುಳ್ಳಾರೋಪಗಳ ಬಿರುಗಾಳಿಯನ್ನೆಬ್ಬಿಸಿ ನಿಮಗೇನಾದರೂ ನಷ್ಟವುಂಟು ಮಾಡುವಷ್ಟು ಸಣ್ಣದಲ್ಲ. ಆದುದರಿಂದ ಇವರ ಕಿಡಿಗೇಡಿತನದಿಂದ ಬೇಸರಗೊಳ್ಳದಿರಿ ಮತ್ತು ಇವರ ಅಪಪ್ರಚಾರಗಳಿಗೆ ಎಳ್ಳಷ್ಟೂ ಬೆಲೆ ಕೊಡಬೇಡಿರಿ. ನಿಮ್ಮ ದೌತ್ಯವನ್ನು ನಿರ್ವಹಿಸಿರಿ. ಅವರು ಏನೆಲ್ಲ ಒದರುತ್ತಾರೋ ಒದರುತ್ತಿರಲಿ. ಅದರೊಂದಿಗೆ ಇಲ್ಲಿ ಮುಸ್ಲಿಮ್-ಮುಸ್ಲಿಮೇತರರೆಂಬ ಭೇದವಿಲ್ಲದೆ ಸಕಲ ಮಾನವರನ್ನು ಕರೆದು ಹೀಗೆ ಹೇಳಲಾಗಿದೆ- ನಿಮ್ಮ ಮುಂದಿರುವುದು ಓರ್ವ ಸಾಮಾನ್ಯ ಮನುಷ್ಯನಲ್ಲ. ಅಲ್ಲಾಹನು ಅತ್ಯಂತ ಉನ್ನತ ಸ್ಥಾನಮಾನಗಳನ್ನು ದಯಪಾಲಿಸಿರುವಂತಹ ಉನ್ನತ ವ್ಯಕ್ತಿಯಾಗಿದ್ದಾರೆ ಅವರು.

82. ಪ್ರವಾದಿಯನ್ನು 'ಸಾಕ್ಷಿ'ಯಾಗಿ ಮಾಡುವುದಕ್ಕೆ ಬಹಳ ವಿಶಾಲಾರ್ಥವಿದೆ. ಅದರಲ್ಲಿ ಮೂರು ವಿಧದ ಸಾಕ್ಷ್ಯ ಅಡಗಿದೆ-

ಒಂದನೆಯದು, ಮಾತಿನ ಸಾಕ್ಷ್ಯವಾಗಿದೆ. ಅಂದರೆ ಅಲ್ಲಾಹನ ಧರ್ಮವು ಯಾವ ಸತ್ಯ ಮತ್ತು ತತ್ವಾದರ್ಶಗಳ ಮೇಲೆ ನಿಂತಿದೆಯೋ ಅದರ ಸತ್ಯತೆಯ ಬಗ್ಗೆ ಪ್ರವಾದಿ ಸಾಕ್ಷಿಯಾಗಿ ನಿಲ್ಲುವುದು. ಇದುವೇ ಸತ್ಯ ಮತ್ತು ಇದಕ್ಕೆದುರಾಗಿರುವುದೆಲ್ಲವೂ ಅಸತ್ಯವೆಂದು ಲೋಕದ ಮುಂದೆ ಸ್ಪಷ್ಟವಾಗಿ ಸಾರುವುದು. ದೇವನ ಅಸ್ತಿತ್ವ, ಅವನ ಏಕತೆ, ದೇವಚರರ ಇರುವಿಕೆ,

ದಿವ್ಯವಾಣಿಯ ಅವತರಣ, ಮರಣಾನಂತರದ ಜೀವನ, ಸ್ವರ್ಗ-ನರಕಗಳ ಬಗ್ಗೆ ಅವು ಜನರಿಗೆ ಎಷ್ಟು ವಿಚಿತ್ರವಾಗಿ ಕಂಡರೂ ಈ ವಿಷಯಗಳನ್ನು ಹೇಳುವವನನ್ನು ಎಷ್ಟೇ ಅಪಹಾಸ್ಯ ಮಾಡಿದರೂ ಆತನನ್ನು ಹುಚ್ಚನೆಂದು ಕರೆದರೂ ಪ್ರವಾದಿಯು ಅವೆಲ್ಲವನ್ನೂ ಕಡೆಗಣಿಸಿ ತಾನು ಸಮರ್ಪಿಸುವುದೇ ಸತ್ಯ ಮತ್ತು ಇವುಗಳನ್ನು ಒಪ್ಪದವರೇ ದಾರಿಗೆಟ್ಟವರು ಎಂದು ಘಂಟಾಘೋಷವಾಗಿ ಸಾರುವುದು. ಅದೇ ರೀತಿ ಅಲ್ಲಾಹನ ವತಿಯಿಂದ ದೊರಕಿದ ನೈತಿಕತೆ, ಸಂಸ್ಕೃತಿ, ನಾಗರಿಕತೆಯ ಕಲ್ಪನೆಗಳು, ಮೌಲ್ಯಗಳು ಮತ್ತು ನಿಯಮ ನಿಬಂಧನೆಗಳನ್ನು ಲೋಕದ ಜನರೆಲ್ಲರೂ ತಪ್ಪೆಂದು ಹೇಳಿದರೂ ಅವುಗಳಿಗೆ ವಿರುದ್ಧವಾಗಿ ಅವರು ಬದುಕುತ್ತಿದ್ದರೂ ಪ್ರವಾದಿಯು ಅವುಗಳನ್ನೇ ಪ್ರತಿಪಾದಿಸುವುದು ಮತ್ತು ಅವುಗಳಿಗೆದುರಾಗಿ ಲೋಕದಲ್ಲಿ ರೂಢಿಯಲ್ಲಿರುವ ಆಚಾರ-ವಿಚಾರಗಳನ್ನು ತಪ್ಪೆಂದು ಸಾರುವುದು. ಅದೇ ರೀತಿ ದೇವನ ಕಾನೂನು ಪ್ರಕಾರ ಹಲಾಲ್ ಆಗಿರುವುದನ್ನು ಲೋಕದ ಜನರು ಹರಾಮ್ ಎಂದು ಭಾವಿಸಿದರೂ ಪ್ರವಾದಿಯು ಅದನ್ನು ಹಲಾಲ್ ಎಂದೇ ಹೇಳುವುದು ಮತ್ತು ದೇವ ಕಾನೂನಿನಲ್ಲಿ ಹರಾಮ್ ಆಗಿರುವುದನ್ನು ಇಡೀ ಲೋಕವೇ ಹಲಾಲ್ ಮತ್ತು ಶುದ್ಧವೆಂದು ಬಗೆದರೂ ಪ್ರವಾದಿಯು ಅದನ್ನು ಹರಾಮ್ ಎಂದೇ ಸಾರುವುದು.

ಎರಡನೆಯದು, ಆಚಾರದ ಸಾಕ್ಷ್ಯ. ಅಂದರೆ ಪ್ರವಾದಿಯು ಯಾವ ಜೀವನ ವಿಧಾನವನ್ನು ಲೋಕಕ್ಕೆ ಪರಿಚಯಿಸಲು ಎದ್ದು ನಿಂತಿರುವರೋ ಅದನ್ನು ತನ್ನ ಬದುಕಿನಲ್ಲಿ ಆಚರಿಸಿ ತೋರಿಸುವುದು. ಯಾವುದನ್ನೆಲ್ಲ ಕೆಡುಕೆಂದು ಹೇಳುತ್ತಾರೋ ಅದರ ನೆರಳೂ ಅವರ ಬದುಕಿನಲ್ಲಿ ಗೋಚರಿಸದಿರುವುದು. ಯಾವುದನ್ನೆಲ್ಲ ಒಳಿತೆಂದು ಸಾರುತ್ತಾರೋ ಅದು ತನ್ನ ಬದುಕಿನಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಳ್ಳುವುದು. ಯಾವುದನ್ನು ಅವರು ಪಾಪವೆಂದು ಹೇಳುತ್ತಾರೋ ಅದರಿಂದ ದೂರವಿರುವುದರಲ್ಲಿ ಎಲ್ಲರಿಗಿಂತಲೂ ಮುಂದಿರುವುದು. ಅವರು ದೇವನ ಕಾನೂನೆಂದು ಹೇಳುವ, ಜೀವನಕ್ಕೆ ಸಂಬಂಧಿಸಿದ, ಕಾನೂನನ್ನು ಜಾರಿಗೊಳಿಸುವಲ್ಲಿ ಯಾವುದೇ ಲೋಪ ತೋರದಿರುವುದು. ತನ್ನ ಚಾರಿತ್ರ್ಯವು ತನ್ನ ಸಂದೇಶದ ಸತ್ಯತೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಸಾಕ್ಷ್ಯವಹಿಸುವುದು. ಅವರ ವ್ಯಕ್ತಿತ್ವವು ಅವರು ನೀಡುವ ಬೋಧನೆಗಳಿಗೆ ಅನುರೂಪವಾಗಿರುವುದು. ಅದನ್ನು ಯಾರೇ ಆದರೂ ಅವರು ಯಾವ ಧರ್ಮದತ್ತ ಲೋಕದ ಜನರನ್ನು ಕರೆಯುತ್ತಿದ್ದಾರೋ ಅದು ಎಂತಹ ಮನುಷ್ಯರನ್ನು ಸೃಷ್ಟಿಸುತ್ತದೆ, ಎಂತಹ ಚಾರಿತ್ರ್ಯವನ್ನು ಅವನಲ್ಲಿ ಉಂಟು ಮಾಡುತ್ತದೆ ಮತ್ತು ಅವರು ಎಂತಹ ಜೀವನ ವ್ಯವಸ್ಥೆಯನ್ನು ಸ್ಥಾಪಿಸಬಯಸುತ್ತಾರೆ ಎಂಬುದನ್ನು ತಿಳಿಯುವಂತಾಗಬೇಕು.

ಮೂರನೆಯದು, ಪರಲೋಕದ ಸಾಕ್ಷ್ಯ. ಅರ್ಥಾತ್ ಪರಲೋಕದಲ್ಲಿ ಅಲ್ಲಾಹನ ನ್ಯಾಯಾಲಯ ಸ್ಥಾಪಿತಗೊಂಡಾಗ ಪ್ರವಾದಿಯು, ಯಾವ ಸಂದೇಶವನ್ನು ತನಗೆ ವಹಿಸಿ ಕೊಡಲಾಗಿತ್ತೋ ಅದನ್ನು ಯಾವುದೇ ಹೆಚ್ಚು ಕಡಿಮೆ ಮಾಡದೆ ತಾನು ಜನರಿಗೆ ತಲಪಿಸಿದ್ದೇನೆ ಮತ್ತು ಅವರ ಮುಂದೆ ತನ್ನ ಮಾತು-ಕೃತಿಗಳ ಮೂಲಕ ಸತ್ಯವನ್ನು ಸ್ಪಷ್ಟ ಪಡಿಸುವುದರಲ್ಲಿ ಯಾವುದೇ ಲೋಪ ಮಾಡಲಿಲ್ಲವೆಂಬ ಬಗ್ಗೆ ಸಾಕ್ಷ್ಯ ನುಡಿಯುವರು. ಇದೇ ಸಾಕ್ಷ್ಯದ ಆಧಾರದಲ್ಲಿ, ಸತ್ಯವನ್ನು ಅಂಗೀಕರಿಸುವವರು ಯಾವ ಪುರಸ್ಕಾರಕ್ಕೆ ಮತ್ತು ಅದನ್ನು ನಿರಾಕರಿಸುವವರು ಯಾವ ಶಿಕ್ಷೆಗೆ ಅರ್ಹರಾಗಿದ್ದಾರೆ ಎಂಬ ತೀರ್ಪು ನೀಡಲಾಗುವುದು.

ಪ್ರವಾದಿಯವರನ್ನು(ಸ) ಸಾಕ್ಷ್ಯದ ಸ್ಥಾನದಲ್ಲಿ ನಿಲ್ಲಿಸಿ ಅಲ್ಲಾಹನು ಅವರ ಮೇಲೆ ಎಷ್ಟು ದೊಡ್ಡ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿದ್ದಾನೆ ಮತ್ತು ಆ ಸ್ಥಾನದಲ್ಲಿ ನಿಲ್ಲಲು ಎಂತಹ ಉನ್ನತ ವ್ಯಕ್ತಿತ್ವ ಆಗಿರಬೇಕು ಎಂಬುದನ್ನು ಅಂದಾಜಿಸಬಹುದಾಗಿದೆ. ಪ್ರವಾದಿ(ಸ) ಅವರಿಂದ ಮಾತು ಮತ್ತು ಕೃತಿಯ ಸಾಕ್ಷ್ಯದಲ್ಲಿ ಕಿಂಚಿತ್ತೂ ಲೋಪವುಂಟಾಗಿಲ್ಲ. ಆದುದರಿಂದಲೇ ಪರಲೋಕದಲ್ಲಿ

ಅವರು, ನಾನು ಸತ್ಯವನ್ನು ಜನರಿಗೆ ತಿಳಿಯಪಡಿಸಿದ್ದೇನೆ ಎಂದು ಸಾಕ್ಷಿ ನುಡಿಯುವರು. ಆಗಲೇ ಜನರ ಮೇಲೆ ಅಲ್ಲಾಹನ ಹೊಣೆಮುಕ್ತತೆ ಸ್ಥಾಪಿತಗೊಳ್ಳುತ್ತದೆ. ಅನ್ಯಥಾ ಒಂದು ವೇಳೆ ಈ ಸಾಕ್ಷ್ಯವಹಿಸುವುದರಲ್ಲಿ ಪ್ರವಾದಿಯಿಂದ(ಸ) ಏನಾದರೂ ಲೋಪವುಂಟಾಗುತ್ತಿದ್ದರೆ, ಪರಲೋಕದಲ್ಲಿ ಈ ಬಗ್ಗೆ ಸಾಕ್ಷ್ಯ ನುಡಿಯಲು ಅವರಿಂದ ಸಾಧ್ಯವಾಗಲಾರದು. ಅದೇ ರೀತಿ ಸತ್ಯನಿಷೇಧಿಗಳ ವಿರುದ್ಧ ಕ್ರಮ ಕೈಗೊಳ್ಳುವುದೂ ಸಾಧ್ಯವಾಗಲಾರದು.

ಕೆಲವರು ಈ ಸಾಕ್ಷ್ಯ ಅಂದರೆ ಪ್ರವಾದಿಯವರು(ಸ) ಪರಲೋಕದಲ್ಲಿ ಜನರ ಕರ್ಮಗಳ ಬಗ್ಗೆ ಸಾಕ್ಷ್ಯ ನೀಡುವರು ಎಂಬ ಅರ್ಥ ನೀಡಲು ಪ್ರಯತ್ನಿಸಿರುವರು. ಇದರಿಂದ ಪ್ರವಾದಿ(ಸ) ಎಲ್ಲ ಜನರ ಕರ್ಮಗಳನ್ನು ನೋಡುತ್ತಿದ್ದಾರೆಂದು ಅನ್ಯಥಾ ನೋಡದೆಯೇ ಸಾಕ್ಷ್ಯ ನೀಡುವುದು ಹೇಗೆಂದೂ ಅವರು ವಾದಿಸುತ್ತಾರೆ. ಆದರೆ ಕುರ್‌ಆನಿನ ಪ್ರಕಾರ ಈ ವಾದ ಸಂಪೂರ್ಣ ತಪ್ಪು. ಜನರ ಕರ್ಮಗಳ ಸಾಕ್ಷ್ಯ ಪಡೆಯಲು ಅಲ್ಲಾಹನು ಬೇರೆಯೇ ಒಂದು ವ್ಯವಸ್ಥೆಯನ್ನು ಮಾಡಿದ್ದಾನೆಂದು ಕುರ್‌ಆನ್ ನಮಗೆ ತಿಳಿಸುತ್ತದೆ. ಅದಕ್ಕಾಗಿ ದೇವಚರರು ಪ್ರತಿಯೊಬ್ಬ ವ್ಯಕ್ತಿಯ ಕರ್ಮಪತ್ರವನ್ನು ಸಿದ್ಧಪಡಿಸುತ್ತಿದ್ದಾರೆ(ನೋಡಿರಿ, **18:149, 50:17-18**). ಅದಕ್ಕಾಗಿ ಅವನು ಜನರ ಅಂಗಾಂಗಗಳಿಂದಲೂ ಸಾಕ್ಷ್ಯ ಪಡೆಯುವನು(**36:65, 41:20-21**).

ಇನ್ನು, ಪ್ರವಾದಿಗಳ ಕೆಲಸ ಜನರ ಕರ್ಮಗಳ ಬಗ್ಗೆ ಸಾಕ್ಷ್ಯ ನೀಡುವುದಲ್ಲ- ಬದಲಾಗಿ ಅವರು, ಜನರಿಗೆ ಸತ್ಯವನ್ನು ತಲಪಿಸಲಾಗಿದೆಯೆಂಬ ಬಗ್ಗೆ ಸಾಕ್ಷ್ಯ ನೀಡುವರು. ಕುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳುತ್ತದೆ-

**"ಅಲ್ಲಾಹನು ಸಂದೇಶವಾಹಕರನ್ನೆಲ್ಲ ಒಟ್ಟುಗೂಡಿಸಿ ನಿಮಗೆ ಯಾವ ಉತ್ತರ ಕೊಡಲಾಯಿತೆಂದು ಕೇಳುವ ಆ ದಿನ ಅವರು ಹೇಳುವರು- ನಮಗೇನೂ ತಿಳಿದಿಲ್ಲ. ಸಕಲ ರಹಸ್ಯ ಪರಮಾರ್ಥಗಳನ್ನು ಅರಿಯುವವನು ನೀನೇ ಆಗಿರುತ್ತಿ."**

**(5:109)**

ಹ. ಈಸಾರವರ(ಅ) ಬಗ್ಗೆ ಕುರ್‌ಆನ್ ಹೇಳುತ್ತದೆ- ಅವರೊಂದಿಗೆ ಕ್ರೈಸ್ತರ ಪಥಭ್ರಷ್ಟತೆಗೆ ಕಾರಣರಾರೆಂದು ಪ್ರಶ್ನಿಸಲಾದಾಗ ಅವರು ಹೇಳುವರು-

**"ನಾನು ಅವರ ಮಧ್ಯೆ ಇರುವಷ್ಟು ಕಾಲದ ವರೆಗೆ ಮಾತ್ರ ನಾನು ಅವರ ಮೇಲೆ ಸಾಕ್ಷಿಯಾಗಿದ್ದೆ. ನೀನು ನನ್ನನ್ನು ಹಿಂದಕ್ಕೆ ಕರೆದುಕೊಂಡ ಮೇಲೆ ನೀನೇ ಅವರ ಮೇಲ್ವಿಚಾರಕನಾಗಿರುತ್ತಿ."**

**(5:117)**

ಪ್ರವಾದಿಗಳು ಮಾನವರ ಕರ್ಮಗಳ ಸಾಕ್ಷಿದಾರರಾಗಿರಲಾರರೆಂದು ಈ ಸೂಕ್ತಗಳು ಸ್ಪಷ್ಟಪಡಿಸುತ್ತವೆ. ಹಾಗಾದರೆ ಅವರ ಸಾಕ್ಷ್ಯ ಯಾವುದರ ಬಗೆಗಿರುವುದು? ಎಂಬುದರ ಉತ್ತರವನ್ನೂ ಕುರ್‌ಆನ್ ಅಷ್ಟೇ ಸ್ಪಷ್ಟವಾಗಿ ನಮ್ಮ ಮುಂದಿಡುತ್ತದೆ-

**"ಮತ್ತು ಮುಸ್ಲಿಮರೇ! ಇದೇ ರೀತಿ ನೀವು ಮಾನವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ಸಂದೇಶವಾಹಕರು ನಿಮ್ಮ ಮೇಲೆ ಸಾಕ್ಷಿಯಾಗಿರಲಿಕ್ಕೂ ನಾವು ನಿಮ್ಮನ್ನು ಒಂದು ಸುಮಧ್ಯ ಸಮುದಾಯವಾಗಿ ಮಾಡಿದ್ದೇವೆ."**

**(2:143)**

**"ಅಂದು ನಾವು ಪ್ರತಿಯೊಂದು ಸಮುದಾಯದಲ್ಲಿ ಅದರ ವಿರುದ್ಧ ಸಾಕ್ಷ್ಯ ಹೇಳುವ ಒಬ್ಬ ಸಾಕ್ಷಿದಾರನನ್ನು ಅದರೊಳಗಿಂದಲೇ ಎಬ್ಬಿಸುವೆವು ಮತ್ತು ಇವರ ವಿರುದ್ಧ ಸಾಕ್ಷ್ಯ ಹೇಳಲು ನಾವು ನಿಮ್ಮನ್ನು ತರುವೆವು."** **(16:89)**

نَذِيرًا ۝ وَدَاعِيًا إِلَى اللَّهِ بِإِذْنِهِ وَسِرَاجًا مُّنِيرًا ۝ وَبَشِّرِ الْمُؤْمِنِينَ بِأَنَّ

ಮತ್ತು ಎಚ್ಚರಿಕೆ ನೀಡುವವರಾಗಿಯೂ[83] ಅಲ್ಲಾಹನ ಅನುಮತಿಯಿಂದ ಅವನ ಕಡೆಗೆ

ಇದರಿಂದ ತಿಳಿದು ಬರುವುದೇನೆಂದರೆ ಪ್ರವಾದಿ(ಸ) ಅವರಿಂದ ಪರಲೋಕದಲ್ಲಿ ಪಡೆಯಲಾಗುವ ಸಾಕ್ಷ್ಯಕ್ಕೂ ಅವರ ಸಮುದಾಯದ ಹಾಗೂ ಇತರೆಲ್ಲ ಸಮುದಾಯಗಳ ಬಗ್ಗೆ ಸಾಕ್ಷ್ಯ ನೀಡಲು ಕರೆಯಲಾಗುವ ಸಾಕ್ಷಿದಾರರ ಸಾಕ್ಷ್ಯಕ್ಕೂ ಯಾವುದೇ ವ್ಯತ್ಯಾಸವಿರಲಾರದು. ಒಂದು ವೇಳೆ ಈ ಸಾಕ್ಷ್ಯವು ಕರ್ಮಗಳ ಬಗ್ಗೆ ಆದರೆ ಅವರೆಲ್ಲರನ್ನೂ ಸರ್ವಾಂತರ್ಯಾಮಿಯೆಂದೂ ಸರ್ವವೀಕ್ಷಕರೆಂದೂ ನಂಬಬೇಕಾದೀತು. ಇನ್ನು ಈ ಸಾಕ್ಷಿದಾರರು, ತಮ್ಮ ಮೂಲಕ ದೇವನ ಸಂದೇಶವನ್ನು ಮಾನವರಿಗೆ ತಲಪಿಸಲಾಗಿದೆಯೋ ಎಂಬ ಬಗ್ಗೆ ಸಾಕ್ಷ್ಯ ನುಡಿಯಲಿಕ್ಕಾಗಿ ಕರೆಯಲ್ಪಡುವರೆಂದರೆ ಪ್ರವಾದಿ(ಸ) ಕೂಡಾ ಅದೇ ಉದ್ದೇಶಕ್ಕಾಗಿ ಕರೆಯಲ್ಪಡುವರು.

ಇದೇ ವಿಷಯವನ್ನು ಸಮರ್ಥಿಸುವ ಪ್ರವಾದಿವಚನಗಳನ್ನು ಅಬ್ದುಲ್ಲಾ ಬಿನ್ ಮಸ್‌ಊದ್, ಅಬ್ದುಲ್ಲಾ ಬಿನ್ ಅಬ್ಬಾಸ್, ಅಬೂದರ್ದಾ, ಅನಸ್ ಬಿನ್ ಮಾಲಿಕ್ ಮತ್ತಿತರ ಸಹಾಬಿಗಳಿಂದ ಬುಖಾರಿ, ಮುಸ್ಲಿಮ್, ತಿರ್ಮಿದಿ, ಇಬ್ನುಮಾಜಃ, ಇಮಾಮ್ ಅಹ್ಮದ್ ಮೊದಲಾದವರು ವರದಿ ಮಾಡಿರುತ್ತಾರೆ. ಈ ಹದೀಸ್‌ಗಳ ಒಟ್ಟು ಸಾರವೇನೆಂದರೆ ಪರಲೋಕದಲ್ಲಿ ಪ್ರವಾದಿ(ಸ), ತಮ್ಮ ಕೆಲವು ಸಂಗಾತಿಗಳನ್ನು ತರಲಾಗುವುದನ್ನು ನೋಡುವರು. ಆದರೆ ಅವರು ಪ್ರವಾದಿಯವರ(ಸ) ಕಡೆಗೆ ಬರದೆ ಬೇರೆ ಕಡೆಗೆ ಹೋಗುತ್ತಿರುವರು ಅಥವಾ ಒಯ್ಯಲ್ಪಡುತ್ತಿರುವರು. ಅವರನ್ನು ನೋಡಿ ಪ್ರವಾದಿ(ಸ) ದೇವಾ! ಇದು ನನ್ನ ಸಹಾಬಿಗಳಲ್ಲವೆ? ಎಂದು ಕೇಳುವರು. ಆಗ ಅಲ್ಲಾಹನು, ನಿಮ್ಮ ನಂತರ ಇವರು ಏನೆಲ್ಲ ಮಾಡಿದರೆಂದು ನಿಮಗೆ ತಿಳಿದಿದೆಯೇ ಎಂದು ಹೇಳುವನು. ಈ ವಿಷಯ ಅನೇಕ ಸಹಾಬಿಗಳಿಂದ ವಿವಿಧ ಪರಂಪರೆಗಳ ಮೂಲಕ ವರದಿಯಾಗಿರುವುದರಿಂದ ಅದರ ಅಧಿಕೃತತೆಯ ಬಗ್ಗೆ ಸಂದೇಹಕ್ಕೆ ಆಸ್ಪದವೇ ಇಲ್ಲ. ಇದರಿಂದ ಸ್ಪಷ್ಟವಾಗಿ ಸಾಬೀತುಗೊಳ್ಳುವ ವಿಷಯವೇನೆಂದರೆ ಪ್ರವಾದಿ(ಸ) ತಮ್ಮ ಸಮುದಾಯದ ಪ್ರತಿಯೊಬ್ಬನ ಕುರಿತು ಹಾಗೂ ಒಂದೊಂದು ಕರ್ಮದ ಕುರಿತು ಸಾಕ್ಷಿಯಾಗಲಾರರು. ಇನ್ನು ಪ್ರವಾದಿಯವರ(ಸ) ಮುಂದೆ ತಮ್ಮ ಸಮುದಾಯದ ಕರ್ಮಗಳನ್ನು ಬಹಿರಂಗ ಪಡಿಸಲಾಗುವುದು ಎಂಬ ಹದೀಸ್‌ಗಳು ಮೇಲಿನ ವಿಷಯಕ್ಕೆ ವಿರುದ್ಧವಾಗುವುದಿಲ್ಲ. ಏಕೆಂದರೆ ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಸಮುದಾಯದ ಕರ್ಮಗಳ ಬಗ್ಗೆ ತಿಳಿಸುತ್ತಾನೆಂಬುದು ಅವುಗಳ ಸಾರ. ಅದರ ಅರ್ಥ ಪ್ರವಾದಿವರ್ಯರು(ಸ) ಪ್ರತಿಯೊಬ್ಬನ ಕರ್ಮವನ್ನೂ ನೋಡುತ್ತಿದ್ದಾರೆಂದಾಗುವುದು ಹೇಗೆ?

83. ಇಲ್ಲಿ ಒಂದು ವ್ಯತ್ಯಾಸವನ್ನು ಗಮನಿಸಬೇಕು. ಸತ್ಯವಿಶ್ವಾಸ ಮತ್ತು ಸತ್ಕರ್ಮ ಕೈಗೊಂಡದ್ದಕ್ಕಾಗಿ ಒಬ್ಬನು ಸತ್ಪರಿಣಾಮದ ಸುವಾರ್ತೆ ನೀಡುವುದು ಮತ್ತು ಸತ್ಯನಿಷೇಧ ಮತ್ತು ದುಷ್ಕರ್ಮಗಳನ್ನೆಸಗಿದ್ದಕ್ಕಾಗಿ ದುಷ್ಪರಿಣಾಮದ ಬಗ್ಗೆ ಎಚ್ಚರಿಕೆ ನೀಡುವುದು ಹಾಗೂ ಒಬ್ಬನು ಅಲ್ಲಾಹನ ವತಿಯಿಂದ ಸುವಾರ್ತೆ ಮತ್ತು ಎಚ್ಚರಿಕೆ ನೀಡುವವನಾಗಿ ಕಳಿಸಲ್ಪಡುವುದು ಬೇರೆ ಬೇರೆ ವಿಷಯಗಳಾಗಿವೆ. ಅಲ್ಲಾಹನ ವತಿಯಿಂದ ಈ ಕರ್ತವ್ಯ ನಿರ್ವಹಣೆಗಾಗಿ ನೇಮಿಸಲ್ಪಟ್ಟ ವ್ಯಕ್ತಿಯ ಸುವಾರ್ತೆ ಮತ್ತು ಎಚ್ಚರಿಕೆಗಳ ಹಿಂದೆ ಒಂದು ಅಧಿಕಾರವಿರುತ್ತದೆ. ಅದರಂತೆ ಅವನ ಸುವಾರ್ತೆ ಮತ್ತು ಎಚ್ಚರಿಕೆಗಳಿಗೆ ಕಾನೂನಿನ ಸ್ಥಾನವಿರುತ್ತದೆ. ಯಾವುದೇ ಕರ್ಮಕ್ಕೆ ಸುವಾರ್ತೆ ನೀಡುವುದೆಂದರೆ ತನ್ನನ್ನು ನೇಮಿಸಿದ ಅಲ್ಲಾಹನು ಅದನ್ನು ಇಷ್ಟಪಡುತ್ತಾನೆ ಮತ್ತು ಅದು

لَهُمْ مِّنَ اللّٰهِ فَضْلًا كَبِيْرًا ﴿٤٧﴾ وَلَا تُطِعِ الْكٰفِرِيْنَ وَالْمُنٰفِقِيْنَ وَدَعْ اَذٰىهُمْ
وَتَوَكَّلْ عَلَى اللّٰهِ ۭ وَكَفٰى بِاللّٰهِ وَكِيْلًا ﴿٤٨﴾ يٰٓاَيُّهَا الَّذِيْنَ اٰمَنُوْٓا اِذَا نَكَحْتُمُ

ಕರೆ ನೀಡುವವರಾಗಿಯೂ[84] ಪ್ರಕಾಶಮಯ ಜ್ಯೋತಿಯಾಗಿಯೂ ಮಾಡಿ ಕಳುಹಿಸಿರುತ್ತೇವೆ. ಅಲ್ಲಾಹನ ಕಡೆಯಿಂದ ಅವರಿಗಾಗಿ ಮಹಾ ಅನುಗ್ರಹವಿದೆ ಎಂಬ ಸುವಾರ್ತೆಯನ್ನು ಸತ್ಯವಿಶ್ವಾಸಿಗಳಿಗೆ ತಿಳಿಸಿ ಬಿಡಿರಿ ಮತ್ತು ಸತ್ಯನಿಷೇಧಿಗಳಿಗೂ ಕಪಟವಿಶ್ವಾಸಿಗಳಿಗೂ ಎಷ್ಟು ಮಾತ್ರಕ್ಕೂ ಮಣಿಯದಿರಿ. ಅವರ ಕಿರುಕುಳಗಳನ್ನು ಕಡೆಗಣಿಸಿರಿ. ಅಲ್ಲಾಹನ ಮೇಲೆ ಭರವಸೆ ಇಡಿರಿ. ಮನುಷ್ಯನು ತನ್ನ ವ್ಯವಹಾರಗಳನ್ನು ಒಪ್ಪಿಸಲು ಅಲ್ಲಾಹನೇ ಸಾಕು.

**(49)** ಸತ್ಯವಿಶ್ವಾಸಿಗಳೇ, ನೀವು ಸತ್ಯವಿಶ್ವಾಸಿನಿಯರೊಂದಿಗೆ ನಿಕಾಹ್ ಮಾಡಿ ಅವರನ್ನು ಮುಟ್ಟುವುದಕ್ಕೆ ಮುಂಚೆ ತಲಾಕ್ ಕೊಟ್ಟು ಬಿಟ್ಟರೆ,[85] ನಿಮ್ಮ ಕಡೆಯಿಂದ

---

ಪ್ರತಿಫಲಾರ್ಹವಾಗಿದೆಯೆಂಬುದನ್ನು ಘೋಷಿಸುತ್ತಿದ್ದಾರೆ. ಆದುದರಿಂದ ಖಂಡಿತವಾಗಿಯೂ ಅದು ಫರ್ಝ್(ಕಡ್ಡಾಯ) ಅಥವಾ ಅಪೇಕ್ಷಣೀಯವಾಗಿದ್ದು ಅದನ್ನು ಮಾಡುವವನು ಖಂಡಿತ ಪುಣ್ಯಫಲ ಪಡೆಯುವನು. ಅದೇ ರೀತಿ ದುಷ್ಕರ್ಮಕ್ಕೆ ಎಚ್ಚರಿಕೆ ನೀಡುವುದೆಂದರೆ ಸರ್ವಶಕ್ತನಾದ ದೇವನು ಅದನ್ನು ನಿಷೇಧಿಸಿದ್ದಾನೆ. ಆದುದರಿಂದ ಅದು ಪಾಪವೂ ನಿಷಿದ್ಧವೂ ಆಗಿರುವುದರಿಂದ ಅದಕ್ಕೆ ಖಂಡಿತ ಶಿಕ್ಷೆ ಪಡೆಯುವನು ಎಂದು ಘೋಷಿಸುತ್ತಿದ್ದಾರೆ. ಈ ಸ್ಥಾನಮಾನವು ಪುರಸ್ಕಾರದ ಸುವಾರ್ತೆ ಮತ್ತು ಶಿಕ್ಷೆಯ ಎಚ್ಚರಿಕೆ ನೀಡಲು ನೇಮಕಗೊಳ್ಳದವರಿಗೆ ಖಂಡಿತ ಇಲ್ಲ.

84. ಇಲ್ಲೂ ಒಬ್ಬ ಸಾಮಾನ್ಯ ಪ್ರಚಾರಕನ ಪ್ರಚಾರಕ್ಕೂ ಪ್ರವಾದಿಯ ಪ್ರಚಾರಕ್ಕೂ ಮೇಲೆ ಸೂಚಿಸಿದಂತಹ ವ್ಯತ್ಯಾಸವೇ ಇದೆ. ಅಲ್ಲಾಹನ ಮಾರ್ಗದತ್ತ ಕರೆಯುವ ಕೆಲಸವನ್ನು ಪ್ರತಿಯೊಬ್ಬ ಪ್ರಚಾರಕನೂ ಮಾಡುತ್ತಾನೆ ಮತ್ತು ಮಾಡಬಹುದು. ಆದರೆ ಆತ ಅಲ್ಲಾಹನ ಕಡೆಯಿಂದ ನೇಮಕಗೊಂಡಿರುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಪ್ರವಾದಿ ಅಲ್ಲಾಹನ ಅನುಜ್ಞೆಯ ಪ್ರಕಾರ ಸಂದೇಶ ಪ್ರಚಾರಕ್ಕೆ ಇಳಿಯುತ್ತಾರೆ. ಅವರ ಕರೆಯು ಕೇವಲ ಪ್ರಚಾರವಾಗಿರುವುದಿಲ್ಲ. ಅದರ ಹಿಂದೆ ಅವರನ್ನು ಕಳಿಸಿದ ಸರ್ವಲೋಕಗಳ ಒಡೆಯನ ಅಧಿಕಾರ ಬಲವಿರುತ್ತದೆ. ಆದುದರಿಂದಲೇ ಲೌಕಿಕ ಆಡಳಿತಗಳಲ್ಲಿ ಸರಕಾರಿ ಕೆಲಸಗಳಲ್ಲಿ ನಿರತವಾಗಿರುವ ಸರಕಾರಿ ಸಿಬ್ಬಂದಿಗಳಿಗೆ ಪ್ರತಿರೋಧವೊಡ್ಡುವುದು, ಹೇಗೆ ಸರಕಾರದ ವಿರುದ್ಧ ಸಮರವೆಂದು ಪರಿಗಣಿಸಲಾಗುತ್ತದೋ ಹಾಗೆಯೇ ಅಲ್ಲಾಹನಿಂದ ಕಳುಹಿಸಲ್ಪಟ್ಟ ಸತ್ಯಪ್ರಚಾರಕನನ್ನು ಪ್ರತಿರೋಧಿಸುವುದನ್ನೂ ಅಲ್ಲಾಹನ ವಿರುದ್ಧ ಯುದ್ಧವೆಂದು ಸಾರಲಾಗಿದೆ.

85. ಇಲ್ಲಿ 'ನಿಕಾಹ್' ಎಂಬ ಪದವನ್ನು ಕೇವಲ ವಿವಾಹಕ್ಕೆ ಪ್ರಯೋಗಿಸಲಾಗಿದೆಯೆಂದು ಈ ವಾಕ್ಯ ಸ್ಪಷ್ಟಪಡಿಸುತ್ತದೆ. ನಿಕಾಹ್ ಎಂಬ ಪದಕ್ಕೆ ಅರಬಿ ಭಾಷೆಯ ನೈಜ ಅರ್ಥವೇನೆಂಬುದರ ಬಗ್ಗೆ ನಿಘಂಟುಕಾರರ ಮಧ್ಯೆ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಒಂದು ವರ್ಗದ ಪ್ರಕಾರ ಅದು ವಿವಾಹ ಕಾರ್ಯ ಮತ್ತು ಸಂಸರ್ಗ ಎರಡಕ್ಕೂ ಜಂಟಿಯಾಗಿ ಬಳಸುವ ಪದವಾಗಿದೆ. ಇನ್ನೊಂದು ವರ್ಗವು ಅದರ ಅರ್ಥದಲ್ಲಿ ಅವೆರಡೂ ಸೇರಿದೆಯೆಂದು ಹೇಳುತ್ತದೆ. ಮೂರನೆಯ ವರ್ಗ ಹೇಳುವುದೇನೆಂದರೆ ಅದರ ನೈಜ ಅರ್ಥ ವಿವಾಹ ಕಾರ್ಯವಾಗಿದೆ. ಸಂಸರ್ಗಕ್ಕೆ ಅದನ್ನು

الْمُؤْمِنَاتِ ثُمَّ طَلَّقْتُمُوهُنَّ مِنْ قَبْلِ أَنْ تَمَسُّوهُنَّ فَمَا لَكُمْ عَلَيْهِنَّ مِنْ عِدَّةٍ
تَعْتَدُّونَهَا ۖ فَمَتِّعُوهُنَّ وَسَرِّحُوهُنَّ سَرَاحًا جَمِيلًا ﴿٤٩﴾ يَا أَيُّهَا النَّبِيُّ إِنَّا أَحْلَلْنَا

**ಅವರ ಮೇಲೆ ಯಾವುದೇ ಇದ್ದತ್ ಪೂರ್ಣಗೊಳ್ಳಬೇಕೆಂದಿಲ್ಲ. ಆದುದರಿಂದ ಏನಾದರೂ ಸಂಭಾವನೆ ಕೊಡಿರಿ ಮತ್ತು ಉತ್ತಮ ರೀತಿಯಿಂದ ಬೀಳ್ಕೊಡಿರಿ.**[86]

---

ಸಾಂಕೇತಿಕವಾಗಿ ಬಳಸಲಾಗುತ್ತದೆ. ನಾಲ್ಕನೆಯ ವರ್ಗದ ಅಭಿಪ್ರಾಯದಲ್ಲಿ ಅದರ ನೈಜ ಅರ್ಥ ಸಂಸರ್ಗವಾಗಿದೆ. ವಿವಾಹಕಾರ್ಯಕ್ಕೆ ಅದನ್ನು ಸಾಂಕೇತಿಕವಾಗಿ ಪ್ರಯೋಗಿಸಲಾಗುತ್ತದೆ. ಇದನ್ನು ಸಮರ್ಥಿಸಲು ಪ್ರತಿಯೊಂದು ವರ್ಗವೂ ಅರಬಿ ಭಾಷೆಯಿಂದ ಪುರಾವೆಗಳನ್ನು ಒದಗಿಸಲು ಪ್ರಯತ್ನಿಸಿದೆ. ಆದರೆ ರಾಗಿಬ್‌ಇಸ್ಫಹಾನಿಯವರ ಬಲವಾದ ಪ್ರತಿಪಾದನೆ ಹೀಗಿದೆ, 'ನಿಕಾಹ್' ಎಂಬ ಪದದ ನೈಜ ಅರ್ಥ ವಿವಾಹ ಕಾರ್ಯವಾಗಿದೆ. ಸಂಸರ್ಗಕ್ಕೆ ಅದನ್ನು ಸಾಂಕೇತಿಕವಾಗಿ ಬಳಸಲಾಗುತ್ತದೆ. ಅದರ ನೈಜ ಅರ್ಥ ಸಂಸರ್ಗಕ್ಕೆಂದಾಗಲು ಮತ್ತು ಸಾಂಕೇತಿಕವಾಗಿ ವಿವಾಹ ಕಾರ್ಯಕ್ಕೆ ಅದನ್ನು ಬಳಸಲು ಸಾಧ್ಯವೇ ಇಲ್ಲ. ಅದಕ್ಕೆ ಪುರಾವೆಯಾಗಿ ಅವರು ಹೇಳುವುದೇನೆಂದರೆ ಸಂಸರ್ಗಕ್ಕೆ ಅರಬಿ ಅಥವಾ ಇನ್ನಾವುದೇ ಭಾಷೆಯಲ್ಲಿರುವ ಪದಗಳೆಲ್ಲವೂ ಅಶ್ಲೀಲವಾಗಿವೆ. ಸಭ್ಯವ್ಯಕ್ತಿಗಳಾರೂ ಅದನ್ನು ಗಣ್ಯರ ಮುಂದೆ ಹೇಳಲು ಇಷ್ಟಪಡಲಾರರು. ಆದುದರಿಂದ ಸಂಸರ್ಗಕ್ಕಾಗಿ ಹುಟ್ಟುಹಾಕಲಾದ ಆ ಪದವನ್ನು ಯಾವುದೇ ಸಮಾಜವು ವಿವಾಹಕಾರ್ಯಕ್ಕೆ ಸಾಂಕೇತಿಕವಾಗಿ ಬಳಸುವುದಾದರೂ ಹೇಗೆ? ಆ ಅರ್ಥವನ್ನು ಕೊಡಲು ಲೋಕದ ಎಲ್ಲ ಭಾಷೆಗಳಲ್ಲೂ ಸಭ್ಯಪದಗಳನ್ನೇ ಬಳಸಲಾಗುತ್ತದೆಯೇ ವಿನಾ ಅಶ್ಲೀಲ ಪದಗಳನ್ನಲ್ಲ.

ಕುರ್‌ಆನ್ ಮತ್ತು ಪ್ರವಾದಿಚರ್ಯೆಯಲ್ಲಿ 'ನಿಕಾಹ್' ಎಂಬ ಪದದ ತಾತ್ಪರ್ಯ ಒಂದೋ ಕೇವಲ ವಿವಾಹ ಅಥವಾ ವಿವಾಹಾನಂತರದ ಸಂಸರ್ಗವಾಗಿದೆ. ಆದರೆ ವಿವಾಹೇತರ ಸಂಸರ್ಗಕ್ಕೆ ಈ ಪದವನ್ನು ಎಲ್ಲೂ ಬಳಸಲಾಗುವುದಿಲ್ಲ. ಅಂತಹ ಸಂಸರ್ಗಕ್ಕೆ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಲ್ಲಿ ವ್ಯಭಿಚಾರವೆನ್ನಲಾಗುತ್ತದೆಯೇ ಹೊರತು ನಿಕಾಹ್ ಎಂದಲ್ಲ.

86. ಇದೊಂದು ಪ್ರತ್ಯೇಕ ಸೂಕ್ತವಾಗಿದ್ದು ಬಹುಶಃ ಅದೇ ಕಾಲದಲ್ಲಿ ತಲಾಕ್‌ಗೆ ಸಂಬಂಧಿಸಿದ ಯಾವುದೋ ಸಮಸ್ಯೆ ಉದ್ಭವಿಸಿದಾಗ ಅವತೀರ್ಣಗೊಂಡಿತ್ತು. ಆದುದರಿಂದ ಇದನ್ನು ಹಿಂದಿನ ಮತ್ತು ಮುಂದಿನ ವಾಕ್ಸರಣಿಯ ಮಧ್ಯೆ ಇರಿಸಲಾಗಿದೆ. ಅದರ ಅನುಕ್ರಮವನ್ನು ನೋಡುವಾಗ ಇದರ ಉಪನ್ಯಾಸವು ಹಿಂದಿನ ಉಪನ್ಯಾಸದ ನಂತರ ಮತ್ತು ಮುಂದಿನ ಉಪನ್ಯಾಸಕ್ಕಿಂತ ಮುಂಚೆ ಅವತೀರ್ಣಗೊಂಡಿದೆಯೆಂದು ವ್ಯಕ್ತವಾಗುತ್ತದೆ.

ಈ ಸೂಕ್ತದಿಂದ ಹೊರಡುವ ಕಾನೂನು ವಿಧಿಗಳ ಸಾರಾಂಶವನ್ನು ಕೆಳಗೆ ಕೊಡಲಾಗಿದೆ-

1) ಸೂಕ್ತದಲ್ಲಿ 'ಸತ್ಯವಿಶ್ವಾಸಿ ಸ್ತ್ರೀಯರು' ಎಂದು ಬಳಕೆಯಾಗಿದೆ. ಆದರಿಂದ ಇಲ್ಲಿ ವಿವರಿಸಲಾಗಿರುವ ಕಾನೂನು 'ಗ್ರಂಥದವರ ಸ್ತ್ರೀಯರಿಗೆ' ಅನ್ವಯವಾಗುವುದಿಲ್ಲವೆಂದು ಬಾಹ್ಯನೋಟಕ್ಕೆ ಭಾಸವಾಗುತ್ತದೆ. ಆದರೆ ಈ ವಿಧಿಯು ಗ್ರಂಥದವರ ಸ್ತ್ರೀಯರಿಗೂ ಅನ್ವಯವಾಗುತ್ತದೆ ಎಂಬ ಬಗ್ಗೆ ಸಮುದಾಯದ ಎಲ್ಲ ವಿದ್ವಾಂಸರೂ ಏಕಾಭಿಪ್ರಾಯ ಹೊಂದಿದ್ದಾರೆ. ಅಂದರೆ ಗ್ರಂಥದವರ ಸ್ತ್ರೀಯರೊಂದಿಗೆ ಓರ್ವ ಮುಸ್ಲಿಮನು ವಿವಾಹವಾದರೆ ತಲಾಕ್, ಇದ್ದತ್, ಮಹ್ರ್ ಮತ್ತು ಆಕೆಯ ತಲಾಕ್‌ನ ಸಂಭಾವನೆಗೆ ಸಂಬಂಧಿಸಿದ ಕಾನೂನುಗಳೂ ಓರ್ವ ಮುಸ್ಲಿಮ್ ಸ್ತ್ರೀಯೊಂದಿಗೆ

ವಿವಾಹವಾದರೆ ಅನ್ವಯವಾಗುವಂತೆಯೇ ಆಕೆಗೂ ಅನ್ವಯವಾಗುತ್ತವೆ. ಇಲ್ಲಿ ಅಲ್ಲಾಹನು ಕೇವಲ ಮುಸ್ಲಿಮ್ ಸ್ತ್ರೀಯರನ್ನು ಪ್ರಸ್ತಾಪಿಸಿರುವುದರ ಕಾರಣ ಮುಸ್ಲಿಮರು ಸತ್ಯವಿಶ್ವಾಸಿ ಹೆಂಗಸರನ್ನೇ ವಿವಾಹ ಮಾಡಬೇಕೆಂದು ಸೂಚಿಸುವುದಾಗಿದೆ ಎಂಬ ಬಗ್ಗೆಯೂ ವಿದ್ವಾಂಸರಲ್ಲಿ ಒಮ್ಮತವಿದೆ. ಯಹೂದಿ ಮತ್ತು ಕ್ರೈಸ್ತ ಸ್ತ್ರೀಯರನ್ನು ವಿವಾಹವಾಗಬಹುದಾದರೂ ಅದು ಅಪೇಕ್ಷಣೀಯವಲ್ಲ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಸತ್ಯವಿಶ್ವಾಸಿಗಳು ಸತ್ಯವಿಶ್ವಾಸಿನಿಯರನ್ನೇ ವಿವಾಹವಾಗಬೇಕೆಂದು ಅಲ್ಲಾಹನು ಬಯಸುತ್ತಾನೆಂಬುದೂ ಕುರ್‌ಆನಿನ ವಾಕ್‌ಶೈಲಿಯಿಂದ ವ್ಯಕ್ತವಾಗುತ್ತದೆ.

2) ಮುಟ್ಟುವುದು ಅಥವಾ ಸ್ಪರ್ಶಿಸುವುದು ಎಂದರೆ ನಿಘಂಟುವಿನ ಪ್ರಕಾರ ಕೇವಲ ಮುಟ್ಟುವುದಾಗಿದೆ. ಆದರೆ ಇಲ್ಲಿ ಈ ಪದವನ್ನು ಸೂಚ್ಯವಾಗಿ ಸಂಸರ್ಗಕ್ಕೆ ಉಪಯೋಗಿಸಲಾಗಿದೆ. ಈ ನೆಲೆಯಲ್ಲಿ ಸೂಕ್ತದ ಬಾಹ್ಯ ಅರ್ಥ ಪ್ರಕಾರ, ಪತಿಯು ಸಂಸರ್ಗ ಮಾಡಿರದೆ, ಆಕೆಗೆ ತಲಾಕ್ ಕೊಟ್ಟರೆ ಆಕೆಯ ಮೇಲೆ ಇದ್ದತ್ ಕಡ್ಡಾಯವಾಗುವುದಿಲ್ಲ. ಒಂದು ವೇಳೆ ಅವರು ಏಕಾಂತದಲ್ಲಿದ್ದರೂ ಅಥವಾ ಅವನು ಅವಳನ್ನು ಮುಟ್ಟಿದ್ದರೂ ಸರಿಯೆ. ಆದರೆ ಕರ್ಮಶಾಸ್ತ್ರ ಪಂಡಿತರು ಅಪಾಯದ ದೃಷ್ಟಿಯಿಂದ, ಅವರು ನಿಜವಾಗಿಯೂ ಏಕಾಂತದಲ್ಲಿ ಒಂದಾಗಿದ್ದರೆ (ಅರ್ಥಾತ್ ಸಂಸರ್ಗಕ್ಕೆ ಅವಕಾಶವಿದ್ದರೆ), ಅನಂತರ ತಲಾಕ್ ನೀಡಿದರೆ ಆಕೆಯ ಮೇಲೆ ಇದ್ದತ್ ಕಡ್ಡಾಯವೆಂದೂ ಏಕಾಂತದಲ್ಲಿ ಸೇರುವುದಕ್ಕಿಂತ ಮುಂಚೆ ತಲಾಕ್ ನೀಡಿದರೆ ಮಾತ್ರ ಇದ್ದತ್ ಆಚರಿಸಬೇಕಾಗಿಲ್ಲವೆಂದೂ ವಿಧಿಸಿದ್ದಾರೆ.

3) ಏಕಾಂತದಲ್ಲಿ ಒಂದುಗೂಡುವುದಕ್ಕಿಂತ ಮುಂಚಿತವಾಗಿ ತಲಾಕ್ ನೀಡಲ್ಪಟ್ಟವಳಿಗೆ ಇದ್ದತ್ ಇಲ್ಲವೆಂದರೆ ಆಗ ಪುರುಷನಿಗೆ ಆಕೆಯನ್ನು ಮರಳಿ ಪಡೆಯುವ ಹಕ್ಕು ಇರುವುದಿಲ್ಲ. ಸ್ತ್ರೀಗೆ ಮಾತ್ರ ತಲಾಕ್ ಆದ ಕೂಡಲೇ ತನಗಿಷ್ಟವಿರುವ ಯಾವ ಪುರುಷನೊಂದಿಗೂ ವಿವಾಹವಾಗಬಹುದಾಗಿದೆ. ಆದರೆ ಈ ಆಜ್ಞೆಯು ಏಕಾಂತದಲ್ಲಿ ಒಂದುಗೂಡುವುದಕ್ಕಿಂತ ಮುಂಚೆ ನೀಡಲಾದ ತಲಾಕ್‌ಗೆ ಮಾತ್ರ ಅನ್ವಯಿಸುತ್ತದೆ. ಏಕಾಂತಕ್ಕಿಂತ ಮುಂಚೆ ಪತಿಯು ಮರಣ ಹೊಂದಿದರೆ ಸ್ತ್ರೀಗೆ ಮರಣದ ಇದ್ದತ್‌ನಿಂದ ಮುಕ್ತಿಯಿಲ್ಲ. ಇತರ ವಿವಾಹಿತ (ಪತಿಯಿಂದ ಸಂಸರ್ಗಕ್ಕೊಳಗಾದ) ಸ್ತ್ರೀಯರಂತೆಯೇ ಆಕೆಯೂ ನಾಲ್ಕು ತಿಂಗಳು ಮತ್ತು ಹತ್ತು ದಿವಸಗಳ ಇದ್ದತ್ ಆಚರಿಸಬೇಕು. (ಇದ್ದತ್ ಎಂದರೆ ಸ್ತ್ರೀಯು ಇನ್ನೊಂದು ವಿವಾಹವಾಗುವುದು ಧರ್ಮ ಸಮ್ಮತವಲ್ಲದಂತಹ ಅವಧಿಯಾಗಿದೆ.)

4) 'ನಿಮಗೆ ಅವರ ಮೇಲೆ ಇದ್ದತ್ ಕಡ್ಡಾಯವಿಲ್ಲ' ಎಂಬ ಪದಗಳು ಇದ್ದತ್ ಸ್ತ್ರೀಯ ಮೇಲೆ ಪುರುಷನ ಹಕ್ಕಾಗಿದೆ ಎಂದು ಸೂಚಿಸುತ್ತದೆ. ಆದರೆ ಅದು ಕೇವಲ ಪುರುಷನ ಹಕ್ಕಾಗಿದೆಯೆಂದೂ ಇದರ ಅರ್ಥವಲ್ಲ. ವಾಸ್ತವದಲ್ಲಿ ಅದರಲ್ಲಿ ಇನ್ನೂ ಎರಡು ಹಕ್ಕುಗಳು ಸೇರಿವೆ. ಒಂದನೆಯದು, ಮಕ್ಕಳ ಹಕ್ಕು. ಎರಡನೆಯದು, ಅಲ್ಲಾಹನ ಅಥವಾ ಶರೀಅತ್‌ನ ಹಕ್ಕು. ಇದ್ದತ್‌ನ ಅವಧಿಯಲ್ಲಿ ಪುರುಷನಿಗೆ ಮರಳಿ ಸ್ವೀಕರಿಸುವ ಅಧಿಕಾರವಿರುವುದು ಆತನ ಹಕ್ಕಾಗಿದೆ. ಇನ್ನೊಂದು ಕಾರಣವೆಂದರೆ ಇದ್ದತ್‌ನ ಅವಧಿಯಲ್ಲಿ ಸ್ತ್ರೀಯು ಗರ್ಭಿಣಿಯೋ ಅಲ್ಲವೋ ಎಂಬುದನ್ನು ಆಧರಿಸಿ ಆತನ ಸಂತಾನದ ನಿಶ್ಚಯವಾಗುತ್ತದೆ. ಸಂತಾನದ ಹಕ್ಕು ಇದರಲ್ಲಿ ಸೇರಲು ಕಾರಣವೇನೆಂದರೆ ಸಂತಾನವು ತನ್ನದೇ ಎಂದಾದರೆ ಅದರ ಕಾನೂನು ಪರ ಹಕ್ಕುಗಳು ಸ್ಥಾಪಿತವಾಗಲು ಅದು ಅಗತ್ಯ. ಸಂತಾನದ ನೈತಿಕ ಸ್ಥಾನಮಾನವೂ ಅದರ ವಂಶವು ಸಂದೇಹಾಸ್ಪದವಾಗಿಲ್ಲವೆಂಬುದನ್ನು ಅವಲಂಬಿಸಿದೆ. ಇನ್ನು ಅದರಲ್ಲಿ ಅಲ್ಲಾಹನ ಅಥವಾ ಶರೀಅತ್‌ನ ಹಕ್ಕು ಸೇರಿಸಿರುವುದೇಕೆಂದರೆ

ಒಂದು ವೇಳೆ ತನ್ನ ಮತ್ತು ತನ್ನ ಸಂತಾನದ ಹಕ್ಕುಗಳ ಚಿಂತೆ ಜನರಿಗೆ ಇಲ್ಲದಿದ್ದರೂ ಅಲ್ಲಾಹನ ಶರೀಅತ್ ಆ ಹಕ್ಕುಗಳನ್ನು ಸಂರಕ್ಷಿಸುವುದು. ಆದುದರಿಂದಲೇ ಓರ್ವ ಪುರುಷನು ತನ್ನ ಪತ್ನಿಗೆ ನಾನು ಸತ್ತ ನಂತರ ಅಥವಾ ನನ್ನಿಂದ ತಲಾಕ್ ಪಡೆದ ನಂತರ ನನ್ನ ಕಡೆಯಿಂದ ನಿನಗೆ ಯಾವುದೇ ಇದ್ದತ್ ಇಲ್ಲವೆಂದು ಬರೆದು ಕೊಟ್ಟರೂ ಶರೀಅತ್ ಅದನ್ನು ಅನೂರ್ಜಿತಗೊಳಿಸಲಾರದು.

5) 'ಅವರಿಗೆ ಸ್ವಲ್ಪವೇನಾದರೂ ಹಣ ಕೊಟ್ಟು ಉತ್ತಮ ರೀತಿಯಲ್ಲಿ ಅವರನ್ನು ಬೀಳ್ಕೊಡಿರಿ' ಎಂಬ ಈ ಆಜ್ಞೆಯ ಉದ್ದೇಶವು ಎರಡು ವಿಧಾನಗಳ ಪೈಕಿ ಒಂದನ್ನು ಪೂರೈಸಬೇಕಾದೀತು ಎಂದಾಗಿದೆ. ವಿವಾಹದ ಸಮಯದಲ್ಲಿ ಮಹ್ರ್ ನಿಶ್ಚಯಿಸಲಾಗಿದ್ದು ಅನಂತರ ಏಕಾಂತದಲ್ಲಿ ಸೇರುವುದಕ್ಕಿಂತ ಮುಂಚೆ ತಲಾಕ್ ಕೊಡಲಾಗಿದ್ದರೆ ಅಲ್ ಬಕರಃ ಅಧ್ಯಾಯದ 237ನೆಯ ಸೂಕ್ತದಲ್ಲಿ ಹೇಳಿದಂತೆ ಅರ್ಧ ಮಹ್ರ್ ನೀಡಬೇಕಾದುದು ಕಡ್ಡಾಯವಾಗುತ್ತದೆ. ಅದಕ್ಕಿಂತ ಹೆಚ್ಚೇನೂ ಕೊಡುವುದು ಕಡ್ಡಾಯವಲ್ಲ. ಆದರೆ ನೀಡುವುದು ಅಪೇಕ್ಷಣೀಯವಾಗಿದೆ. ಉದಾ: ಅರ್ಧ ಮಹ್ರ್ ಕೊಡುವುದರ ಜೊತೆಗೆ ಪುರುಷನು ಸ್ತ್ರೀಗೆ ಆಕೆ ವಧುವಾಗುವಾಗ ನೀಡಿದ ಬಟ್ಟೆ ಬರೆಗಳನ್ನು ಆಕೆಗೇ ಬಿಟ್ಟು ಬಿಡುವುದು ಅಥವಾ ಇನ್ನಾವುದಾದರೂ ವಸ್ತುವನ್ನು ಮದುವೆಯ ಸಮಯದಲ್ಲಿ ಕೊಟ್ಟಿದ್ದರೆ ಅದನ್ನು ಮರಳಿ ಪಡೆಯದಿರುವುದು ಅಪೇಕ್ಷಣೀಯವಾಗಿದೆ. ಒಂದು ವೇಳೆ ವಿವಾಹದ ಸಮಯದಲ್ಲಿ ಮಹ್ರ್ ನಿಶ್ಚಯಿಸದಿದ್ದರೆ ಸ್ತ್ರೀಗೆ ಏನಾದರೂ ಕೊಟ್ಟು ಬೀಳ್ಕೊಡುವುದು ಕಡ್ಡಾಯವಾಗಿದೆ. ಈ 'ಏನಾದರೂ' ಎಂಬುದು ಅಲ್ ಬಕರಃ ಅಧ್ಯಾಯದ 236ನೆಯ ಸೂಕ್ತದಲ್ಲಿ ಹೇಳಿದಂತೆ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ ಮತ್ತು ಆತನ ಸಾಮರ್ಥ್ಯಕ್ಕೆ ತಕ್ಕಂತಿರಬೇಕು. ವಿದ್ವಾಂಸರ ಒಂದು ವರ್ಗದ ಅಭಿಪ್ರಾಯದಲ್ಲಿ ಮಹ್ರ್ ನಿಶ್ಚಯಿಸಲ್ಪಟ್ಟರೂ ಇಲ್ಲದಿದ್ದರೂ ತಲಾಕ್ ನೀಡುವಾಗ ಸಂಭಾವನೆಯನ್ನು ನೀಡಬೇಕಾದುದು ಕಡ್ಡಾಯ. (ಇಸ್ಲಾಮಿನ ಪಾರಿಭಾಷಿಕದಲ್ಲಿ ತಲಾಕ್‌ನ ಸಂಭಾವನೆಯೆಂದರೆ ತಲಾಕ್ ಕೊಟ್ಟು ಬೀಳ್ಕೊಡುವಾಗ ಮಹಿಳೆಗೆ ನೀಡಲಾಗುವ ಸೊತ್ತು.)

6) ಉತ್ತಮ ರೀತಿಯಲ್ಲಿ ಬೀಳ್ಕೊಡುವುದೆಂದರೆ ಸ್ತ್ರೀಗೆ ಏನಾದರೂ ಕೊಟ್ಟು ಬಿಡುಗಡೆಗೊಳಿಸಬೇಕೆಂದು ಮಾತ್ರವಲ್ಲ, ಅದರಲ್ಲಿ ಆಕೆಯನ್ನು ಅಪಮಾನಿಸದೆ ಸಭ್ಯ ರೀತಿಯಲ್ಲಿ ಬಿಡುಗಡೆಗೊಳಿಸಬೇಕೆಂಬ ಅಂಶವೂ ಸೇರಿದೆ. ಒಬ್ಬ ವ್ಯಕ್ತಿಗೆ ಮಹಿಳೆ ಇಷ್ಟವಾಗಲಿಲ್ಲ ಅಥವಾ ಇನ್ನಾವುದೋ ಕಾರಣದಿಂದಾಗಿ ಆತ ಆ ಮಹಿಳೆಯನ್ನು ತನ್ನ ಬಳಿ ಇರಿಸಬಯಸುವುದಿಲ್ಲವೆಂದಾದರೆ ಸಭ್ಯರಂತೆ ಆಕೆಗೆ ತಲಾಕ್ ಕೊಟ್ಟು ಬೀಳ್ಕೊಡಬೇಕು. ಅವಳ ಕುಂದು ಕೊರತೆಗಳನ್ನು ಹೇಳುತ್ತಾ ತಿರುಗುವುದು ಅಥವಾ ಆಕೆಯ ತಪ್ಪುಗಳ ಪಟ್ಟಿ ಮಾಡುವ ಮೂಲಕ ಅವಳನ್ನು ಬೇರಾರೂ ಮದುವೆಯಾಗಲು ಮುಂದೆ ಬರದಂತೆ ಮಾಡುವುದು ಸಲ್ಲದು. ಕುರ್‌ಆನಿನ ಈ ಸೂಚನೆಯಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ತಲಾಕ್ ಯಾವುದೇ ಪಂಚಾಯತ್ ಅಥವಾ ನ್ಯಾಯಾಲಯದ ಅನುಮತಿಯೊಂದಿಗೆ ಜಾರಿಗೊಳ್ಳಬೇಕೆಂದು ಹೇಳುವುದು ಶರೀಅತ್‌ನ ಯುಕ್ತಿಗೆ ವಿರುದ್ಧವಾಗಿದೆ. ಏಕೆಂದರೆ ಆಗ 'ಉತ್ತಮ ರೀತಿಯಿಂದ ಬೀಳ್ಕೊಡಿರಿ' ಎಂಬುದಕ್ಕೆ ಅವಕಾಶವೇ ಇರುವುದಿಲ್ಲ. ಪುರುಷ ಬಯಸದಿದ್ದರೂ ಆಕೆಯ ಅವಮಾನವಾಗದೇ ಇರುವುದಿಲ್ಲ. ಅಷ್ಟೇ ಅಲ್ಲ ಸೂಕ್ತದ ಪದಗಳಿಂದಲೂ ಪುರುಷರ ತಲಾಕ್‌ನ ಅಧಿಕಾರವು ಯಾವುದೇ ಪಂಚಾಯತ್ ಅಥವಾ ನ್ಯಾಯಾಲಯದ ಅನುಮತಿಗೆ ಬದ್ಧವಾಗಿದೆಯೆಂಬುದಕ್ಕೆ ಅವಕಾಶ ನೀಡುವುದಿಲ್ಲ. ಸೂಕ್ತವು ಸ್ಪಷ್ಟವಾಗಿ ವಿವಾಹ ಮಾಡಿದಾತನಿಗೆ ತಲಾಕ್‌ನ ಅಧಿಕಾರ ನೀಡುತ್ತದೆ. ಆತ ಮುಟ್ಟುವುದಕ್ಕೆ ಮುಂಚೆ ಮಹಿಳೆಯನ್ನು ತ್ಯಜಿಸ ಬಯಸಿದರೆ ಅರ್ಧ ಮಹ್ರ್ ಕಡ್ಡಾಯವಾಗಿ ಪಾವತಿಸಬೇಕು ಅಥವಾ ತನ್ನ ಸ್ಥಾನಮಾನಕ್ಕೆ

ತಕ್ಕಂತೆ ಏನಾದರೂ ಸೊತ್ತು ನೀಡಿ ಬಿಡುಗಡೆಗೊಳಿಸಬೇಕು ಎಂಬ ಹೊಣೆಗಾರಿಕೆಯನ್ನೂ ಆತನ ಮೇಲೆಯೇ ಹಾಕಿದೆ. ಇದರಿಂದ ಸೂಕ್ತದ ಉದ್ದೇಶವೂ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅದೇನೆಂದರೆ ತಲಾಕ್ ಆಟವಾಗುವುದನ್ನು ತಡೆಗಟ್ಟಲಿಕ್ಕಾಗಿ ಪುರುಷನ ಮೇಲೆ ಆರ್ಥಿಕ ಹೊಣೆಗಾರಿಕೆಯ ಹೊರೆಯನ್ನು ಹಾಕುವ ಮೂಲಕ ಆತ ತನ್ನ ತಲಾಕ್‌ನ ಅಧಿಕಾರವನ್ನು ಸರಿಯಾಗಿ ಆಲೋಚಿಸಿ ಉಪಯೋಗಿಸಬೇಕು ಮತ್ತು ಎರಡು ಕುಟುಂಬಗಳ ಆಂತರಿಕ ವಿಷಯದಲ್ಲಿ ಯಾವುದೇ ಬಾಹ್ಯ ಹಸ್ತಕ್ಷೇಪ ನಡೆಯಬಾರದು ಮಾತ್ರವಲ್ಲ ತಾನು ಪತ್ನಿಗೆ ತಲಾಕ್ ಏಕೆ ನೀಡುತ್ತಿದ್ದೇನೆ ಎಂದು ಕೂಡಾ ಯಾರಿಗೂ ತಿಳಿಸಲು ಆತ ನಿರ್ಬಂಧಿತನಾಗಬಾರದು ಎಂಬುದಾಗಿದೆ.

7) ಇಬ್ನು ಅಬ್ಬಾಸ್, ಸಈದ್ ಬಿನ್ ಮುಸಯ್ಯಿಬ್, ಅಲೀ ಬಿನ್ ಹುಸೈನ್ (ಝೈನುಲ್ ಆಬಿದೀನ್) ಇಮಾಮ್ ಶಾಫಿಈ, ಅಹ್ಮದ್ ಬಿನ್ ಹಂಬಲ್ ಮೊದಲಾದವರು, 'ನೀವು ವಿವಾಹವಾಗಿ ತಲಾಕ್ ನೀಡಿದರೆ' ಎಂಬ ಸೂಕ್ತದ ಪದಗಳಿಂದ ಮೊದಲು ವಿವಾಹ ಆದರೆ ಮಾತ್ರ ತಲಾಕ್ ಸಂಭವಿಸುತ್ತದೆಂದೂ ವಿವಾಹಕ್ಕೆ ಮುಂಚೆ ತಲಾಕ್ ವ್ಯರ್ಥವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಒಬ್ಬ ವ್ಯಕ್ತಿಯು, ನಾನು ಇಂತಹ ಮಹಿಳೆಯನ್ನು ಇಂತಹ ಮನೆತನದ, ಜನಾಂಗದ ಅಥವಾ ಇನ್ನಾವುದೇ ಮಹಿಳೆಯನ್ನು ವಿವಾಹವಾದರೆ ಆಕೆಗೆ ತಲಾಕ್ ಇದೆ ಎಂದು ಹೇಳಿದರೆ ಅದು ಅಸಂಬದ್ಧ ಮಾತಾಗಿದ್ದು, ಅದರಿಂದ ತಲಾಕ್ ಸಂಭವಿಸುವುದಿಲ್ಲ. ಈ ಅಭಿಪ್ರಾಯವನ್ನು ಸಮರ್ಥಿಸಿ ಈ ಕೆಳಗಿನ ಹದೀಸ್‌ಗಳನ್ನು ತೋರಿಸಲಾಗುತ್ತದೆ.

"ಮಾನವನು ಯಾವುದರ ಒಡೆಯನಲ್ಲವೋ ಅದರ ಬಗ್ಗೆ ತಲಾಕ್‌ನ ಅಧಿಕಾರ ಉಪಯೋಗಿಸುವ ಹಕ್ಕು ಅವನಿಗಿಲ್ಲ." (ಅಹ್ಮದ್, ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ)

"ನಿಕಾಹ್‌ಗಿಂತ ಮುಂಚೆ ಯಾವುದೇ ತಲಾಕ್ ಇಲ್ಲ." (ಇಬ್ನುಮಾಜಃ)

ಆದರೆ ಕರ್ಮಶಾಸ್ತ್ರ ಪಂಡಿತರ ಒಂದು ದೊಡ್ಡ ವಿಭಾಗದ ಅಭಿಪ್ರಾಯದಂತೆ ಈ ಸೂಕ್ತ ಮತ್ತು ಪ್ರಸ್ತುತ ಹದೀಸ್‌ಗಳು ಒಬ್ಬನು ತನ್ನ ವಿವಾಹ ಬಂಧನದಲ್ಲಿಲ್ಲದ ಪರಸ್ತ್ರೀಯೋರ್ವಳೊಡನೆ, 'ನಿನಗೆ ತಲಾಕ್ ಇದೆ' ಅಥವಾ 'ನಾನು ನಿನಗೆ ತಲಾಕ್ ಕೊಟ್ಟೆ' ಎಂದು ಹೇಳಿದರೆ ಮಾತ್ರ ಅನ್ವಯವಾಗುತ್ತವೆ. ಈ ಮಾತು ಅಸಂಬದ್ಧವಾಗಿದೆ. ಅದರಿಂದ ಯಾವುದೇ ಕಾನೂನು ಪರ ಪರಿಣಾಮವುಂಟಾಗುವುದಿಲ್ಲ. ಆದರೆ ಆತ, 'ನಿನ್ನನ್ನು ವಿವಾಹವಾದರೆ ನಿನಗೆ ತಲಾಕ್ ಇದೆ' ಎಂದು ಹೇಳಿದರೆ ಇದು ನಿಕಾಹ್‌ಗೆ ಮುಂಚೆ ನೀಡುವ ತಲಾಕ್ ಅಲ್ಲ. ಬದಲಾಗಿ ಅವನು ಈ ಮಹಿಳೆ ತನ್ನ ವಿವಾಹ ಬಂಧನಕ್ಕೆ ಬಂದಲ್ಲಿ ಆಕೆಗೆ ತಲಾಕ್ ಇರುವುದು ಎಂಬುದನ್ನು ಮೊದಲೇ ನಿರ್ಧರಿಸಿದ್ದು ಅದನ್ನು ಘೋಷಿಸಿದ್ದಾನೆಂದು ಅರ್ಥ. ಇದು ಅಸಂಬದ್ಧ ಮಾತಾಗಲಾರದು. ಆಕೆ ಅವನ ವಿವಾಹ ಬಂಧನಕ್ಕೆ ಬಂದ ಕೂಡಲೇ ಆಕೆಯ ತಲಾಕ್ ಸಂಭವಿಸುವುದು. ಈ ಅಭಿಪ್ರಾಯ ಹೊಂದಿದ ಕರ್ಮಶಾಸ್ತ್ರ ಪಂಡಿತರ ಮಧ್ಯೆ ಪುನಃ ಇಂತಹ ತಲಾಕ್ ಘೋಷಣೆಯ ವ್ಯಾಪ್ತಿ ಎಲ್ಲಿಯವರೆಗಿದೆ ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಇಮಾಮ್‌ಗಳಾದ ಅಬೂಹನೀಫಾ, ಮುಹಮ್ಮದ್ ಮತ್ತು ಝುಫರ್‌ರವರು ಹೇಳುವುದೇನೆಂದರೆ ಒಬ್ಬನು ಸ್ತ್ರೀಯ ಜನಾಂಗ ಅಥವಾ ಗೋತ್ರದ ಹೆಸರೆತ್ತಿದರೆ ಅಥವಾ ನಾನು ಯಾವ ಸ್ತ್ರೀಯೊಂದಿಗೆ ವಿವಾಹವಾಗುವೆನೋ ಅವಳಿಗೆ ತಲಾಕ್ ಇದೆಯೆಂದು ಯಾರದೇ ಹೆಸರೆತ್ತದೆಯೇ ಹೇಳಿದರೆ ಎರಡೂ ಅವಸ್ಥೆಗಳಲ್ಲಿ ತಲಾಕ್ ಸಂಭವಿಸುತ್ತದೆ. ಅಬೂಬಕರ್ ಜಸ್ಸಾಸ್ ಅವರು ಇದೇ ಅಭಿಪ್ರಾಯವನ್ನು ಹ. ಉಮರ್, ಅಬ್ದುಲ್ಲಾ ಬಿನ್ ಮಸ್‌ಊದ್,

لَكَ أَزْوَاجَكَ الَّتِيٓ ءَاتَيْتَ أُجُورَهُنَّ وَمَا مَلَكَتْ يَمِينُكَ مِمَّآ أَفَآءَ ٱللَّهُ عَلَيْكَ

بَنَاتِ عَمِّكَ وَبَنَاتِ عَمَّاتِكَ وَبَنَاتِ خَالِكَ وَبَنَاتِ خَالَاتِكَ الَّتِي هَاجَرْنَ مَعَ

**(50-52)** ಪೈಗಂಬರರೇ, ನೀವು ಮಹ್ರ್ ಕೊಟ್ಟಿರುವಂತಹ ನಿಮ್ಮ ಪತ್ನಿಯರನ್ನೂ[87] ಲ್ಲಾಹನಿಂದ ಪ್ರದಾನವಾಗಿರುವ ದಾಸಿಯರ ಪೈಕಿ ನಿಮ್ಮ ಸ್ವಾಧೀನತೆಗೆ

---

ಇಬ್‌ರಾಹೀಮ್ ನಖಈ, ಮುಜಾಹಿದ್ ಮತ್ತು ಉಮರ್ ಬಿನ್ ಅಬ್ದುಲ್ ಅಝೀಝ್(ರ) ಅವರಿಂದಲೂ ಉಲ್ಲೇಖಿಸಿದ್ದಾರೆ.

ಸುಫ್ಯಾನ್ ಸೌರೀ, ಉಸ್ಮಾನ್ ಬತ್ತೀಯವರ ಹೇಳಿಕೆಯ ಪ್ರಕಾರ, ತಲಾಕ್ ಹೇಳುವವನು, ನಾನು ಇಂತಹ ಸ್ತ್ರೀಯನ್ನು ಮದುವೆಯಾದರೆ ಆಕೆಗೆ ತಲಾಕ್ ಇದೆಯೆಂದು ಹೇಳಿದರೆ ಮಾತ್ರ ತಲಾಕ್ ಸಂಭವಿಸುತ್ತದೆ.

ಹಸನ್ ಬಿನ್ ಸಾಲಿಹ್, ಲೈಸ್ ಬಿನ್ ಸಅದ್, ಆಮಿರ್ ಶಅ್‌ಬೀಯವರು ಹೇಳುವುದೇನೆಂದರೆ ಇಂತಹ ತಲಾಕ್ ಸಾಮಾನ್ಯವಾಗಿಯೂ ಅನ್ವಯಿಸಬಹುದು- ಆದರೆ ಅದರ ಶರತ್ತೇನೆಂದರೆ ಅದರಲ್ಲಿ ಯಾವುದೇ ಒಂದರ ಕಡೆಗೆ ಸೂಚನೆಯಿರಬೇಕು. ಉದಾ: ಒಬ್ಬನು, ನಾನು ಇಂತಿಂತಹ ಕುಟುಂಬ, ಮನೆತನ, ನಗರ, ದೇಶ ಅಥವಾ ಜನಾಂಗದ ಸ್ತ್ರೀಯನ್ನು ಮದುವೆಯಾದರೆ ಆಕೆಗೆ ತಲಾಕ್ ಇದೆ ಎಂದು ಹೇಳಿದರೂ ತಲಾಕ್ ಸಂಭವಿಸುತ್ತದೆ.

ಇಬ್ನು ಅಬೀಲೈಲಾ ಮತ್ತು ಇಮಾಮ್ ಮಾಲಿಕ್ ಅವರು ಪ್ರಸ್ತುತ ಅಭಿಪ್ರಾಯಕ್ಕೆ ವಿರುದ್ಧವಾಗಿ ಅದರಲ್ಲಿ ಅವಧಿಯನ್ನು ನಿಶ್ಚಯಿಸಬೇಕೆಂಬ ಶರತ್ತು ವಿಧಿಸುತ್ತಾರೆ. ಉದಾ: ಒಬ್ಬನು, ನಾನು ಈ ವರ್ಷ ಅಥವಾ ಮುಂದಿನ ಹತ್ತು ವರ್ಷಗಳಲ್ಲಿ ಇಂತಹ ಸ್ತ್ರೀ ಅಥವಾ ಇಂತಹ ವರ್ಗದ ಸ್ತ್ರೀಯನ್ನು ವಿವಾಹವಾದರೆ ಆಕೆಗೆ ತಲಾಕ್ ಇದೆಯೆಂದು ಹೇಳಿದರೆ ಮಾತ್ರ ತಲಾಕ್ ಆಗುತ್ತದೆ. ಇಲ್ಲವಾದರೆ ತಲಾಕ್ ಸಂಭವಿಸಲಾರದು. ಇಮಾಮ್ ಮಾಲಿಕ್ ಅವರು, ಈ ಅವಧಿಯು ಒಬ್ಬನು ಜೀವಿಸಬಲ್ಲನೆಂಬ ನಿರೀಕ್ಷೆಯಿಲ್ಲದಿದ್ದರೆ ಅವನ ಮಾತಿಗೆ ಬೆಲೆಯಿರುವುದಿಲ್ಲವೆಂದು ಹೇಳುತ್ತಾರೆ.

87. ಇದು, ಮುಹಮ್ಮದ್‌ರವರು(ಸ) ಇತರರು ನಾಲ್ವರು ಪತ್ನಿಯರಿಗಿಂತ ಹೆಚ್ಚು ಇರಿಸಬಾರದೆಂದು ಹೇಳುತ್ತಾರಾದರೂ ತಮ್ಮ ಮಟ್ಟಿಗೆ ಐದನೆಯ ಪತ್ನಿಯನ್ನು ಹೇಗೆ ಮಾಡಿಕೊಂಡರು ಎಂದು ಆಕ್ಷೇಪಿಸುತ್ತಿದ್ದವರಿಗೆ ಉತ್ತರವಾಗಿದೆ. ಈ ಆಕ್ಷೇಪಕ್ಕೆ ಕಾರಣ ಝೈನಬ್‌ರನ್ನು ವಿವಾಹವಾಗುವಾಗ ಪ್ರವಾದಿವರ್ಯರಿಗೆ(ಸ) ನಾಲ್ಕು ಪತ್ನಿಯರಿದ್ದರು. ಸೌದಾರೊಂದಿಗೆ ಹಿಜ್ರತ್‌ಗಿಂತ ಮೂರು ವರ್ಷ ಹಿಂದೆ ಮದುವೆಯಾಗಿದ್ದರು. ಆಯಿಶಾರ ವಿವಾಹವೂ ಅದೇ ವರ್ಷ ನಡೆದಿದ್ದರೂ ಅವರು ಪತಿ ಮನೆಗೆ ಬಂದದ್ದು ಹಿ.ಶ. 1ರ ಶವ್ವಾಲ್ ತಿಂಗಳಲ್ಲಿ, ಹಫ್ಸಾರೊಂದಿಗೆ ಹಿ.ಶ. ಮೂರರಲ್ಲಿ ವಿವಾಹವಾಯಿತು. ಉಮ್ಮು ಸಲಮರನ್ನು ಹಿ.ಶ. 4ರಲ್ಲಿ ವಿವಾಹವಾದರು. ಈ ರೀತಿ ಪ್ರವಾದಿವರ್ಯರಿಗೆ(ಸ) ಝೈನಬ್ 5ನೆಯ ಪತ್ನಿಯಾಗಿದ್ದರು. ಅದಕ್ಕಾಗಿ ಸತ್ಯನಿಷೇಧಿಗಳೂ ಕಪಟವಿಶ್ವಾಸಿಗಳೂ ಆಕ್ಷೇಪವೆತ್ತಿದಾಗ ಅಲ್ಲಾಹನು ಇದಕ್ಕುತ್ತರವಾಗಿ, ಪ್ರವಾದಿವರ್ಯರೇ! ನೀವು ಮಹ್ರ್ ನೀಡಿ ವಿವಾಹವಾಗಿರುವ ಈ ಐವರು ಪತ್ನಿಯರನ್ನು ನಾವೇ ನಿಮಗೆ ಹಲಾಲ್‌ಗೊಳಿಸಿರುತ್ತೇವೆ. ಬೇರೆ ಮಾತಿನಲ್ಲಿ, ಇದರರ್ಥವೇನಾಗುತ್ತದೆಂದರೆ ಮುಸ್ಲಿಮ್ ಜನಸಾಮಾನ್ಯರಿಗೆ ನಾಲ್ವರು ಪತ್ನಿಯರ

امْرَأَةً مُّؤْمِنَةً إِن وَهَبَتْ نَفْسَهَا لِلنَّبِيِّ إِنْ أَرَادَ النَّبِيُّ أَن يَسْتَنكِحَهَا
خَالِصَةً لَّكَ مِن دُونِ الْمُؤْمِنِينَ ۗ قَدْ عَلِمْنَا مَا فَرَضْنَا عَلَيْهِمْ فِي أَزْوَاجِهِمْ

ಬಂದಿರುವವರನ್ನೂ ನಿಮ್ಮ ಜೊತೆ ಹಿಜ್ರತ್ ಮಾಡಿರುವ (ವಲಸೆ ಬಂದಿರುವ) ನಿಮ ತಂದೆಯ ಸಹೋದರ-ಸಹೋದರಿಯರ ಮತ್ತು ತಾಯಿಯ ಸಹೋದರ-ಸಹೋದರಿಯ ಪುತ್ರಿಯರನ್ನೂ ನಾವು ನಿಮಗೆ ಧರ್ಮಸಮ್ಮತಗೊಳಿಸಿರುತ್ತೇವೆ. ತನ್ನನ್ನು ತಾನ ಪ್ರವಾದಿಗೆ 'ಹಿಬಃ' ರೂಪದಲ್ಲಿ (ಕೊಡುಗೆಯಾಗಿ) ಕೊಟ್ಟಿದ್ದು, ಪ್ರವಾದಿಯು ಅವಳನ ತನ್ನ ನಿಕಾಹ್‌ದಲ್ಲಿ ಸ್ವೀಕರಿಸಲು ಒಪ್ಪಿಕೊಂಡರೆ, ಅಂತಹ ಸತ್ಯವಿಶ್ವಾಸಿನಿಯರನ್ ನಾವು ನಿಮಗಾಗಿ ಹಲಾಲ್(ಧರ್ಮಸಮ್ಮತ)ಗೊಳಿಸಿರುತ್ತೇವೆ.[88] ಈ ಅನುಮತಿಯ

---

ನಿರ್ಬಂಧವನ್ನು ಹೇರಿರುವುದೂ ನಾವೇ. ತನ್ನ ಪ್ರವಾದಿಯನ್ನು ಅದರಿಂದ ಹೊರತು ಪಡಿಸಿರುವವರು ನಾವೇ. ಪ್ರತಿಬಂಧ ಹೇರುವ ಅಧಿಕಾರ ನಮಗಿರುವಾಗ ಅದರಲ್ಲಿ ವಿನಾಯಿತಿ ನೀಡುವ ಅಧಿಕಾ ನಮಗೇಕಿಲ್ಲ?

ಈ ಉತ್ತರವನ್ನು ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳನ್ನು ಸಮಾಧಾನ ಪಡಿಸಲಿಕ್ಕಾ ನೀಡಿದ್ದಲ್ಲವೆಂಬುದನ್ನು ತಿಳಿದಿರಬೇಕು. ಇದು ಇಸ್ಲಾಮ್ ವಿರೋಧಿಗಳು ಹಾಕುವ ಸಂಶಯಗಳಿ ಬಲಿಯಾಗುತ್ತಿದ್ದ ಮುಸ್ಲಿಮರನ್ನು ಸಮಾಧಾನ ಪಡಿಸಲಿಕ್ಕಾಗಿತ್ತು. ಅವರಿಗೆ ಈ ಕುರ್‌ಆನ ಅಲ್ಲಾಹನ ವಾಣಿಯಾಗಿದೆಯೆಂಬ ಬಗ್ಗೆ ದೃಢ ನಂಬಿಕೆಯಿತ್ತು. ಆದುದರಿಂದ ಅಲ್ಲಾಹನ ಕುರ್‌ಆನಿನ ಈ ಸ್ಪಷ್ಟ ಸೂಕ್ತದ ಮೂಲಕ, ಪ್ರವಾದಿಯು ತನ್ನನ್ನು ನಾಲ್ವರು ಪತ್ನಿಯ ನಿರ್ಬಂಧದಿಂದ ಹೊರತು ಪಡಿಸಿರುವುದಲ್ಲ. ಬದಲಾಗಿ ಈ ಅನುಮತಿಯನ್ನು ನಾವೇ ಮಾಡಿದ್ದೇವೆಂದ ಘೋಷಿಸಿದನು.

88. ಪ್ರವಾದಿವರ್ಯರಿಗೆ(ಸ) ಐದನೆಯ ಪತ್ನಿಯನ್ನು ಹಲಾಲ್‌ಗೊಳಿಸುವುದರ ಜೊತೆ ಇನ್ನೂ ಕೆಲವು ವರ್ಗದ ಹೆಂಗಸರೊಂದಿಗೆ ವಿವಾಹವಾಗಲು ಅಲ್ಲಾಹನು ಈ ಸೂಕ್ತದಲ್ಲಿ ಅನುಮ ನೀಡಿರುವನು-

1) ಅಲ್ಲಾಹನಿಂದ ನೀಡಲ್ಪಟ್ಟ ಮತ್ತು ಪ್ರವಾದಿವರ್ಯರ(ಸ) ಅಧೀನಕ್ಕೆ ಬಂದಿರು ದಾಸಿಯರು. ಈ ಅನುಮತಿಯ ಪ್ರಕಾರ ಪ್ರವಾದಿವರ್ಯರು(ಸ), ಬನೂ ಕುರೈಝಾ ಯುದ್ಧದಲ್ಲಿ ವಶಕ್ಕೆ ಬಂದ ಹ. ರೈಹಾನರನ್ನು, ಬನೂ ಮುಸ್ತಲಿಕ್ ಯುದ್ಧದ ವೇಳೆ ಕೈ ಸೇರಿದ ಜುವೇರಿಯಾರನ್ನು ಖೈಬರ್ ಯುದ್ಧದ ವೇಳೆ ಸೆರೆಯಾಳಾಗಿ ಬಂದ ಸಫಿಯ್ಯಾರನ್ನು ಮತ್ತು ಈಜಿಪ್ಟ್‌ನ ಮುಕೌಕಿಸ ಅರಸ ಕಾಣಿಕೆಯಾಗಿ ಕಳಿಸಿದ ಮಾರಿಯಾ ಕಿಬ್ತಿಯಾರನ್ನು ತಮಗಾಗಿ ಇರಿಸಿಕೊಂಡರು. ಅವರ ಪೈ ಮೊದಲ ಮೂವರನ್ನು ಸ್ವತಂತ್ರಗೊಳಿಸಿ ಅವರನ್ನು ವಿವಾಹವಾದರು. ಆದರೆ ಮಾರಿಯಾರನ ಕೈವಶ ಬಂದ ದಾಸಿಯೆಂಬ ನೆಲೆಯಲ್ಲೇ ದೈಹಿಕ ಸಂಪರ್ಕವಿರಿಸಿದರು. ಅವರನ್ನು ಸ್ವತಂತ್ರಗೊಳಿ ವಿವಾಹವಾಗಿದ್ದರೆಂಬ ಬಗ್ಗೆ ಯಾವುದೇ ಪುರಾವೆಯಿಲ್ಲ.

2) ಪ್ರವಾದಿವರ್ಯರೊಂದಿಗೆ(ಸ) ಹಿಜ್ರತ್ ಮಾಡಿದ ಅವರ ಪಿತೃಸಹೋದರ, ಸೋದ

وَمَا مَلَكَتْ اَيْمَانُهُمْ لِكَيْلَا يَكُوْنَ عَلَيْكَ حَرَجٌ ۗ وَكَانَ اللّٰهُ غَفُوْرًا رَّحِيْمًا ۝

تُرْجِيْ مَنْ تَشَآءُ مِنْهُنَّ وَتُـْٔوِيْٓ اِلَيْكَ مَنْ تَشَآءُ ۗ وَمَنِ ابْتَغَيْتَ مِمَّنْ عَزَلْ

...ಮಗಾಗಿ ಮಾತ್ರವಿದೆ, ಬೇರೆ ಸತ್ಯವಿಶ್ವಾಸಿಗಳಿಗೆ ಇಲ್ಲ.[89] ನಾವು ಸಾಮಾನ್ಯ ಸತ್ಯವಿಶ್ವಾಸಿಗಳ ...ೕಲೆ ಅವರ ಪತ್ನಿಯರ ಹಾಗೂ ದಾಸಿಯರ ವಿಷಯದಲ್ಲಿ ಯಾವ ಮಿತಿಗಳನ್ನು ...ೕರಿರುತ್ತೇವೆ ಎಂಬುದು ನಮಗೆ ಗೊತ್ತಿದೆ. ನಿಮ್ಮ ಮೇಲೆ ಯಾವ ಜಟಿಲತೆಯೂ

---

...ಾವ, ಸೋದರತ್ತೆ, ಮಾತೃಸಹೋದರಿಯರೇ ಮೊದಲಾದವರ ಹೆಣ್ಣು ಮಕ್ಕಳು, 'ತಮ್ಮೊಂದಿಗೆ ...ಜ್ರತ್ ಮಾಡಿದವರೆಂದು' ಸೂಕ್ತದಲ್ಲಿ ಪ್ರಸ್ತಾಪಿಸಿರುವುದರ ಅರ್ಥ, ಅವರು ಪ್ರವಾದಿಯವರ(ಸ) ...ೂತೆಯಲ್ಲಿ ಹಿಜ್ರತ್‌ನ ಪ್ರಯಾಣ ಕೈಗೊಂಡಿದ್ದರೆಂದಲ್ಲ. ಬದಲಾಗಿ ಅವರೂ ಇಸ್ಲಾಮಿಗಾಗಿ ...ಲ್ಲಾಹನ ಮಾರ್ಗದಲ್ಲಿ ಹಿಜ್ರತ್ ಮಾಡಿದ್ದರೆಂದಾಗಿದೆ. ಈ ಸಂಬಂಧಿಕರಾದ ಮುಹಾಜಿರ್ ...ಹಿಳೆಯರ ಪೈಕಿಯೂ ತಾವು ಬಯಸುವವರನ್ನು ವಿವಾಹವಾಗಬಹುದು ಎಂಬ ಅಧಿಕಾರವನ್ನು ...ವಾದಿವರ್ಯರಿಗೆ(ಸ) ನೀಡಲಾಯಿತು. ಈ ಅನುಮತಿಯ ಪ್ರಕಾರ ಪ್ರವಾದಿವರ್ಯರು(ಸ) ಹಿ.ಶ. ...ಲ್ಲಿ ಉಮ್ಮು ಹಬೀಬರನ್ನು ವಿವಾಹವಾದರು. (ಪಿತೃಸಹೋದರ, ಸೋದರ ಮಾವ, ಸೋದರತ್ತೆ ...ತ್ತು ಮಾತೃ ಸಹೋದರಿ- ಇವರ ಪುತ್ರಿಯರು ಒಬ್ಬ ಮುಸ್ಲಿಮನ ಪಾಲಿಗೆ ಹಲಾಲ್ ...ಗಿರುವರೆಂದು ಈ ಸೂಕ್ತದಿಂದ ಸೂಚ್ಯವಾಗಿ ತಿಳಿದು ಬರುತ್ತದೆ. ಈ ವಿಷಯದಲ್ಲಿ ಇಸ್ಲಾಮಿ ...ೀಅತ್ ಕ್ರೈಸ್ತ ಮತ್ತು ಯಹೂದಿ ಧರ್ಮಶಾಸ್ತ್ರಗಳಿಗೆ ತೀರಾ ವಿರುದ್ಧವಾಗಿದೆ. ಕ್ರೈಸ್ತರಲ್ಲಿ ಏಳು ...ಳಿಗೆಗಳ ವರೆಗೆ ಪುರುಷನ ಸಂಬಂಧದಿಂದ ಜೋಡಿಸಲ್ಪಟ್ಟಂತಹ ಸ್ತ್ರೀಯನ್ನು ವಿವಾಹವಾಗುವಂತಿಲ್ಲ. ...ಹೂದಿಯರಲ್ಲಿ ಸ್ವಂತ ಸೋದರ ಸೊಸೆ ಮತ್ತು ಸ್ವಂತ ಸೋದರ ಪುತ್ರಿಯರೊಂದಿಗೂ ವಿವಾಹ ...ಡೆಯುತ್ತದೆ.)

3) ಪ್ರವಾದಿಯವರಿಗೆ(ಸ) ತನ್ನನ್ನು ತಾನೇ ಉಚಿತವಾಗಿ ಅರ್ಪಿಸಿದ ಸತ್ಯವಿಶ್ವಾಸಿ ಸ್ತ್ರೀಯರೆಂದರೆ ...ಹ್ರ್ ಪಡೆಯದೆ ಪ್ರವಾದಿವರ್ಯರು(ಸ) ಬಯಸುವುದಾದರೆ ಅವರೊಂದಿಗೆ ವಿವಾಹವಾಗಲು ...ಯಾರಿರುವವರು. ಈ ಅನುಮತಿಯ ಪ್ರಕಾರ ಹಿ.ಶ. 7ರ ಶವ್ವಾಲ್ ತಿಂಗಳಲ್ಲಿ ಪ್ರವಾದಿ(ಸ) ...ೖಮೂನರನ್ನು ವಿವಾಹವಾದರು. ಆದರೆ ಮಹ್ರ್ ಇಲ್ಲದೆಯೇ ಅವರ ಔದಾರ್ಯವನ್ನು ...ೕಕರಿಸುವುದನ್ನು ಪ್ರವಾದಿ(ಸ) ಇಷ್ಟಪಡಲಿಲ್ಲ. ಆದುದರಿಂದ ಅವರು ಕೇಳದಿದ್ದರೂ ಅವರಿಗೆ ...ಹ್ರ್ ನೀಡಿದರು. ಕೆಲವು ವ್ಯಾಖ್ಯಾನಕಾರರು, ಪ್ರವಾದಿಯವರಿಗೆ(ಸ) ಕಾಣಿಕೆಯಾಗಿ (ಉಚಿತವಾಗಿ) ...ಂದ ಓರ್ವ ಪತ್ನಿಯೂ ಇರಲಿಲ್ಲವೆಂದು ಹೇಳುತ್ತಾರೆ. ಆದರೆ ತನ್ನನ್ನು ತಾನೇ ಅರ್ಪಿಸಿದ ಪತ್ನಿಗೂ ...ವಾದಿ(ಸ) ಮಹ್ರ್ ನೀಡದೆ ಇರಲಿಲ್ಲವೆಂದು ಇದರ ಅರ್ಥ.

89. ಈ ವಾಕ್ಯದ ಸಂಬಂಧವು ಕೇವಲ ಹತ್ತಿರದ ವಾಕ್ಯದೊಂದಿಗಿರುವುದೆಂದು ಒಪ್ಪಿಕೊಂಡರೆ, ...ತರ ಮುಸ್ಲಿಮರ ಮಟ್ಟಿಗೆ ಯಾವ ಸ್ತ್ರೀಯೂ ತನ್ನನ್ನು ತಾನೇ ಆತನಿಗೆ ಅರ್ಪಿಸುವುದಾಗಲಿ, ಆತ ...ಹ್ರ್ ಇಲ್ಲದೆ ವಿವಾಹವಾಗುವುದಾಗಲಿ ಧರ್ಮಸಮ್ಮತವಲ್ಲ. ಇನ್ನು ಇದರ ಸಂಬಂಧವು ...ೕಲಿನ ಇಡೀ ವಾಕ್ಯದೊಂದಿಗಿದೆಯೆಂದು ಒಪ್ಪಿಕೊಂಡರೆ ಅದರ ಅರ್ಥ, ನಾಲ್ಕಕ್ಕಿಂತ ಅಧಿಕ ...ವಾಹವಾಗುವ ಅನುಮತಿಯೂ ಕೇವಲ ಪ್ರವಾದಿವರ್ಯರಿಗೆ(ಸ) ಮಾತ್ರವಿರುವುದು- ಸಾಮಾನ್ಯ

فَلَا جُنَاحَ عَلَيْكَ ۚ ذَٰلِكَ أَدْنَىٰ أَن تَقَرَّ أَعْيُنُهُنَّ وَلَا يَحْزَنَّ وَيَرْضَيْنَ بِمَا

ಇರದಂತಾಗಲು (ನಾವು ನಿಮ್ಮನ್ನು ಈ ಮಿತಿ ಮೇರೆಗಳಿಂದ ಮುಕ್ತಗೊಳಿಸಿದ್ದೇವೆ.)[90] ಅಲ್ಲಾಹನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ನಿಮ್ಮ ಪತ್ನಿಯರ ಪೈಕಿ ನಿಮಗೆ ಇಷ್ಟವಿದ್ದವರನ್ನು ನಿಮ್ಮಿಂದ ದೂರವಿರಿಸಲಿಕ್ಕೂ ನಿಮಗೆ ಇಷ್ಟ ಬಂದವರನ್ನು ಜೊತೆ ಇಟ್ಟುಕೊಳ್ಳಲಿಕ್ಕೂ ದೂರವಿರಿಸಿದ ಬಳಿಕ ನಿಮಗೆ ಇಷ್ಟವಿದ್ದವರನ್ನು ನಿಮ್ಮ ಬಳಿಗೆ

---

ಮುಸ್ಲಿಮರಿಗಲ್ಲವೆಂದಾಗುತ್ತದೆ. ಈ ಸೂಕ್ತದಿಂದ ತಿಳಿದು ಬರುವ ಇನ್ನೊಂದು ವಿಷಯವೇನೆಂದರೆ, ಕೆಲವು ವಿಧಿಗಳು ಕೇವಲ ಪ್ರವಾದಿಯವರಿಗೆ(ಸ) ಮೀಸಲಾಗಿದೆ. ಅದು ಇತರ ಮುಸ್ಲಿಮರಿಗೆ ಅನ್ವಯವಾಗುವುದಿಲ್ಲ. ಕುರ್‌ಆನ್ ಮತ್ತು ಪ್ರವಾದಿಚರ್ಯೆಯಿಂದ ಅಂತಹ ಅನೇಕ ವಿಧಿಗಳು ನಮಗೆ ಕಾಣಸಿಗುತ್ತವೆ. ಉದಾ: ಪ್ರವಾದಿಯವರಿಗೆ(ಸ) ತಹಜ್ಜುದ್ ನಮಾಝ್ ಕಡ್ಡಾಯವಾಗಿತ್ತು. ಆದರೆ ಇತರ ಮುಸ್ಲಿಮರಿಗೆ ಅದು ಐಚ್ಛಿಕವಾಗಿದೆ. ಪ್ರವಾದಿ(ಸ) ಮತ್ತವರ ಕುಟುಂಬದವರಿಗೆ ದಾನಧರ್ಮ ನಿಷಿದ್ಧವಾಗಿದೆ. ಇತರರಿಗೆ ನಿಷಿದ್ಧವಲ್ಲ. ಪ್ರವಾದಿಯವರ(ಸ) ವಾರೀಸು ಸೊತ್ತು ವಿತರಣೆಯಾಗುವುದಿಲ್ಲ. ಇತರೆಲ್ಲರ ವಾರೀಸು ವಿತರಣೆಗೆ 'ಅನ್ನಿಸಾ' ಅಧ್ಯಾಯದಲ್ಲಿ ಆದೇಶಗಳು ಬಂದಿವೆ. ಪ್ರವಾದಿವರ್ಯರಿಗೆ(ಸ) ನಾಲ್ವರಿಗಿಂತ ಹೆಚ್ಚು ಪತ್ನಿಯರು ಹಲಾಲ್ ಆಗಿದ್ದರು. ಅವರ ನಡುವೆ ನ್ಯಾಯಪಾಲನೆ ಕಡ್ಡಾಯವಾಗಿರಲಿಲ್ಲ. ತನ್ನನ್ನು ತಾನೇ ಪ್ರವಾದಿವರ್ಯರಿಗೆ(ಸ) ಅರ್ಪಿಸುವ ಸ್ತ್ರೀಯೊಂದಿಗೆ ಮಹ್ರ್ ರಹಿತ ವಿವಾಹಕ್ಕೆ ಅನುಮತಿಯಿತ್ತು. ಪ್ರವಾದಿಯ(ಸ) ಮರಣದ ಬಳಿಕ ಅವರ ಪತ್ನಿಯರು ಸಮುದಾಯದ ಎಲ್ಲ ಪುರುಷರ ಪಾಲಿಗೆ ನಿಷಿದ್ಧವಾಗಿದ್ದರು. ಈ ಪೈಕಿ ಪ್ರವಾದಿವರ್ಯರಿಗಿರುವ(ಸ) ಯಾವ ವಿಶೇಷತೆಯೂ ಇತರ ಮುಸ್ಲಿಮರಿಗಿಲ್ಲ. ಕುರ್‌ಆನ್ ವ್ಯಾಖ್ಯಾನಗಾರರು, ಪ್ರವಾದಿಯವರಿಗೆ(ಸ) ಗ್ರಂಥದವರ ಹೆಂಗಸರೊಂದಿಗೆ ವಿವಾಹ ನಿಷಿದ್ಧವಾಗಿರುವುದೂ ಅವರ ವಿಶೇಷತೆಗಳಲ್ಲೊಂದಾಗಿದೆಯೆಂದು ಹೇಳುತ್ತಾರೆ. ವಸ್ತುತಃ ಇತರ ಮುಸ್ಲಿಮರಿಗೆ ಅದು ಧರ್ಮಸಮ್ಮತವಾಗಿದೆ.

90. ಇದು ಅಲ್ಲಾಹನು ಪ್ರವಾದಿವರ್ಯರನ್ನು(ಸ) ಸಾಮಾನ್ಯ ನಿಯಮದಿಂದ ಹೊರತು ಪಡಿಸಿರುವುದರ ಔಚಿತ್ಯವಾಗಿದೆ. 'ಜಟಿಲತೆ ಇರದಂತಾಗಲು' ಎಂದರೆ ಪ್ರವಾದಿವರ್ಯರಿಗೇನೋ ವಿಷಯಾಸಕ್ತಿ ಹೆಚ್ಚಿತ್ತು (ನಊದುಬಿಲ್ಲಾ) ಆದುದರಿಂದ ಕೇವಲ ನಾಲ್ವರು ಪತ್ನಿಯರಿಗೆ ಸೀಮಿತಗೊಳಿಸಿದರೆ ಅವರಿಗೆ ಜಟಿಲತೆಯುಂಟಾದೀತೆಂದು ಅನೇಕ ಪತ್ನಿಯರನ್ನು ವರಿಸುವ ಅನುಮತಿ ನೀಡಲಾಯಿತೆಂದು ಅರ್ಥವಲ್ಲ. ಈ ವಾಕ್ಯಕ್ಕೆ ಅಂತಹ ಅರ್ಥವನ್ನು ಪಕ್ಷಪಾತದಿಂದ ಕುರುಡಾಗಿರುವ ವ್ಯಕ್ತಿ ಮಾತ್ರ ಕಲ್ಪಿಸಿಕೊಳ್ಳಬಲ್ಲನು. ಮುಹಮ್ಮದ್(ಸ) ತಮ್ಮ 25ರ ತುಂಬು ಯೌವನದಲ್ಲಿ 40 ವರ್ಷ ಪ್ರಾಯದ ಓರ್ವ ವಿಧವೆಯನ್ನು ವಿವಾಹವಾಗಿ ಇಡೀ 25 ವರ್ಷಗಳ ತನಕ ಅತ್ಯಂತ ಸಂತೃಪ್ತ ದಾಂಪತ್ಯ ಜೀವನವನ್ನು ಕಳೆದುದು ಅನಂತರ ಅವರ ಮರಣದ ಬಳಿಕ ಇನ್ನೋರ್ವ ಪ್ರಾಯಸ್ತ ವಿಧವೆ ಸೌದಾರನ್ನು(ರ) ವಿವಾಹವಾಗಿದ್ದು ನಾಲ್ಕು ವರ್ಷಗಳ ಕಾಲ ಅವರೊಬ್ಬರೇ ಪ್ರವಾದಿಯವರ(ಸ) ಪತ್ನಿಯಾಗಿ ಉಳಿದಿದ್ದುದನ್ನು ಆತ ಮರೆತಿರಬೇಕು. ಹಾಗಿರುವಾಗ 53ರ ಪ್ರಾಯ ದಾಟಿದ ಮೇಲೆ ಒಮ್ಮೆಲೇ ಪ್ರವಾದಿವರ್ಯರ(ಸ) ವಿಷಯಾಸಕ್ತಿ ಹೆಚ್ಚುತ್ತಾ ಹೋಗಿ

ಹೆಚ್ಚೆಚ್ಚು ಪತ್ನಿಯರ ಅವಶ್ಯಕತೆ ತಲೆದೋರಿತೆಂದು ವಿವೇಕವಂತರು ಯಾರಾದರೂ ನಂಬಿಯಾರೆ? 'ಜಟಿಲತೆ ಇರದಂತಾಗಲು' ಎಂಬುದರ ಅರ್ಥವನ್ನು ಗ್ರಹಿಸಬೇಕಾದರೆ, ಅಲ್ಲಾಹನು ಪ್ರವಾದಿವರ್ಯರ(ಸ) ಮೇಲೆ ಹಾಕಿದ ಮಹಾನ್ ದೌತ್ಯದ ಹೊಣೆಗಾರಿಕೆಯನ್ನೂ ಅದನ್ನು ನಿರ್ವಹಿಸಲು ನಿಯುಕ್ತಗೊಳಿಸಲಾದ ಅಂದಿನ ಪರಿಸ್ಥಿತಿಯನ್ನೂ ತಿಳಿದಿರಬೇಕಾದುದು ಅತ್ಯಗತ್ಯ. ಈ ಎರಡು ವಾಸ್ತವಿಕತೆಗಳನ್ನು ಪಕ್ಷಪಾತರಹಿತ ದೃಷ್ಟಿಯಿಂದ ವೀಕ್ಷಿಸಿದರೆ, ಪತ್ನಿಯರ ಬಗ್ಗೆ ಪ್ರವಾದಿವರ್ಯರಿಗೆ(ಸ) ಈ ಸ್ವಾತಂತ್ರ್ಯ ನೀಡುವುದು ಎಷ್ಟರ ಮಟ್ಟಿಗೆ ಅಗತ್ಯವಿತ್ತು ಮತ್ತು ನಾಲ್ಕರಿಗೆ ಸೀಮಿತ ಗೊಳಿಸುವುದರಲ್ಲಿ ಯಾವ 'ಜಟಿಲತೆ'ಯಿತ್ತು ಎಂಬುದನ್ನು ಸರಿಯಾಗಿ ಗ್ರಹಿಸಬಲ್ಲನು.

ಪ್ರವಾದಿಯವರಿಗೆ(ಸ) ವಹಿಸಿಕೊಡಲಾದ ಘನ ಕರ್ತವ್ಯವು, ಇಸ್ಲಾಮೀ ದೃಷ್ಟಿಯಿಂದ ಮಾತ್ರವಲ್ಲ ಸಾಮಾನ್ಯ ನಾಗರಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದಲೂ ಅಸಂಸ್ಕೃತವಾಗಿದ್ದ ಒಂದು ಜನಾಂಗವನ್ನು ಜೀವನದ ಸರ್ವರಂಗಗಳಲ್ಲೂ ಸಂಸ್ಕರಿಸಿ ಒಂದು ಉನ್ನತ ಮಟ್ಟದ ಸಭ್ಯ ಹಾಗೂ ಪಾವನ ಜನಾಂಗವಾಗಿ ಮಾರ್ಪಡಿಸುವುದಾಗಿತ್ತು. ಈ ಉದ್ದೇಶಕ್ಕಾಗಿ ಕೇವಲ ಪುರುಷರ ಸಂಸ್ಕರಣೆ ಮಾತ್ರ ಸಾಕಾಗಿರಲಿಲ್ಲ. ಸ್ತ್ರೀಯರನ್ನೂ ಸಂಸ್ಕರಿಸಬೇಕಾಗಿತ್ತು. ಆದರೆ ಯಾವ ನಾಗರಿಕತೆಯ ನಿಯಮಗಳನ್ನು ಕಲಿಸಲು ಪ್ರವಾದಿವರ್ಯರನ್ನು(ಸ) ನೇಮಿಸಲಾಗಿತ್ತೋ ಅದರ ಪ್ರಕಾರ ಸ್ತ್ರೀ-ಪುರುಷರ ಮುಕ್ತ ಮಿಲನ ನಿಷಿದ್ಧವಾಗಿತ್ತು. ಈ ನಿಯಮವಿರುತ್ತಾ ಸ್ತ್ರೀಯರಿಗೆ ನೇರವಾಗಿ ತರಬೇತಿ ನೀಡುವುದು ದುಃಸಾಧ್ಯವಾಗಿತ್ತು. ಆದುದರಿಂದ ಸ್ತ್ರೀಯರಲ್ಲಿ ಕೆಲಸ ಮಾಡಲು ಪ್ರವಾದಿವರ್ಯರಿಗೆ(ಸ) ಒಂದೇ ದಾರಿ ಉಳಿದಿತ್ತು. ಅದೆಂದರೆ ವಿವಿಧ ಪ್ರಾಯದ ಮತ್ತು ವಿವಿಧ ಪ್ರತಿಭೆಗಳಿರುವ ಅನೇಕ ಮಹಿಳೆಯರನ್ನು ವಿವಾಹವಾಗುವುದು ಮತ್ತು ಅವರಿಗೆ ನೇರವಾಗಿ ಶಿಕ್ಷಣ-ತರಬೇತಿ ನೀಡಿ ತಮ್ಮ ಕಾರ್ಯಗಳಿಗೆ ಅವರನ್ನು ಸಹಾಯಕರನ್ನಾಗಿ ಮಾಡುವುದು. ತರುವಾಯ ಅವರ ಮೂಲಕ ಹಳ್ಳಿ-ಪಟ್ಟಣಗಳ, ಯುವ, ಮಧ್ಯವಯಸ್ಕ ಹಾಗೂ ವಯೋವೃದ್ಧ ಮಹಿಳೆಯರಿಗೆ ಧರ್ಮದ ಶಿಕ್ಷಣ ನೀಡುವುದು ಮತ್ತು ನೀತಿ-ನಾಗರಿಕತೆಯ ಹೊಸ ತತ್ವಗಳನ್ನು ಕಲಿಸಿಕೊಡುವುದು.

ಅದಲ್ಲದೆ ಪ್ರವಾದಿಯವರಿಗೆ(ಸ) ಹಳೆಯ ಅಜ್ಞಾನಜನ್ಯ ಜೀವನ ವ್ಯವಸ್ಥೆಯನ್ನು ಅಳಿಸಿ ಅದರ ಸ್ಥಾನದಲ್ಲಿ ಇಸ್ಲಾಮೀ ಜೀವನ ವ್ಯವಸ್ಥೆಯನ್ನು ಕಾರ್ಯತಃ ಸ್ಥಾಪಿಸುವ ಹೊಣೆಗಾರಿಕೆಯನ್ನೂ ನೀಡಲಾಗಿತ್ತು. ಈ ಕರ್ತವ್ಯದ ಈಡೇರಿಕೆಯ ವೇಳೆ ಅಜ್ಞಾನಜನ್ಯ ವ್ಯವಸ್ಥೆಯ ವಾಹಕರೊಂದಿಗೆ ಯುದ್ಧ ಅನಿವಾರ್ಯವಾಗಿತ್ತು. ಈ ಸಂಘರ್ಷವು ಗೋತ್ರ ಪದ್ಧತಿಯು ತನ್ನ ವಿಶಿಷ್ಟ ಪರಂಪರೆಯೊಂದಿಗೆ ರೂಢಿಯಲ್ಲಿದ್ದ ಒಂದು ದೇಶದಲ್ಲಿ ನಡೆಯುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಇತರ ಮಾರ್ಗೋಪಾಯಗಳ ಜೊತೆಗೆ ಪ್ರವಾದಿವರ್ಯರು(ಸ) ವಿವಿಧ ಕುಟುಂಬಗಳಲ್ಲಿ ವಿವಾಹವಾಗಿ ಅನೇಕ ತರದ ಸ್ನೇಹ ಸಂಬಂಧವನ್ನು ಬಲಿಷ್ಠಗೊಳಿಸುವುದು ಮತ್ತು ಅನೇಕ ರೀತಿಯ ಶತ್ರುತ್ವವನ್ನು ಕೊನೆಗೊಳಿಸುವುದು ಅಗತ್ಯವಾಗಿತ್ತು. ಪ್ರವಾದಿ(ಸ) ಯಾವೆಲ್ಲ ಸ್ತ್ರೀಯರನ್ನು ಮದುವೆಯಾದರೋ ಅವರ ವೈಯಕ್ತಿಕ ಗುಣವಿಶೇಷತೆಗಳಲ್ಲದೆ ಅವರ ಆಯ್ಕೆಯಲ್ಲಿ ಈ ಔಚಿತ್ಯವೂ ಅಡಗಿತ್ತು. ಆಯಿಶಾ ಮತ್ತು ಹಫ್ಸಾರನ್ನು(ರ) ವಿವಾಹವಾಗುವ ಮೂಲಕ ಅಬೂಬಕರ್ ಮತ್ತು ಉಮರ್(ರ) ಅವರೊಂದಿಗಿನ ಸಂಬಂಧವನ್ನು ಇನ್ನಷ್ಟು ಸುಭದ್ರಗೊಳಿಸಿದರು. ಉಮ್ಮು ಸಲಮ(ರ) ಅಬೂ ಜಹಲ್ ಮತ್ತು ಖಾಲಿದ್ ಬಿನ್ ವಲೀದ್‌ರ ಮನೆತನದ ಸುಪುತ್ರಿಯಾಗಿದ್ದರು.

ಉಮ್ಮು ಹಬೀಬ(ರ) ಅಬೂ ಸುಫ್ಯಾನ್‌ರ ಮಗಳಾಗಿದ್ದರು. ಈ ಎಲ್ಲ ವಿವಾಹಗಳಿಂದಾಗಿ ಪ್ರಸ್ತುತ ಮನೆತನಗಳ ವಿರೋಧದ ಪ್ರಭಾವವನ್ನು ಕುಂಠಿತಗೊಳಿಸಿತು. ಮಾತ್ರವಲ್ಲ, ಉಮ್ಮು ಹಬೀಬಾರನ್ನು ವಿವಾಹವಾದ ನಂತರ ಅಬೂ ಸುಫ್ಯಾನ್ ಎಂದೂ ಪ್ರವಾದಿವರ್ಯರನ್ನು(ಸ) ಪ್ರತಿರೋಧಿಸಲು ಮುಂದೆ ಬರಲಿಲ್ಲ. ಸಫಿಯ್ಯಾ, ಜುವೇರಿಯಾ ಮತ್ತು ರೈಹಾನ(ರ) ಯಹೂದಿ ಗೋತ್ರಗಳ ಸ್ತ್ರೀಯರಾಗಿದ್ದರು. ಅವರನ್ನು ಸ್ವತಂತ್ರಗೊಳಿಸಿ ಅವರನ್ನು ವಿವಾಹವಾದ ನಂತರ ಪ್ರವಾದಿವರ್ಯರ(ಸ) ವಿರುದ್ಧ ಅವರ ಕಾರ್ಯಾಚರಣೆಗಳು ತಣ್ಣಗಾದವು. ಏಕೆಂದರೆ ಆ ಕಾಲದಲ್ಲಿ ಅರಬ್ ಸಂಪ್ರದಾಯದ ಪ್ರಕಾರ ಯಾವುದಾದರೊಂದು ಗೋತ್ರದ ಹೆಣ್ಣನ್ನು ಮದುವೆಯಾದವನು ಆಕೆಯ ಕುಟುಂಬದ ಅಳಿಯನೆಂದು ಮಾತ್ರ ಪರಿಗಣಿಸಲಾಗುತ್ತಿರಲಿಲ್ಲ. ಬದಲಾಗಿ, ಇಡೀ ಗೋತ್ರದ ಅಳಿಯನಾಗಿರುತ್ತಿದ್ದ. ಅಳಿಯನೊಂದಿಗೆ ಹೋರಾಡುವುದೆಂದರೆ ಬಹಳ ನಾಚಿಕೆಗೇಡಿನ ವಿಷಯವಾಗಿತ್ತು.

ಸಮಾಜದ ಸುಧಾರಣೆ ಮತ್ತು ಅಜ್ಞಾನಜನ್ಯ ಸಂಪ್ರದಾಯಗಳನ್ನು ಮುರಿಯುವುದೂ ಪ್ರವಾದಿವರ್ಯರ(ಸ) ಕರ್ತವ್ಯಗಳಲ್ಲಿ ಸೇರಿತ್ತು. ಇದೇ 'ಅಹ್‌ಝಾಬ್' ಅಧ್ಯಾಯದಲ್ಲಿ ವಿವರವಾಗಿ ತಿಳಿಸಿರುವಂತೆ, ಅದಕ್ಕಾಗಿ ಅವರು ಒಂದು ವಿವಾಹವಾದರು.

ಈ ಔಚಿತ್ಯಗಳಿಂದಾಗಿ, ಪ್ರವಾದಿಯವರಿಗೆ(ಸ) ವಿವಾಹದ ವಿಷಯದಲ್ಲಿ ಯಾವುದೇ ಜಟಿಲತೆಯಿಲ್ಲದಿರುವುದು ಅಗತ್ಯವಾಗಿತ್ತು. ಯಾವ ಮಹಾನ್ ಕಾರ್ಯವನ್ನು ಪ್ರವಾದಿವರ್ಯರ(ಸ) ಮೇಲೆ ಹೊರಿಸಲಾಗಿತ್ತೋ ಅದರ ಅಗತ್ಯಗಳಿಗನುಸಾರ ಅವರು ಎಷ್ಟು ಬೇಕಾದರೂ ವಿವಾಹ ಮಾಡಬಹುದಾಗಿತ್ತು.

ಈ ವಿವರಣೆಯಿಂದ, ಬಹುಪತ್ನಿತ್ವವು ಕೇವಲ ಕೆಲವು ವೈಯಕ್ತಿಕ ಅಗತ್ಯಗಳಿಗಾಗಿ ಮಾಡಬಹುದು. ಅದರ ಹೊರತು ಯಾವ ಉದ್ದೇಶಕ್ಕಾಗಿಯೂ ಅದು ಧರ್ಮಸಮ್ಮತವಲ್ಲವೆಂದು ಹೇಳುವವರ ತಪ್ಪು ಸ್ಪಷ್ಟವಾಗಿ ತಿಳಿಯುತ್ತದೆ. ಪತ್ನಿ ರೋಗಿಯಾಗಿದ್ದಳು, ಬಂಜೆಯಾಗಿದ್ದಳು, ಅವರಿಗೆ ಗಂಡು ಮಕ್ಕಳಿರಲಿಲ್ಲ ಅಥವಾ ಕೆಲವು ಅನಾಥರ ಸಂರಕ್ಷಣೆಯ ಸಮಸ್ಯೆ ಎದುರಾಗಿತ್ತು ಎಂಬ ಕಾರಣಕ್ಕಾಗಿ ಪ್ರವಾದಿ(ಸ) ಒಂದಕ್ಕಿಂತ ಹೆಚ್ಚು ವಿವಾಹವಾಗಿರಲಿಲ್ಲವೆಂಬುದು ವ್ಯಕ್ತ. ಇಂತಹ ಸೀಮಿತ ವೈಯಕ್ತಿಕ ಅಗತ್ಯಗಳನ್ನು ಬಿಟ್ಟು ಪ್ರವಾದಿವರ್ಯರು(ಸ) ಎಲ್ಲ ವಿವಾಹಗಳನ್ನು ಬೋಧನೆ-ಪ್ರಚಾರದ ಅಗತ್ಯಗಳಿಗಾಗಿ, ಸಮಾಜ ಸುಧಾರಣೆಗಾಗಿ ಅಥವಾ ಸಾಮೂಹಿಕ ಮತ್ತು ರಾಜಕೀಯ ಅಗತ್ಯಗಳಿಗಾಗಿ ಮಾಡಿದ್ದರು. ಇಂದು ಜನರು ಹೇಳುವಂತೆ, ಬಹುಪತ್ನಿತ್ವವನ್ನು ಈ ಕೆಲವು ವಿಶಿಷ್ಟ ಉದ್ದೇಶಗಳಿಗೆ ಸೀಮಿತಗೊಳಿಸಿಲ್ಲ ಮತ್ತು ಅಲ್ಲಾಹನ ಪ್ರವಾದಿಯು(ಸ) ಇನ್ನೂ ಅನೇಕ ಉದ್ದೇಶಗಳಿಗಾಗಿ ಅನೇಕ ವಿವಾಹಗಳನ್ನು ಮಾಡಿರುವಾಗ, ಕಾನೂನಿನಲ್ಲಿ ತನ್ನ ವತಿಯಿಂದ ಕೆಲವು ನಿರ್ಬಂಧಗಳನ್ನು ಹೇರಿ, ಅದು ಶರೀಅತ್‌ನ ನಿರ್ಬಂಧಗಳೆಂದು ಹೇಳುವ ಅಧಿಕಾರ ಬೇರಾರಿಗೂ ಇದೆಯೆ? ವಾಸ್ತವದಲ್ಲಿ ಈ ಎಲ್ಲ ನಿರ್ಬಂಧಗಳ ಮೂಲವು ಬಹುಪತ್ನಿತ್ವ ಪದ್ಧತಿಯೇ ಕೆಟ್ಟದೆಂಬ ಪಾಶ್ಚಾತ್ಯ ವಿಚಾರವಾಗಿದೆ. ಈ ವಿಚಾರದ ಆಧಾರದಲ್ಲೇ ಈ ನಿಷಿದ್ಧ ಕಾರ್ಯವು ಅನಿವಾರ್ಯ ಅಗತ್ಯಗಳಿರುವಾಗ ಮಾತ್ರ ಧರ್ಮಸಮ್ಮತವಾಗಬಲ್ಲುದು ಎಂಬ ಸಿದ್ಧಾಂತ ಹೊರಟಿತು. ಈ ವಿದೇಶಿ ವಿಚಾರದ ಮೇಲೆ ಇಸ್ಲಾಮಿನ ಖೋಟಾ ಮೊಹರು ಹಚ್ಚಲು ಎಷ್ಟೇ ಪ್ರಯತ್ನ ನಡೆದರೂ ಕುರ್‌ಆನ್, ಪ್ರವಾದಿಚರ್ಯೆ ಮತ್ತು ಇಡೀ ಮುಸ್ಲಿಮ್ ಸಮುದಾಯದ ಸಾಹಿತ್ಯಗಳಲ್ಲಿ ಅದು ಹುಡುಕಿದರೂ ಸಿಗಲಾರದು.

اَنْ تَقَرَّ اَعْيُنُهُنَّ وَلَا يَحْزَنَّ وَيَرْضَيْنَ بِمَآ اٰتَيْتَهُنَّ كُلُّهُنَّ ۗ وَاللّٰهُ يَعْلَمُ مَا فِيْ قُلُوْبِكُمْ ۗ وَكَانَ اللّٰهُ عَلِيْمًا حَلِيْمًا

ಕರೆಸಿಕೊಳ್ಳಲಿಕ್ಕೂ ನಿಮಗೆ ಅಧಿಕಾರ ಕೊಡಲಾಗುತ್ತದೆ. ಈ ವಿಷಯದಲ್ಲಿ ನಿಮಗೇನೂ ಆತಂಕವಿಲ್ಲ. ಇದರಿಂದ ಅವರ ಕಣ್ಣುಗಳು ತಣಿದಿರುವುದೆಂದೂ ಅವರು ಬೇಸರಿಸಲಾರರೆಂದೂ ನಿರೀಕ್ಷೆ ಇದೆ ಮತ್ತು ನೀವು ಅವರಿಗೆ ಕೊಟ್ಟುದರಲ್ಲಿ ಅವರೆಲ್ಲರೂ ತೃಪ್ತಿ ಪಟ್ಟುಕೊಂಡಿರುವರು.[91] ನಿಮ್ಮ ಹೃದಯಗಳಲ್ಲಿ ಇರುವುದೆಲ್ಲವನ್ನೂ ಅಲ್ಲಾಹನು

91. ಈ ಸೂಕ್ತದ ಉದ್ದೇಶವು ಪ್ರವಾದಿಯವರನ್ನು(ಸ), ಅವರು ಶಾಂತಚಿತ್ತದಿಂದ ತಮ್ಮ ಕೆಲಸಗಳನ್ನು ಮಾಡಲು ಅನುಕೂಲವಾಗುವಂತೆ, ಅವರ ಖಾಸಗಿ ಬದುಕಿನ ಸಂಕೀರ್ಣತೆಗಳಿಂದ ಪಾರುಮಾಡುವುದಾಗಿತ್ತು. ತಮ್ಮ ಪತ್ನಿಯರ ಪೈಕಿ ಯಾರೊಂದಿಗೆ ಹೇಗೆ ಬೇಕಾದರೂ ವರ್ತಿಸಬಹುದೆಂದು ಅಲ್ಲಾಹನೇ ಸ್ಪಷ್ಟ ಮಾತುಗಳಲ್ಲಿ ಅಧಿಕಾರ ನೀಡಿರುವಾಗ, ಈ ವಿಶ್ವಾಸಿ ಹೆಂಗಸರು ಪ್ರವಾದಿವರ್ಯರನ್ನು(ಸ) ಯಾವುದೇ ರೀತಿಯ ಕಳವಳಕ್ಕೀಡು ಮಾಡುವರು ಅಥವಾ ಪರಸ್ಪರ ನಾಮುಂದು ತಾಮುಂದು ಎಂಬ ಜಗಳ ಹುಟ್ಟಿಸಿ ಅವರನ್ನು ತೊಂದರೆ ಪಡಿಸುವರು ಎಂಬ ಅವಕಾಶವೇ ಇಲ್ಲವಾಯಿತು. ಆದರೆ ಅಲ್ಲಾಹನ ವತಿಯಿಂದ ಈ ಅಧಿಕಾರ ದೊರೆತ ನಂತರವೂ ಪ್ರವಾದಿ(ಸ) ತಮ್ಮ ಎಲ್ಲ ಪತ್ನಿಯರ ಜೊತೆ ಸಮಾನವಾಗಿ ವರ್ತಿಸಿ ನ್ಯಾಯಪಾಲಿಸಿದರು. ಒಬ್ಬರಿಗಿಂತ ಇನ್ನೊಬ್ಬರಿಗೆ ಪ್ರಾಶಸ್ತ್ಯ ನೀಡಲಿಲ್ಲ. ಸರದಿ ಪ್ರಕಾರ ಪ್ರತಿಯೋರ್ವ ಪತ್ನಿಯ ಮನೆಗೂ ಹೋಗುತ್ತಿದ್ದರು. ಹದೀಸ್ ವಿದ್ವಾಂಸರ ಪೈಕಿ ಅಬೂ ಝುರ್ರೀನ್ ಮಾತ್ರ ಪ್ರವಾದಿವರ್ಯರು(ಸ) ಕೇವಲ ನಾಲ್ವರು ಪತ್ನಿಯರ (ಆಯಿಶಾ, ಹಫ್ಸಾ, ಝೈನಬ್ ಮತ್ತು ಉಮ್ಮು ಸಲಮ) ಮನೆಗಳಿಗೆ ಸರದಿಯಂತೆ ಹೋಗುತ್ತಿದ್ದರೆಂದೂ ಉಳಿದ ಪತ್ನಿಯರಿಗೆ ಈ ಸರದಿ ನಿಶ್ಚಯಿಸಿರಲಿಲ್ಲವೆಂದೂ ಹೇಳುತ್ತಾರೆ. ಆದರೆ ಉಳಿದೆಲ್ಲ ಹದೀಸ್ ವಿದ್ವಾಂಸರೂ ಕುರ್‌ಆನ್ ವ್ಯಾಖ್ಯಾನಕಾರರೂ ಇದನ್ನು ನಿರಾಕರಿಸುತ್ತಾರೆ. ಪ್ರವಾದಿ(ಸ) ಈ ಅನುಮತಿಯ ಹೊರತಾಗಿಯೂ ಎಲ್ಲ ಪತ್ನಿಯರ ಬಳಿಗೆ ಸರದಿಯಂತೆ ಹೋಗುತ್ತಿದ್ದು ಎಲ್ಲರೊಂದಿಗೂ ಸಮಾನವಾಗಿ ವರ್ತಿಸುತ್ತಿದ್ದರೆಂದು ಅತ್ಯಂತ ಪ್ರಬಲ ವರದಿಗಳ ಆಧಾರ ನೀಡುತ್ತಾರೆ. ಬುಖಾರಿ, ಮುಸ್ಲಿಮ್, ನಸಾಈ, ಅಬೂ ದಾವೂದ್ ಮುಂತಾದವರು, ಹ. ಆಯಿಶಾರ ಒಂದು ಹೇಳಿಕೆಯನ್ನು ಹೀಗೆ ಉಲ್ಲೇಖಿಸುತ್ತಾರೆ- "ಈ ಸೂಕ್ತ ಅವತೀರ್ಣಗೊಂಡ ಬಳಿಕ ಪ್ರವಾದಿವರ್ಯರು(ಸ) ನಮ್ಮ ಪೈಕಿ ಯಾರದೇ ಸರದಿಯ ದಿನ ಇನ್ನೊಬ್ಬ ಪತ್ನಿಯ ಬಳಿಗೆ ಹೋಗುವುದಾದರೆ ಅವರಿಂದ ಅನುಮತಿ ಪಡೆಯುತ್ತಿದ್ದರು." ತನ್ನೊಂದಿಗೆ ಆಯಿಶಾ(ರ) ಹೀಗೆ ಹೇಳಿರುವುದಾಗಿ ಉರ್ವಾ ಬಿನ್ ಝುಬೈರ್‌ರ ವರದಿಯನ್ನು ಅಬೂಬಕರ್ ಜಸ್ಸಾಸ್ ಹೀಗೆ ಉಲ್ಲೇಖಿಸುತ್ತಾರೆ- ಪ್ರವಾದಿಯವರು(ಸ) ಸರದಿಯ ವಿಷಯದಲ್ಲಿ ನಮ್ಮ ಪೈಕಿ ಯಾರಿಗೂ ಪ್ರಾಶಸ್ತ್ಯ ನೀಡುತ್ತಿರಲಿಲ್ಲ. ಪ್ರವಾದಿ(ಸ) ಎಲ್ಲ ಪತ್ನಿಯರ ಮನೆಗೆ ಹೋಗದೆ ಇರುವ ದಿನ ಬಹಳ ಕಡಿಮೆ. ಆದರೆ ಯಾವ ಪತ್ನಿಯ ಸರದಿಯ ದಿನವಾಗಿರುತ್ತದೋ ಅಂದು ಆಕೆಯ ಹೊರತು ಬೇರೆ ಪತ್ನಿಯರನ್ನು ಮುಟ್ಟುತ್ತಿರಲಿಲ್ಲ. ಆಯಿಶಾರಿಂದಲೇ ವರದಿಯಾದ ಇನ್ನೊಂದು ವರದಿ ಹೀಗಿದೆ- ಪ್ರವಾದಿ(ಸ) ತಮ್ಮ ಕೊನೆಯ ಕಾಯಿಲೆಯ ವೇಳೆ ರೋಗ ಉಲ್ಬಣವಾಗಿ ನಡೆದಾಡಲು ಕಷ್ಟವಾದಾಗ, ತನ್ನನ್ನು ಆಯಿಶಾಳ ಮನೆಯಲ್ಲಿರಿಸುವಂತೆ ಇತರ ಪತ್ನಿಯರ ಅನುಮತಿ

يَحِلُّ لَكَ النِّسَاءُ مِنْ بَعْدُ وَلَا أَنْ تَبَدَّلَ بِهِنَّ مِنْ أَزْوَاجٍ وَلَوْ أَعْجَبَكَ

ಅರಿಯುತ್ತಾನೆ ಮತ್ತು ಅಲ್ಲಾಹ್ ಸರ್ವಜ್ಞನೂ ಸಹನಶೀಲನೂ ಆಗಿರುತ್ತಾನೆ.[92] ಇನ್ನು ಮುಂದೆ ನಿಮಗೆ ಇತರ ಸ್ತ್ರೀಯರು 'ಹಲಾಲ್'(ಧರ್ಮಸಮ್ಮತ) ಆಗಿರುವುದಿಲ್ಲ. ಇತರ ಪತ್ನಿಯರನ್ನು ಅವರ ಸೌಂದರ್ಯವು ನಿಮಗೆ ಎಷ್ಟೇ ಮೆಚ್ಚುಗೆಯಾಗಿದ್ದರೂ (ಇವರ

---

ಕೇಳಿದರು. ಎಲ್ಲರೂ ಅನುಮತಿ ನೀಡಿದಾಗ ಪ್ರವಾದಿವರ್ಯರು(ಸ) ತಮ್ಮ ಕೊನೆಯ ದಿನಗಳನ್ನು ಆಯಿಶಾರ ಮನೆಯಲ್ಲಿ ಕಳೆದರು. ಇಮಾಮ್ ಝುಹ್ರೀಯವರ ಹೇಳಿಕೆಯನ್ನು ಇಬ್ನು ಅಬೀಹಾತಿಮ್ ಹೀಗೆ ಉಲ್ಲೇಖಿಸುತ್ತಾರೆ- ಪ್ರವಾದಿಯವರು(ಸ) ಯಾವ ಪತ್ನಿಯನ್ನೂ ಸರದಿಯಿಂದ ಹೊರತು ಪಡಿಸಿದ್ದಾರೆಂಬುದಕ್ಕೆ ಪುರಾವೆಯಿಲ್ಲ. ಆದರೆ ಹ. ಸೌದಾ(ರ) ಮಾತ್ರ ತನ್ನ ಸರದಿಯನ್ನು ಸ್ವಇಚ್ಛೆಯಿಂದ ಹ. ಆಯಿಶಾರಿಗೆ ನೀಡಿದ್ದರು. ಏಕೆಂದರೆ ಅವರು ವಯೋವೃದ್ಧೆಯಾಗಿದ್ದರು.

ಇಲ್ಲಿ, ಅಲ್ಲಾಹನು ತನ್ನ ಪ್ರವಾದಿಗೆ ಈ ಸೂಕ್ತದಲ್ಲಿ ವೃಥಾ ರಿಯಾಯಿತಿ ತೋರಿ ಪ್ರವಾದಿ ಪತ್ನಿಯರ ಹಕ್ಕುಚ್ಯುತಿ ಮಾಡಿದ್ದಾನೆಂದು, ಯಾರೂ ತಪ್ಪು ತಿಳಿದು ಕೊಳ್ಳಬಾರದು. ಯಾವ ಮಹಾನ್ ಉದ್ದೇಶಕ್ಕಾಗಿ ಪ್ರವಾದಿಯವರನ್ನು(ಸ) ಬಹುಪತ್ನಿತ್ವದ ಸಾಮಾನ್ಯ ನಿಯಮದಿಂದ ಹೊರತು ಪಡಿಸಲಾಗಿತ್ತೋ ಅದರ ಪ್ರಕಾರವೇ ಅವರಿಗೆ ಕೌಟುಂಬಿಕ ಜೀವನದಲ್ಲಿ ಶಾಂತಿ ಒದಗಿಸಬೇಕಾದುದೂ ಅವರನ್ನು ಎಲ್ಲ ಜಂಜಡಗಳಿಂದ ರಕ್ಷಿಸಬೇಕಾದುದೂ ಅಗತ್ಯವಾಗಿತ್ತು. ಈ ನಿಟ್ಟಿನಲ್ಲಿ ಆ ಮಹಿಳೆಯರಿಗೆ ಪ್ರವಾದಿಯವರಂತಹ(ಸ) ಅತ್ಯುನ್ನತ ವ್ಯಕ್ತಿಯ ಪತ್ನಿಯರಾಗುವ ಸೌಭಾಗ್ಯ ದೊರೆತುದು ಮಾತ್ರವಲ್ಲ, ಅದರಿಂದಾಗಿ ಅವರಿಗೆ ಲೋಕಾಂತ್ಯದ ವರೆಗೆ ಮಾನವ ಕೋಟಿಯ ಮೋಕ್ಷಕ್ಕೆ ಕಾರಣವಾಗುವಂತಹ ಅತ್ಯುನ್ನತ ಕಾರ್ಯದಲ್ಲಿ ಪ್ರವಾದಿವರ್ಯರ(ಸ) ಸಹಕಾರಿಗಳಾಗುವ ಅವಕಾಶವೂ ದೊರೆಯಿತು. ಈ ಉದ್ದೇಶಕ್ಕಾಗಿ ಯಾವ ರೀತಿಯಲ್ಲಿ ಪ್ರವಾದಿ(ಸ) ತ್ಯಾಗ ಬಲಿದಾನಗಳನ್ನು ನೀಡುತ್ತಿದ್ದರೋ, ಪ್ರವಾದಿಯವರ(ಸ) ಎಲ್ಲ ಸಂಗಾತಿಗಳು ತಮ್ಮ ಶಕ್ತ್ಯಾನುಸಾರ ಹೇಗೆ ತ್ಯಾಗಗಳನ್ನು ಸಹಿಸುತ್ತಿದ್ದರೋ ಅದೇ ರೀತಿಯ ತ್ಯಾಗಗಳನ್ನು ಸಹಿಸಬೇಕಾದುದು ಪ್ರವಾದಿ ಪತ್ನಿಯರ ಕರ್ತವ್ಯವೂ ಆಗಿತ್ತು. ಆದುದರಿಂದ ಅಲ್ಲಾಹನ ಈ ತೀರ್ಮಾನವನ್ನು ಪ್ರವಾದಿವರ್ಯರ(ಸ) ಎಲ್ಲ ಪತ್ನಿಯರೂ ಸಸಂತೋಷ ಸ್ವೀಕರಿಸಿದರು.

92. ಇದು ಪ್ರವಾದಿಪತ್ನಿಯರಿಗೂ ಇತರ ಎಲ್ಲ ಜನರಿಗೂ ನೀಡಿದ ಎಚ್ಚರಿಕೆಯಾಗಿದೆ. ಅಲ್ಲಾಹನ ಈ ಆಜ್ಞೆ ಬಂದ ಬಳಿಕ ಮನಸ್ಸಿನೊಳಗಾದರೂ ಅದರ ಬಗ್ಗೆ ಅಸಮಾಧಾನ ತಾಳಿದರೆ ಅಲ್ಲಾಹನ ಹಿಡಿತದಿಂದ ಪಾರಾಗಲಾರರೆಂಬುದು ಪ್ರವಾದಿ ಪತ್ನಿಯರಿಗೆ ಎಚ್ಚರಿಕೆ. ಪ್ರವಾದಿ(ಸ) ಅವರ ದಾಂಪತ್ಯ ಜೀವನದ ಕುರಿತು ಯಾವುದೇ ರೀತಿಯ ಸಂದೇಹವನ್ನು ತಮ್ಮ ಮನಸ್ಸಿನೊಳಗಾದರೂ ಇರಿಸಿದರೆ ಅಥವಾ ಯಾವುದೇ ದುರ್ಭಾವನೆಯನ್ನು ಬೆಳೆಸಿದರೆ ಅವರ ಈ ಮನಸ್ಸಿನ ಕಳ್ಳತನವು ಅಲ್ಲಾಹನಿಂದ ಮರೆಯಾಗಿರದು. ಅದರೊಂದಿಗೆ, ಅಲ್ಲಾಹನು ಸಹನಶೀಲನೆಂದು ಪ್ರಸ್ತಾವಿಸುವ ಮೂಲಕ ಪ್ರವಾದಿಯವರ(ಸ) ಅವಹೇಳನದ ವಿಚಾರವು ಕೂಡಾ ಕಠಿಣ ಶಿಕ್ಷೆಗೆ ಕಾರಣವಾಗುತ್ತದಾದರೂ ಅಂತಹ ದುರ್ಭಾವನೆ ಯಾರಲ್ಲಾದರೂ ಮೂಡಿದಾಗ ಅದನ್ನು ಮನಸ್ಸಿನಿಂದ ತೆಗೆದೆಸೆದರೆ ಅಲ್ಲಾಹನಿಂದ ಕ್ಷಮೆಯನ್ನು ನಿರೀಕ್ಷಿಸ ಬಹುದೆಂದು ಜನರಿಗೆ ತಿಳಿಯ ಪಡಿಸಲಾಗಿದೆ.

حُسْنُهُنَّ إِلَّا مَا مَلَكَتْ يَمِينُكَ وَكَانَ اللَّهُ عَلَىٰ كُلِّ شَيْءٍ رَقِيبًا ﴿٥٢﴾ يَا أَيُّهَا

ಸ್ಥಾನದಲ್ಲಿ) ತರುವ ಅನುಮತಿ ಇಲ್ಲ.[93] ಆದರೆ ದಾಸಿಯರನ್ನು ತರಲು ಅನುಮತಿ ಇದೆ.[94] ಅಲ್ಲಾಹನು ಸಕಲ ವಸ್ತುಗಳ ಮೇಲ್ವಿಚಾರಕನಾಗಿರುತ್ತಾನೆ.

---

93. ಈ ಸೂಚನೆಗೆ ಎರಡು ಅರ್ಥಗಳಿವೆ. ಮೇಲಿನ 50ನೆಯ ಸೂಕ್ತದಲ್ಲಿ ಯಾವೆಲ್ಲ ಹೆಂಗಸರನ್ನು ಪ್ರವಾದಿವರ್ಯರಿಗೆ(ಸ) ಹಲಾಲ್ ಮಾಡಲಾಗಿದೆಯೋ ಅದಕ್ಕೆ ಹೊರತಾದ ಯಾವ ಸ್ತ್ರೀಯೂ ಅವರಿಗೆ ಹಲಾಲ್ ಅಲ್ಲ ಎಂಬುದು ಒಂದು ಅರ್ಥ. ಎರಡನೆಯ ಅರ್ಥವೇನೆಂದರೆ ಪ್ರವಾದಿ ಪತ್ನಿಯರು ಯಾವುದೇ ಕಷ್ಟಕಾಲದಲ್ಲೂ ಪತಿಯೊಂದಿಗೇ ಇರಲು ಸಸಂತೋಷ ಒಪ್ಪಿದ್ದಾರೆ. ಪರಲೋಕ ಸುಖಕ್ಕಾಗಿ ಈ ಲೋಕದ ವೈಭವವನ್ನು ಕಡೆಗಣಿಸಿದ್ದಾರೆ. ಅಷ್ಟೇ ಅಲ್ಲ, ಅವರೊಂದಿಗೆ ಪ್ರವಾದಿ(ಸ) ಯಾವ ರೀತಿಯಲ್ಲಿ ವರ್ತಿಸಿದರೂ ಆಗಬಹುದು ಎಂಬ ಬಗ್ಗೆಯೂ ಸಂತೃಪ್ತರಾಗಿದ್ದಾರೆ. ಆದುದರಿಂದ ಇನ್ನು ಅವರ ಪೈಕಿ ಯಾರಿಗೂ ತಲಾಕ್ ಕೊಟ್ಟು ಅವರ ಬದಲಿಗೆ ಇನ್ನೋರ್ವ ಪತ್ನಿಯನ್ನು ತರುವುದು ಅವರ(ಸ) ಪಾಲಿಗೆ ಧರ್ಮಸಮ್ಮತವಲ್ಲ.

94. ಈ ಸೂಕ್ತವು ಪತ್ನಿಯರಲ್ಲದೆ ಅಧೀನವಿರುವ ದಾಸಿಯರೊಂದಿಗೂ ಸಂಸರ್ಗ ನಡೆಸಬಹುದೆಂದೂ ಅದಕ್ಕೆ ಯಾವುದೇ ಸಂಖ್ಯಾಮಿತಿಯಿಲ್ಲವೆಂದೂ ಸ್ಪಷ್ಟ ಪಡಿಸುತ್ತದೆ. 'ಅನ್ನಿಸಾ' ಅಧ್ಯಾಯದ 3ನೆಯ ಸೂಕ್ತ, ಅಲ್ ಮೂಮಿನೂನ್‌ನ 6 ಮತ್ತು ಅಲ್ ಮಆರಿಜ್‌ನ 30ನೆಯ ಸೂಕ್ತದಲ್ಲೂ ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ. ಈ ಎಲ್ಲ ಸೂಕ್ತಗಳಲ್ಲೂ ಅಧೀನವಿರುವ ದಾಸಿಯರನ್ನು ಪತ್ನಿಯರಿಗಿಂತ ಪ್ರತ್ಯೇಕವಾಗಿ ಒಂದು ವರ್ಗವೆಂಬ ನೆಲೆಯಲ್ಲಿ ವಿವರಿಸಿ, ಅವರೊಂದಿಗೆ ದಾಂಪತ್ಯ ಸಂಬಂಧವನ್ನು ಇರಿಸುವುದು ಧರ್ಮಸಮ್ಮತವೆಂದು ಹೇಳಲಾಗಿದೆ. ಅಷ್ಟೇ ಅಲ್ಲ, ಅನ್ನಿಸಾ ಅಧ್ಯಾಯದ 3ನೆಯ ಸೂಕ್ತದಲ್ಲಿ ಪತ್ನಿಯರ ಸಂಖ್ಯೆಯನ್ನು ನಾಲ್ಕಕ್ಕೆ ಸೀಮಿತಗೊಳಿಸಲಾಗಿದೆ. ಆದರೆ ಅಲ್ಲಿ ಅಲ್ಲಾಹನು ಅಧೀನವಿರುವ ಸ್ತ್ರೀಯರಿಗೆ ಯಾವುದೇ ಸಂಖ್ಯೆಯನ್ನು ನಿಶ್ಚಯಿಸಲಿಲ್ಲ. ಇತರ ಸಂಬಂಧಿತ ಸೂಕ್ತಗಳಲ್ಲೂ ಅಂತಹ ಸೂಚನೆಗಳಿಲ್ಲ. ಇಲ್ಲಿ ಪ್ರವಾದಿಯವರನ್ನು(ಸ) ಅಭಿಸಂಬೋಧಿಸಿ, ನಿಮಗೆ ಇನ್ನು ಬೇರೆ ಸ್ತ್ರೀಯರನ್ನು ವಿವಾಹವಾಗುವುದು ಅಥವಾ ಇರುವ ಪತ್ನಿಯರ ಪೈಕಿ ಯಾರಿಗಾದರೂ ತಲಾಕ್ ಕೊಟ್ಟು ಬೇರೆ ಪತ್ನಿಯನ್ನು ತರುವುದು ಹಲಾಲ್ ಅಲ್ಲ; ಆದರೆ ಅಧೀನದಲ್ಲಿರುವ ಹೆಂಗಸರು ಹಲಾಲ್ ಆಗಿದ್ದಾರೆ ಎಂದು ಹೇಳಲಾಗುತ್ತದೆ. ಇದರಿಂದ ಅಧೀನದಲ್ಲಿರುವ ಹೆಂಗಸರಿಗೆ ಸಂಖ್ಯಾಮಿತಿಯಿಲ್ಲವೆಂದು ಸ್ಪಷ್ಟವಾಗುತ್ತದೆ.

ಆದರೆ, ಅಲ್ಲಾಹನ ಶರೀಅತ್ ಧನಿಕ ವರ್ಗದ ಜನರಿಗೆ ಲೆಕ್ಕಮಿತಿಯಿಲ್ಲದಷ್ಟು ದಾಸಿಯರನ್ನು ಖರೀದಿಸಿ ತಂದು ಮೋಜು ಮಾಡಲು ಅವಕಾಶ ನೀಡುತ್ತದೆ ಎಂದು ಇದರ ಅರ್ಥವಲ್ಲ. ವಾಸ್ತವದಲ್ಲಿ ಇದು ವಿಷಯಾಸಕ್ತರು ಮಾಡಿರುವ ಕಾನೂನಿನ ದುರುಪಯೋಗವಾಗಿದೆ. ಕಾನೂನನ್ನು ಮಾನವರ ಸೌಲಭ್ಯಕ್ಕಾಗಿ ಮಾಡಲಾಗಿತ್ತೇ ಹೊರತು ಅದನ್ನು ದುರುಪಯೋಗ ಪಡಿಸಲಿಕ್ಕಾಗಿ ಅಲ್ಲ. ಅದರ ಉದಾಹರಣೆ ಹೀಗಿದೆ. ಶರೀಅತ್ ಒಬ್ಬ ಪುರುಷನಿಗೆ ನಾಲ್ಕು ಪತ್ನಿಯರನ್ನು ಹೊಂದುವ ಅನುಮತಿ ನೀಡುತ್ತದೆ. ಓರ್ವ ಪತ್ನಿಗೆ ತಲಾಕ್ ಕೊಟ್ಟು ಇನ್ನೋರ್ವ ಪತ್ನಿಯನ್ನು ತರುವ ಅಧಿಕಾರವನ್ನೂ ನೀಡುತ್ತದೆ. ಮಾನವನ ಅಗತ್ಯಗಳನ್ನು ಮುಂದಿಟ್ಟು ಈ ಕಾನೂನನ್ನು ಮಾಡಲಾಗಿತ್ತು. ಈಗ ಒಬ್ಬ ವ್ಯಕ್ತಿಯು ಭೋಗವಿಲಾಸಕ್ಕಾಗಿ ನಾಲ್ಕು ಪತ್ನಿಯರನ್ನು ಕೆಲವು ಸಮಯದ ವರೆಗೆ

ذِيْنَ اٰمَنُوْا لَا تَدْخُلُوْا بُيُوْتَ النَّبِيِّ اِلَّآ اَنْ يُّؤْذَنَ لَكُمْ اِلٰى طَعَامٍ غَيْرَ
ظِرِيْنَ اِنٰىهُ وَلٰكِنْ اِذَا دُعِيْتُمْ فَادْخُلُوْا فَاِذَا طَعِمْتُمْ فَانْتَشِرُوْا وَلَا

**(53-54)** ಸತ್ಯವಿಶ್ವಾಸಿಗಳೇ, ಪ್ರವಾದಿಯ ಮನೆಗಳೊಳಗೆ ಅನುಮತಿಯಿಲ್ಲ ಪ್ರವೇಶಿಸಬೇಡಿರಿ.[95] ಊಟದ ಸಮಯವನ್ನು ಕಾದುಕೊಂಡಿರಲೂ ಬೇಡಿರಿ. ನಿಮ್ಮ

---

ಹೊಂದಿ ಅನಂತರ ಅವರಿಗೆ ತಲಾಕ್ ಕೊಟ್ಟು, ಇನ್ನು ನಾಲ್ವರು ಪತ್ನಿಯರ ಒಂದು ದಂಡನ ತರುತ್ತಾ ಹೋದರೆ ಇದು ಕಾನೂನಿನ ಅನುಮತಿಯ ದುರುಪಯೋಗವಾಗಿದೆ. ಇದರ ಹೊಣೆಯ ಆ ವ್ಯಕ್ತಿಯ ಮೇಲೆ ಬೀಳುತ್ತದೆಯೇ ಹೊರತು ಅಲ್ಲಾಹನ ಶರೀಅತ್ ಅದಕ್ಕೆ ಹೊಣೆಯಲ್ಲ ಅದೇ ರೀತಿಯಲ್ಲಿ ಯುದ್ಧದಲ್ಲಿ ಸೆರೆ ಸಿಕ್ಕಿದ ಹೆಂಗಸರನ್ನು ಅವರ ಬಳಿಯಲ್ಲಿರುವ ಮುಸ್ಲಿಮ ಕೈದಿಗಳ ಬದಲಿಗೆ ನೀಡಲು ಅಥವಾ ಪರಿಹಾರ ಧನ ಪಡೆದು ಅವರನ್ನು ಬಿಡುಗಡೆಗೊಳಿಸಲ ಸಿದ್ಧವಿಲ್ಲವೆಂದಾದರೆ ಶರೀಅತ್ ಅಂತಹ ಸ್ತ್ರೀಯರನ್ನು ದಾಸಿಯರನ್ನಾಗಿ ಮಾಡಲು ಅನುಮ ನೀಡಿದೆ. ಅಂತಹ ಹೆಂಗಸರನ್ನು ಸರಕಾರವು ಯಾರ ಅಧೀನಕ್ಕೆ ನೀಡುತ್ತದೋ ಆ ವ್ಯಕ್ತಿಗಳಿಗೆ ಸ್ತ್ರೀಯರೊಂದಿಗೆ ಸಂಸರ್ಗ ನಡೆಸುವ ಅಧಿಕಾರವನ್ನೂ ನೀಡಿದೆ. ಅವರು ಸಮಾಜದ ನೈತಿಕ ಸ್ವಾಸ್ಥ್ಯ ಮಾರಕವಾಗಬಾರದೆಂಬುದೇ ಇದರ ಉದ್ದೇಶವಾಗಿದೆ. ಇನ್ನು ಯುದ್ಧದಲ್ಲಿ ಸೆರೆಯಾಳಾಗುವ ಜನ ಸಂಖ್ಯೆ ಎಷ್ಟೆಂದು ನಿಗದಿಪಡಿಸಲು ಸಾಧ್ಯವಿಲ್ಲದ ಕಾರಣ ಒಬ್ಬ ವ್ಯಕ್ತಿ ಕಾನೂನು ಪ್ರಕಾರ ಒಂದ ಸಮಯದಲ್ಲಿ ಎಷ್ಟು ದಾಸ-ದಾಸಿಯರನ್ನು ಇಟ್ಟುಕೊಳ್ಳಬಹುದೆಂದು ಮಿತಿ ಹೇರುವುದ ಸಾಧ್ಯವಿರಲಿಲ್ಲ. ಓರ್ವ ಗುಲಾಮ ಅಥವಾ ದಾಸಿಗೆ ತನ್ನ ಮಾಲಕನೊಂದಿಗೆ ಸರಿ ಹೊಂದದಿದ್ದಲ್ಲಿ ಇನ್ನೊಬ್ಬ ವ್ಯಕ್ತಿಯ ಮಾಲಕತ್ವಕ್ಕೆ ವರ್ಗಾಯಿಸಲಿಕ್ಕಾಗಿ ಮತ್ತು ಒಬ್ಬನೇ ವ್ಯಕ್ತಿಯ ಶಾಶ್ವತ ಮಾಲಕತ್ವದಲ್ಲಿದ್ದರೆ ಮಾಲಕನಿಗೂ ದಾಸರಿಗೂ ಯಾತನೆಯಾಗಿ ಪರಿಣಮಿಸಬಾರದೆಂದು ದಾಸ ದಾಸಿಯರ ಕ್ರಯವಿಕ್ರಯವನ್ನೂ ಧರ್ಮಸಮ್ಮತಗೊಳಿಸಲಾಯಿತು. ಶರೀಅತ್ ಈ ಎಲ್ಲ ನಿಯಮ ನಿಬಂಧನೆಗಳನ್ನು ಮಾನವರ ಸ್ಥಿತಿಗತಿ ಮತ್ತು ಅಗತ್ಯಗಳನ್ನು ಪರಿಗಣಿಸಿ ಸೌಲಭ್ಯಕ್ಕಾಗಿ ಮಾಡಿತ್ತು. ಅದನ್ನು ಧನಿಕ ವರ್ಗದವರು ತಮ್ಮ ಭೋಗವಿಲಾಸಕ್ಕಾಗಿ ದುರುಪಯೋಗ ಪಡಿಸಿದರೆ ಅದ ಆರೋಪವು ಅವರ ಮೇಲೆ ಬೀಳುತ್ತದೆಯೇ ಹೊರತು ಶರೀಅತ್‌ನ ಮೇಲಲ್ಲ.

95. ಇದು ಸುಮಾರು ಒಂದು ವರ್ಷದ ನಂತರ 'ಅನ್ನೂರ್' ಅಧ್ಯಾಯದ 27ನೆಯ ಸೂಕ್ತದಲ್ಲಿ ನೀಡಲಾದ ಸಾರ್ವತ್ರಿಕ ಆಜ್ಞೆಯ ಪೀಠಿಕೆಯಾಗಿದೆ. ಪ್ರಾಚೀನ ಕಾಲದಲ್ಲಿ ಅರಬರು ಪರಸ್ಪರರ ಮನೆಗಳಿಗೆ ಸಂಕೋಚವಿಲ್ಲದೆ ನುಗ್ಗುತ್ತಿದ್ದರು. ಒಬ್ಬನು ಇನ್ನೊಬ್ಬನನ್ನು ಭೇಟಿಯಾಗಬೇಕಿದ್ದರೆ ಮನೆಬಾಗಿಲಲ್ಲಿ ನಿಂತು ಕರೆಯುವ ಮತ್ತು ಅನುಮತಿ ಪಡೆಯುವ ಪದ್ಧತಿಯಿರಲಿಲ್ಲ. ಒಳಹೊಕ್ಕು ಸ್ತ್ರೀಯರು ಮತ್ತು ಮಕ್ಕಳೊಂದಿಗೆ, ಮನೆಯೊಡೆಯ ಮನೆಯಲ್ಲಿದ್ದಾನೆಯೇ ಎಂದು ಕೇಳುತ್ತಿದ್ದರು. ಈ ಅಜ್ಞಾನಜನ್ಯ ಕ್ರಮವು ಅನೇಕ ಕೆಡುಕುಗಳಿಗೆ ಕಾರಣವಾಗುತ್ತಿತ್ತು. ಕೆಲವೊಮ್ಮೆ ಅದರಿಂದ ಭೀಕರ ನೈತಿಕ ಕೆಡುಕುಗಳಿಗೂ ನಾಂದಿ ಹಾಕುತ್ತಿತ್ತು. ಆದುದರಿಂದ ಪ್ರವಾದಿಯವರ(ಸ) ಮನೆಗಳಿಗೆ ಯಾವ ವ್ಯಕ್ತಿಯೂ- ಆತ ಆಪ್ತ ಮಿತ್ರನಾಗಿರಲಿ ಅಥವಾ ಹತ್ತಿರದ ಸಂಬಂಧಿಕನೇ ಆಗಿರಲಿ- ಅನುಮತಿಯಿಲ್ಲದೆ ಒಳಹೋಗಬಾರದೆಂಬ ನಿಬಂಧನೆಯನ್ನು

مُسْتَأْنِسِينَ لِحَدِيثٍ ۚ إِنَّ ذَٰلِكُمْ كَانَ يُؤْذِي النَّبِيَّ فَيَسْتَحْيِي مِنكُمْ ۖ وَاللَّهُ
لَا يَسْتَحْيِي مِنَ الْحَقِّ ۚ وَإِذَا سَأَلْتُمُوهُنَّ مَتَاعًا فَاسْأَلُوهُنَّ مِن وَرَاءِ حِجَابٍ ۚ

ಊಟಕ್ಕೆ ಕರೆದರೆ ಖಂಡಿತ ಹೋಗಿರಿ.[96] ಆದರೆ ಊಟ ಮಾಡಿಯಾದೊಡನೆ ಚದರಿ ಬಿಡಿರಿ, ಮಾತಾಡುತ್ತ ಕುಳಿತಿರಬೇಡಿರಿ.[97] ನಿಮ್ಮ ಈ ವರ್ತನೆಗಳು ಪ್ರವಾದಿಗೆ ತೊಂದರೆ ಕೊಡುತ್ತಿವೆ. ಆದರೆ ಅವರು ಸಂಕೋಚದಿಂದ ಏನೂ ಹೇಳುವುದಿಲ್ಲ ಮತ್ತು ಅಲ್ಲಾಹನು

---

ಹಾಕಲಾಯಿತು. ಅನಂತರ 'ಅನ್ನೂರ್' ಅಧ್ಯಾಯದಲ್ಲಿ ಈ ನಿಬಂಧನೆಯನ್ನು ಎಲ್ಲ ಮುಸ್ಲಿಮರ ಮನೆಗಳಿಗೂ ಅನ್ವಯಿಸಿ ಸಾರ್ವತ್ರಿಕ ಆಜ್ಞೆ ನೀಡಲಾಯಿತು.

96. ಇದು ಈ ಕುರಿತು ಎರಡನೆಯ ಆಜ್ಞೆಯಾಗಿದೆ. ಅರಬರಲ್ಲಿ ಹರಡಿಕೊಂಡಿದ್ದ ಅಸಭ್ಯ ದುರಭ್ಯಾಸಗಳ ಪೈಕಿ ಒಂದು, ಅವರು ತಮ್ಮ ಸ್ನೇಹಿತರ ಅಥವಾ ಭೇಟಿಯಾಗುವವರ ಮನೆಗಳಿಗೆ ಅವರ ಊಟದ ಸಮಯವನ್ನೇ ನೋಡಿ ಹೋಗುತ್ತಿದ್ದರು ಅಥವಾ ಊಟದ ಸಮಯವಾಗುವ ವರೆಗೂ ಅಲ್ಲೇ ಕುಳಿತಿರುತ್ತಿದ್ದರು. ಇದರಿಂದಾಗಿ ಮನೆಯ ಯಜಮಾನ ಹೆಚ್ಚಾಗಿ ಸಂಕಟಕ್ಕೆ ಗುರಿಯಾಗುತ್ತಿದ್ದ. ಇದು ನಮ್ಮ ಊಟದ ಸಮಯ, ನೀವು ಹೋಗಿರಿ ಎಂದು ಹೇಳಿದರೆ ಅಸಭ್ಯತನವಾದೀತು. ಉಣಿಸಿದರೆ ಹಠಾತ್ತನೆ ಬಂದು ಬಿಟ್ಟ ಎಷ್ಟು ಮಂದಿಗೆಂದು ಉಣಿಸುವುದು? ಎಷ್ಟು ಮಂದಿ ಬಂದರೂ ಅವರಿಗೆಲ್ಲ ಕೂಡಲೇ ಊಟದ ವ್ಯವಸ್ಥೆ ಮಾಡುವುದು ಎಲ್ಲರಿಗೆ ಸಾಧ್ಯವಾಗುವ ವಿಷಯವಲ್ಲ. ಅಲ್ಲಾಹನು ಈ ಅಸಭ್ಯ ಅಭ್ಯಾಸವನ್ನು ನಿಷೇಧಿಸಿದನು. ಯಾರದಾದರೂ ಮನೆಗೆ ಊಟಕ್ಕೆ ಹೋಗುವುದಾದರೆ ಮನೆಯ ಯಜಮಾನ ಆಮಂತ್ರಿಸಿದರೆ ಮಾತ್ರ ಹೋಗಬೇಕೆಂದು ಆಜ್ಞಾಪಿಸಿದನು. ಈ ಆಜ್ಞೆಯು ಕೇವಲ ಪ್ರವಾದಿಯವರ(ಸ) ಮನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಬದಲಾಗಿ ಮುಸ್ಲಿಮರಲ್ಲಿ ಈ ಸಂಸ್ಕಾರವು ಕಟ್ಟಳೆಯಾಗಲಿ ಎಂಬ ಉದ್ದೇಶದಿಂದ ಪ್ರವಾದಿವರ್ಯರ(ಸ) ಈ ಮಾದರೀ ಮನೆಯಲ್ಲಿ ಪ್ರಸ್ತುತ ನಿಬಂಧನೆಯನ್ನು ಜಾರಿಗೊಳಿಸಲಾಯಿತು.

97. ಇದು ಇನ್ನೊಂದು ಅಸಭ್ಯ ಅಭ್ಯಾಸದ ಸುಧಾರಣೆಯಾಗಿದೆ. ಕೆಲವರು ಊಟಕ್ಕೆ ಅವರನ್ನು ಆಮಂತ್ರಿಸಿದಾಗ ಊಟ ಮಾಡಿಯಾದ ನಂತರ ಅಲ್ಲೇ ಕುಳಿತು ಹರಟೆ ಹೊಡೆಯಲಾರಂಭಿಸುತ್ತಾರೆ. ಅದು ಕೊನೆಗೊಳ್ಳುವುದೇ ಇಲ್ಲ. ಮನೆಯ ಯಜಮಾನ ಮತ್ತು ಮನೆ ಮಂದಿಗೆ ಇದರಿಂದ ಎಷ್ಟು ಕಿರುಕುಳವಾಗುತ್ತದೆಂಬ ಪರಿವೆಯೇ ಅವರಿಗಿರುವುದಿಲ್ಲ. ಅಸಭ್ಯ ವ್ಯಕ್ತಿಗಳು ತಮ್ಮ ಈ ಅಭ್ಯಾಸದಿಂದ ಪ್ರವಾದಿವರ್ಯರನ್ನೂ(ಸ) ತೊಂದರೆಗೊಳಪಡಿಸುತ್ತಿದ್ದರು. ಪ್ರವಾದಿ(ಸ) ತಮ್ಮ ಉನ್ನತ ಚಾರಿತ್ರ್ಯದಿಂದಾಗಿ ಅವನ್ನು ಸಹಿಸಿ ಕೊಳ್ಳುತ್ತಿದ್ದರು. ಕೊನೆಗೊಮ್ಮೆ ಹ. ಝೈನಬ್‌ರ ವಲೀಮದ ದಿವಸ ಈ ದುರಭ್ಯಾಸವು ಮಿತಿಮೀರಿ ಹೋಯಿತು. ಪ್ರವಾದಿಯವರ(ಸ) ಆಪ್ತ ಸೇವಕ ಹ. ಅನಸ್ ಬಿನ್ ಮಾಲಿಕ್ ಉಲ್ಲೇಖಿಸುತ್ತಾರೆ- ಅಂದು ರಾತ್ರಿ ವಲೀಮದ ಸತ್ಕಾರ ಕೂಟವಿತ್ತು. ಜನರು ಊಟಮಾಡಿ ಹೋದರು. ಆದರೆ ಎರಡು ಮೂರು ಮಂದಿ ಊಟವಾದ ನಂತರ ಕುಳಿತು ಹರಟೆ ಹೊಡೆಯತೊಡಗಿದರು. ಪ್ರವಾದಿ(ಸ) ಇದರಿಂದ ಬೇಸತ್ತು ತಮ್ಮ ಇತರ ಪತ್ನಿಯರ ಮನೆಗಳಿಗೆ ಒಂದು ಸುತ್ತು ಭೇಟಿ ನೀಡಿ ಮರಳಿದರು. ಆದರೂ ಈ ಮಂದಿ ಅಲ್ಲೇ ಕುಳಿತಿದ್ದರು. ಪ್ರವಾದಿ(ಸ) ಪುನಃ ಹೊರಗೆ ಹೋಗಿ ಆಯಿಶಾರ ಮನೆಯಲ್ಲಿ ಕುಳಿತರು. ಬಹಳ

ذٰلِكُمْ اَطْهَرُ لِقُلُوْبِكُمْ وَقُلُوْبِهِنَّ ۚ وَمَا كَانَ لَكُمْ اَنْ تُؤْذُوْا رَسُوْلَ اللّٰهِ وَلَآ

ಸತ್ಯಸಂಗತಿಯನ್ನು ಹೇಳಲು ನಾಚುವುದಿಲ್ಲ. ಪ್ರವಾದಿಯವರ ಪತ್ನಿಯರಿಂದ ನಿಮಗೇನಾದರೂ ವಸ್ತುವನ್ನು ಕೇಳಬೇಕಾಗಿದ್ದರೆ ತೆರೆಯ ಹಿಂದಿನಿಂದ ಕೇಳಿ ಪಡಕೊಳ್ಳಿರಿ. ಇದು ನಿಮ್ಮ ಹಾಗೂ ಅವರ ಹೃದಯಗಳ ಶುದ್ಧಿಗೆ ಹೆಚ್ಚು ಸೂಕ್ತವಾದ ಕ್ರಮವಾಗಿದೆ.[98]

---

ರಾತ್ರಿಯಾದಾಗ ಆ ಜನರು ಹೋಗಿರುವರೆಂದು ತಿಳಿದಾಗ ಪ್ರವಾದಿ(ಸ) ಝೈನಬ್‌ರ ಮನೆಗೆ ಬಂದರು. ಇದರ ನಂತರ ಇಂತಹ ಕೆಟ್ಟ ಅಭ್ಯಾಸಗಳ ಬಗ್ಗೆ ಅಲ್ಲಾಹನೇ ಜನರನ್ನು ಎಚ್ಚರಿಸುವುದು ಅನಿವಾರ್ಯವಾಯಿತು. ಹ. ಅನಸ್‌ರ ವರದಿ ಪ್ರಕಾರ ಈ ಸೂಕ್ತಗಳು ಅದೇ ಸಂದರ್ಭದಲ್ಲಿ ಅವತೀರ್ಣಗೊಂಡಿದ್ದುವು. (ಮುಸ್ಲಿಮ್, ನಸಾಈ, ಇಬ್ನು ಜರೀರ್)

98. ಹಿಜಾಬ್(ಪರ್ದಾ)ನ ಸೂಕ್ತವೆಂದು ಇದನ್ನೇ ಕರೆಯಲಾಗುತ್ತದೆ. ಬುಖಾರಿಯಲ್ಲಿ ಹ.ಅನಸ್ ಬಿನ್ ಮಾಲಿಕ್‌ರವರ(ರ) ವರದಿಯೊಂದು ಹೀಗಿದೆ- ಈ ಸೂಕ್ತ ಅವತೀರ್ಣಗೊಳ್ಳುವುದಕ್ಕಿಂತ ಮುಂಚೆ ಹ. ಉಮರ್(ರ) ಪ್ರವಾದಿಯವರೊಡನೆ(ಸ) ಅನೇಕ ಬಾರಿ, ಪ್ರವಾದಿವರ್ಯರೆ! ತಮ್ಮಲ್ಲಿಗೆ ಒಳ್ಳೆಯ ಜನರೂ ಬರುತ್ತಾರೆ, ಕೆಟ್ಟವರೂ ಬರುತ್ತಾರೆ. ತಾವು ತಮ್ಮ ಪತ್ನಿಯರಿಗೆ ಪರ್ದಾ ಹಾಕುವ ಆಜ್ಞೆ ನೀಡುತ್ತಿದ್ದರೆ ಉತ್ತಮವಿತ್ತೆಂದು ಹೇಳುತ್ತಿದ್ದರು. ಇನ್ನೊಂದು ವರದಿಯಲ್ಲಿ ಹೀಗಿದೆ- ಒಮ್ಮೆ ಹ. ಉಮರ್(ರ) ಅವರು ಪ್ರವಾದಿ ಪತ್ನಿಯರೊಡನೆ, ನಿಮ್ಮ ಪರವಾಗಿ ನನ್ನ ಮಾತನ್ನು ಪಾಲಿಸಲಾದರೆ ನನ್ನ ದೃಷ್ಟಿಯು ನಿಮ್ಮ ಮೇಲೆ ಎಂದೂ ಬೀಳಲಾರದು ಎಂದು ಹೇಳಿದರು. ಆದರೆ ಪ್ರವಾದಿ(ಸ) ಶಾಸನಾಧಿಕಾರದಲ್ಲಿ ಸಾರ್ವಭೌಮರಲ್ಲದ ಕಾರಣ ಅವರು ಅಲ್ಲಾಹನ ಸೂಚನೆಯನ್ನು ನಿರೀಕ್ಷಿಸುತ್ತಿದ್ದರು. ಕೊನೆಗೆ ವಿವಾಹನಿಷಿದ್ಧ ಪುರುಷರ ಹೊರತು (ಮುಂದೆ 55ನೆಯ ಸೂಕ್ತದಲ್ಲಿ ಬರುವಂತೆ) ಇತರ ಪುರುಷರಾರೂ ಪ್ರವಾದಿಯವರ(ಸ) ಮನೆಗೆ ಬರಬಾರದು ಹಾಗೂ ಸ್ತ್ರೀಯರೊಂದಿಗೆ ಏನಾದರೂ ಕೆಲಸವಿದ್ದರೆ ಪರದೆಯ ಹಿಂದಿನಿಂದ ಮಾತಾಡಬೇಕು ಎಂಬ ಆಜ್ಞೆ ಬಂತು. ಈ ಆಜ್ಞೆಯ ನಂತರ ಪ್ರವಾದಿ ಪತ್ನಿಯರ ಮನೆಗಳಿಗೆ ಪರದೆ ಹಾಕಲಾಯಿತು. ಪ್ರವಾದಿವರ್ಯರ(ಸ) ಮನೆಗಳು ಮುಸ್ಲಿಮರಿಗೆ ಆದರ್ಶವಾಗಿದ್ದುದರಿಂದ ಎಲ್ಲ ಮುಸ್ಲಿಮರ ಮನೆಗಳಲ್ಲೂ ಪರದೆ ಹಾಕಲಾಯಿತು. ಸೂಕ್ತದ ಕೊನೆಯ ವಾಕ್ಯವು ಸ್ತ್ರೀ-ಪುರುಷರ ಮನಸ್ಸುಗಳನ್ನು ಶುದ್ಧಗೊಳಿಸ ಬಯಸುವವರು ಈ ವಿಧಾನವನ್ನು ಅನುಸರಿಸಬೇಕೆಂಬುದನ್ನು ಸೂಚಿಸುತ್ತದೆ.

ಯಾವ ಗ್ರಂಥವು ಸ್ತ್ರೀ-ಪುರುಷರು ಪರಸ್ಪರ ಎದುರು ಬದುರಾಗಿ ಮಾತಾಡುವುದರಿಂದ ತಡೆಯುತ್ತದೋ ಮತ್ತು ಪರದೆಯ ಹಿಂದಿನಿಂದ ಮಾತಾಡುವುದರ ಔಚಿತ್ಯವನ್ನು 'ನಿಮ್ಮ ಮತ್ತು ಅವರ ಮನಸ್ಸಿನ ಪರಿಶುದ್ಧತೆಗೆ ಈ ವಿಧಾನ ಅನಿವಾರ್ಯ'ವೆಂದು ಹೇಳುತ್ತದೋ ಅದರಲ್ಲಿ ಸಮ್ಮಿಶ್ರ ಸಭೆಗಳು, ಸಮ್ಮಿಶ್ರ ಶಿಕ್ಷಣ ಸಂಸ್ಥೆಗಳು ಮತ್ತು ಶಾಸನಸಭೆಗಳು ಹಾಗೂ ಕಚೇರಿಗಳಲ್ಲಿ ಸ್ತ್ರೀ-ಪುರುಷರ ಮುಕ್ತ ಮಿಲನವು ಧರ್ಮಸಮ್ಮತವೆಂದೂ ಅದರಿಂದ ಮನಸ್ಸಿನ ಶುದ್ಧತೆಗೆ ಯಾವ ಭಂಗವೂ ಉಂಟಾಗುವುದಿಲ್ಲವೆಂದೂ ಭಾವಿಸುವುದು ಹೇಗೆ ಸಾಧ್ಯ? ಯಾರಾದರೂ ಕುರ್‌ಆನನ್ನು ಅನುಸರಿಸುವುದಿಲ್ಲವೆಂದಾದರೆ ಅದಕ್ಕಿರುವ ಸರಿಯಾದ ವಿಧಾನ, ಅದರ ವಿರುದ್ಧ ವರ್ತಿಸುವುದಾಗಿದೆ

ذٰلِكُمْ اَطْهَرُ لِقُلُوْبِكُمْ وَ قُلُوْبِهِنَّ ؕ وَ مَا كَانَ لَكُمْ اَنْ تُؤْذُوْا رَسُوْلَ اللّٰهِ وَلَاۤ
اَنْ تَنْكِحُوْۤا اَزْوَاجَهٗ مِنْۢ بَعْدِهٖۤ اَبَدًا ؕ اِنَّ ذٰلِكُمْ كَانَ عِنْدَ اللّٰهِ عَظِيْمًا ﴿۵۳﴾
اِنْ تُبْدُوْا شَيْـًٔا اَوْ تُخْفُوْهُ فَاِنَّ اللّٰهَ كَانَ بِكُلِّ شَيْءٍ عَلِيْمًا ﴿۵۴﴾ لَا جُنَاحَ
عَلَيْهِنَّ فِيْۤ اٰبَآئِهِنَّ وَلَاۤ اَبْنَآئِهِنَّ وَلَاۤ اِخْوَانِهِنَّ وَلَاۤ اَبْنَآءِ اِخْوَانِهِنَّ وَ

ಅಲ್ಲಾಹನ ಸಂದೇಶವಾಹಕರಿಗೆ ಕೀಟಲೆ ಕೊಡುವುದು ನಿಮಗೆ ಎಷ್ಟು ಮಾತ್ರಕ್ಕೂ ಸೂಕ್ತವಲ್ಲ.[99] ಅವರ ಕಾಲಾನಂತರ ಅವರ ಪತ್ನಿಯರೊಂದಿಗೆ ವಿವಾಹ ಮಾಡಿಕೊಳ್ಳುವುದೂ ಎಂದೆಂದಿಗೂ ನಿಮಗೆ ಧರ್ಮಸಮ್ಮತವಾದುದಲ್ಲ.[100] ಇದು ಅಲ್ಲಾಹನ ಬಳಿ ಮಹಾ ಪಾಪಕಾರ್ಯ. ನೀವು ಯಾವುದನ್ನಾದರೂ ಪ್ರಕಟಗೊಳಿಸಿದರೂ ಬಚ್ಚಿಟ್ಟರೂ ಅಲ್ಲಾಹನು ಪ್ರತಿಯೊಂದು ವಿಷಯದ ಬಗ್ಗೆ ಸಂಪೂರ್ಣ ಜ್ಞಾನವಿರುವವನಾಗಿರುತ್ತಾನೆ.[101]

(55) ಪ್ರವಾದಿಯವರ ಪತ್ನಿಯರ ಮನೆಗಳಿಗೆ ಅವರ ತಂದೆಯಂದಿರಾಗಲಿ, ಪುತ್ರರಾಗಲಿ, ಸಹೋದರರಾಗಲಿ, ಸೋದರ ಪುತ್ರರಾಗಲಿ, ಸೋದರಿ ಪುತ್ರರಾಗಲಿ,[102]

---

ಮತ್ತು ನಾನು ಕುರ್ಆನಿನ ಅನುಸರಣೆ ಮಾಡುವುದಿಲ್ಲವೆಂದು ಆತ ಸ್ಪಷ್ಟವಾಗಿ ಸಾರಿ ಹೇಳಬೇಕು. ಆದರೆ ತಾನು ಕುರ್ಆನಿನ ಆಜ್ಞೆಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಾ ಇದು ತಾನು ಕಂಡು ಹಿಡಿದಿರುವ ಇಸ್ಲಾಮಿನ ಸ್ಫೂರ್ತಿಯೆಂದು ಹೇಳುವುದು ಅತ್ಯಂತ ನೀಚಕೃತ್ಯವಾಗಿದೆ. ಕುರ್ಆನ್ ಮತ್ತು ಪ್ರವಾದಿಚರ್ಯೆಯ ಹೊರಗೆ ಜನರಿಗೆ ಸಿಕ್ಕಿರುವುದು ಅದೆಂತಹ ಇಸ್ಲಾಮಿನ ಸ್ಫೂರ್ತಿ?

99. ಇದು ಆ ಕಾಲದಲ್ಲಿ ಪ್ರವಾದಿಯವರ(ಸ) ವಿರುದ್ಧ ಹೊರಿಸಲಾಗುತ್ತಿದ್ದ ಆಪಾದನೆಗಳ ಕಡೆಗೆ ಸೂಚನೆಯಾಗಿದೆ. ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳ ಜೊತೆ ಕೆಲವು ದುರ್ಬಲ ವಿಶ್ವಾಸಿಗಳಾದ ಮುಸ್ಲಿಮರೂ ಅದರಲ್ಲಿ ಪಾಲ್ಗೊಂಡಿದ್ದರು.

100. ಪ್ರವಾದಿಯವರ(ಸ) ಪತ್ನಿಯರು ಸತ್ಯವಿಶ್ವಾಸಿಗಳ ಮಾತೆಯರಾಗಿದ್ದಾರೆ ಎಂದು ಅಧ್ಯಾಯದ ಆರಂಭದಲ್ಲಿ ಹೇಳಲಾದ ಮಾತಿನ ವಿವರಣೆಯಿದು.

101. ಅರ್ಥಾತ್- ಪ್ರವಾದಿಯವರ(ಸ) ಬಗ್ಗೆ ಮನಸ್ಸಿನಲ್ಲಾದರೂ ಕೆಟ್ಟ ಯೋಚನೆಯನ್ನು ಯಾರಾದರೂ ಮಾಡಿದರೆ ಅಥವಾ ಪ್ರವಾದಿ ಪತ್ನಿಯರ ಕುರಿತು ಯಾರಾದರೂ ತನ್ನ ಮನಸ್ಸಿನಲ್ಲಿ ಕೆಟ್ಟ ಭಾವನೆ ಬಚ್ಚಿಟ್ಟಿದ್ದರೆ ಅದು ಅಲ್ಲಾಹನಿಂದ ಮರೆಯಾಗದು. ಅವನು ಅದರ ಶಿಕ್ಷೆಯನ್ನು ಪಡೆದೇ ತೀರುವನು.

102. ವಿವರಣೆಗಾಗಿ 'ಅನ್ನೂರ್' ಅಧ್ಯಾಯದ 38ರಿಂದ 42ರ ವರೆಗಿನ ಟಿಪ್ಪಣಿಗಳನ್ನು ನೋಡಿರಿ. ಈ ನಿಟ್ಟಿನಲ್ಲಿ ಅಲ್ಲಾಮಾ ಆಲೂಸಿಯವರ ವಿವರಣೆಯು ಗಮನಾರ್ಹವಾಗಿದೆ. ಅವರು

لَآ اَبْنَآءِ اَخَوٰتِهِنَّ وَلَا نِسَآئِهِنَّ وَلَا مَا مَلَكَتْ اَيْمَانُهُنَّ ۚ وَاتَّقِيْنَ اللّٰهَ ۗ
اِنَّ اللّٰهَ كَانَ عَلٰى كُلِّ شَيْءٍ شَهِيْدًا ﴿٥٥﴾ اِنَّ اللّٰهَ وَمَلٰٓئِكَتَهٗ يُصَلُّوْنَ عَلَى
النَّبِيِّ ۚ يٰٓاَيُّهَا الَّذِيْنَ اٰمَنُوْا صَلُّوْا عَلَيْهِ وَسَلِّمُوْا تَسْلِيْمًا ﴿٥٦﴾ اِنَّ الَّذِيْنَ يُؤْذُوْنَ

ಅವರ ಒಡನಾಟದ ಸ್ತ್ರೀಯರಾಗಲಿ,[103] ಅವರ ಗುಲಾಮರಾಗಲಿ,[104] ಬರುವುದರಲ್ಲಿ ದೋಷವಿಲ್ಲ. (ಸ್ತ್ರೀಯರೇ) ನೀವು ಅಲ್ಲಾಹನ ಆಜ್ಞೋಲ್ಲಂಘನೆಯಿಂದ ದೂರವಿರಬೇಕು. ಅಲ್ಲಾಹನು ಸಕಲ ವಸ್ತುಗಳ ಬಗ್ಗೆ ಸಾಕ್ಷಿಯಾಗಿದ್ದಾನೆ.[105]

(56) ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ಮಲಕ್‌ಗಳು (ದೇವಚರರು) ಪ್ರವಾದಿಯವರಿಗೆ 'ಸಲಾತ್' (ಸ್ವಸ್ತಿ ವಚನ) ಹೇಳುತ್ತಾರೆ.[106] ಸತ್ಯವಿಶ್ವಾಸಿಗಳೇ, ನೀವೂ ಅವರ ಮೇಲೆ ಸಲಾತ್ ಮತ್ತು ಸಲಾಮ್ (ಅಭಿವಂದನೆ) ಸಲ್ಲಿಸುತ್ತಲಿರಿ.[107]

---

ಬರೆಯುತ್ತಾರೆ- ಸಹೋದರರು, ಸೋದರಳಿಯಂದಿರು ಮತ್ತು ಸೋದರ ಪುತ್ರರ ವಿಧಿಯಲ್ಲಿ, ಓರ್ವ ಸ್ತ್ರೀಗೆ ನಿಷಿದ್ಧವಾಗಿರುವ ಎಲ್ಲ ಸಂಬಂಧಿಕರೂ ಸೇರುತ್ತಾರೆ. ಅದು ನೈಜ ಸಂಬಂಧಿಕರಾಗಿರಲಿ ಅಥವಾ ಸ್ತನಪಾನ ಸಂಬಂಧಿಯಾಗಿರಲಿ. ಈ ಪಟ್ಟಿಯಲ್ಲಿ ಪಿತೃಸಹೋದರ ಮತ್ತು ಸೋದರ ಮಾವನನ್ನು ಪ್ರಸ್ತಾಪಿಸದಿರುವುದಕ್ಕೆ ಕಾರಣ ಅವರು ಸ್ತ್ರೀಗೆ ಹೆತ್ತವರಂತಿದ್ದಾರೆ ಅಥವಾ ಸೋದರಳಿಯಂದಿರು ಮತ್ತು ಸೋದರರ ಪುತ್ರರ ಪ್ರಸ್ತಾಪ ಬಂದಿರುವುದರಿಂದ ಅವರ ಪ್ರಸ್ತಾಪದ ಅಗತ್ಯವಿಲ್ಲವೆಂದು ಅದನ್ನು ತೆಗೆದು ಹಾಕಿರಬಹುದು. ಏಕೆಂದರೆ ಸೋದರಳಿಯಂದಿರು ಮತ್ತು ಸೋದರ ಪುತ್ರರ ಮುಂದೆ ಪರ್ದಾದ ಅಗತ್ಯ ಇಲ್ಲದಂತೆಯೇ ಪಿತೃಸಹೋದರ ಮತ್ತು ಸೋದರಮಾವನವರ ಮುಂದೆಯೂ ಪರ್ದಾದ ಅಗತ್ಯವಿಲ್ಲ. (ರೂಹುಲ್‌ಮಆನಿ)

103. ವಿವರಣೆಗಾಗಿ ಅನ್ನೂರ್ ಅಧ್ಯಾಯದ 43ನೆಯ ಟಿಪ್ಪಣಿ ನೋಡಿರಿ.

104. ವಿವರಣೆಗಾಗಿ ಅನ್ನೂರ್ ಅಧ್ಯಾಯದ 44ನೆಯ ಟಿಪ್ಪಣಿ ನೋಡಿರಿ.

105. ಈ ಮಾತಿನ ಅರ್ಥವೇನೆಂದರೆ ಈ ಸ್ಪಷ್ಟ ಆದೇಶ ಬಂದ ನಂತರ ಪ್ರಸ್ತುತ ಸಂಬಂಧಿಕರ ಹೊರತಾದ ಯಾರಿಗೂ ಇನ್ನು ಮುಂದೆ ಮನೆಗಳಿಗೆ ಮರೆಯಿಲ್ಲದೆ ಬರುವ ಅನುಮತಿ ನೀಡಬಾರದು. ಇನ್ನೊಂದು ಅರ್ಥವೇನೆಂದರೆ ಸ್ತ್ರೀಯರು ತಮ್ಮ ಪತಿಯಂದಿರ ಉಪಸ್ಥಿತಿಯಲ್ಲಿ ಪರ್ದಾವನ್ನು ಪಾಲಿಸುವ, ಆದರೆ ಪತಿ ಇಲ್ಲದಾಗ ವಿವಾಹ ನಿಷಿದ್ಧವಲ್ಲದ ಗಂಡಸರ ಮುಂದೆ ಪರ್ದಾರಹಿತರಾಗಿರುವಂತಹ ಧೋರಣೆ ಕೈಗೊಳ್ಳಬಾರದು. ಅವರ ಈ ಕೃತ್ಯವು ಪತಿಯಂದಿರಿಂದ ಮರೆಯಾದರೂ ಅಲ್ಲಾಹನಿಂದ ಮರೆಯಾಗಿರದು.

106. ಅಲ್ಲಾಹನು ತನ್ನ ಪ್ರವಾದಿಯ ಮೇಲೆ ಸಲಾತ್ (ಸ್ವಸ್ತಿವಚನ) ಹೇಳುವುದೆಂದರೆ ಆತನು ಅವರ ಮೇಲೆ ಅಪಾರ ಕರುಣೆಯುಳ್ಳವನಾಗಿದ್ದಾನೆ. ಅವರನ್ನು ಪ್ರಶಂಸಿಸುತ್ತಾನೆ. ಅವರ ಕೆಲಸ ಕಾರ್ಯಗಳಲ್ಲಿ ಸಮೃದ್ಧಿಯುಂಟು ಮಾಡುತ್ತಾನೆ. ಅವರ ಹೆಸರನ್ನು ಜನಪ್ರಿಯ ಗೊಳಿಸುತ್ತಾನೆ

ಾಗೂ ಅವರ ಮೇಲೆ ತನ್ನ ಅನುಗ್ರಹಗಳ ಸುರಿಮಳೆಗರೆಯುತ್ತಾನೆ. ಮಲಕ್‌ಗಳು(ದೇವಚರರು) ್ರವಾದಿಯ ಮೇಲೆ ಸಲಾತ್ ಹೇಳುವುದೆಂದರೆ ಅವರು ಪ್ರವಾದಿಯನ್ನು ಅತ್ಯಧಿಕ ಪ್ರೀತಿಸುತ್ತಾರೆ. ವರಿಗೆ ಉನ್ನತೋನ್ನತ ಸ್ಥಾನವನ್ನು ನೀಡುವಂತೆ, ಅವರ ಧರ್ಮವನ್ನು ಉತ್ತುಂಗಗೊಳಿಸುವಂತೆ, ವರ ಧರ್ಮವಿಧಾನವನ್ನು (ಶರೀಅತ್) ವ್ಯಾಪಕ ಗೊಳಿಸುವಂತೆ ಮತ್ತು ಅವರನ್ನು ಮಕಾಮು ುಹ್ಮೂದ್‌ಗೆ (ಪ್ರತಿಷ್ಠಿತ ಸ್ಥಾನ) ತಲಪಿಸುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಾರೆ. ಸೂಕ್ತದ ಿನ್ನೆಲೆಯನ್ನು ಗಮನಿಸುವಾಗ ಈ ವಾಕ್ಸರಣಿಯಲ್ಲಿ ಈ ವಿಷಯವನ್ನು ಏಕೆ ಹೇಳಲಾಗಿದೆಯೆಂದು ್ಪಷ್ಟವಾಗಿ ತಿಳಿದು ಬರುತ್ತದೆ. ಇಸ್ಲಾಮಿನ ವಿರೋಧಿಗಳು ಈ ಸುವ್ಯಕ್ತ ಧರ್ಮದ ಬೆಳವಣಿಗೆಯನ್ನು ೋಡಿ ಸಹಿಸದೆ ಪ್ರವಾದಿವರ್ಯರ(ಸ) ಮೇಲೆ ತರತರದ ಆರೋಪಗಳ ಸುರಿಮಳೆಗೈಯುತ್ತಿದ್ದ ಲವಾಗಿತ್ತದು. ಈ ರೀತಿ ಕೆಸರೆರಚುವುದರಿಂದ ಇಸ್ಲಾಮ್ ಮತ್ತು ಮುಸ್ಲಿಮರ ಅಭಿವೃದ್ಧಿಗೆ ಾರಣವಾಗಿರುವಂತಹ ಪ್ರವಾದಿಯವರ(ಸ) ನೈತಿಕ ಪ್ರಭಾವವನ್ನು ಅಳಿಸಿ ಹಾಕಬಹುದೆಂದು ಅವರು ಾವಿಸಿದ್ದರು. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನು ಈ ಸೂಕ್ತವನ್ನು ಅವತೀರ್ಣಗೊಳಿಸಿ ಸಕಲ ೋಕಕ್ಕೆ ತಿಳಿಯಪಡಿಸುವುದೇನೆಂದರೆ ಸತ್ಯನಿಷೇಧಿಗಳು ಮತ್ತು ಕಪಟವಿಶ್ವಾಸಿಗಳು ನನ್ನ ಪ್ರವಾದಿಯನ್ನು ೀಳಾಗಿಸಲು ಎಷ್ಟೇ ಪ್ರಯತ್ನ ಪಟ್ಟರೂ ಕೊನೆಗೆ ಅವರೇ ಮಣ್ಣು ಮುಕ್ಕುವರು, ಏಕೆಂದರೆ ನಾನು ಅವರ ಮೇಲೆ ಕರುಣಾಳುವಾಗಿದ್ದೇನೆ ಮತ್ತು ಸಕಲ ವಿಶ್ವದ ವ್ಯವಸ್ಥೆಯನ್ನು ಯಾವ ದೇವಚರರ ಮೂಲಕ ನಡೆಸಲಾಗುತ್ತದೋ ಆ ದೇವಚರರು ಅವರ ಬೆಂಬಲಿಗರೂ ಅವರನ್ನು ಪ್ರಕೀರ್ತಿಸುವವರೂ ಆಗಿದ್ದಾರೆ. ನಾನು ಅವರ ಹೆಸರನ್ನು ಜನಪ್ರಿಯಗೊಳಿಸುತ್ತಿರುವಾಗ ಮತ್ತು ನನ್ನ ಮಲಕ್‌ಗಳು ಅವರ ಪ್ರಶಂಸೆಯಲ್ಲಿ ತೊಡಗಿರುವಾಗ ಅವರು ಪ್ರವಾದಿಯನ್ನು ಹಂಗಿಸಿ ಗಳಿಸುವುದಾದರೂ ಏನು? ನನ್ನ ಅನುಗ್ರಹಗಳೂ ಸಮೃದ್ಧಿಗಳೂ ಪ್ರವಾದಿಯ ಜೊತೆಯಲ್ಲಿರುವಾಗ ಮತ್ತು ನನ್ನ ಮಲಕ್‌ಗಳು ಆಹೋರಾತ್ರಿ- ಸರ್ವಲೋಕಗಳ ಒಡೆಯಾ! ಮುಹಮ್ಮದ್‌ರವರ(ಸ) ಸ್ಥಾನಮಾನಗಳನ್ನು ಇನ್ನಷ್ಟು ಉನ್ನತಗೊಳಿಸು ಮತ್ತು ಅವರ ಧರ್ಮವನ್ನು ಇನ್ನಷ್ಟು ವ್ಯಾಪಕಗೊಳಿಸು ಎಂದು ಪ್ರಾರ್ಥಿಸುವಾಗ, ಈ ಮಂದಿ ತಮ್ಮ ನೀಚ ಅಸ್ತ್ರಗಳಿಂದ ಅವರಿಗೇನು ಹಾನಿ ಮಾಡಬಲ್ಲರು?

107. ಬೇರೆ ಮಾತಿನಲ್ಲಿ ಇದರ ಅರ್ಥ ಹೀಗಿದೆ- ಜನರೇ! ಮುಹಮ್ಮದ್‌ರವರ(ಸ) ಕಾರಣದಿಂದಾಗಿ ಸನ್ಮಾರ್ಗ ಲಭಿಸಿರುವ ನೀವು ಅವರ ಸ್ಥಾನವನ್ನು ಗುರುತಿಸಿರಿ, ಅವರ ಮಹದುಪಕಾರದ ಹಕ್ಕನ್ನು ಈಡೇರಿಸಿರಿ. ನೀವು ಅಜ್ಞಾನದ ಅಂಧಕಾರದಲ್ಲಿ ತೊಳಲಾಡುತ್ತಿದ್ದಿರಿ, ಅವರು ನಿಮಗೆ ಜ್ಞಾನದ ಬೆಳಕನ್ನು ನೀಡಿದರು. ನೀವು ನೈತಿಕ ಪತನಕ್ಕೆ ಈಡಾಗಿದ್ದಿರಿ, ಅವರು ನಿಮ್ಮನ್ನು ಮೇಲೆತ್ತಿ ಇಂದು ಜನರಲ್ಲಿ ಈರ್ಷ್ಯೆಯುಂಟಾಗುವಂತಹ ಉನ್ನತ ಚಾರಿತ್ರ್ಯವಂತರನ್ನಾಗಿ ಮಾಡಿದರು. ನೀವು ಪಾಶವೀಯತೆಗೆ ಸಿಲುಕಿದ್ದಿರಿ, ಅವರು ನಿಮ್ಮನ್ನು ಅತ್ಯುತ್ತಮ ನಾಗರಿಕರನ್ನಾಗಿ ಮಾಡಿದರು. ಅವರು ನಿಮಗೆ ಈ ಉಪಕಾರಗಳನ್ನೆಲ್ಲ ಮಾಡಿದ್ದಕ್ಕಾಗಿಯೇ ಸತ್ಯನಿಷೇಧಿಗಳು ಅವರ ವಿರುದ್ಧ ಕೆಂಡಕಾರುತ್ತಿದ್ದಾರೆ. ವಸ್ತುತಃ ಅವರೇನೂ ಯಾರಿಗೂ ವೈಯಕ್ತಿಕವಾಗಿ ಕೇಡು ಬಗೆದವರಲ್ಲ. ಆದುದರಿಂದ ಈಗ ನಿಮ್ಮ ಉಪಕಾರ ಸ್ಮರಣೆಯ ಬೇಡಿಕೆಯೇನೆಂದರೆ ಒಳಿತಿನ ಸಾಕಾರ ಮೂರ್ತಿಯಾಗಿರುವ ಈ ವ್ಯಕ್ತಿಯ(ಸ) ವಿರುದ್ಧ ಅವರೆಷ್ಟು ಹಗೆತನವಿರಿಸುತ್ತಾರೋ ಅಷ್ಟೇ ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚಾಗಿ ನೀವು ಇವರನ್ನು ಪ್ರೀತಿಸಿರಿ. ಇವರನ್ನು ಅವರೆಷ್ಟು ತಿರಸ್ಕರಿಸುತ್ತಾರೋ ಅದಕ್ಕಿಂತಲೂ ಹೆಚ್ಚಾಗಿ ನೀವು ಇವರಲ್ಲಿ ಅನುರಕ್ತರಾಗಿರಿ. ಇವರನ್ನು ಅವರು

ಎಷ್ಟು ಖಂಡಿಸುತ್ತಾರೋ ಅದಕ್ಕಿಂತಲೂ ಹೆಚ್ಚಾಗಿ ನೀವು ಇವರನ್ನು ಪ್ರಕೀರ್ತಿಸಿರಿ. ಅವರು ಇವ ಎಷ್ಟು ಅಹಿತ ಬಯಸುತ್ತಾರೋ ಅದಕ್ಕಿಂತಲೂ ಹೆಚ್ಚಾಗಿ ನೀವು ಇವರ ಹಿತ ಬಯಸುವವರಾಗಿ ಮತ್ತು ಇವರಿಗಾಗಿ ಅಲ್ಲಾಹನ ಮಲಕ್‌ಗಳು ರಾತ್ರಿ ಹಗಲೆನ್ನದೆ ಪ್ರಾರ್ಥಿಸುವ ಈ ಪ್ರಾರ್ಥನೆಯನ್ನು ನೀವೂ ಮಾಡಿರಿ- "ಉಭಯ ಲೋಕಗಳ ಪ್ರಭುವೆ! ಯಾವ ರೀತಿ ನಿನ್ನ ಪ್ರವಾದಿಯು ನಮ್ಮ ಮೇಲೆ ಅಪಾರ ಉಪಕಾರ ಮಾಡಿದರೋ ನೀನೂ ಅವರ ಮೇಲೆ ಅಗಣಿತ ಅನುಗ್ರಹ ದಯಪಾಲಿಸು. ಅವರ ಸ್ಥಾನವನ್ನು ಈ ಲೋಕದಲ್ಲೂ ಅತ್ಯುನ್ನತಗೊಳಿಸು ಮತ್ತು ಪರಲೋಕದಲ್ಲೂ ಅವರನ್ನು ಎಲ್ಲ ಆಪ್ತರಿಗಿಂತಲೂ ನಿಕಟಗೊಳಿಸು."

ಈ ಸೂಕ್ತವು ಮುಸ್ಲಿಮರಿಗೆ ಎರಡು ವಿಷಯಗಳ ಆದೇಶ ನೀಡುತ್ತದೆ. ಒಂದು, 'ಸಲ್ಲೂ ಅಲೈಹಿ' ಇನ್ನೊಂದು, 'ಸಲ್ಲಿಮೂ ತಸ್ಲೀಮನ್' (ಸಲಾತ್ ಮತ್ತು ಸಲಾಮ್ ಹೇಳಿರಿ). ಸಲಾತ್ ಎಂಬ ಪದಕ್ಕೆ ಮೂರು ಅರ್ಥಗಳಿವೆ. ಒಂದನೆಯದು, ಯಾರ ಕಡೆಗಾದರೂ ವಾಲುವುದು, ಅವನತ್ತ ಪ್ರೀತಿಯಿಂದ ಗಮನ ಹರಿಸುವುದು ಮತ್ತು ಬಾಗುವುದು. ಎರಡನೆಯದು, ಯಾರನ್ನಾದರೂ ಪ್ರಶಂಸಿಸುವುದು ಮತ್ತು ಮೂರನೆಯದು, ಯಾರ ಪರವಾಗಿಯಾದರೂ ಪ್ರಾರ್ಥಿಸುವುದು. ಈ ಪದವನ್ನು ಅಲ್ಲಾಹನಿಗಾಗಿ ಬಳಸುವಾಗ ಅದು ಮೂರನೆಯ ಅರ್ಥದಲ್ಲಿ ಆಗಲಾರದೆಂಬುದು ವ್ಯಕ್ತ. ಆದರೆ ದಾಸರಿಗಾಗಿ- ಅದು ಮನುಷ್ಯರಾಗಿರಲಿ, ದೇವಚರರಾಗಿರಲಿ- ಹೇಳುವಾಗ ಮೂರೂ ಅರ್ಥಗಳು ಒಳಗೊಂಡಿರುವುದು. ಅದರಲ್ಲಿ ಪ್ರೀತಿಯೂ, ಸ್ತುತಿಯೂ ಅನುಗ್ರಹದ ಪ್ರಾರ್ಥನೆಯೂ ಸೇರಿದೆ. ಆದುದರಿಂದ ಸತ್ಯವಿಶ್ವಾಸಿಗಳು ಪ್ರವಾದಿವರ್ಯರ(ಸ) ಮೇಲೆ 'ಸಲ್ಲೂ ಅಲೈಹಿ' (ಸಲಾತ್ ಹೇಳಬೇಕು) ಎಂಬ ಆಜ್ಞೆಯ ಅರ್ಥ, ಅವರಲ್ಲಿ ಅನುರಕ್ತವಾಗುವುದು, ಅವರ ಪ್ರಶಂಸೆ ಮಾಡುವುದು ಮತ್ತು ಅವರಿಗಾಗಿ ಪ್ರಾರ್ಥಿಸುವುದು ಎಂದಾಗುತ್ತದೆ.

ಸಲಾಮ್ ಎಂಬ ಪದಕ್ಕೂ ಎರಡು ಅರ್ಥಗಳಿವೆ. ಒಂದನೆಯದು, ಎಲ್ಲ ಬಗೆಯ ಆಪತ್ತುಗಳಿಂದಲೂ ಕುಂದು-ಕೊರತೆಗಳಿಂದಲೂ ಸುರಕ್ಷಿತವಾಗಿರುವುದು. ಎರಡನೆಯದು, ಸಂಧಾನ ಮತ್ತು ವಿರೋಧಿಸದಿರುವುದು. ಆದುದರಿಂದ ಪ್ರವಾದಿಯವರಿಗೆ(ಸ) ಸಲಾಮ್ ಹೇಳುವುದರ ಒಂದು ಅರ್ಥವು ನೀವು ಅವರ ಸಂಪೂರ್ಣ ಸುರಕ್ಷೆಗಾಗಿ ಪ್ರಾರ್ಥಿಸಿರಿ ಎಂದಾಗುತ್ತದೆ. ಇನ್ನೊಂದು ಅರ್ಥವು ನೀವು ಮನಸಾರೆ ಅವರಿಗೆ ನೆರವಾಗಿರಿ ಮತ್ತು ಅವರನ್ನು ವಿರೋಧಿಸದಿರಿ ಹಾಗೂ ಅವರ ನಿಷ್ಠ ಅನುಯಾಯಿಗಳಾಗಿರಿ ಎಂದಾಗುತ್ತದೆ.

ಈ ಆದೇಶ ಅವತೀರ್ಣಗೊಂಡಾಗ ಅನೇಕ ಸಹಾಬಿಗಳು, ಪ್ರವಾದಿವರ್ಯರೊಂದಿಗೆ(ಸ) ತಾವು ನಮಗೆ ಸಲಾಮ್ ಹೇಳುವ ವಿಧಾನವನ್ನು ಕಲಿಸಿದ್ದೀರಿ. (ಅಂದರೆ ನಮಾಝ್‌ನಲ್ಲಿ "ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವರಹ್ಮತುಲ್ಲಾಹಿ ವ ಬರಕಾತುಹೂ- ಪ್ರವಾದಿವರ್ಯರೆ! ತಮಗೆ ಸುರಕ್ಷೆಯಿರಲಿ ಮತ್ತು ಅಲ್ಲಾಹನ ಅನುಗ್ರಹ ಮತ್ತು ಸಮೃದ್ಧಿಗಳೂ ಇರಲಿ ಎಂದು ಹೇಳುವುದು ಹಾಗೂ ತಮ್ಮನ್ನು ಭೇಟಿಯಾಗುವಾಗ, "ಅಸ್ಸಲಾಮು ಅಲೈಕ ಯಾ ರಸೂಲಲ್ಲಾಹ್"- ಅಲ್ಲಾಹನ ಸಂದೇಶವಾಹಕರೇ ತಮ್ಮ ಮೇಲೆ ಶಾಂತಿಯಿರಲಿ ಎಂದು ಹೇಳುವುದು) ಇದಕ್ಕೆ ಉತ್ತರವೆಂಬಂತೆ ಬೇರೆ ಬೇರೆ ಜನರಿಗೆ ವಿವಿಧ ಸಂದರ್ಭಗಳಲ್ಲಿ ಕಲಿಸಿಕೊಟ್ಟ ಸ್ವಸ್ತಿವಚನಗಳನ್ನು ಈ ಕೆಳಗೆ ಕೊಡಲಾಗಿದೆ-

**ಕಲಅಬ್ ಬಿನ್ ಉಜ್ರಃ(ರ)**

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيمَ وَعَلٰى اٰلِ اِبْرَاهِيمَ اِنَّكَ حَمِيدٌ مَّجِيدٌ۔ وَ بَارِكْ عَلٰى مُحَمَّدٍ وَّ عَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيمَ وَ عَلٰى اٰلِ اِبْرَاهِيمَ اِنَّكَ حَمِيدٌ مَّجِيدٌ۔

"ಅಲ್ಲಾಹನೇ! ಮುಹಮ್ಮದ್(ಸ) ಮತ್ತವರ ಸಂತತಿಯ ಮೇಲೆ ಅನುಗ್ರಹಗಳನ್ನು ಸುರಿಸು- ಇಬ್‌ರಾಹೀಮ್(ಅ) ಮತ್ತವರ ಸಂತತಿಯ ಮೇಲೆ ಅನುಗ್ರಹ ಸುರಿಸಿದಂತೆ. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುತ್ತಿ. ಅಲ್ಲಾಹನೇ! ಮುಹಮ್ಮದ್(ಸ) ಮತ್ತವರ ಸಂತತಿಯವರಿಗೆ ಸಮೃದ್ಧಿ ದಯಪಾಲಿಸು, ಇಬ್‌ರಾಹೀಮ್ ಮತ್ತವರ ಸಂತತಿಯವರಿಗೆ ಸಮೃದ್ಧಿಯನ್ನು ದಯಪಾಲಿಸಿರುವಂತೆ. ಖಂಡಿತವಾಗಿಯೂ ನೀನೇ ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುತ್ತಿ."

ಈ ಸ್ವಸ್ತಿ ವಚನವನ್ನು ಅಲ್ಪಸ್ವಲ್ಪ ಪದಗಳ ವ್ಯತ್ಯಾಸದೊಂದಿಗೆ ಕಲಅಬ್ ಬಿನ್ ಉಜ್ರಾರಿಂದ ಬುಖಾರಿ, ಮುಸ್ಲಿಮ್, ಅಬೂದಾವೂದ್, ತಿರ್ಮಿದಿ, ನಸಾಈ, ಇಬ್ನುಮಾಜಃ, ಅಹ್ಮದ್, ಇಬ್ನುಅಬೀ ಶೈಬ, ಅಬ್ದುರ್ರಝ್ಝಾಕ್, ಇಬ್ನು ಅಬೀ ಹಾತಿಮ್ ಮತ್ತು ಇಬ್ನು ಜರೀರ್ ಮುಂತಾದವರು ಉಲ್ಲೇಖಿಸಿದ್ದಾರೆ.

ಇಬ್ನು ಅಬ್ಬಾಸ್(ರ): ಅವರಿಂದಲೂ ಸ್ವಲ್ಪ ವ್ಯತ್ಯಾಸದೊಂದಿಗೆ ಇದೇ ಪ್ರಸ್ತುತ ಸ್ವಸ್ತಿವಚನ ಉಲ್ಲೇಖಗೊಂಡಿದೆ.

(ಇಬ್ನು ಜರೀರ್)

**ಅಬೂಹುಮೈದ್ ಸಾಇದೀ(ರ)**

اَللّٰهُمَّ صَلِّ عَلٰى مُحَمَّدٍ وَاَزْوَاجِهِ وَذُرِّيَّتِهِ كَمَا صَلَّيْتَ عَلٰى اِبْرَاهِيمَ، وَ بَارِكْ عَلٰى مُحَمَّدٍ وَاَزْوَاجِهِ وَذُرِّيَّتِهِ كَمَا بَارَكْتَ عَلٰى اٰلِ اِبْرَاهِيمَ اِنَّكَ حَمِيدٌ مَّجِيدٌ

"ಅಲ್ಲಾಹನೇ! ಮುಹಮ್ಮದ್(ಸ) ಮತ್ತವರ ಪತ್ನಿಯರ ಹಾಗೂ ಸಂತಾನಗಳ ಮೇಲೆ ಅನುಗ್ರಹಗಳನ್ನು ಸುರಿಸು- ಇಬ್‌ರಾಹೀಮರ ಮೇಲೆ ಅನುಗ್ರಹ ಸುರಿಸಿದಂತೆ ಮತ್ತು ಮುಹಮ್ಮದ್(ಸ) ಮತ್ತವರ ಪತ್ನಿಯರ ಹಾಗೂ ಸಂತಾನಗಳಿಗೆ ಸಮೃದ್ಧಿ ನೀಡು- ಇಬ್‌ರಾಹೀಮರಿಗೆ ಸಮೃದ್ಧಿ ನೀಡಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುತ್ತಿ."

(ಮಾಲಿಕ್, ಅಹ್ಮದ್, ಬುಖಾರಿ, ಮುಸ್ಲಿಮ್, ನಸಾಈ, ಅಬೂದಾವೂದ್, ಇಬ್ನುಮಾಜಃ)

ಅಬೂಮಸ್‌ಊದ್ ಬದ್ರೀ(ರ)

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيمَ وَعَلٰى اٰلِ اِبْرَاهِيمَ وَبَارِكْ عَلٰى مُحَمَّدٍ وَّ عَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيمَ فِى الْعَالَمِينَ اِنَّكَ حَمِيدٌ مَّجِيدٌ۔

"ಅಲ್ಲಾಹನೇ! ಮುಹಮ್ಮದ್ ಮತ್ತು ಅವರ ಸಂತಾನಗಳ ಮೇಲೆ ಅನುಗ್ರಹಗಳನ್ನು ಸುರಿಸು- ಇಬ್‌ರಾಹೀಮ್ ಮತ್ತವರ ಸಂತಾನಗಳ ಮೇಲೆ ಅನುಗ್ರಹ ಸುರಿಸಿದಂತೆ ಮತ್ತು ಮುಹಮ್ಮದ್(ಸ) ಮತ್ತವರ ಸಂತಾನಗಳಿಗೆ ಸಮೃದ್ಧಿಯನ್ನು ದಯಪಾಲಿಸು. ಸರ್ವಲೋಕಗಳಲ್ಲಿ ಇಬ್‌ರಾಹೀಮ್(ಅ) ಮತ್ತವರ ಸಂತಾನಗಳಿಗೆ ಸಮೃದ್ಧಿಯನ್ನು ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನೇ ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುತ್ತಿ."

**(ಮಾಲಿಕ್, ಮುಸ್ಲಿಮ್, ಅಬೂದಾವೂದ್, ತಿರ್ಮಿದಿ, ನಸಾಈ, ಅಹ್ಮದ್, ಇಬ್ನು ಜರೀರ್, ಇಬ್ನು ಹಿಬ್ಬಾನ್, ಹಾಕಿಮ್)**

ಅಬೂಸಈದ್ ಖುದ್ರೀ(ರ)

اَللّٰهُمَّ صَلِّ عَلٰى مُحَمَّدٍ عَبْدِكَ وَرَسُولِك كَمَا صَلَّيْتَ عَلٰى اِبْرَاهِيمَ وَّبَارِكْ عَلٰى مُحَمَّدٍ وَعَلٰى اٰل مُحَمَّدٍ كَمَا بَارَكْتَ عَلٰى اِبْرَاهِيمَ

"ಅಲ್ಲಾಹನೇ! ನಿನ್ನ ದಾಸ ಮತ್ತು ಸಂದೇಶವಾಹಕರಾದ ಮುಹಮ್ಮದ್‌ರವರ(ಸ) ಮೇಲೆ ಅನುಗ್ರಹಗಳನ್ನು ಸುರಿಸು- ಇಬ್‌ರಾಹೀಮರ ಮೇಲೆ ಅನುಗ್ರಹ ಸುರಿಸಿದಂತೆ ಮತ್ತು ಮುಹಮ್ಮದ್ ಮತ್ತವರ ಸಂತಾನಗಳಿಗೆ ಸಮೃದ್ಧಿ ನೀಡು- ಇಬ್‌ರಾಹೀಮರಿಗೆ ಸಮೃದ್ಧಿ ನೀಡಿದಂತೆ."

**(ಅಹ್ಮದ್, ಬುಖಾರಿ, ನಸಾಈ, ಇಬ್ನುಮಾಜಃ)**

ಬುರೈದುತುಲ್ ಖುಝಾಈ

اَللّٰهُمَّ اجْعَلْ صَلٰوتَكَ وَرَحْمَتَكَ وَبَرَكَاتِكَ عَلٰى مُحَمَّدٍ وَّعَلٰى اٰلِ مُحَمَّدٍ كَمَا جَعَلْتَهَا عَلٰى اِبْرَاهِيْمَ اِنَّكَ حَمِيْدٌ مَّجِيْدٌ۔

"ಅಲ್ಲಾಹನೇ! ನಿನ್ನ ಅನುಗ್ರಹಗಳನ್ನು, ನಿನ್ನ ಕರುಣೆಯನ್ನು ಮತ್ತು ನಿನ್ನ ಸಮೃದ್ಧಿಯನ್ನು ಮುಹಮ್ಮದ್(ಸ) ಮತ್ತವರ ಸಂತಾನದ ಮೇಲೆ ಮಾಡು, ನೀನು ಇಬ್‌ರಾಹೀಮರಿಗೆ ಮಾಡಿದಂತೆ. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುವಿ."

(ಅಹ್ಮದ್, ಅಬ್ದುಬಿನ್ ಹುಮೈದ್, ಇಬ್ನು ಮರ್ದೂಯ)

ಅಬೂಹುರೈರಾ(ರ)

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ وَبَارِكْ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ وَ بَارَكْتَ عَلٰى اِبْرَاهِيمَ وَ عَلٰى اٰلِ اِبْرَاهِيمَ فِى الْعَالَمِينَ اِنَّكَ حَمِيدٌ مَّجِيدٌ۔

"ಅಲ್ಲಾಹನೇ! ಮುಹಮ್ಮದ್(ಸ) ಮತ್ತವರ ಸಂತಾನಗಳ ಮೇಲೆ ಅನುಗ್ರಹಗಳನ್ನೂ ಮುಹಮ್ಮದ್ ಮತ್ತವರ ಸಂತಾನಗಳ ಮೇಲೆ ಸಮೃದ್ಧಿಯನ್ನೂ ಸುರಿಸು. ಸಕಲ ಲೋಕಗಳಲ್ಲಿ ಇಬ್‌ರಾಹೀಮ್ ಮತ್ತವರ ಸಂತಾನಗಳ ಮೇಲೆ ಅನುಗ್ರಹಗಳನ್ನೂ ಸಮೃದ್ಧಿಯನ್ನೂ ಇಳಿಸಿದಂತೆ. ಖಂಡಿತವಾಗಿಯೂ ನೀನೇ ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುವಿ."

(ನಸಾಈ)

ತಲ್ಹಾ(ರ)

اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيمَ اِنَّكَ حَمِيدٌ مَّجِيدٌ وَ بَارِكْ عَلٰى مُحَمَّدٍ وَّ عَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيمَ اِنَّكَ حَمِيدٌ مَّجِيدٌ۔

"ಅಲ್ಲಾಹನೇ! ಮುಹಮ್ಮದ್(ಸ) ಮತ್ತವರ ಸಂತಾನಗಳ ಮೇಲೆ ಅನುಗ್ರಹಗಳನ್ನು ಸುರಿಸು. ಇಬ್‌ರಾಹೀಮರ ಮೇಲೆ ಅನುಗ್ರಹಗಳನ್ನು ಸುರಿಸಿದಂತೆ. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುವಿ ಮತ್ತು ಮುಹಮ್ಮದ್(ಸ) ಮತ್ತವರ ಸಂತಾನಗಳ ಮೇಲೆ ಸಮೃದ್ಧಿಯನ್ನು ಇಳಿಸು- ಇಬ್‌ರಾಹೀಮರ ಮೇಲೆ ಸಮೃದ್ಧಿಯನ್ನು ಇಳಿಸಿದಂತೆ. ಖಂಡಿತವಾಗಿಯೂ ನೀನು ಸ್ತುತ್ಯರ್ಹನೂ ಸನ್ಮಾನ್ಯನೂ ಆಗಿರುವಿ."

(ಇಬ್ನು ಜರೀರ್)

ಪ್ರಸ್ತುತ ಎಲ್ಲ ಸ್ವಸ್ತಿವಚನಗಳು ಪದಗಳ ವ್ಯತ್ಯಾಸದ ಹೊರತಾಗಿಯೂ ಅರ್ಥದಲ್ಲಿ ಸಮಾನವಾಗಿವೆ. ಅವುಗಳಲ್ಲಿ ಅಡಕವಾಗಿರುವ ಕೆಲವು ಪ್ರಮುಖ ಅಂಶಗಳು ಬಹಳ ಗಮನಾರ್ಹವಾಗಿದೆ-

ಒಂದನೆಯದಾಗಿ, ಈ ಎಲ್ಲ ಹದೀಸ್‌ಗಳಲ್ಲಿ ಪ್ರವಾದಿ(ಸ) ಮುಸ್ಲಿಮರೊಂದಿಗೆ ಹೇಳಿರುವುದೇನೆಂದರೆ, ನನ್ನ ಮೇಲೆ ಸಲಾತ್ (ಸ್ವಸ್ತಿವಚನ) ಕಳಿಸುವ ಅತ್ಯುತ್ತಮ ವಿಧಾನವು, ನೀವು ಅಲ್ಲಾಹನೊಂದಿಗೆ, 'ಅಲ್ಲಾಹನೇ! ನೀನು ಮುಹಮ್ಮದ್‌ರ(ಸ) ಮೇಲೆ ಸಲಾತ್ ಕಳಿಸು' ಎಂದು ಪ್ರಾರ್ಥಿಸುವುದಾಗಿದೆ. ಇದರ ಅರ್ಥ ತಿಳಿಯದ ಅವಿವೇಕಿಗಳು ಇದನ್ನು ಕೂಡಲೇ ಆಕ್ಷೇಪಿಸುತ್ತಾರೆ.

ಅಲ್ಲಾಹನು ನಮ್ಮೊಂದಿಗೆ, ನೀವು ನನ್ನ ಪ್ರವಾದಿಯ ಮೇಲೆ ಸಲಾತ್ ಕಳಿಸಿರಿ ಎಂದು ಹೇಳುತ್ತಿದ್ದಾನೆ. ಆದರೆ ನಾವು ತಿರುಗಿ ಅವನಲ್ಲೇ ನೀನು ಸಲಾತ್ ಕಳಿಸು ಎಂದು ಹೇಳುತ್ತಿದ್ದೇವೆ. ಇದು ಬಹಳ ವಿಚಿತ್ರವೆಂದು ಅವರು ಹೇಳುತ್ತಾರೆ. ವಸ್ತುತಃ ಈ ಮೂಲಕ ಅಲ್ಲಾಹನ ಪ್ರವಾದಿ(ಸ) ಜನರಿಗೆ ತಿಳಿಯಪಡಿಸುವುದೇನೆಂದರೆ, ನೀವು ನನ್ನ ಮೇಲೆ ಸಲಾತ್ ಕಳಿಸಬೇಕೆಂದು ಬಯಸಿದರೂ ಅದು ನಿಮ್ಮಿಂದ ಸಾಧ್ಯವಿಲ್ಲ. ಅದಕ್ಕಾಗಿ ಅಲ್ಲಾಹನೇ ನನ್ನ ಮೇಲೆ ಸಲಾತ್ ಹೇಳುವಂತೆ ಆತನಲ್ಲೇ ಪ್ರಾರ್ಥಿಸಬೇಕು. ನಮಗಂತೂ ಪ್ರವಾದಿಯವರ(ಸ) ಸ್ಥಾನವನ್ನು ಉನ್ನತ ಗೊಳಿಸಲು ಸಾಧ್ಯವಿಲ್ಲ. ಅಲ್ಲಾಹನೇ ಅದನ್ನು ಉನ್ನತಗೊಳಿಸಬಲ್ಲನು. ನಮಗೆ ಪ್ರವಾದಿವರ್ಯರ(ಸ) ಉಪಕಾರಗಳ ಪ್ರತಿಫಲ ನೀಡಲು ಸಾಧ್ಯವಿಲ್ಲ. ಅವರಿಗೆ ಅಲ್ಲಾಹನೇ ಪ್ರತಿಫಲ ನೀಡಬಲ್ಲನು. ನಾವು ಪ್ರವಾದಿವರ್ಯರನ್ನು(ಸ) ಜನಪ್ರಿಯಗೊಳಿಸಲು ಮತ್ತು ಅವರ ಧರ್ಮವನ್ನು ಅಭಿವೃದ್ಧಿಪಡಿಸಲು ಎಷ್ಟೇ ಪ್ರಯತ್ನಿಸಿದರೂ ಅಲ್ಲಾಹನ ಅನುಗ್ರಹ ಮತ್ತು ಆತನ ಅನುಜ್ಞೆಯಿಲ್ಲದಿದ್ದರೆ ಅದರಲ್ಲಿ ಯಶಸ್ವಿಯಾಗಲಾರೆವು. ಎಲ್ಲಿಯವರೆಗೆಂದರೆ ಪ್ರವಾದಿವರ್ಯರ(ಸ) ಪ್ರೀತಿ ಕೂಡಾ ಅಲ್ಲಾಹನ ಸಹಾಯದಿಂದಲೇ ನಮ್ಮ ಮನಸ್ಸಿನಲ್ಲಿ ಬೇರು ಬಿಡಬಲ್ಲುದು. ಅನ್ಯಥಾ ಶೈತಾನನು ಎಂತೆಂತಹ ಸಂದೇಹಗಳನ್ನು ಮನಸ್ಸಿನಲ್ಲಿ ಹಾಕಿ ನಮ್ಮನ್ನು ಪ್ರವಾದಿವರ್ಯರಿಂದ(ಸ) ಅಗಲುವಂತೆ ಮಾಡಬಲ್ಲನೆಂದು ಹೇಳುವಂತಿಲ್ಲ (ಅಲ್ಲಾಹನು ಅದರಿಂದ ನಮ್ಮನ್ನು ರಕ್ಷಿಸಲಿ). ಆದುದರಿಂದ ಅಲ್ಲಾಹನಲ್ಲೇ ಪ್ರವಾದಿವರ್ಯರಿಗೆ(ಸ) ಸಲಾತ್ ಕಳಿಸುವಂತೆ ಪ್ರಾರ್ಥಿಸುವುದರ ಹೊರತು ಪ್ರವಾದಿಯ ಮೇಲೆ ಸಲಾತ್ ಕಳಿಸುವ ಬೇರಾವ ಮಾರ್ಗವೂ ಇಲ್ಲ. 'ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್' ಎಂದು ಹೇಳುವ ವ್ಯಕ್ತಿಯು ನಿಜವಾಗಿ ಅಲ್ಲಾಹನ ಮುಂದೆ ತನ್ನ ದೈನ್ಯತೆಯನ್ನು ಒಪ್ಪಿಕೊಂಡು, ದೇವಾ! ನಿನ್ನ ಪ್ರವಾದಿಯ ಮೇಲೆ ಸಲಾತ್ ಕಳಿಸಲಿಕ್ಕಿರುವ ಬಾಧ್ಯತೆಯನ್ನು ನನ್ನಿಂದ ಪೂರೈಸಲು ಸಾಧ್ಯವಿಲ್ಲ. ಆದುದರಿಂದ ಆ ಕೆಲಸವನ್ನು ನನ್ನ ಪತಿಯಿಂದ ನೀನೇ ಮಾಡು. ಅದನ್ನು ಈಡೇರಿಸಲು ನನ್ನಿಂದ ಬೇಕಾದ ಸೇವೆಯನ್ನು ನೀನು ಪಡೆದು ಕೋ ಎಂದು ಬಿನ್ನವಿಸುತ್ತಾನೆ.

ಎರಡನೆಯದಾಗಿ, ತನಗಾಗಿ ಮಾತ್ರ ಈ ಪ್ರಾರ್ಥನೆಯನ್ನು ಸೀಮಿತಗೊಳಿಸುವುದನ್ನು ಪ್ರವಾದಿಯವರ(ಸ) ಔದಾರ್ಯ ಗುಣವು ಒಪ್ಪಲಿಲ್ಲ. ಅದರಲ್ಲಿ ಅವರು ತಮ್ಮ ಆಲ್, ಅಝ್ವಾಜ್ ಮತ್ತು ದುರ್‍ರಿಯತ್‌ರನ್ನೂ (ಸಂತಾನ, ಪತ್ನಿಯರು ಮತ್ತು ಮಕ್ಕಳು) ಸೇರಿಸಿದರು. ಪತ್ನಿಯರು ಮತ್ತು ಮಕ್ಕಳೆಂದರೆ ಎಲ್ಲರಿಗೂ ತಿಳಿದಿದೆ. ಆದರೆ ಆಲ್(ಸಂತಾನ) ಎಂಬುದು ಕೇವಲ ಪ್ರವಾದಿವರ್ಯರ(ಸ) ಕುಟುಂಬದವರಿಗೆ ಸೀಮಿತವಲ್ಲ. ಪ್ರವಾದಿವರ್ಯರ(ಸ) ಅನುಯಾಯಿಗಳು ಮತ್ತು ಅವರ ಮಾರ್ಗದಲ್ಲಿ ನಡೆಯುವವರೆಲ್ಲರೂ ಇದರಲ್ಲಿ ಸೇರಿದ್ದಾರೆ. ಅರಬಿ ನಿಘಂಟಿನ ಪ್ರಕಾರ ಆಲ್ ಮತ್ತು ಅಹ್ಲ್‌ನಲ್ಲಿ ವ್ಯತ್ಯಾಸವಿದೆ. ಒಬ್ಬನ ಸಂಗಾತಿ, ಸಹಾಯಕ ಮತ್ತು ಅನುಯಾಯಿಯಾದ ಎಲ್ಲರೂ ಅವನ ಆಲ್ ಎಂದು ಪರಿಗಣಿಸಲ್ಪಡುತ್ತಾರೆ. ಅವರು ಅವನ ಸಂಬಂಧಿಕರಿರಲಿ, ಅಲ್ಲದಿರಲಿ. ಅಹ್ಲ್ ಎಂಬ ಪದವನ್ನು ಒಬ್ಬನ ಸಂಬಂಧಿಕರಿಗೆ ಮಾತ್ರ ಬಳಸಲಾಗುತ್ತದೆ. ಅದರಲ್ಲಿ ಅವರ ಸಂಗಾತಿ, ಸಹಾಯಕ ಅಥವಾ ಅನುಯಾಯಿ ಇರಲಿ, ಇಲ್ಲದಿರಲಿ. ಕುರ್‌ಆನಿನಲ್ಲಿ 14 ಕಡೆ ಆಲು ಫಿರ್‌ಔನ್ ಎಂಬ ಪದ ಬಳಸಲ್ಪಟ್ಟಿದೆ. ಅಲ್ಲೆಲ್ಲಾ 'ಆಲ್' ಎಂದಿರುವುದು ಕೇವಲ ಫಿರ್‌ಔನನ ಕುಟುಂಬದವರನ್ನಲ್ಲ. ಬದಲಾಗಿ ಮೂಸಾರ(ಅ) ವಿರುದ್ಧ ಅವನ ಬೆಂಬಲಿಗರಾಗಿದ್ದವರೆಲ್ಲರ ಕುರಿತಾಗಿದೆ. (ಉದಾ: ಅಲ್ ಬಕರ: 49-50, ಆಲಿ ಇಮ್ರಾನ್: 11, ಅಲ್ ಅಅ್‌ರಾಫ್: 130, ಅಲ್ ಮೂಮಿನ್: 46) ಆದ್ದರಿಂದ ಆಲು

ುಹಮ್ಮದ್‌ನಲ್ಲಿ ಪ್ರವಾದಿ ಮುಹಮ್ಮದ್‌ರವರ(ಸ) ಜೀವನ ವಿಧಾನವನ್ನು ಅನುಸರಿಸದ ಯಾರೂ ರುವುದಿಲ್ಲ. ಅದು ಅವರ ಕುಟುಂಬದವರಾದರೂ ಸರಿ. ಪ್ರವಾದಿಯವರನ್ನು(ಸ) ಅನುಕರಿಸುವ ಲ್ಲರೂ ಆಲ್‌ನಲ್ಲಿ ಸೇರುತ್ತಾರೆ. ಅವರಿಗೆ ಪ್ರವಾದಿವರ್ಯರೊಂದಿಗೆ(ಸ) ಯಾವುದೇ ಕೌಟುಂಬಿಕ ಂಬಂಧವಿಲ್ಲದಿದ್ದರೂ ಸರಿ. ಆದರೆ ಪ್ರವಾದಿಯವರ(ಸ) ಕುಟುಂಬ ಸಂಬಂಧಿಯೂ ಅವರ ನುಯಾಯಿಗಳೂ ಆಗಿರುವವರು ಆಲು ಮುಹಮ್ಮದ್(ಮುಹಮ್ಮದ್‌ರ ಸಂತಾನ) ಆಗಲು ತರರಿಗಿಂತ ಹೆಚ್ಚು ಅರ್ಹರಾಗಿದ್ದಾರೆ.

ಮೂರನೆಯದಾಗಿ, ಪ್ರವಾದಿಯವರು(ಸ) ಕಲಿಸಿದ ಎಲ್ಲ ಸಲಾತ್‌ಗಳಲ್ಲೂ ಇಬ್‌ರಾಹೀಮ್(ಅ) ುತ್ತವರ ಸಂತಾನದ ಮೇಲೆ ಮಾಡಿದಂತಹದೇ ಅನುಗ್ರಹಗಳನ್ನು ಸುರಿಸಬೇಕೆಂಬ ವಿಷಯ ಿರಿದೆ. ಈ ವಿಷಯವನ್ನು ಗ್ರಹಿಸುವಲ್ಲಿ ಜನರು ಬಹಳ ಪೇಚಿಗೆ ಸಿಲುಕಿದ್ದಾರೆ. ಅದಕ್ಕೆ ವಿವಿಧ ್ಯಾಖ್ಯಾನಗಳನ್ನು ವಿದ್ವಾಂಸರು ನೀಡಿದ್ದಾರೆ. ಆದರೆ ಯಾವ ವ್ಯಾಖ್ಯಾನವೂ ಮನಸ್ಸಿಗೆ ಪ್ಪುವಂತಹದ್ದಲ್ಲ. ನನ್ನ ದೃಷ್ಟಿಯಲ್ಲಿ ಅದರ ಸರಿಯಾದ ವ್ಯಾಖ್ಯಾನ ಏನೆಂದರೆ (ಸರಿಯಾದ ್ಞಾನವಿರುವುದು ಅಲ್ಲಾಹನಿಗೆ ಮಾತ್ರ) ಅಲ್ಲಾಹನು ಯಾರಿಗೂ ಇಂದಿನ ವರೆಗೂ ಮಾಡಿರದಂತಹ ಂದು ವಿಶೇಷ ಅನುಗ್ರಹವನ್ನು ಇಬ್‌ರಾಹೀಮ್(ಅ) ಅವರಿಗೆ ಮಾಡಿರುವನು. ಅದೇನೆಂದರೆ, ್ರವಾದಿತ್ವ, ದಿವ್ಯವಾಣಿ ಮತ್ತು ದೇವಗ್ರಂಥವನ್ನು ಸನ್ಮಾರ್ಗದ ಮೂಲವೆಂದು ನಂಬುವ ್ರತಿಯೊಬ್ಬನೂ ಇಬ್‌ರಾಹೀಮ್‌ರವರ(ಅ) ನಾಯಕತ್ವವನ್ನು ಒಪ್ಪುತ್ತಾನೆ. ಆತ ಮುಸ್ಲಿಮನಾಗಿರಲಿ, ್ರೈಸ್ತನಾಗಿರಲಿ ಅಥವಾ ಯಹೂದಿಯೇ ಆಗಿರಲಿ. ಆದುದರಿಂದ ಪ್ರವಾದಿವರ್ಯರ(ಸ) ಮಾತಿನ ಂಗಿತವೇನೆಂದರೆ ಪ್ರವಾದಿ ಇಬ್‌ರಾಹೀಮ್(ಅ) ಅವರನ್ನು ಯಾವ ರೀತಿ ಅಲ್ಲಾಹನು ಎಲ್ಲ ್ರವಾದಿಗಳ ಅನುಯಾಯಿಗಳ ಮೂಲ ಪುರುಷನಾಗಿ ಮಾಡಿರುವನೋ ಅದೇ ರೀತಿ ನನ್ನನ್ನೂ ಾಡು. ಪ್ರವಾದಿತ್ವವನ್ನು ಒಪ್ಪುವ ಯಾರೂ ನನ್ನ ಪ್ರವಾದಿತ್ವದ ಮೇಲೆ ವಿಶ್ವಾಸ ತಾಳದೆ ರಬಾರದು ಎಂದಾಗಿದೆ.

ಪ್ರವಾದಿಯವರ(ಸ) ಮೇಲೆ ಸಲಾತ್ ಹೇಳುವುದು ಇಸ್ಲಾಮಿನ ಸಂಪ್ರದಾಯವಾಗಿದೆ. ಅವರ ೆಸರು ಪ್ರಸ್ತಾಪಿಸಲ್ಪಟ್ಟಾಗ ಅದನ್ನು ಹೇಳುವುದು ಉತ್ತಮವಾಗಿದೆ. ವಿಶೇಷವಾಗಿ ನಮಾಝ್‌ನಲ್ಲಿ ದನ್ನು ಪಠಿಸುವುದು ಸುನ್ನತ್ (ಪ್ರವಾದಿಚರ್ಯೆ) ಆಗಿದೆ. ಇದರಲ್ಲಿ ವಿದ್ವಾಂಸರು ಒಮ್ಮತ ಹೊಂದಿದ್ದಾರೆ. ಅದೇ ರೀತಿ ಜೀವನದಲ್ಲಿ ಒಮ್ಮೆ ಪ್ರವಾದಿವರ್ಯರ(ಸ) ಮೇಲೆ ಸಲಾತ್ ೇಳುವುದು ಕಡ್ಡಾಯವಾಗಿದೆ. ಏಕೆಂದರೆ ಅಲ್ಲಾಹನು ಸ್ಪಷ್ಟ ಮಾತುಗಳಲ್ಲಿ ಅದರ ಆಜ್ಞೆ ೀಡಿದ್ದಾನೆ. ಆದರೆ ಅದರ ನಂತರ ಸಲಾತ್ ಹೇಳುವುದರ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ಂಡು ಬರುತ್ತದೆ. ಇಮಾಮ್ ಶಾಫಿಈಯವರ ಪ್ರಕಾರ, ನಮಾಝ್‌ನ ಕೊನೆಯಲ್ಲಿ ತಶಹ್ಹುದ್ ಅತ್ತಹಿಯ್ಯಾತ್)ನಲ್ಲಿ ಪ್ರವಾದಿಯ ಮೇಲೆ ಸಲಾತ್ ಹೇಳುವುದು ಕಡ್ಡಾಯವಾಗಿದೆ. ಯಾರಾದರೂ ದನ್ನು ಹೇಳದಿದ್ದರೆ ಆತನ ನಮಾಝ್ ಸಿಂಧುವಲ್ಲ. ಸಹಾಬಿಗಳ ಪೈಕಿ ಇಬ್ನು ಮಸ್‌ಊದ್, ಬೂ ಮಸ್‌ಊದ್ ಅನ್ಸಾರಿ, ಇಬ್ನು ಉಮರ್ ಮತ್ತು ಜಾಬಿರ್ ಬಿನ್ ಅಬ್ದುಲ್ಲಾ(ರ), ಾಬಈಗಳ ಪೈಕಿ ಶಅ್‌ಬೀ, ಇಮಾಮ್ ಮುಹಮ್ಮದ್ ಬಾಕಿರ್, ಮುಹಮ್ಮದ್ ಬಿನ್ ಕಅಬ್ ಕುರ್ಝೀ ಮತ್ತು ಮುಕಾತಿಲ್ ಬಿನ್ ಹಯ್ಯಾನ್ ಹಾಗೂ ಕರ್ಮಶಾಸ್ತ್ರ ವಿದ್ವಾಂಸರ ಪೈಕಿ ಇಸ್‌ಹಾಕ್ ಬಿನ್ ರಾಹವಯ್ಹಿ ಅವರ ಅಭಿಪ್ರಾಯವೂ ಅದೇ ಆಗಿದೆ. ಇಮಾಮ್ ಅಹ್ಮದ್ ಬಿನ್ ಹಂಬಲ್ ಕೂಡಾ ಕೊನೆಯಲ್ಲಿ ಇದೇ ಅಭಿಪ್ರಾಯವನ್ನು ಹೊಂದಿದ್ದರು.

ಇಮಾಮ್ ಅಬೂ ಹನೀಫಾ, ಇಮಾಮ್ ಮಾಲಿಕ್ ಮತ್ತು ಬಹುಸಂಖ್ಯಾತ ವಿದ್ವಾಂಸ ಅಭಿಪ್ರಾಯವು ಜೀವಮಾನದಲ್ಲಿ ಒಮ್ಮೆ ಸಲಾತ್ ಹೇಳುವುದು ಕಡ್ಡಾಯವಾಗಿದೆ. ಇದು ಶಹಾದ ಕಲಿಮದಂತೆಯೇ ಆಗಿದೆ. ಒಬ್ಬನು ಒಮ್ಮೆ, ಅಲ್ಲಾಹನು ಆರಾಧ್ಯನೆಂದೂ ಮುಹಮ್ಮದ್(ಸ) ಅ ಸಂದೇಶವಾಹಕರೆಂದೂ ಹೇಳಿದರೆ ಅವನು ಕಡ್ಡಾಯ ಕರ್ತವ್ಯವನ್ನು ನಿರ್ವಹಿಸಿದನು. ಅದೇ ರೀ ಒಬ್ಬನು ಒಮ್ಮೆ ಸಲಾತ್ ಪಠಿಸಿದರೆ, ಪ್ರವಾದಿಯ ಮೇಲೆ ಸಲಾತ್ ಹೇಳಬೇಕೆಂಬ ಕಡ್ಡಾ ಕರ್ತವ್ಯದಿಂದ ವಿಮುಕ್ತನಾದನು. ಜೀವಮಾನದಲ್ಲೊಮ್ಮೆ ಪಠಿಸಿದ ಬಳಿಕ ಶಹಾದತ್ ಕಲಿ (ಪವಿತ್ರ ವಚನ) ಆಗಲಿ ಸಲಾತ್ ಆಗಲಿ ಕಡ್ಡಾಯವಲ್ಲ.

ಇನ್ನೊಂದು ವರ್ಗದ ವಿದ್ವಾಂಸರು ಅದನ್ನು ನಮಾಝ್‌ನಲ್ಲಿ ಪಠಿಸುವುದು ಕಡ್ಡಾಯ, ಆದ ಅದು ತಶಹ್ಹುದ್‌ನ ಜೊತೆಯಲ್ಲೇ ಆಗಿರಬೇಕೆಂದಿಲ್ಲ ಎನ್ನುತ್ತಾರೆ. ಮತ್ತೊಂದು ವರ್ಗ ವಿದ್ವಾಂಸರ ಅಭಿಪ್ರಾಯದಲ್ಲಿ ಪ್ರತಿಯೊಂದು ಪ್ರಾರ್ಥನೆಯ ವೇಳೆ ಸಲಾತ್ ಪಠಿಸುವು ಕಡ್ಡಾಯವಾಗಿದೆ. ಇನ್ನು ಕೆಲವರು, ಪ್ರವಾದಿಯವರ(ಸ) ಹೆಸರು ಪ್ರಸ್ತಾಪಿಸಲಾದಾಗಲೆಲ್ಲ ಸಲಾ ಪಠಿಸುವುದು ಕಡ್ಡಾಯವೆನ್ನುತ್ತಾರೆ. ಒಂದು ವರ್ಗದ ವಿದ್ವಾಂಸರ ಅಭಿಪ್ರಾಯದಲ್ಲಿ, ಒಂ ಸಭೆಯಲ್ಲಿ ಪ್ರವಾದಿಯವರ(ಸ) ಪ್ರಸ್ತಾಪ ಎಷ್ಟೇ ಬಾರಿ ಬಂದರೂ ಒಮ್ಮೆ ಮಾತ್ರ ಸಲಾ ಪಠಿಸುವುದು ಕಡ್ಡಾಯವಾಗಿದೆ.

ಈ ಭಿನ್ನಾಭಿಪ್ರಾಯಗಳೆಲ್ಲ ಸಲಾತ್ ಕಡ್ಡಾಯವೆಂಬ ಕುರಿತಾಗಿದೆ. ಇನ್ನು ಸಲಾತ್‌ನ ಮಹತ್ವ ಅದು ಬಹಳ ಪುಣ್ಯದಾಯಕ ಕರ್ಮವೆಂಬುದರ ಕುರಿತು ಇಡೀ ಮುಸ್ಲಿಮ್ ಸಮುದಾಯ ಒಮ್ಮ ತಾಳಿದೆ. ಸತ್ಯವಿಶ್ವಾಸದ ಸೋಂಕಾದರೂ ತಗಲಿರುವ ಯಾರೂ ಇದರ ಬಗ್ಗೆ ಚಕಾರವೆತ್ತಲಾರರ ಸ್ವಾಭಾವಿಕವಾಗಿಯೂ ಸಲಾತ್, ಮುಹಮ್ಮದ್(ಸ) ಅಲ್ಲಾಹನ ನಂತರ ನಮ್ಮ ಅತಿದೊ ಹಿತಾಕಾಂಕ್ಷಿಯೆಂದು ಭಾವಿಸುವ ಪ್ರತಿಯೊಬ್ಬ ಮುಸ್ಲಿಮನ ಮನದಾಳದಿಂದ ಹೊರಡುವುದ ಇಸ್ಲಾಮ್ ಮತ್ತು ಈಮಾನ್‌ನ ಬಗ್ಗೆ ಒಬ್ಬನ ಮನಸ್ಸಿನಲ್ಲಿ ಎಷ್ಟು ಗೌರವಭಾವನೆ ಇರುವುದೋ ಅಷ್ಟೇ ಹೆಚ್ಚು ಅವನ ಮನಸ್ಸಿನಲ್ಲಿ ಪ್ರವಾದಿಯವರ(ಸ) ಉಪಕಾರಗಳ ಬಗ್ಗೆಯು ಗೌರವಭಾವನೆಯಿರುವುದು. ಈ ಉಪಕಾರಗಳ ಸ್ಮರಣೆ ಎಷ್ಟು ಹೆಚ್ಚಿರುವುದೋ ಅಷ್ಟೇ ಹೆಚ ಅವನು ಪ್ರವಾದಿವರ್ಯರ(ಸ) ಮೇಲೆ ಸಲಾತ್ ಹೇಳುವನು. ಒಟ್ಟಿನಲ್ಲಿ ಸಲಾತ್‌ನ ಆಧಿಕ್ಯ ಒಬ್ಬನಿಗೆ ಮುಹಮ್ಮದ್‌ರವರ(ಸ) ಧರ್ಮದೊಂದಿಗೆ ಎಷ್ಟು ಗಾಢ ಸಂಬಂಧವಿದೆಯೆಂದ ಸತ್ಯವಿಶ್ವಾಸದ ಬೆಲೆ ಅವನ ಮನಸ್ಸಿನಲ್ಲಿ ಎಷ್ಟಿದೆಯೆಂದೂ ಅಳೆಯುವ ಒಂದು ಮಾಪಕವಾಗಿದ ಆದುದರಿಂದಲೇ ಪ್ರವಾದಿ(ಸ) ಹೇಳಿದರು- ಯಾರು ನನ್ನ ಮೇಲೆ ಸಲಾತ್ ಹೇಳುತ್ತಾನೋ ಅವನ ಸಲಾತ್ ಹೇಳುತ್ತಿರುವ ತನಕ ದೇವಚರರೂ ಅವನ ಮೇಲೆ ಸಲಾತ್ ಹೇಳುತ್ತಾರೆ.

(ಅಹ್ಮದ್, ಇಬ್ನುಮಾಜ

ಯಾರು ನನ್ನ ಮೇಲೆ ಒಂದು ಬಾರಿ ಸಲಾತ್ ಹೇಳುತ್ತಾನೋ ಅವನ ಮೇಲೆ ಅಲ್ಲಾಹನ ಹತ್ತು ಬಾರಿ ಸಲಾತ್ ಹೇಳುತ್ತಾನೆ. (ಮುಸ್ಲಿಮ್

ಪರಲೋಕದಲ್ಲಿ ನನ್ನೊಂದಿಗೆ ಇರಲು ಹೆಚ್ಚು ಅರ್ಹನಾದವನು ನನ್ನ ಮೇಲೆ ಅತಿ ಹೆಚ ಸಲಾತ್ ಹೇಳುವವನಾಗಿರುವನು. (ತಿರ್ಮಿದಿ) ನನ್ನ ಪ್ರಸ್ತಾಪ ಬಂದಾಗ ನನ್ನ ಮೇಲೆ ಸಲಾತ ಹೇಳದವನು ಲೋಭಿಯಾಗಿರುವನು.

(ತಿರ್ಮಿದಿ

ಪ್ರವಾದಿಯವರ(ಸ) ಹೊರತಾದ ಇತರರಿಗೆ 'ಅಲ್ಲಾಹುಮ್ಮ ಸಲ್ಲಿಅಲಾಫುಲಾನಿನ್' (ಅಲ್ಲಾಹನೇ ತಿಂಥವನನ್ನು ಅನುಗ್ರಹಿಸು) ಅಥವಾ 'ಸಲ್ಲಲ್ಲಾ ಅಲೈಹಿವಸಲ್ಲಮ್' ಎಂದೋ, ಅದೇ ರೀತಿಯ ರಾವುದೇ ಪದಗಳನ್ನು ಬಳಸಿ ಸಲಾತ್ ಹೇಳಬಹುದೇ ಎಂಬ ಬಗ್ಗೆ ವಿದ್ವಾಂಸರ ನಡುವೆ ನ್ನಾಭಿಪ್ರಾಯಗಳಿವೆ. ಕಾಝೀ ಅಯಾಝ್‌ರಂತಹ ವಿದ್ವಾಂಸರ ಒಂದು ವರ್ಗವು ಅದು ಮ್ಮತವೆಂದು ಹೇಳುತ್ತದೆ. ಈ ಮಂದಿಗೆ ಆಧಾರ, ಕುರ್‌ಆನಿನಲ್ಲಿ ಅಲ್ಲಾಹನೇ ಅನೇಕ ಕಡೆಗಳಲ್ಲಿ ವಾದಿಗಳಲ್ಲದವರಿಗೆ ಸಲಾತ್ ಹೇಳಿದ ಪ್ರಸ್ತಾಪವಿದೆಯೆಂಬುದಾಗಿದೆ.

ಉದಾ: "ಅವರ ಮೇಲೆ ಅವರ ಪ್ರಭುವಿನ ಕಡೆಯಿಂದ ಮಹಾ ಅನುಗ್ರಹ(ಸಲಾತ್)ಗಳಿರುವುವು." **:157)** ನೀವು ಅವರ ಸಂಪತ್ತುಗಳಿಂದ ಸದಕಾ(ದಾನಧರ್ಮ)ಗಳನ್ನು ಪಡೆದು ಅವರನ್ನು ದ್ಧೀಕರಿಸಿರಿ ಮತ್ತು (ಸನ್ಮಾರ್ಗದಲ್ಲಿ) ಅವರನ್ನು ಮುನ್ನಡೆಸಿರಿ. ಹಾಗೂ ಅವರಿಗಾಗಿ ಅನುಗ್ರಹದ(ಸಲ್ಲಿ) ರ್ಥನೆ ಮಾಡಿರಿ**(9 : 103).** ಅವನೇ ನಿಮ್ಮ ಮೇಲೆ ಅನುಗ್ರಹ(ಯುಸಲ್ಲಿ) ತೋರುವವನು ತ್ತು ದೇವಚರರು ನಿಮಗಾಗಿ ಪ್ರಾರ್ಥಿಸುತ್ತಾರೆ.**(33 : 43)**

ಅದೇ ರೀತಿ ಪ್ರವಾದಿ(ಸ) ಕೂಡಾ ವಿವಿಧ ಸಂದರ್ಭಗಳಲ್ಲಿ ಪ್ರವಾದಿಗಳಲ್ಲದವರಿಗೆ ಲಾತ್‌ನೊಂದಿಗೆ ಹರಸಿದ್ದಾರೆ. ಉದಾ: ಓರ್ವ ಸಹಾಬಿಗಾಗಿ ಪ್ರವಾದಿಯವರು(ಸ) 'ಅಲ್ಲಾಹುಮ್ಮ ಸಲ್ಲಿ ಲಾ ಆಲಿ ಅಬಿ ಅವುಫಾ' (ಅಲ್ಲಾಹನೇ! ಅಬೂ ಅವುಫಾರ ಕುಟುಂಬದವರ ಮೇಲೆ ಅನುಗ್ರಹ ೋರು) ಎಂದು ಪ್ರಾರ್ಥಿಸಿದ್ದಾರೆ. ಜಾಬಿರ್ ಬಿನ್ ಅಬ್ದುಲ್ಲಾರವರ(ರ) ಪತ್ನಿಯ ಕೋರಿಕೆಯ ೇರೆಗೆ ಪ್ರವಾದಿ(ಸ) ಹೀಗೆಂದರು- ಸಲ್ಲಲ್ಲಾಹು ಅಲೈಕಿ ವ ಅಲಾ ಝುವುಜಿಕಿ (ನಿನ್ನ ಮೇಲೆ ಮತ್ತು ನ್ನ ಪತಿಯ ಮೇಲೆ ಅಲ್ಲಾಹನ ಅನುಗ್ರಹವಿರಲಿ.) ಝಕಾತ್ ತಂದೊಪ್ಪಿಸುವವರ ಪರವಾಗಿ ವಾದಿ(ಸ), 'ಅಲ್ಲಾಹುಮ್ಮ ಸಲ್ಲಿ ಅಲೈಹಿಮ್' (ಅವರ ಮೇಲೆ ಅಲ್ಲಾಹನ ಅನುಗ್ರಹವಿರಲಿ.) ಂದು ಪ್ರಾರ್ಥಿಸುತ್ತಿದ್ದರು. ಸಅದ್ ಬಿನ್ ಉಬಾದಾರವರ(ರ) ಪರವಾಗಿ ಪ್ರವಾದಿ(ಸ) ಹೀಗೆ ರ್ಥಿಸಿದರು- 'ಅಲ್ಲಾಹುಮ್ಮಜ್ ಅಲ್ ಸಲಾತಕ ವರಹ್ಮತಕ ಅಲಾ ಆಲಿ ಸಅದಿ ಬಿನ್ ಬಾದಃ' (ಅಲ್ಲಾಹನೇ! ಸಅದ್ ಬಿನ್ ಉಬಾದರ ಕುಟುಂಬದವರ ಮೇಲೆ ನಿನ್ನ ಅನುಗ್ರಹ ಮತ್ತು ರುಣೆಯನ್ನು ಸುರಿಸು). ಸತ್ಯವಿಶ್ವಾಸಿಯ ಆತ್ಮದ ಕುರಿತು ಪ್ರವಾದಿಯವರು(ಸ), ದೇವಚರರು ಅವರ ರವಾಗಿ ಹೀಗೆ ಪ್ರಾರ್ಥಿಸುತ್ತಾರೆಂದು ಹೇಳಿದ್ದಾರೆ- 'ಸಲ್ಲಲ್ಲಾಹು ಅಲೈಕ ವಅಲಾಜಸದಿಕ' (ನಿನ್ನ ೕಲೆ ಮತ್ತು ನಿನ್ನ ಶರೀರದ ಮೇಲೆ ಅಲ್ಲಾಹನ ಅನುಗ್ರಹವಿರಲಿ). ಆದರೆ ಬಹುಸಂಖ್ಯಾತ ದ್ವಾಂಸರ ಪ್ರಕಾರ ಈ ರೀತಿ ಅಲ್ಲಾಹನೂ ಪ್ರವಾದಿಯೂ ಮಾಡುವುದು ಸರಿ, ಆದರೆ ನಾವು ಾಡುವುದು ಸರಿಯಲ್ಲ. ಮುಸ್ಲಿಮರು ಸಲಾತ್ ಮತ್ತು ಸಲಾಮನ್ನು ಪ್ರವಾದಿಗಳಿಗೆ ಹೇಳುವುದು ವರ ಲಾಂಛನವಾಗಿ ಬಿಟ್ಟಿದೆ. ಆದುದರಿಂದ ಪ್ರವಾದಿಗಳಲ್ಲದವರಿಗೆ ಹಾಗೆ ಹೇಳಬಾರದೆಂದು ವರು ಹೇಳುತ್ತಾರೆ. ಆದುದರಿಂದಲೇ ಹ. ಉಮರ್ ಬಿನ್ ಅಬ್ದುಲ್ ಅಝೀಝ್ ಒಮ್ಮೆ ಮ್ಮ ಓರ್ವ ರಾಜ್ಯಪಾಲನಿಗೆ ಹೀಗೆ ಪತ್ರ ಬರೆದರು- ಕೆಲವು ಪ್ರವಚನಕಾರರು ಪ್ರವಾದಿವರ್ಯರಿಗೆ(ಸ) ಲಾತ್ ಹೇಳುವ ರೀತಿಯಲ್ಲೇ ತಮ್ಮ ಮೇಲ್ವಿಚಾರಕರಿಗೂ ಬೆಂಬಲಿಗರಿಗೂ 'ಸಲಾತ್'ನ ಪದವನ್ನು ಳಸುತ್ತಿದ್ದಾರೆಂದು ಕೇಳಿದ್ದೇನೆ. ನನ್ನ ಈ ಪತ್ರ ತಲಪಿದ ನಂತರ ಅವರನ್ನು ಈ ಕೃತ್ಯದಿಂದ ಡೆಯಿರಿ. ಅವರು ಸಲಾತನ್ನು ಪ್ರವಾದಿಗಳಿಗೆ ಮಾತ್ರ ಸೀಮಿತಗೊಳಿಸುವಂತೆ ಆಜ್ಞಾಪಿಸಿರಿ. ಇತರ ಮುಸ್ಲಿಮರಿಗೆ ಕೇವಲ ಪ್ರಾರ್ಥನೆ ಮಾಡಿದರೆ ಸಾಕು. (ರೂಹುಲ್ ಮಆನಿ) ಬಹುಸಂಖ್ಯಾತ ದ್ವಾಂಸರ ಅಭಿಪ್ರಾಯದಲ್ಲಿ 'ಸಲ್ಲಲ್ಲಾಹು ಅಲೈಹಿ ವಸಲ್ಲಮ್' ಎಂಬ ಪದವನ್ನು ಪ್ರವಾದಿ(ಸ) ವರ ಹೊರತು ಇತರ ಪ್ರವಾದಿಗಳಿಗೂ ಬಳಸುವುದು ಸರಿಯಲ್ಲ.

ﮦ وَرَسُولَهُ لَعَنَهُمُ اللَّهُ فِي الدُّنْيَا وَالْآخِرَةِ وَأَعَدَّ لَهُمْ عَذَابًا مُهِينًا ﴿٥٧﴾
الَّذِينَ يُؤْذُونَ الْمُؤْمِنِينَ وَالْمُؤْمِنَاتِ بِغَيْرِ مَا اكْتَسَبُوا فَقَدِ احْتَمَلُوا
بُهْتَانًا وَإِثْمًا مُبِينًا ﴿٥٨﴾ يَا أَيُّهَا النَّبِيُّ قُلْ لِأَزْوَاجِكَ وَبَنَاتِكَ وَنِسَاءِ الْمُؤْمِنِينَ

(57-58) ಅಲ್ಲಾಹ್ ಮತ್ತು ಅವನ ಸಂದೇಶವಾಹಕರಿಗೆ ಕೀಟಲೆ ಕೊಡುವವರನ ಅಲ್ಲಾಹನು ಈ ಲೋಕದಲ್ಲೂ ಪರಲೋಕದಲ್ಲೂ ಶಪಿಸಿರುತ್ತಾನೆ ಮತ್ತು ಅವರಿಗಾ ಅಪಮಾನಕಾರಕ ಯಾತನೆಯನ್ನು ಸಿದ್ಧಗೊಳಿಸಿಟ್ಟಿರುತ್ತಾನೆ.[108] ಸತ್ಯವಿಶ್ವಾಸಿಗಳಿಗ ಸತ್ಯವಿಶ್ವಾಸಿನಿಯರಿಗೂ ವಿನಾಕಾರಣ ಕೀಟಲೆ ಕೊಡುವವರು ಒಂದು ಅತಿ ದೊಡ್ಡ ಸುಳ್ಳಾರೋಪ[109] ಹಾಗೂ ಸುವ್ಯಕ್ತ ಪಾಪದ ಹೊರೆಯನ್ನು ಹೊತ್ತುಕೊಂಡರು.

(59) ಪೈಗಂಬರರೇ, ತಮ್ಮ ಪತ್ನಿಯರೊಡನೆಯೂ ಪುತ್ರಿಯರೊಡನೆಯ ಸತ್ಯವಿಶ್ವಾಸಿನಿಯರೊಡನೆಯೂ ತಮ್ಮ ಮೇಲೆ ತಮ್ಮ ಚಾದರಗಳ ಸೆರಗನ್ನು ಇಳಿಸಿಕೊಳ್ಳ ಬೇಕೆಂದು ಹೇಳಿಬಿಡಿರಿ.[110] ಅವರು ಗುರುತಿಸಲ್ಪಡುವಂತಾಗಲಿಕ್ಕೂ ಸತಾಯಿಸಲ್ಪ

108. 'ಅಲ್ಲಾಹನಿಗೆ ಕೀಟಲೆ ಕೊಡುವವರು' ಎಂಬುದರ ಎರಡು ತಾತ್ಪರ್ಯಗಳಿವೆ: 1 ಅವನನ್ನು ಧಿಕ್ಕರಿಸಿ ಸತ್ಯನಿಷೇಧ, ಬಹುದೇವತ್ವ ಮತ್ತು ನಾಸ್ತಿಕತೆಯನ್ನು ಅವಲಂಬಿಸುವುದು ಮತ್ತ ಅವನು ಹರಾಮ್‌ಗೊಳಿಸಿರುವುದನ್ನು ಹಲಾಲ್‌ಗೊಳಿಸುವುದು. 2) ಆತನ ಪ್ರವಾದಿ ಕಿರುಕುಳಕೊಡುವುದು. ಏಕೆಂದರೆ ಪ್ರವಾದಿಯ ಅನುಸರಣೆಯು ಅಲ್ಲಾಹನ ಅನುಸರಣೆಯಾಗಿದ ಅದೇ ರೀತಿ ಪ್ರವಾದಿಯ ಅವಹೇಳನವು ಅಲ್ಲಾಹನ ಅವಹೇಳನವಾಗಿದೆ. ಪ್ರವಾದಿಯ ವಿರೋಧವ ಅಲ್ಲಾಹನ ವಿರೋಧವಾಗಿದೆ ಮತ್ತು ಪ್ರವಾದಿಯ ಆಜ್ಞೋಲ್ಲಂಘನೆಯು ಅಲ್ಲಾಹನ ಆಜ್ಞೋಲ್ಲಂಘನೆಯಾಗಿದೆ.

109. ಈ ಸೂಕ್ತವು ಸುಳ್ಳಾರೋಪದ ಅರ್ಥವನ್ನು ನಿರ್ಣಯಿಸುತ್ತದೆ. ಅಂದರೆ ಒಬ್ಬನಲ್ಲಿ ಇಲ್ಲದ ಒಂದು ಕುಂದನ್ನು ಅವನಲ್ಲಿದೆಯೆಂದು ಹೇಳುವುದು ಅಥವಾ ಅವನು ಮಾಡದ ತಪ್ಪನ್ನು ಮಾಡಿದ್ದಾನೆಂದು ಆರೋಪಿಸುವುದು. ಪ್ರವಾದಿಯವರು(ಸ) ಕೂಡಾ ಇದನ್ನು ವಿವರಿಸಿದ್ದಾರೆ. ಪ್ರವಾದಿಯವರಲ್ಲಿ(ಸ) ಗೀಬತ್ (ಪರನಿಂದೆ) ಎಂದರೇನೆಂದು ಕೇಳಲಾದಾಗ, ನೀನು ನಿನ್ನ ಸಹೋದರನ ವಿಷಯವನ್ನು ಅವನಿಗೆ ಅರೋಚಕವಾದ ರೀತಿಯಲ್ಲಿ ಪ್ರಸ್ತಾಪಿಸುವುದು ಎಂದುತ್ತರಿಸಿದರು. ಆ ಕುಂದು ಅವನಲ್ಲಿ ಇದ್ದರೆ? ಎಂದು ಕೇಳಲಾದಾಗ, ನೀನು ಪ್ರಸ್ತಾಪಿಸಿದ ಕುಂದು ಆತನಲ್ಲಿದ್ದರೆ ನೀನು ಅವನ ಗೀಬತ್ ಮಾಡಿದೆ. ಒಂದು ವೇಳೆ ಅದು ಅವನಲ್ಲಿಲ್ಲದಿದ್ದರೆ ನೀನು ಅವನ ಮೇಲೆ ಸುಳ್ಳಾರೋಪ ಹೊರಿಸಿದೆ ಎಂದು ಪ್ರವಾದಿ(ಸ) ಹೇಳಿದರು. (ಅಬೂದಾವೂದ್, ತಿರ್ಮಿದಿ) ಇದು ಕೇವಲ ಪರಲೋಕದಲ್ಲಿ ಶಿಕ್ಷೆ ಲಭಿಸತಕ್ಕ ನೈತಿಕ ಕೆಡುಕಲ್ಲ. ಬದಲಾಗಿ ಇಸ್ಲಾಮಿ ಆಡಳಿತ ನಿಯಮದಲ್ಲೂ ಸುಳ್ಳಾರೋಪ ಹೊರಿಸುವುದು ಈ ಸೂಕ್ತದ ಪ್ರಕಾರ ದಂಡನಾರ್ಹ ಅಪರಾಧವಾಗಿದೆ.

110. 'ಯುದ್‌ನೀನ ಅಲೈಹಿನ್ನ ಮಿನ್ ಜಲಾಬೀಬಿ ಹಿನ್ನ' (ಅವರು ತಮ್ಮ ಮೇಲೆ ತಮ್ಮ ಚಾದರಗಳ ಸೆರಗನ್ನು ಇಳಿಸಿಕೊಳ್ಳಲಿ) ಎಂಬುದು ಮೂಲ ಪದಗಳಾಗಿವೆ. ಜಿಲ್‌ಬಾಬ್ ಎಂದು

ಅರಬಿಯಲ್ಲಿ ದೊಡ್ಡ ಚದ್ದರಕ್ಕೆ ಹೇಳುತ್ತಾರೆ. ಇದ್‌ನಾ ಎಂಬ ಪದದ ಮೂಲಾರ್ಥ ಹತ್ತಿರಗೊಳಿಸು ಮತ್ತು ಸುತ್ತಿಕೊಳ್ಳು ಎಂದಾಗಿದೆ. ಆದರೆ ಅದಕ್ಕೆ 'ಅಲಾ' ಸೇರಿಸಿದರೆ ಇರ್‌ಖಾ, ಮೇಲಿನಿಂದ ನೇತಾಡಿಸುವುದು ಎಂಬ ಅರ್ಥ ಬರುತ್ತದೆ. ಆಧುನಿಕ ಕಾಲದ ಕೆಲವು ಕುರ್‌ಆನ್ ಭಾಷಾಂತರಕಾರರು ಮತ್ತು ವ್ಯಾಖ್ಯಾನಕಾರರು ಪಾಶ್ಚಾತ್ಯ ವಿಚಾರಗಳಿಂದ ಪ್ರಭಾವಿತರಾಗಿ ಈ ಪದವನ್ನು ಸುತ್ತಿಕೊಳ್ಳುವುದು ಎಂದು ಭಾಷಾಂತರಿಸಿದ್ದಾರೆ. ಯಾವ ರೀತಿಯಿಂದಲಾದರೂ ಮುಖ ಮುಚ್ಚುವುದರಿಂದ ಪಾರಾಗಬೇಕೆಂಬುದೇ ಅವರ ಉದ್ದೇಶ. ಆದರೆ ಈ ಮಂದಿ ವಿವರಿಸುವ ಇಂಗಿತವೇ ಅಲ್ಲಾಹನದ್ದೂ ಆಗಿರುತ್ತಿದ್ದರೆ ಅವನು 'ಯುದ್‌ನೀನ ಇಲೈಹಿನ್ನ' ಎಂದು ಹೇಳುತ್ತಿದ್ದನು. ಅರಬಿ ಬಲ್ಲ ಯಾರೂ ಯುದ್‌ನೀನ ಅಲೈಹಿನ್ನ' ಎಂದರೆ ಕೇವಲ ಸುತ್ತಿಕೊಳ್ಳುವುದು ಎಂದು ಅರ್ಥೈಸುವುದನ್ನು ಒಪ್ಪಲಾರ. ಅಲ್ಲದೆ 'ಮಿನ್ ಜಲಾಬೀಬಿಹಿನ್ನ' ಎಂಬ ಪದವು ಈ ಅರ್ಥಕ್ಕೆ ಅವಕಾಶಕೊಡುವುದಿಲ್ಲ. ಇಲ್ಲಿ ಮಿನ್ ಎಂದಿರುವುದು ಚದ್ದರದ ಒಂದು ಭಾಗಕ್ಕೆ ಎಂಬುದು ವ್ಯಕ್ತ. ಸುತ್ತುವುದಾದರೆ ಇಡೀ ಚದ್ದರವನ್ನು ಸುತ್ತಿಕೊಳ್ಳಬೇಕೇ ಹೊರತು ಅದರ ಒಂದು ಭಾಗವನ್ನಲ್ಲವೆಂಬುದೂ ಅಷ್ಟೇ ಸರಿ. ಆದುದರಿಂದ, ಸ್ತ್ರೀಯರು ತಮ್ಮ ಚದ್ದರಗಳನ್ನು ಚೆನ್ನಾಗಿ ಸುತ್ತಿಕೊಂಡು ಅದರ ಒಂದು ಭಾಗವನ್ನು ಅಥವಾ ಸೆರಗನ್ನು ಇಳಿಬಿಡಬೇಕೆಂಬುದು ಸೂಕ್ತದ ಸ್ಪಷ್ಟ ಅರ್ಥವಾಗಿದೆ. ಅದನ್ನೇ ಪರಿಚಿತ ಭಾಷೆಯಲ್ಲಿ 'ಮುಖಪರದೆ' ಎನ್ನುತ್ತಾರೆ.

ಪ್ರವಾದಿಯವರ(ಸ) ಕಾಲಕ್ಕೆ ಸಮೀಪದ ದೊಡ್ಡ ವ್ಯಾಖ್ಯಾನಕಾರರು ಅದೇ ಅರ್ಥವನ್ನು ನೀಡಿದ್ದಾರೆ. ಮುಹಮ್ಮದ್ ಬಿನ್ ಸೀರೀನ್ ಅವರು ಉಬೈದ ಸಲ್ಮಾನಿ(ಇವರು ಪ್ರವಾದಿಯವರ(ಸ) ಕಾಲದಲ್ಲಿ ಇಸ್ಲಾಮ್ ಸ್ವೀಕರಿಸಿದ್ದರು. ಆದರೆ ಪ್ರವಾದಿವರ್ಯರನ್ನು(ಸ) ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಹ. ಉಮರ್‌ರವರ(ರ) ಕಾಲದಲ್ಲಿ ಮದೀನಾಕ್ಕೆ ಬಂದು ಅಲ್ಲೇ ನೆಲೆಸಿದರು. ಅವರನ್ನು ಕರ್ಮಶಾಸ್ತ್ರ ಮತ್ತು ನ್ಯಾಯಶಾಸ್ತ್ರದಲ್ಲಿ ಕಾಝೀ ಶುರೈಹ್‌ರ ಸ್ಥಾನದವರೆಂದು ಪರಿಗಣಿಸಲಾಗುತ್ತಿತ್ತು)ಯವರೊಂದಿಗೆ ಈ ಸೂಕ್ತದ ತಾತ್ಪರ್ಯವೇನೆಂದು ಕೇಳಿದಾಗ, ಅವರು ಉತ್ತರವಾಗಿ ಏನೂ ಹೇಳುವುದರ ಬದಲು ತನ್ನ ಚದ್ದರವನ್ನು ಇಡೀ ತಲೆ, ಹಣೆ ಮತ್ತು ಮುಖಕ್ಕೆ ಸುತ್ತಿಕೊಂಡರು. ಕೇವಲ ಕಣ್ಣಿನ ಭಾಗವನ್ನು ಬಿಟ್ಟರು (ವರದಿ: ಇಬ್ನು ಜರೀರ್ ಮತ್ತು ಇಬ್ನು ಮುಂದಿರ್) ಇಬ್ನು ಅಬ್ಬಾಸ್(ರ) ಕೂಡಾ ಸರಿಸುಮಾರು ಇದೇ ವ್ಯಾಖ್ಯಾನವನ್ನು ನೀಡಿದ್ದಾರೆ. ಇಬ್ನು ಜರೀರ್, ಇಬ್ನು ಅಬೀಹಾತಿಮ್ ಮತ್ತು ಇಬ್ನು ಮರ್ದೂಯ ಅವರು ಉಲ್ಲೇಖಿಸಿದ ಅವರ ಹೇಳಿಕೆಗಳಲ್ಲಿ ಹೀಗೆ ಹೇಳುತ್ತಾರೆ, "ಅಲ್ಲಾಹನು ಸ್ತ್ರೀಯರಿಗೆ ಅವರು ಮನೆಯಿಂದ ಯಾವುದೇ ಕಾರ್ಯಕ್ಕಾಗಿ ಹೊರಗೆ ಹೋಗುವಾಗ ತಮ್ಮ ಚದ್ದರದ ಸೆರಗನ್ನು ತಮ್ಮ ಮೇಲೆ ಹಾಕಿ ತಮ್ಮ ಮುಖವನ್ನು ಮರೆಸಬೇಕು ಮತ್ತು ಕೇವಲ ತಮ್ಮ ಕಣ್ಣುಗಳನ್ನು ತೆರೆದಿರಿಸಬೇಕು" ಎಂದು ಆಜ್ಞಾಪಿಸಿದ್ದಾನೆ. ಕತಾದಾ ಮತ್ತು ಸುದ್ದೀಯವರೂ ಈ ಸೂಕ್ತಕ್ಕೆ ಇದೇ ಅರ್ಥವನ್ನು ನೀಡಿದ್ದಾರೆ.

ಸಹಾಬಿಗಳ ಮತ್ತು ತಾಬಿಈಗಳ ಕಾಲದ ನಂತರ ಗತಿಸಿದ ದೊಡ್ಡದೊಡ್ಡ ವ್ಯಾಖ್ಯಾನಕಾರರು ಒಮ್ಮತದಿಂದ ಈ ಸೂಕ್ತಕ್ಕೆ ಅದೇ ಅರ್ಥವನ್ನು ನೀಡಿದ್ದಾರೆ. ಇಮಾಮ್ ಇಬ್ನು ಜರೀರ್ ತಬರಿ ಹೇಳುತ್ತಾರೆ, "ಯುದ್‌ನೀನ ಅಲೈಹಿನ್ನ ಮಿನ್ ಜಲಾಬೀಬಿಹಿನ್ನ" ಎಂದರೆ ಸ್ತ್ರೀಯರು ತಮ್ಮ ದಾಸಿಯರಂತೆ ತಮ್ಮ ಮುಖ ಮತ್ತು ತಲೆಗೂದಲು ಕಾಣುವ ರೀತಿಯಲ್ಲಿ ಉಡುಪು ಧರಿಸಿ ಮನೆಯಿಂದ ಹೊರಡದಿರಲಿ. ಕಿಡಿಗೇಡಿಗಳು ಅವರನ್ನು ಛೇಡಿಸದಂತಾಗಲು ಅವರು ತಮ್ಮ ಮೇಲೆ ತಮ್ಮ ಚದ್ದರಗಳ ಒಂದು ಭಾಗವನ್ನು ನೇತಾಡಿಸಿಹಾಕಬೇಕು.

(ಜಾಮಿಉಲ್ ಬಯಾನ್ ಭಾಗ- 22, ಪುಟ : 33)

ಅಲ್ಲಾಮಾ ಅಬೂಬಕರ್ ಜಸ್ಸಾಸ್ ಹೇಳುತ್ತಾರೆ- ಯುವತಿಯರು ಪರಪುರುಷರಿಂದ ತಮ್ಮ ಮುಖವನ್ನು ಮರೆಸಬೇಕೆಂಬ ಆಜ್ಞೆಯಿದೆಯೆಂದು ಈ ಸೂಕ್ತವು ಸ್ಪಷ್ಟಪಡಿಸುತ್ತದೆ. ಅವರು ಮನೆಯಿಂದ ಹೊರಡುವಾಗ ವಿಷಯಲಂಪಟರು ಅವರನ್ನು ನೋಡಿ ಯಾವುದೇ ದುರಾಸೆಗೊಳಗಾಗದಂತೆ ತಮ್ಮ ಶರೀರ ಮತ್ತು ಪಾವಿತ್ರ್ಯವನ್ನು ಕಾಪಾಡಿಕೊಂಡು ನಡೆಯಬೇಕು.

(ಅಹ್‌ಕಾಮುಲ್ ಕುರ್‌ಆನ್, ಭಾಗ : 3, ಪುಟ : 458)

ಅಲ್ಲಾಮಾ ಝುಮಖ್ಷರೀ ಹೇಳುತ್ತಾರೆ, 'ಯುದ್‌ನೀನ ಅಲೈಹಿನ್ನ ಮಿನ್ ಜಲಾಬೀಬಿಹಿನ್ನ' ಅಂದರೆ ಅವರು ತಮ್ಮ ಮೇಲೆ ತಮ್ಮ ಚದ್ದರದ ಒಂದು ಭಾಗವನ್ನು ನೇತು ಹಾಕಬೇಕು ಮತ್ತು ತಮ್ಮ ಮುಖ ಮತ್ತು ದೇಹದ ಭಾಗಗಳನ್ನು ಚೆನ್ನಾಗಿ ಮುಚ್ಚಿಕೊಳ್ಳಬೇಕು.

(ಕಶ್ಶಾಫ್, ಭಾಗ : 2 - ಪುಟ : 221)

ಅಲ್ಲಾಮಾ ನಿಝಾಮುದ್ದೀನ್ ನೀಶಾಪುರಿ ಹೇಳುತ್ತಾರೆ- ಅಂದರೆ ಅವರು ತಮ್ಮ ಮೇಲೆ ಚದ್ದರದ ಒಂದು ಭಾಗವನ್ನು ನೇತುಹಾಕಬೇಕು. ಈ ರೀತಿ ಸ್ತ್ರೀಯರಿಗೆ ತಲೆ ಮತ್ತು ಮುಖವನ್ನು ಮರೆಸುವಂತೆ ಆಜ್ಞಾಪಿಸಲಾಗಿದೆ. (ಗರಾಯಿಬುಲ್ ಕುರ್‌ಆನ್, ಭಾಗ : 22 ಪುಟ : 32)

ಇಮಾಮ್ ರಾಝೀ ಹೇಳುತ್ತಾರೆ, "ಇದರ ಉದ್ದೇಶವು, ಈ ಸ್ತ್ರೀಯರು ದುಷ್ಟಚಾಳಿಯವರಲ್ಲವೆಂದು ಜನರಿಗೆ ತಿಳಿಯ ಪಡಿಸುವುದಾಗಿದೆ. ಏಕೆಂದರೆ ಮುಖವು ಸತ್ರ್ (ಕಡ್ಡಾಯವಾಗಿ ಮರೆಸಬೇಕಾದ ಭಾಗ) ಅಲ್ಲವಾದರೂ ತನ್ನ ಮುಖವನ್ನು ಮರೆಸುವ ಸ್ತ್ರೀಯ ಬಗ್ಗೆ, ಆಕೆ ತನ್ನ ಗುಪ್ತ ಭಾಗಗಳನ್ನು ಪರಪುರುಷರ ಮುಂದೆ ಪ್ರಕಟ ಪಡಿಸ ಬಲ್ಲಳು ಎಂದು ಯಾರೂ ನಿರೀಕ್ಷಿಸುವಂತಿಲ್ಲ. ಈ ರೀತಿ ಪ್ರತಿಯೊಬ್ಬನೂ, ಇವರು ಪರ್ದಾಧಾರಿ ಹೆಂಗಸರಾಗಿದ್ದು ಇವರಿಂದ ವ್ಯಭಿಚಾರದ ನಿರೀಕ್ಷೆಯಿಡುವಂತಿಲ್ಲವೆಂದು ತಿಳಿದುಕೊಳ್ಳುವನು."

(ತಫ್ಸೀರ್‌ಕಬೀರ್, ಭಾಗ-6, ಪುಟ: 591)

ಈ ಸೂಕ್ತದಿಂದ ಸೂಚ್ಯವಾಗಿ ತಿಳಿಯುವ ಇನ್ನೊಂದು ವಿಷಯವೇನೆಂದರೆ ಇದರಿಂದ ಪ್ರವಾದಿವರ್ಯರಿಗೆ(ಸ) ಅನೇಕ ಪುತ್ರಿಯರಿದ್ದರೆಂದು ಸಾಬೀತಾಗುತ್ತದೆ. ಏಕೆಂದರೆ ಅಲ್ಲಾಹನು ಹೀಗೆ ಹೇಳುತ್ತಾನೆ, "ಓ ಪ್ರವಾದಿ! ನಿಮ್ಮ ಪತ್ನಿಯರೊಡನೆ- ಪುತ್ರಿಯರೊಡನೆ ಹೇಳಿರಿ." ಈ ಪದಗಳಿಂದ ಪ್ರವಾದಿಯವರಿಗೆ(ಸ) ಫಾತಿಮಾ(ರ) ಎಂಬ ಕೇವಲ ಓರ್ವ ಪುತ್ರಿಯಿದ್ದು ಉಳಿದವರೆಲ್ಲ ಪ್ರವಾದಿ ಪತ್ನಿಯರ ಪೂರ್ವ ಪತಿಯಂದಿರ ಪುತ್ರಿಯರಾಗಿದ್ದರೆಂದು ದೇವಭಯವಿಲ್ಲದೆ ನಿಸ್ಸಂಕೋಚವಾಗಿ ಹೇಳುವವರ ಮಾತಿನ ಖಂಡನೆಯಾಗುತ್ತದೆ. ಈ ಮಂದಿ ಪಕ್ಷಪಾತದಿಂದ ಕುರುಡಾಗಿ, ಪ್ರವಾದಿ ಸಂತತಿಯ ಪೀಳಿಗೆಯನ್ನು ನಿರಾಕರಿಸುವ ಮೂಲಕ ಎಷ್ಟು ದೊಡ್ಡ ಅಪರಾಧವೆಸಗುತ್ತಾರೆ ಮತ್ತು ಅದಕ್ಕೆ ಪರಲೋಕದಲ್ಲಿ ಎಂತಹ ಕಠಿಣ ವಿಚಾರಣೆ ಎದುರಿಸಬೇಕಾದೀತೆಂದು ಆಲೋಚಿಸುವುದಿಲ್ಲ. ಎಲ್ಲ ಅಧಿಕೃತ ವರದಿಗಳು ಪ್ರವಾದಿವರ್ಯರಿಗೆ(ಸ) ಖದೀಜಾರಿಂದ ಕೇವಲ ಫಾತಿಮಾ ಅಲ್ಲದೆ ಇನ್ನೂ ಮೂವರು ಪುತ್ರಿಯರು ಜನಿಸಿದ್ದರೆಂಬ ಬಗ್ಗೆ ಒಮ್ಮತ ಹೊಂದಿವೆ. ಪ್ರಾಚೀನ ಚರಿತ್ರಕಾರ ಮುಹಮ್ಮದ್ ಬಿನ್ ಇಸ್‌ಹಾಕ್ ಅವರು ಹ. ಖದೀಜಾರೊಂದಿಗೆ ಪ್ರವಾದಿವರ್ಯರ(ಸ) ವಿವಾಹದ ಕುರಿತು ಪ್ರಸ್ತಾಪಿಸಿದ ಬಳಿಕ ಹೇಳುತ್ತಾರೆ, ಇಬ್‌ರಾಹೀಮ್‌ರ ಹೊರತು ಪ್ರವಾದಿಯವರ(ಸ) ಇತರೆಲ್ಲ ಮಕ್ಕಳು ಅವರಿಂದಲೇ ಜನಿಸಿದರು. ಅವರ ಹೆಸರುಗಳು ಹೀಗಿವೆ- ಕಾಸಿಮ್, ತಾಹಿರ್ ತಯ್ಯಿಬ್, ಝೈನಬ್, ರುಕಿಯ್ಯಾ, ಉಮ್ಮುಕುಲ್ಸೂಮ್ ಮತ್ತು ಫಾತಿಮಾ.

(ಸೀರತ್ ಇಬ್ನು ಹಿಶಾಮ್ ಭಾಗ: 1- ಪುಟ: 202)

يُدْنِيْنَ عَلَيْهِنَّ مِنْ جَلَابِيْبِهِنَّ ۚ ذٰلِكَ اَدْنٰٓى اَنْ يُّعْرَفْنَ فَلَا يُؤْذَيْنَ ۚ وَ
كَانَ اللّٰهُ غَفُوْرًا رَّحِيْمًا ۞ لَئِنْ لَّمْ يَنْتَهِ الْمُنٰفِقُوْنَ وَالَّذِيْنَ فِيْ قُلُوْبِهِمْ

ಏರಲಿಕ್ಕೂ ಇದು ಹೆಚ್ಚು ಸೂಕ್ತವಾದ ವಿಧಾನ.[111] ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.[112]

ಪ್ರಸಿದ್ಧ ವಂಶಶಾಸ್ತ್ರ ತಜ್ಞರಾಗಿದ್ದ ಹಿಶಾಮ್ ಬಿನ್ ಮುಹಮ್ಮದ್ ಬಿನ್ ಸಾಯಿಬ್ ಕಲ್ಬೀ ಹೇಳುತ್ತಾರೆ- ಮಕ್ಕಾದಲ್ಲಿ ಪ್ರವಾದಿತ್ವಕ್ಕೆ ಮುಂಚೆ ಮೊತ್ತ ಮೊದಲು ಕಾಸಿಮ್ ಹುಟ್ಟಿದರು. ಅನಂತರ ಅನುಕ್ರಮವಾಗಿ ಝೈನಬ್, ರುಕಿಯ್ಯಾ ಮತ್ತು ಉಮ್ಮುಕುಲ್ಸೂಮ್ ಹುಟ್ಟಿದರು. (ತಬಕಾತ್ ಇಬ್ನು ಸಅದ್, ಭಾಗ: 1- ಪುಟ: 133) ಇಬ್ನು ಹಝ್ಮ್ ಬರೆಯುತ್ತಾರೆ- ಹ. ಖದೀಜಾರಿಂದ ಪ್ರವಾದಿವರ್ಯರಿಗೆ(ಸ) ನಾಲ್ಕರು ಪುತ್ರಿಯರು ಜನಿಸಿದರು. ದೊಡ್ಡವಳು ಝೈನಬ್, ಅನಂತರ ರುಕಿಯ್ಯಾ, ಆ ಬಳಿಕ ಫಾತಿಮಾ ಮತ್ತು ಅತ್ಯಂತ ಕಿರಿಯವಳು ಉಮ್ಮು ಕುಲ್ಸೂಮ್. (ಜವಾಮಿಉಸ್ಸೀರಃ ಪು. 38-39)

ತಬರೀ, ಇಬ್ನು ಸಅದ್, ಕಿತಾಬುಲ್ ಮುಜರ್‌ನ ಕರ್ತೃ ಅಬೂ ಜಅ್‌ಫರ್ ಮುಹಮ್ಮದ್ ಬಿನ್ ಹಬೀಬ್, ಕಿತಾಬುಲ್ ಇಸ್ತೀಆಬ್‌ನ ಇಬ್ನು ಅಬ್ದುಲ್ ಬರ್ರ್ ಅಧಿಕೃತ ಮೂಲಗಳಿಂದ ವರದಿ ಮಾಡಿರುವುದೇನೆಂದರೆ ಪ್ರವಾದಿ(ಸ) ಅವರಿಗಿಂತ ಮುಂಚೆ ಖದೀಜಾರ ಇಬ್ಬರು ಪತಿಯಂದಿರು ತೀರಿ ಹೋಗಿದ್ದಾರೆ. ಮೊದಲ ಪತಿ ಅಬೂ ಹಾಲ ತಮೀಮಿಯವರಿಂದ ಹಿಂದ್ ಬಿನ್ ಅಬೀಹಾಲ ಹುಟ್ಟಿದರು. ಎರಡನೆ ಪತಿ ಅತೀಕ್ ಬಿನ್ ಆಯಿದ್ ಮಖ್ಝೂಮಿಯವರಿಂದ ಹಿಂದ್ ಎಂಬ ಹೆಸರಿನ ಹೆಣ್ಣು ಮಗು ಹುಟ್ಟಿತು. ಆ ಬಳಿಕ ಅವರ ವಿವಾಹವು ಪ್ರವಾದಿವರ್ಯರೊಂದಿಗಾಯಿತು. ವಂಶಶಾಸ್ತ್ರ ಪಂಡಿತರೆಲ್ಲರೂ ಪ್ರವಾದಿವರ್ಯರಿಂದ(ಸ) ಅವರಿಗೆ ನಾಲ್ಕರು ಪುತ್ರಿಯರು ಜನಿಸಿದ್ದಾರೆಂಬ ಬಗ್ಗೆ ಏಕಾಭಿಪ್ರಾಯ ಹೊಂದಿದ್ದಾರೆ. (ನೋಡಿರಿ: ತಬರೀ, ಭಾಗ: 2- ಪುಟ: 411, ತಬಕಾತ್ ಇಬ್ನುಸಅದ್, ಭಾಗ: 8 ಪುಟ: 14-16, ಕಿತಾಬುಲ್ ಮುಜರ್ ಪುಟ: 78, 79, 452, ಅಲ್ ಇಸ್ತೀಆಬ್ ಭಾಗ- 2 ಪುಟ: 718) ಪ್ರವಾದಿಯವರಿಗೆ(ಸ) ಕೇವಲ ಓರ್ವ ಪುತ್ರಿಯಿದ್ದುದಲ್ಲ; ಅನೇಕ ಪುತ್ರಿಯರಿದ್ದರೆಂಬ ಈ ಎಲ್ಲ ಹೇಳಿಕೆಗಳನ್ನು ಕುರ್‌ಆನಿನ ಈ ವಿವರಣೆಯು ದೃಢೀಕರಿಸುತ್ತದೆ.

111. 'ಗುರುತಿಸಲ್ಪಡುವುದು' ಎಂದರೆ ಅವರನ್ನು ಸರಳ ಮತ್ತು ಸಭ್ಯ ಉಡುಪಿನಲ್ಲಿ ಕಂಡು, ಪ್ರತಿಯೊಬ್ಬನೂ ಅವರು ಸಭ್ಯ ಹಾಗೂ ಶೀಲವಂತ ಮಹಿಳೆಯರೆಂದೂ ಸ್ವಚ್ಛಂದರೂ ದುಶ್ಶೀಲೆಯರೂ ಅಲ್ಲವೆಂದೂ ತಿಳಿಯಬಲ್ಲನು. ಯಾವ ದುಷ್ಟನಿಗೂ ಅವರ ಬಗ್ಗೆ ಮನಸ್ಸಿನಲ್ಲಿ ಕೆಟ್ಟ ಭಾವನೆಯಿಡಲು ಸಾಧ್ಯವಿಲ್ಲ. 'ಸತಾಯಿಸಲ್ಪಡದಂತಾಗಲು' ಎಂದರೆ ಅವರನ್ನೂ ಛೇಡಿಸದಿರುವುದು ಮತ್ತು ಅವರನ್ನು ಉಪದ್ರವಿಸದಿರುವುದು.

ಇಲ್ಲಿ ಸ್ವಲ್ಪ ಆಲೋಚಿಸಬೇಕಾದ ಅಗತ್ಯವಿದೆ. ಕುರ್‌ಆನಿನ ಈ ಆಜ್ಞೆ ಮತ್ತು ಅಲ್ಲಾಹನೇ ವಿವರಿಸಿರುವ ಅದರ ಉದ್ದೇಶವು ಇಸ್ಲಾಮಿನ ಸಾಮಾಜಿಕ ಕಾನೂನಿನ ಯಾವ ಸ್ಫೂರ್ತಿಯನ್ನು ಪ್ರತಿಬಿಂಬಿಸುತ್ತದೆ? ಇದಕ್ಕಿಂತ ಮುಂಚೆ 'ಅನ್ನೂರ್' ಅಧ್ಯಾಯದ 31ನೆಯ ಸೂಕ್ತದಲ್ಲಿ ಸ್ತ್ರೀಯರು ಶೃಂಗಾರ ಅಲಂಕಾರಗಳನ್ನು ನಿರ್ದಿಷ್ಟ ಪುರುಷರ ಮತ್ತು ಸ್ತ್ರೀಯರ ಹೊರತು ಇತರರ ಮುಂದೆ ಪ್ರದರ್ಶಿಸಬಾರದೆಂಬ ಮತ್ತು ಅವರು ಬಚ್ಚಿಟ್ಟಿರುವ ಅಲಂಕಾರ ಜನರಿಗೆ ತಿಳಿಯುವಂತಾಗಲು

ಕಾಲನ್ನು ನೆಲಕ್ಕೆ ಬಡಿಯುತ್ತಾ ನಡೆಯಬಾರದೆಂದು ಆದೇಶ ನೀಡಲಾಗಿತ್ತು. ಆ ಆಜ್ಞೆಯೊಂದಿ 'ಅಹ್‌ಝಾಬ್' ಅಧ್ಯಾಯದ ಈ ಆಜ್ಞೆಯನ್ನು ಸೇರಿಸಿ ಓದಿದರೆ ಇಲ್ಲಿ ಚದ್ದರ ಹೊದ್ದು ಕೊಳ್ಳಬೇಕೆಂಬ ಆಜ್ಞೆಯ ಉದ್ದೇಶವು ಪರಪುರುಷರಿಂದ ತಮ್ಮ ಅಲಂಕಾರಗಳನ್ನು ಮರೆಸಬೇಕೆಂದೇ ಆಗಿದೆಯೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಉದ್ದೇಶವು ಚದ್ದರ ಸಾಮಾನ್ಯತರದ್ದಾಗಿದ್ದರೆ ಮಾತ್ರ ಈಡೇರಬಹುದು. ಅನ್ಯಥಾ ಸುಂದರ ಮತ್ತು ಮನಮೋಹಕ ಬಟ್ಟೆಯನ್ನು ಹೊದ್ದುಕೊಂಡು ನಡೆದರೆ ವ್ಯತಿರಿಕ್ತ ಪರಿಣಾಮವುಂಟಾಗಬಹುದು. ಅಷ್ಟೇ ಅಲ್ಲ, ಅಲ್ಲಾಹನು ಕೇವಲ ಚದ್ದರ ಹೊದ್ದು ಅಲಂಕಾರ ಮರೆಸಬೇಕೆಂದಷ್ಟೇ ಆಜ್ಞಾಪಿಸುತ್ತಿರುವುದಲ್ಲ, ಬದಲಾಗಿ ಸ್ತ್ರೀಯರು ಚದ್ದರದ ಒಂದು ಭಾಗವನ್ನು ತಮ್ಮ ಮೇಲೆ ನೇತಾಡಿಸಬೇಕೆಂದೂ ಹೇಳುತ್ತಿದ್ದಾನೆ. ಇದರ ಉದ್ದೇಶವು ಮುಖ ಪರದೆಯನ್ನು ಹಾಕುವ ಮೂಲಕ ಅಲಂಕಾರವನ್ನು ಮರೆಸುವುದರ ಜೊತೆಗೆ ಮುಖವನ್ನೂ ಮುಚ್ಚುವುದೇ ಆಗಿದೆಯೆಂದು ಯಾವ ವಿವೇಕವಂತನೂ ಗ್ರಹಿಸದಿರಲಾರ. ಅಲ್ಲದೆ ಅಲ್ಲಾಹನು ಈ ಆಜ್ಞೆಯ ಪ್ರಯೋಜನವನ್ನು ತಾನೇ ವಿವರಿಸುತ್ತಿದ್ದಾನೆ. ಈ ಮುಸ್ಲಿಮ್ ಸ್ತ್ರೀಯರು ಗುರುತಿಸಲ್ಪಡಲು ಮತ್ತು ಕಿರುಕುಳದಿಂದ ಸುರಕ್ಷಿತವಾಗಿರಲು ಇದುವೇ ಉತ್ತಮ ವಿಧಾನವೆಂದು ಹೇಳುತ್ತಿದ್ದಾನೆ. ಈ ಆಜ್ಞೆಯು ಬೀದಿಕಾಮಣ್ಣರ ಕಿರುಕುಳ, ನೋಟ ಮತ್ತು ವಿಷಯಲಂಪಟತನಗಳಿಂದ ಸಂತೋಷಗೊಳ್ಳುವ ಬದಲು ಅದನ್ನು ತಮ್ಮ ಪಾಲಿಗೆ ಯಾತನೆಯೆಂದು ಭಾವಿಸುವ ಮತ್ತು ನಿರ್ಲಜ್ಜರಾದ ಸಮಾಜದಲ್ಲಿ ತಮ್ಮನ್ನು ಪ್ರದರ್ಶನ ವಸ್ತುವಾಗಿ ಮಾಡ ಬಯಸದ ಹಾಗೂ ತಮ್ಮನ್ನು ಶೀಲವಂತ ಗೃಹಿಣಿಯರೆಂದು ಕರೆಸಿಕೊಳ್ಳಲು ಇಷ್ಟಪಡುವ ಸ್ತ್ರೀಯರಿಗೆ ನೀಡಲಾಗುತ್ತಿದೆಯೆಂದು ಇದರಿಂದ ಸ್ವಯಂ ವ್ಯಕ್ತವಾಗುತ್ತದೆ. ಇಂತಹ ಸಭ್ಯ-ಸಜ್ಜನ ಸ್ತ್ರೀಯರೊಂದಿಗೆ ಅಲ್ಲಾಹನು ಹೀಗೆ ಹೇಳುತ್ತಿದ್ದಾನೆ, ನೀವು ನಿಜವಾಗಿಯೂ ಇದೇ ನೆಲೆಯಲ್ಲಿ ಪರಿಚಿತರಾಗಬಯಸುವುದಾದರೆ ಮತ್ತು ಪುರುಷರ ನೋಟವು ಸಂತೋಷದಾಯಕವಾಗಿರದೆ ಯಾತನೆಯೆಂದು ನೀವು ಭಾವಿಸುವುದಾದರೆ, ನೀವು ನಿಮ್ಮನ್ನು ಸಿಂಗರಿಸಿಕೊಂಡು ಮೊದಲ ರಾತ್ರಿಯ ವಧುವಿನಂತೆ ಮನೆಯಿಂದ ಹೊರಡುವುದು ಮತ್ತು ನೋಡುವವರ ಆಸೆಗಣ್ಣುಗಳ ಮುಂದೆ ನಿಮ್ಮ ಸೌಂದರ್ಯವನ್ನು ತೆರೆದು ಪ್ರದರ್ಶಿಸುವುದು ಸೂಕ್ತವಾಗದು. ಅದರ ಸೂಕ್ತವಿಧಾನವೇನೆಂದರೆ ನೀವು ಒಂದು ಸಾಮಾನ್ಯ ಚದ್ದರದೊಳಗೆ ನಿಮ್ಮ ಸಂಪೂರ್ಣ ಶೃಂಗಾರ ಅಲಂಕಾರಾದಿಗಳನ್ನು ಮರೆಸಿ ಮುಖಪರದೆ ಹಾಕಿಕೊಂಡು ಹೊರಡುವುದಾಗಿದೆ. ಆಭರಣಗಳ ಠೇಂಕಾರವೂ ಜನರನ್ನು ನಿಮ್ಮೆಡೆಗೆ ಆಕರ್ಷಿಸುವಂತಾಗಬಾರದು. ಮನೆಯಿಂದ ಹೊರ ಹೋಗುವುದಕ್ಕಿಂತ ಮುಂಚೆ ಚೆನ್ನಾಗಿ ಸಿಂಗರಿಸಿಕೊಳ್ಳುವ ಸ್ತ್ರೀಯ ಉದ್ದೇಶವು ಪರಪುರುಷರು ತನ್ನನ್ನು ನೋಡಿ ಆನಂದಿಸಬೇಕೆಂದಲ್ಲದೆ ಇನ್ನೇನಿರಬಹುದು? ಅದರ ನಂತರವೂ ಆಕೆಯು ಪುರುಷರ ನೋಟವು ನನಗೆ ಕಿರಿಕಿರಿಯಾಗುತ್ತಿದೆಯೆಂದು ವಾದಿಸಿದರೆ ಹಾಗೂ ಅದರ ನಂತರವೂ ಆಕೆ ತಾನು 'ಸಮಾಜದ ಸುಪುತ್ರಿ- 'ಜನಪ್ರಿಯ ಮಹಿಳೆ'ಯೆಂಬ ನೆಲೆಯಲ್ಲಿ ತನ್ನನ್ನು ಪರಿಚಯ ಪಡಿಸಲಿಚ್ಛಿಸದೆ ಲಜ್ಜಾವಂತ ಗೃಹಿಣಿಯಾಗ ಬಯಸುತ್ತಿದ್ದೇನೆಂದು ಹೇಳಿದರೆ ಅದು ವಂಚನೆಯಲ್ಲದೆ ಮತ್ತೇನು! ಮಾನವನ ಮಾತು ಅವನ ಹೃದಯಸಂಕಲ್ಪವನ್ನು ಪ್ರತಿಬಿಂಬಿಸುವುದಿಲ್ಲ. ಬದಲಾಗಿ ಅವನ ನೈಜ ಸಂಕಲ್ಪವು ಅವನ ಕರ್ಮದ ರೂಪದಲ್ಲಿ ಪ್ರಕಟವಾಗುತ್ತದೆ. ಆದರೆ ಬೆಡಗು ಬಿನ್ನಾಣದೊಂದಿಗೆ ಪರಪುರುಷರ ಮುಂದೆ ಬರುವ ಸ್ತ್ರೀಯ ಆ ಕೃತ್ಯವೇ ಅದರ ಹಿಂದೆ ಅಡಗಿರುವ ಉದ್ದೇಶವನ್ನು ಪ್ರಕಟಪಡಿಸುತ್ತದೆ. ಆದುದರಿಂದಲೇ ಕೆಟ್ಟ ಮನೋಭಾವನೆಯ ಪುರುಷರು ಅಂತಹ ಸ್ತ್ರೀಯರಿಂದ ಅಂತಹದೇ ನಿರೀಕ್ಷೆಯನ್ನಿರಿಸುತ್ತಾರೆ. ಕುರ್‌ಆನ್ ಸ್ತ್ರೀಯರೊಂದಿಗೆ, ನೀವು ಒಂದೇ ಸಮಯದಲ್ಲಿ ಗೃಹಿಣಿಯೂ ಪ್ರದರ್ಶನದ ವಸ್ತೂ

مَّرَضٌ وَالْمُرْجِفُونَ فِي الْمَدِينَةِ لَنُغْرِيَنَّكَ بِهِمْ ثُمَّ لَا يُجَاوِرُونَكَ فِيهَا

إِلَّا قَلِيلًا ﴿٦٠﴾ مَّلْعُونِينَ ۖ أَيْنَمَا ثُقِفُوا أُخِذُوا وَقُتِّلُوا تَقْتِيلًا ﴿٦١﴾ سُنَّةَ اللَّهِ فِي

**(60-62) ಕಪಟವಿಶ್ವಾಸಿಗಳೂ ಹೃದಯದಲ್ಲಿ ಕೇಡುಳ್ಳವರೂ[113] ಮದೀನಾದಲ್ಲಿ ಉದ್ರೇಕಕಾರಿ ವದಂತಿಗಳನ್ನು ಹಬ್ಬಿಸುವವರೂ[114] ತಮ್ಮ ದುಷ್ಕೃತ್ಯಗಳನ್ನು ಬಿಡದಿದ್ದರೆ ನಾವು ಅವರ ವಿರುದ್ಧ ಕಾರ್ಯಾಚರಣೆಗಾಗಿ ನಿಮ್ಮನ್ನು ಎಬ್ಬಿಸಿ ನಿಲ್ಲಿಸುವೆವು. ಅನಂತರ ಅವರು ಈ ನಗರದಲ್ಲಿ ನಿಮ್ಮ ಜೊತೆ ಇರುವುದು ಕಷ್ಟ ಸಾಧ್ಯ. ಅವರ ಮೇಲೆ ಎಲ್ಲ**

---

ಆಗಲಾರಿರಿ ಎಂದೂ ಗೃಹಿಣಿಯರಾಗ ಬಯಸುವಿರಾದರೆ ಪ್ರದರ್ಶನದ ವಸ್ತುವಾಗುವುದಕ್ಕೆ ಭೂಷಣವಲ್ಲದ ನೀತಿ ನಡವಳಿಕೆಯನ್ನವಲಂಬಿಸಬೇಕು ಮತ್ತು ಗೃಹಿಣಿಯಾಗಲು ಸಹಾಯಕವಾಗುವಂತಹ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದೂ ಹೇಳುತ್ತದೆ.

ಒಬ್ಬನ ವೈಯಕ್ತಿಕ ಅಭಿಪ್ರಾಯವು ಕುರ್‌ಆನಿಗೆ ಅನುಗುಣವಾಗಿರಲಿ ಅಥವಾ ಅದಕ್ಕೆ ಇಲ್ಲದಿರಲಿ, ಕುರ್‌ಆನಿನ ಮಾರ್ಗದರ್ಶನವನ್ನು ತನ್ನ ಬದುಕಿನ ನಿಯಮವಾಗಿ ಅಂಗೀಕರಿಸ ಬಯಸುವುದಾದರೂ ಇಲ್ಲವಾದರೂ, ಒಂದು ವೇಳೆ ಅವನು ವ್ಯಾಖ್ಯಾನಿಸುವುದರಲ್ಲಿ ಅಪ್ರಾಮಾಣಿಕತನವನ್ನು ಎಸಗ ಬಯಸುವುದಿಲ್ಲವೆಂದಾದರೆ ಅವನು ಕುರ್‌ಆನಿನ ಇಂಗಿತವನ್ನು ಗ್ರಹಿಸುವಲ್ಲಿ ಎಡವಿ ಬೀಳಲಾರ. ಅವನು ಕಪಟವಿಶ್ವಾಸಿಯಲ್ಲದಿದ್ದರೆ ಕುರ್‌ಆನಿನ ಇಂಗಿತವು ಮೇಲೆ ವಿವರಿಸಿದಂತೆಯೇ ಆಗಿದೆಯೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳುವನು. ಅದರ ನಂತರ ಅವನು ಅದನ್ನು ಉಲ್ಲಂಘಿಸುತ್ತಿದ್ದಾನೆಂದಾದರೆ, ತಾನು ಕುರ್‌ಆನಿನ ವಿರುದ್ಧ ನಡೆಯುತ್ತಿದ್ದೇನೆ ಅಥವಾ ಕುರ್‌ಆನಿನ ಮಾರ್ಗದರ್ಶನವು ಸರಿಯಲ್ಲವೆಂದು ಭಾವಿಸುತ್ತೇನೆ ಎಂಬುದನ್ನು ಒಪ್ಪಿಕೊಂಡೇ ಮಾಡುವನು.

112. ಅರ್ಥಾತ್- ಈಗ ಸ್ಪಷ್ಟವಾದ ಸನ್ಮಾರ್ಗ ಲಭಿಸಿದ ನಂತರ ನಿಮ್ಮ ಬದುಕನ್ನು ಸುಧಾರಿಸಿಕೊಂಡರೆ ಮತ್ತು ಬೇಕುಬೇಕೆಂದೇ ಅದನ್ನು ಉಲ್ಲಂಘಿಸದಿದ್ದರೆ, ಹಿಂದೆ ಅಜ್ಞಾನ ಕಾಲದಲ್ಲಿ ಮಾಡಲಾದ ತಪ್ಪುಗಳನ್ನೆಲ್ಲ ಅಲ್ಲಾಹನು ತನ್ನ ಅಪಾರ ಕರುಣೆಯಿಂದ ಕ್ಷಮಿಸಿಬಿಡುವನು.

113. 'ಹೃದಯದ ಕೇಡು' ಎಂದರೆ ಇಲ್ಲಿ ಎರಡು ವಿಧದ ಕೆಡುಕುಗಳಾಗಿವೆ: 1) ಒಬ್ಬನು ತನ್ನನ್ನು ಮುಸ್ಲಿಮನೆಂದು ಕರೆಸಿಕೊಳ್ಳುವುದರ ಜೊತೆಗೆ ಇಸ್ಲಾಮ್ ಮತ್ತು ಮುಸ್ಲಿಮರಿಗೆ ಕೇಡು ಬಗೆಯುವುದು. 2) ಒಬ್ಬನು ದುರುದ್ದೇಶ, ಕೆಟ್ಟಚಾಳಿ ಮತ್ತು ಅಪರಾಧಿ ಮನೋವೃತ್ತಿಯಲ್ಲಿ ಸಿಲುಕುವುದು ಮತ್ತು ಅವನ ದುಷ್ಟ ಒಲವುಗಳು ಅವನ ವರ್ತನೆಗಳಲ್ಲಿ ಎದ್ದು ತೋರುವುದು.

114. ಇದು ಮುಸ್ಲಿಮರಲ್ಲಿ ಗಾಬರಿ ಹುಟ್ಟಿಸುವ ಮತ್ತು ಅವರ ಧೈರ್ಯವನ್ನು ಉಡುಗಿಸುವ ಸಲುವಾಗಿ ಮದೀನಾದಲ್ಲಿ ಆಗಾಗ, ಇಂತಹ ಕಡೆಯಲ್ಲಿ ಮುಸ್ಲಿಮರಿಗೆ ಪೆಟ್ಟುಬಿದ್ದಿದೆ, ಇಂತಹ ಸ್ಥಳದಲ್ಲಿ ಮುಸ್ಲಿಮರ ವಿರುದ್ಧ ಸೈನಿಕ ಶಕ್ತಿ ಒಗ್ಗೂಡುತ್ತಿದೆ ಮತ್ತು ಶೀಘ್ರದಲ್ಲೇ ಮದೀನಾದ ಮೇಲೆ ಆಕ್ರಮಣವಾಗಲಿದೆ ಎಂದು ಮುಂತಾಗಿ ವದಂತಿ ಹಬ್ಬಿಸುವವರಾಗಿದ್ದಾರೆ. ಜೊತೆಗೆ ಅವರು ಪ್ರವಾದಿಯವರ(ಸ) ಕುಟುಂಬದ ಹಾಗೂ ಮುಸ್ಲಿಮ್ ಗಣ್ಯರ ಖಾಸಗಿ ಬದುಕಿನ ಕುರಿತು ತರತರದ ಕಟ್ಟುಕತೆಗಳನ್ನು ಸೃಷ್ಟಿಸಿ ಹಬ್ಬಿಸುವ ಮೂಲಕ ಜನಸಾಮಾನ್ಯರಲ್ಲಿ ಸಂದೇಹವುಂಟುಮಾಡಿ ಮುಸ್ಲಿಮರ ನೈತಿಕ ಪ್ರಭಾವಕ್ಕೆ ಧಕ್ಕೆಯೊದಗಿಸುವ ಕಾಯಕವನ್ನೂ ಕೈಗೊಂಡಿದ್ದರು.

ذِينَ خَلَوْا مِن قَبْلُ ۖ وَلَن تَجِدَ لِسُنَّةِ اللَّهِ تَبْدِيلًا ﴿٦٢﴾ يَسْأَلُكَ النَّاسُ عَنِ
سَّاعَةِ ۖ قُلْ إِنَّمَا عِلْمُهَا عِندَ اللَّهِ ۚ وَمَا يُدْرِيكَ لَعَلَّ السَّاعَةَ تَكُونُ قَرِيبًا ﴿٦٣﴾
نَّ اللَّهَ لَعَنَ الْكَافِرِينَ وَأَعَدَّ لَهُمْ سَعِيرًا ﴿٦٤﴾ خَالِدِينَ فِيهَا أَبَدًا ۖ لَّا يَجِدُونَ
لِيًّا وَلَا نَصِيرًا ﴿٦٥﴾ يَوْمَ تُقَلَّبُ وُجُوهُهُمْ فِي النَّارِ يَقُولُونَ يَا لَيْتَنَا أَطَعْنَا

ಕಡೆಗಳಿಂದಲೂ ಛೀಮಾರಿ ಬೀಳುತ್ತಿರುವುದು. ಅವರು ಕಂಡ ಕಂಡಲ್ಲಿ ಸೆ ಹಿಡಿಯಲ್ಪಡುವರು ಮತ್ತು ನಿರ್ದಾಕ್ಷಿಣ್ಯವಾಗಿ ಕೊಲ್ಲಲ್ಪಡುವರು. ಇದು ಇಂತಹವ ವಿಷಯದಲ್ಲಿ ಹಿಂದಿನಿಂದಲೂ ನಡೆದು ಬಂದಿರುವ ಅಲ್ಲಾಹನ ನಿಯಮವಾಗಿದ ಮತ್ತು ನೀವು ಅಲ್ಲಾಹನ ನಿಯಮದಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರಿರಿ.[11]

**(63-68)** ಪ್ರಳಯ ಕಾಲದ ಘಳಿಗೆ ಯಾವಾಗ ಬರುವುದೆಂದು ಜನರು ನಿಮ್ಮೊಡನ ಕೇಳುತ್ತಾರೆ.[116] ಅದರ ಜ್ಞಾನವಿರುವುದು ಅಲ್ಲಾಹನಿಗೆ ಮಾತ್ರ ಎಂದು ಹೇಳಿರಿ. ಅದು ಬಹಳ ಸಮೀಪದಲ್ಲೇ ಇರಬಹುದು ನಿಮಗೇನು ಗೊತ್ತು. ಹೇಗಿದ್ದರೂ ಅಲ್ಲಾಹನು ಸತ್ಯನಿಷೇಧಕರನ್ನು ಶಪಿಸಿದ್ದಾನೆ ಮತ್ತು ಅವರಿಗಾಗಿ ಧಗಧಗಿಸುವ ನರಕಾಗ್ನಿಯನ್ನು ಸಿದ್ಧಪಡಿಸಿ ಇಟ್ಟಿರುತ್ತಾನೆಂಬುದು ಖಚಿತ. ಅವರು ಅದರಲ್ಲಿ ಶಾಶ್ವತವಾಗಿ

115. ಅರ್ಥಾತ್- ಒಂದು ಇಸ್ಲಾಮೀ ಸಮಾಜ ಮತ್ತು ರಾಷ್ಟ್ರದಲ್ಲಿ ಇಂತಹ ಕಿಡಿಗೇಡಿಗಳಿ ಬೆಳೆಯಲು ಅವಕಾಶ ನೀಡಲಾಗುವುದಿಲ್ಲ. ಇದು ಅಲ್ಲಾಹನ ಶರೀಅತ್‌ನ ಒಂದು ಸ್ಥಾಯಿ ನಿಯಮವಾಗಿದೆ. ಇಂತಹ ಒಂದು ಸಮಾಜ ಮತ್ತು ರಾಷ್ಟ್ರದ ವ್ಯವಸ್ಥೆಯು ದೈವಿಕ ಕಾನೂನುಗ ಆಧಾರದಲ್ಲಿ ಸ್ಥಾಪನೆಗೊಂಡರೆ ಅದರಲ್ಲಿ ಇಂತಹ ಮಂದಿಗೆ ಮೊದಲು ಅವರು ತಮ್ಮನ್ನು ಸುಧಾರಿಸುವಂತೆ ಎಚ್ಚರಿಕೆ ಕೊಡಲಾಗುವುದು. ಅನಂತರವೂ ಅವರು ತಮ್ಮ ನೀತಿಯನ್ನು ಬದಲಿಸದಿದ್ದರೆ ಅಂಥವರನ್ನು ನಿರ್ದಯವಾಗಿ ಉಚ್ಚಾಟಿಸಲಾಗುವುದು.

116. ಪ್ರವಾದಿವರ್ಯರೊಂದಿಗೆ(ಸ) ಈ ಪ್ರಶ್ನೆಯನ್ನು ಸಾಮಾನ್ಯವಾಗಿ ಸತ್ಯನಿಷೇಧಿಗಳ ಮತ್ತು ಕಪಟವಿಶ್ವಾಸಿಗಳು ಕೇಳುತ್ತಿದ್ದರು. ಅದು ಜ್ಞಾನಗಳಿಸುವ ಉದ್ದೇಶದಿಂದಾಗಿರದ ಹಾಸ್ಯವಿನೋದಕ್ಕಾಗಿ ಹಾಗೆ ಕೇಳುತ್ತಿದ್ದರು. ವಾಸ್ತವದಲ್ಲಿ ಅವರಿಗೆ ಪರಲೋಕವೊಂದು ಬರಲಿದೆಯೆಂಬ ನಂಬಿಕೆಯಿರಲಿಲ್ಲ. ಪರಲೋಕದ ಕಲ್ಪನೆಯನ್ನು ಅವರು ಕೇವಲ ಒಂದು ಪೊಳ್ಳು ಬೆದರಿಕೆಯೆಂದು ಭಾವಿಸಿದ್ದರು. ಅವರು ಅಂತ್ಯದಿನ ಬರುವುದಕ್ಕೆ ಮುಂಚೆ ತಮ್ಮ ವ್ಯವಹಾರವನ್ನು ಸರಿಪಡಿಸುವ ಉದ್ದೇಶದಿಂದ ಅದರ ದಿನಾಂಕವನ್ನು ಕೇಳುತ್ತಿದ್ದುದಲ್ಲ. ಬದಲಾಗಿ ಅವರು ಕೇಳುವುದರ ಅರ್ಥ ಹೀಗಿತ್ತು- ಓ ಮುಹಮ್ಮದ್‌ರವರೇ! ನಾವು ನಿಮ್ಮನ್ನು ಕೀಳಾಗಿಸಲಿಕ್ಕಾಗಿ ಏನೆಲ್ಲ ಮಾಡಿದೆವು, ಆದರ ಈ ವರೆಗೂ ನಿಮಗೆ ನಮ್ಮನ್ನು ಏನು ಮಾಡಲೂ ಆಗಿಲ್ಲ. ಇನ್ನು ನಮಗೆ, ನಮ್ಮ ವಿಚಾರಣ ನಡೆಯಲಿರುವ ಆ ಪರಲೋಕ ಯಾವಾಗ ಬರುವುದೆಂದು ಒಮ್ಮೆ ಹೇಳಿ ನೋಡೋಣ!

اللّٰهَ وَ اَطَعۡنَا الرَّسُوۡلَا۟ وَ قَالُوۡا رَبَّنَاۤ اِنَّاۤ اَطَعۡنَا سَادَتَنَا وَ كُبَرَآءَنَا فَاَضَلُّوۡنَا
السَّبِيۡلَا۟ رَبَّنَاۤ اٰتِهِمۡ ضِعۡفَيۡنِ مِنَ الۡعَذَابِ وَ الۡعَنۡهُمۡ لَعۡنًا كَبِيۡرًا۟ يٰۤاَيُّهَا
الَّذِيۡنَ اٰمَنُوۡا لَا تَكُوۡنُوۡا كَالَّذِيۡنَ اٰذَوۡا مُوۡسٰى فَبَرَّاَهُ اللّٰهُ مِمَّا قَالُوۡا ؕ وَكَانَ

ಉಳಿಯುವರು. ಅವರು ಯಾವ ಮಿತ್ರನನ್ನೂ ಸಹಕಾರಿಯನ್ನೂ ಪಡೆಯಲಾರರು. ಅವರ ಮುಖಗಳು ನರಕಾಗ್ನಿಯಲ್ಲಿ ಹೊರಳಾಡಿಸಲ್ಪಡುವ ದಿನ ಅವರು, "ಅಯ್ಯೋ! ನಾವು ಅಲ್ಲಾಹ್ ಮತ್ತು ಪೈಗಂಬರರ ಅನುಸರಣೆ ಮಾಡುತ್ತಿದ್ದರೆ!" ಎನ್ನುವರು. ಮತ್ತೂ ಮುಂದುವರಿದು, "ನಮ್ಮ ಪ್ರಭೂ! ನಾವು ನಮ್ಮ ಸರದಾರರನ್ನು ಹಾಗೂ ಹಿರಿಯರನ್ನು ಅನುಸರಿಸಿದೆವು. ಅವರು ನಮ್ಮನ್ನು ದಾರಿಗೆಡಿಸಿ ಬಿಟ್ಟರು, ನಮ್ಮ ಪ್ರಭೂ! ಅವರಿಗೆ ಇಮ್ಮಡಿ ಯಾತನೆ ಕೊಡು ಮತ್ತು ಅವರನ್ನು ಅತ್ಯುಗ್ರವಾಗಿ ಶಪಿಸು" ಎಂದೂ ಹೇಳುವರು.[117]

**(69-71)** ಸತ್ಯವಿಶ್ವಾಸಿಗಳೇ[118] ನೀವು ಮೂಸಾರಿಗೆ ಕೀಟಲೆ ಕೊಟ್ಟವರಂತೆ ಆಗಬೇಡಿರಿ. ತರುವಾಯ ಅಲ್ಲಾಹನು ಆ ಜನರು ಸೃಷ್ಟಿಸಿದ ಮಾತುಗಳಿಂದ ಅವರನ್ನು (ಮೂಸಾರನ್ನು) ಮುಕ್ತಗೊಳಿಸಿದನು. ಅವರು ಅಲ್ಲಾಹನ ಬಳಿ ಗೌರವಾನ್ವಿತರಾಗಿದ್ದರು.[119]

---

117. ಈ ವಿಷಯವು ಕುರ್‌ಆನಿನ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಉದಾಹರಣೆಗೆ ಈ ಕೆಳಗಿನ ಸ್ಥಳಗಳಲ್ಲಿ ನೋಡಿರಿ-
ಅಲ್ ಅಅ್‌ರಾಫ್ : 187, ಅನ್ನಾಝಿಆತ್ : 42-46, ಸಬಾ : 3-5, ಅಲ್ ಮುಲ್ಕ್ : 24-27, ಅಲ್ ಮುತಫ್ಫಿಫೀನ್ : 10-17, ಅಲ್ ಹಿಜ್ರ್ : 2-3, ಅಲ್ ಫುರ್ಕಾನ್ : 27-29, ಹಾಮೀಮ್ ಅಸ್ಸಜ್ದ : 26-29.

118. ಕುರ್‌ಆನಿನಲ್ಲಿ 'ಓ ಸತ್ಯವಿಶ್ವಾಸಿಗಳೇ' ಎಂಬ ಪದಗಳನ್ನು ಕೆಲವೆಡೆ ಅಪ್ಪಟ ಸತ್ಯವಿಶ್ವಾಸಿಗಳಿಗಾಗಿ ಬಳಸಲಾಗಿದೆ. ಕೆಲವೆಡೆ ಸತ್ಯವಿಶ್ವಾಸಿಗಳು, ಕಪಟವಿಶ್ವಾಸಿಗಳು ಮತ್ತು ದುರ್ಬಲ ವಿಶ್ವಾಸಿಗಳು ಒಳಗೊಂಡಿರುವ ಮುಸ್ಲಿಮರ ಒಟ್ಟು ಗುಂಪನ್ನು ಅಭಿಸಂಬೋಧಿಸಲಾಗಿದೆ. ಇನ್ನು ಕೆಲವೆಡೆ ಕುರ್‌ಆನಿನ ಅಭಿಸಂಬೋಧನೆಯು ಕೇವಲ ಕಪಟವಿಶ್ವಾಸಿಗಳ ಕಡೆಗೇ ಇದೆ. ಕಪಟವಿಶ್ವಾಸಿಗಳು ಮತ್ತು ದುರ್ಬಲವಿಶ್ವಾಸಿಗಳನ್ನು 'ಸತ್ಯವಿಶ್ವಾಸಿಗಳೇ' ಎಂದು ಅಭಿಸಂಬೋಧಿಸುವಾಗ ಅದರ ಉದ್ದೇಶವು, ನೀವು ವಿಶ್ವಾಸಿಗಳೆಂದು ವಾದಿಸುತ್ತೀರಿ. ಆದರೆ ನಿಮ್ಮ ವರ್ತನೆಯು ಅದಕ್ಕೆ ವ್ಯತಿರಿಕ್ತವಾಗಿದೆಯೆಂದು ಅವರನ್ನು ನಾಚಿಸುವುದಾಗಿದೆ. ಹಿನ್ನೆಲೆಯನ್ನು ಗಮನಿಸುವಾಗ 'ಸತ್ಯವಿಶ್ವಾಸಿಗಳೇ' ಎಂದು ಬಂದಲ್ಲೆಲ್ಲಾ ಅದು ಯಾರನ್ನುದ್ದೇಶಿಸಿ ಹೇಳಲಾಗುತ್ತದೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇಲ್ಲಿ ವಾಕ್ಸರಣಿಯು, ಅಭಿಸಂಬೋಧಿತರು ಸಾಮಾನ್ಯ ಮುಸ್ಲಿಮರೆಂಬುದನ್ನು ಸ್ಪಷ್ಟಪಡಿಸುತ್ತದೆ.

119. ಇನ್ನೊಂದು ಮಾತಿನಲ್ಲಿ ಇದರ ಅರ್ಥ ಹೀಗಿದೆ: ಓ ಮುಸ್ಲಿಮರೇ! ನೀವು ಯಹೂದಿಯರಂತಹ ಕೃತ್ಯಗಳನ್ನೆಸಗಬಾರದು. ಮೂಸಾರೊಂದಿಗೆ(ಅ) ಬನೀ ಇಸ್ರಾಈಲರ ವರ್ತನೆಯಂತೆ ನಿಮ್ಮ ಪ್ರವಾದಿಯೊಂದಿಗೆ ನೀವು ವರ್ತಿಸಬಾರದು. ಮೂಸಾರವರು(ಅ) ತಮ್ಮ

نْدَ اللّٰهِ وَجِيْهًا ۝ يٰۤاَيُّهَا الَّذِيْنَ اٰمَنُوا اتَّقُوا اللّٰهَ وَقُوْلُوْا قَوْلًا سَدِيْدًا ۝
صْلِحْ لَكُمْ اَعْمَالَكُمْ وَيَغْفِرْ لَكُمْ ذُنُوْبَكُمْ ۗ وَمَنْ يُّطِعِ اللّٰهَ وَرَسُوْلَهٗ فَقَدْ
اَزَ فَوْزًا عَظِيْمًا ۝ اِنَّا عَرَضْنَا الْاَمَانَةَ عَلَى السَّمٰوٰتِ وَالْاَرْضِ وَالْجِبَالِ

ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಸರಿಯಾದ ಮಾತನ್ನೇ ಹೇಳಿರಿ. ಅಲ್ಲಾಹನು ನಿಮ್ಮ ಕರ್ಮಗಳನ್ನು ಸರಿಪಡಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು. ಯಾರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣ ಮಾಡಿದನೋ ಅವನು ಮಹಾ ಯಶಸ್ಸನ್ನು ಪಡೆದನು.

(72-73) ನಾವು ಈ ಅಮಾನತ್ತನ್ನು ಆಕಾಶಗಳ, ಭೂಮಿಯ ಮತ್ತು ಪರ್ವತಗಳ ಮುಂದಿರಿಸಿದೆವು. ಆಗ ಅವು ಅದನ್ನು ಎತ್ತಿಕೊಳ್ಳಲು ಸಿದ್ಧವಾಗಲಿಲ್ಲ ಮತ್ತು ಅದರಿಂದ

---

ಅತಿದೊಡ್ಡ ಉಪಕಾರಿಯಾಗಿದ್ದರೆಂದು ಬನೀ ಇಸ್ರಾಈಲರು ಸ್ವಯಂ ಒಪ್ಪಿಕೊಳ್ಳುತ್ತಾರೆ. ಈ ಜನಾಂಗವು ಉನ್ನತಿಗೇರಿದ್ದೂ ಅವರಿಂದಾಗಿಯೇ. ಅನ್ಯಥಾ ಈಜಿಪ್ಟ್‌ನಲ್ಲಿ ಅವರ ಗತಿಯ ಭಾರತದಲ್ಲಿ ಶೂದ್ರರ ಗತಿಗಿಂತ ಕೆಟ್ಟದಾಗಿರುತ್ತಿತ್ತು. ಆದರೆ ಆ ಮಹಾ ಉಪಕಾರಿಯ ಜೊತೆ ಜನಾಂಗದ ವರ್ತನೆಯೇನಾಗಿತ್ತೆಂಬುದನ್ನು ತಿಳಿಯಲು ಬೈಬಲಿನ ಈ ಕೆಳಗಿನ ಸೂಕ್ತಗಳ ಮೇಲೆ ಒಂದು ದೃಷ್ಟಿ ಹಾಯಿಸಿದರೆ ಸಾಕಾಗುತ್ತದೆ-

ವಿಮೋಚನಾ ಕಾಂಡ: 5: 20-21, 14: 11-12, 16: 2-3, 17: 3-4.

ಅರಣ್ಯ ಕಾಂಡ: 11: 1-15, 14: 1-10, 16: ಸಂಪೂರ್ಣ, 20: 1-5.

ಬನೀ ಇಸ್ರಾಈಲರ ಇದೇ ಕೃತಘ್ನತೆಯ ಕಡೆಗೆ ಬೆಟ್ಟು ಮಾಡುತ್ತಾ, ಕುರ್‌ಆನ ಮುಸ್ಲಿಮರಿಗೆ, ನೀವು ಮುಹಮ್ಮದ್‌ರೊಂದಿಗೆ(ಸ) ಹಾಗೆ ವರ್ತಿಸಬಾರದು, ಅನ್ಯಥಾ ಅವರು ಕಂಡ ಮತ್ತು ಈಗಲೂ ಕಾಣುತ್ತಿರುವ ದುರ್ಗತಿ ನಿಮಗೂ ಬಂದೀತು ಎಂದು ಎಚ್ಚರಿಸುತ್ತಿದೆ.

ಇದೇ ಮಾತನ್ನು ವಿವಿಧ ಸಂದರ್ಭಗಳಲ್ಲಿ ಪ್ರವಾದಿಯವರೂ(ಸ) ಹೇಳಿದ್ದಾರೆ. ಒಮ್ಮೆ ಪ್ರವಾದಿ(ಸ) ಮುಸ್ಲಿಮರಿಗೆ ಸ್ವಲ್ಪ ಹಣ ವಿತರಿಸುತ್ತಿದ್ದರು. ಜನರು ಅಲ್ಲಿಂದ ಹೊರಗೆ ಹೋದಾಗ ಒಬ್ಬ ವ್ಯಕ್ತಿಯು, ಮುಹಮ್ಮದ್(ಸ) ಹಣ ವಿತರಿಸುವಾಗ ಅಲ್ಲಾಹನನ್ನೂ ಪರಲೋಕವನ್ನೂ ಸ್ವಲ್ಪವೂ ಲೆಕ್ಕಿಸಲಿಲ್ಲವೆಂದು ಹೇಳುವುದನ್ನು ಹ. ಅಬ್ದುಲ್ಲಾ ಬಿನ್ ಮಸ್‌ಊದ್ ಕೇಳಿದರು. ಅವರು ಪ್ರವಾದಿವರ್ಯರ(ಸ) ಬಳಿಗೆ ಹೋಗಿ, ತಮ್ಮ ಬಗ್ಗೆ ಇಂತಹ ಮಾತುಗಳನ್ನು ಆಡಲಾಗುತ್ತಿದೆಯೆಂದು ದೂರಿದರು. ಅದಕ್ಕೆ ಉತ್ತರವಾಗಿ ಪ್ರವಾದಿ(ಸ) ಹೀಗೆಂದರು- ಅಲ್ಲಾಹನ ಅನುಗ್ರಹಗಳು ಮೂಸಾರ ಮೇಲಿರಲಿ. ಅವರನ್ನು ಇದಕ್ಕಿಂತಲೂ ಹೆಚ್ಚು ಉಪದ್ರವಿಸಲಾಗಿತ್ತು. ಆದರೂ ಅವರು ಸಹನೆ ವಹಿಸಿದರು.

(ಅಹ್ಮದ್, ತಿರ್ಮಿದಿ, ಅಬೂದಾವೂದ್)

فَاَبَیۡنَ اَنۡ یَّحۡمِلۡنَهَا وَ اَشۡفَقۡنَ مِنۡهَا وَحَمَلَهَا الۡاِنۡسَانُ ؕ اِنَّهٗ كَانَ ظَلُوۡمًا
جَهُوۡلًا ﴿۷۲﴾ لِّیُعَذِّبَ اللّٰهُ الۡمُنٰفِقِیۡنَ وَ الۡمُنٰفِقٰتِ وَ الۡمُشۡرِكِیۡنَ وَ الۡمُشۡرِكٰتِ وَ
یَتُوۡبَ اللّٰهُ عَلَی الۡمُؤۡمِنِیۡنَ وَ الۡمُؤۡمِنٰتِ ؕ وَ كَانَ اللّٰهُ غَفُوۡرًا رَّحِیۡمًا ﴿۷۳﴾

ೀತರಾದವು. ಆದರೆ, ಮಾನವನು ಅದನ್ನು ಎತ್ತಿಕೊಂಡನು. ನಿಶ್ಚಯವಾಗಿಯೂ ವನು ದೊಡ್ಡ ಅಕ್ರಮಿಯೂ ತಿಳಿಗೇಡಿಯೂ ಆಗಿರುತ್ತಾನೆ.[120] (ಈ ಅಮಾನತ್ತಿನ ೂರೆಯನ್ನು ಹೊತ್ತುದರ ಪರಿಣಾಮವೇನೆಂದರೆ) ಇದು, ಅಲ್ಲಾಹನು ಕಪಟ ಶ್ವಾಸಿಗಳಿಗೂ ಕಪಟವಿಶ್ವಾಸಿನಿಯರಿಗೂ ಬಹುದೇವಾರಾಧಕರಾದ ಪುರುಷರಿಗೂ ್ರೀಯರಿಗೂ ಶಿಕ್ಷೆ ಕೊಡುವಂತಾಗಲು ಮತ್ತು ಸತ್ಯವಿಶ್ವಾಸಿಗಳಾದ ಪುರುಷರು ಮತ್ತು ್ರೀಯರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸುವಂತಾಗಲು. ಅಲ್ಲಾಹ್ ಅತ್ಯಂತ ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.

---

120. ಮಾತನ್ನು ಕೊನೆಗೊಳಿಸುತ್ತಾ ಅಲ್ಲಾಹನು ಮಾನವನಿಗೆ, ಈ ಲೋಕದಲ್ಲಿ ಅವನ ್ರಜ ನೆಲೆಯೇನು ಮತ್ತು ಈ ನೆಲೆಯನ್ನು ಹೊಂದಿಯೂ ಅವನು ಇಹಲೋಕದ ಬದುಕನ್ನು ಒಂದು ಟವೆಂದು ಭಾವಿಸಿ ನಿಶ್ಚಿಂತೆಯಿಂದ ತಪ್ಪು ನೀತಿಯನ್ನು ಅವಲಂಬಿಸಿದರೆ ಯಾವ ರೀತಿ ತನ್ನ ಯಿಂದಲೇ ತನ್ನ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಾನೆಂಬುದನ್ನು ಮನವರಿಕೆ ಮಾಡಿಕೊಡುತ್ತಿದ್ದಾನೆ.

ಇಲ್ಲಿ 'ಅಮಾನತ್' ಎಂದರೆ ಕುರ್‌ಆನಿನ ಪ್ರಕಾರ ಮಾನವನಿಗೆ ಈ ಭೂಮಿಯಲ್ಲಿ ಹಿಸಿಕೊಡಲಾದ ಅದೇ 'ಖಿಲಾಫತ್' ಆಗಿದೆ. ಅಲ್ಲಾಹನು ಮಾನವನಿಗೆ ನೀಡಿರುವ ವಿಧೇಯತೆ ುತ್ತು ಅವಿಧೇಯತೆಯ ಸ್ವಾತಂತ್ರ್ಯ ಹಾಗೂ ಈ ಸ್ವಾತಂತ್ರ್ಯವನ್ನು ಉಪಯೋಗಿಸಲಿಕ್ಕಾಗಿ ತನ್ನ ಸಂಖ್ಯಾತ ಸೃಷ್ಟಿಗಳ ಮೇಲೆ ಅವನಿಗೆ ನೀಡಿದ ಅಧಿಕಾರದಿಂದಾಗಿ ಆತ ತನ್ನ ಕರ್ಮಗಳಿಗೆ ತಾನೇ ೊಣೆಯಾಗಿದ್ದು, ತನ್ನ ಸರಿಯಾದ ನಿಲುಮೆಗೆ ಪುರಸ್ಕಾರಕ್ಕೂ ತಪ್ಪು ವರ್ತನೆಗಳಿಗೆ ಶಿಕ್ಷೆಗೂ ರ್ಹನಾಗುವುದು ಸ್ವಾಭಾವಿಕ ಪರಿಣಾಮವಾಗಿದೆ. ಈ ಅಧಿಕಾರಗಳನ್ನು ಅವನೇ ಗಳಿಸಿದರೆ, ಲ್ಲಾಹನು ನೀಡಿದ ಅಧಿಕಾರಗಳಾಗಿರುವುದರಿಂದ ಅವುಗಳನ್ನು ಸರಿಯಾಗಿ ಅಥವಾ ತಪ್ಪಾಗಿ ಳಸುವುದಕ್ಕೆ ಅಲ್ಲಾಹನ ಮುಂದೆ ಅವನು ವಿಚಾರಣಾರ್ಹನಾಗಿದ್ದಾನೆ. ಆದುದರಿಂದ ಕುರ್‌ಆನಿನ ೇರೆ ಕಡೆಗಳಲ್ಲಿ ಅದನ್ನು 'ಖಿಲಾಫತ್' ಎಂದು ವಿವರಿಸಲಾಗಿದೆ. ಅದಕ್ಕೇ ಇಲ್ಲಿ 'ಅಮಾನತ್' ಂಬ ಪದ ಪ್ರಯೋಗಿಸಲಾಗಿದೆ.

ಈ ಅಮಾನತ್ ಎಷ್ಟು ಮಹತ್ವಪೂರ್ಣ ಹಾಗೂ ಭಾರವಾದುದು ಎಂಬುದರ ಕಲ್ಪನೆಯನ್ನು ಮೂಡಿಸುವುದಕ್ಕಾಗಿ ಅಲ್ಲಾಹನು, ಭೂಮಿ-ಆಕಾಶಗಳು ತಮ್ಮ ಬೃಹತ್ ಗಾತ್ರದ ಹೊರತಾಗಿಯೂ ರ್ವತಗಳು ಭದ್ರವಾಗಿ ನಾಟಿಕೊಂಡಿರುವುದರ ಹೊರತಾಗಿಯೂ ಅದನ್ನು ಹೊರುವ ಶಕ್ತಿ ಹಾಗೂ ೈರ್ಯ ತೋರಲಿಲ್ಲ. ಆದರೆ ದುರ್ಬಲ ಮತ್ತು ಪುಟ್ಟ ಅಸ್ತಿತ್ವವಾದ ಮಾನವನು ಈ ಭಾರೀ ೊರೆಯನ್ನು ಹೊತ್ತನು ಎಂದು ಹೇಳುತ್ತಿದ್ದಾನೆ.

ಭೂಮಿ-ಆಕಾಶಗಳ ಮುಂದೆ ಈ 'ಅಮಾನತ್'ನ ಹೊರೆಯನ್ನಿಡುವುದು, ಅವು ಅದ ಹೊರಲು ನಿರಾಕರಿಸುವುದು ಮತ್ತು ಹೆದರುವುದು ಪಾರಿಭಾಷಿಕ ಅರ್ಥದಲ್ಲೂ ಆಗಿರಬಹು ಸಾಂಕೇತಿಕವಾಗಿಯೂ ಆಗಿರಬಹುದು. ಅಲ್ಲಾಹನಿಗೆ ತನ್ನ ಸೃಷ್ಟಿಗಳೊಂದಿಗಿರುವ ಸಂಬಂಧವ ನಮಗೆ ಗ್ರಹಿಸಲು ಸಾಧ್ಯವಿಲ್ಲ. ಭೂಮಿ, ಸೂರ್ಯ, ಚಂದ್ರ ಮತ್ತು ಪರ್ವತಾದಿಗಳು ನ ಮಟ್ಟಿಗೆ ಮೂಕ, ಕಿವುಡ ಹಾಗೂ ನಿರ್ಜೀವಿಗಳಾಗಿರಬಹುದು. ಆದರೆ ಅಲ್ಲಾಹನ ಮಟ್ಟಿಗೆ ಹ ಇರಬೇಕೆಂದಿಲ್ಲ. ಅಲ್ಲಾಹನು ತನ್ನ ಎಲ್ಲ ಸೃಷ್ಟಿಗಳೊಂದಿಗೂ ಮಾತಾಡಬಲ್ಲನು. ಅವು ಅವ ಉತ್ತರವನ್ನು ನೀಡಬಲ್ಲವು. ಅದರ ಸ್ವರೂಪವನ್ನು ಗ್ರಹಿಸಲು ನಮಗೆ ಸಾಧ್ಯವಿಲ್ಲ. ಆದ್ದರಿಂ ನಿಜವಾಗಿಯೂ ಅಲ್ಲಾಹನು ಈ ಭಾರೀ ಹೊರೆಯನ್ನು ಅವುಗಳ ಮುಂದಿಟ್ಟಿರಬಹುದು. ಅದನ್ನು ನೋಡಿ ಭಯದಿಂದ ಕಂಪಿಸಿರಬಹುದು. ಅವು ತಮ್ಮ ಸೃಷ್ಟಿಕರ್ತ ಮತ್ತು ಒಡೆಯನೊಂ ಹೀಗೆ ಬಿನ್ನವಿಸಿರಬಹುದು. ಒಡೆಯಾ! ನಾವಂತೂ ಅಧಿಕಾರ ರಹಿತ ಸೇವಕರಾಗುವುದರಲ್ಲೇ ನ ಕ್ಷೇಮವಿದೆಯೆಂದು ಭಾವಿಸುತ್ತೇವೆ. ಆಜ್ಞೋಲ್ಲಂಘನೆಯ ಸ್ವಾತಂತ್ರ್ಯ ಹೊಂದಿ ಅದರ ಹ ಬಾಧ್ಯತೆಗಳನ್ನು ಈಡೇರಿಸುವ ಮತ್ತು ಅದನ್ನು ಈಡೇರಿಸದೆ ಇದ್ದಲ್ಲಿ ನಿನ್ನ ಶಿಕ್ಷೆಯ ಸಹಿಸಿಕೊಳ್ಳಬಲ್ಲಂತಹ ಶಕ್ತಿ ನಮ್ಮಲ್ಲಿಲ್ಲ. ಅದೇ ರೀತಿ, ನಮ್ಮ ಪ್ರಸಕ್ತ ಜೀವನಕ್ಕಿಂತ ಮು ಸಕಲ ಮಾನವರಿಗೆ ಅಲ್ಲಾಹನು ಇನ್ನೊಂದು ಸ್ವರೂಪದ ಜೀವನವನ್ನು ನೀಡಿ ತನ್ನ ಮುಂದೆ ಹಾಜ ಪಡಿಸಿರಬಹುದು ಮತ್ತು ಅವರು ಈ ಅಧಿಕಾರಗಳನ್ನು ವಹಿಸಿಕೊಳ್ಳಲು ಸ್ವಯಂ ಸಿದ್ಧರೆಂ ಘೋಷಿಸಿರಬಹುದು. ಇದು ಅಸಂಭವನೀಯವೆಂದು ಹೇಳಲು ನಮ್ಮ ಬಳಿ ಯಾವು ಪುರಾವೆಯಿಲ್ಲ. ತನ್ನ ವಿಚಾರಶಕ್ತಿಯ ಬಗ್ಗೆ ಸರಿಯಾದ ಕಲ್ಪನೆಯಿಲ್ಲದವನು ಮಾತ್ರ ಇ ಅಸಂಭವನೀಯವೆಂದು ತೀರ್ಮಾನಿಸಬಲ್ಲನು.

ಇನ್ನು ಅಲ್ಲಾಹನು ಈ ಮಾತನ್ನು ಉಪಮೆಯ ರೀತಿಯಲ್ಲೂ ಹೇಳಿರಬಹುದೆಂಬುದ ನಿರಾಕರಿಸುವಂತಿಲ್ಲ. ಸ್ಥಿತಿಗತಿಯ ವಿಶೇಷ ಮಹತ್ವದ ಕಲ್ಪನೆ ಮೂಡಿಸಲಿಕ್ಕಾಗಿ, ಒಂದೆಡೆ ಭೂ ಆಕಾಶಗಳು ಮತ್ತು ಹಿಮಾಲಯದಂತಹ ಬೃಹತ್ ಗಾತ್ರದ ಪರ್ವತಗಳನ್ನೂ ಇನ್ನೊಂದೆಡೆ ! ಅಡಿ ಉದ್ದದ ಮಾನವನನ್ನೂ ಇಟ್ಟು ಇಂತಹ ಚಿತ್ರಣವನ್ನು ಬಿಂಬಿಸಿರಬಹುದು. ಅಲ್ಲಾಹನು ಇ ಕೇಳುತ್ತಿದ್ದಾನೆ-

"ನಾನು ನನ್ನ ಎಲ್ಲ ಸೃಷ್ಟಿಗಳ ಪೈಕಿ ಒಂದಾದ ಮಾನವನಿಗೆ ಅವನು ನನ್ನ ದೇವತ್ ಮೇರೆಯೊಳಗಿದ್ದುಕೊಂಡು ತನ್ನ ಸ್ವಇಚ್ಛೆಯಿಂದ ನನ್ನ ಮೇಲ್ಮೆಯನ್ನು ಒಪ್ಪಿಕೊಂಡು ನ ಆಜ್ಞೆಗಳನ್ನು ಅನುಸರಿಸ ಬಯಸಿದರೆ ಮಾಡಬಹುದು. ಅನ್ಯಥಾ ಅವನು ನನ್ನನ್ನು ನಿರಾಕರಿಸ ಬಹುದು ಮತ್ತು ನನ್ನ ವಿರುದ್ಧ ಬಂಡಾಯದ ಧ್ವಜವನ್ನು ಎತ್ತಿಕೊಳ್ಳ ಬಹುದು ಎಂಬ ಅಧಿ ನೀಡಬಯಸುತ್ತೇನೆ. ಈ ಸ್ವಾತಂತ್ರ್ಯವನ್ನು ನೀಡಿ ನಾನು ಇಲ್ಲವೇ ಇಲ್ಲವೆಂಬಂತೆ ಅವನಿ ಮರೆಯಾಗುವೆನು. ಈ ಸ್ವಾತಂತ್ರ್ಯವನ್ನು ಕೃತಿಯಲ್ಲಿ ಇಳಿಸಲಿಕ್ಕಾಗಿ ಅವನಿಗೆ ವ್ಯಾಪಕ ಅಧಿಕಾರಗಳ ನೀಡುವೆನು. ದೊಡ್ಡ ಸಾಮರ್ಥ್ಯಗಳನ್ನು ನೀಡುವೆನು. ಈ ಪ್ರಪಂಚದಲ್ಲಿ ಏನು ಬೇಕಾದ ಮಾಡಬಯಸುವುದಾದರೆ ಮಾಡಲೆಂದು ನನ್ನ ಅಗಣಿತ ಸೃಷ್ಟಿಗಳಲ್ಲಿ ಅವನಿಗೆ ಶ್ರೇಷ್ಠತೆಯ ದಯಪಾಲಿಸುವೆನು. ಆನಂತರ ಒಂದು ನಿರ್ಣಾಯಕ ಸಮಯದಲ್ಲಿ ಅವನ ವಿಚಾರಣೆ ನಡೆಸುವೆ ನಾನು ನೀಡಿದ ಈ ಸ್ವಾತಂತ್ರ್ಯವನ್ನು ಯಾರು ದುರುಪಯೋಗ ಪಡಿಸುವನೋ ಅವನಿಗೆ ನಾ ನನ್ನ ಯಾವುದೇ ಸೃಷ್ಟಿಗೂ ನೀಡಿರದಂತಹ ಶಿಕ್ಷೆ ನೀಡುವೆನು. ಇನ್ನು ನನ್ನ ಆಜ್ಞೋಲ್ಲಂಘನೆ

ಲ್ಲ ಅವಕಾಶಗಳಿದ್ದೂ ನನ್ನ ವಿಧೇಯತೆಯನ್ನೇ ಕೈಗೊಂಡವರಿಗೆ, ನನ್ನ ಯಾವುದೇ ಸೃಷ್ಟಿಗೂ ಡಿರದಂತಹ ಉನ್ನತ ಸ್ಥಾನವನ್ನು ನೀಡುವೆನು. ಈಗ ಹೇಳಿ, ನಿಮ್ಮ ಪೈಕಿ ಈ ಪರೀಕ್ಷಾ ಕೊಠಡಿಗೆ ವೇಶಿಸಲು ಯಾರು ಸಿದ್ಧರಿದ್ದಾರೆ?"

ಈ ಮಾತುಗಳನ್ನು ಕೇಳಿ ಮೊದಲು ಸಂಪೂರ್ಣ ವಿಶ್ವದಲ್ಲಿ ಮೌನ ಆವರಿಸುತ್ತದೆ. ಅನಂತರ ಹತ್ ಗಾತ್ರದ ಸೃಷ್ಟಿಗಳಲ್ಲಿ ಪ್ರತಿಯೊಂದೂ ಒಂದರ ನಂತರ ಒಂದರಂತೆ ಮೊಣಕಾಲೂರಿ ನ್ನನ್ನು ಈ ಪರೀಕ್ಷೆಗೆ ಒಡ್ಡಬಾರದೆಂದು ದೈನ್ಯತೆಯೊಂದಿಗೆ ವಿನಂತಿಸುತ್ತದೆ. ಕಟ್ಟಕಡೆಗೆ ಈ ಹುಲು ಾನವ ಎದ್ದು ನಿಂತು ಹೀಗೆ ಹೇಳುತ್ತಾನೆ- ನನ್ನ ಪ್ರಭೂ! ನಾನು ಈ ಪರೀಕ್ಷೆಯನ್ನು ಎದುರಿಸಲು ನ್ಧನಿದ್ದೇನೆ. ಈ ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಸಿಗಬಹುದಾದಂತಹ ಅತ್ಯುನ್ನತ ಪದವಿಗಾಗಿ ಸ್ವಾತಂತ್ರ್ಯದ ಹಿಂದೆ ಅಡಗಿರುವ ಎಲ್ಲ ಅಪಾಯಗಳನ್ನೂ ಎದುರಿಸಲು ನಾನು ಸಿದ್ಧನಿದ್ದೇನೆ.

ಈ ಚಿತ್ರಣವನ್ನು ಊಹಿಸಿಯೇ ಮಾನವನು, ಈ ಪ್ರಪಂಚದಲ್ಲಿ ತಾನು ಯಾವ ನಿರ್ಣಾಯಕ ಥಾನದಲ್ಲಿದ್ದೇನೆಂಬುದನ್ನು ಅಂದಾಜಿಸಬಹುದು. ಈಗ ಈ ಪರೀಕ್ಷಾ ಕೊಠಡಿಯಲ್ಲಿ ನಿಶ್ಚಿಂತನಾಗಿರುವ ಾಗೂ ತಾನು ಎಷ್ಟು ದೊಡ್ಡ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದೇನೆಂಬ ಪ್ರಶ್ನೆಯೇ ಇಲ್ಲದ ುತ್ತು ಇಹಲೋಕದ ಜೀವನದಲ್ಲಿ ತನಗಾಗಿ ಒಂದು ಧೋರಣೆಯನ್ನು ಆಯ್ಕೆ ಮಾಡುವಾಗ, ದು ಸರಿ ಅಥವಾ ತಪ್ಪಾಗುವುದರಿಂದ ಯಾವ ಪರಿಣಾಮವುಂಟಾದೀತೆಂದು ಚಿಂತಿಸದ ವ್ಯಕ್ತಿಯನ್ನೇ ಲ್ಲಾಹನು ಈ ಸೂಕ್ತದಲ್ಲಿ ಅಕ್ರಮಿಯೆಂದೂ ತಿಳಿಗೇಡಿಯೆಂದೂ ಹೇಳುತ್ತಿದ್ದಾನೆ. ಆತ ಳಿಗೇಡಿಯಾಗಿದ್ದಾನೆ, ಏಕೆಂದರೆ ಆತ ತನ್ನನ್ನು ಹೊಣೆರಹಿತನೆಂದು ಭಾವಿಸಿದ್ದಾನೆ. ಆತ ಕ್ರಮಿಯಾಗಿದ್ದಾನೆ, ಏಕೆಂದರೆ ಆತ ತನ್ನ ವಿನಾಶಕ್ಕೆ ತಾನೇ ಸಿದ್ಧತೆ ನಡೆಸುತ್ತಿದ್ದಾನೆ. ಅದೇ ರೀತಿ ನ್ನೊಂದಿಗೆ ಇನ್ನೆಷ್ಟು ಜನರನ್ನು ನಾಶ ಪಡಿಸಬಯಸಿದ್ದಾನೆಂದು ಹೇಳಲು ಸಾಧ್ಯವಿಲ್ಲ.